## ಅಧ್ಯಾಯ-೨

# ಇತಿಹಾಸ

ಭೌಗೋಳಿಕವಾಗಿ ಬಹುತೇಕ ಸಮತಟ್ಟಾದ ಬಯಲು ಪ್ರದೇಶವನ್ನುಳ್ಳ ಈ ಜಿಲ್ಲೆಯು ಬಹಳಷ್ಟು ಮಟ್ಟಿಗೆ ಶುಷ್ಕ ವಾತಾವರಣವನ್ನು ವ್ಯಕ್ತಪಡಿಸುತ್ತದೆ. ಆದರೆ, ಈ ಜಿಲ್ಲೆಯಲ್ಲಿ ಪ್ರವಹಿಸುವ ನದಿಗಳಿಂದಾಗಿ ಜಿಲ್ಲೆಯು ಆರ್ಥಿಕವಾಗಿ ಸಂಪದ್ಭರಿತವಾಗಿದೆ. ಈ ಜಿಲ್ಲೆಯು ಪ್ರಧಾನವಾಗಿ ಬಯಲು ಪ್ರದೇಶವನ್ನು ಹೊಂದಿದ್ದರೂ, ನಾರಾಯಣಗಿರಿ, ಆದಿಚುಂಚನಗಿರಿ, ಬಸವನಬೆಟ್ಟ, ಬೇಬಿಬೆಟ್ಟ, ಬೆಳ್ಳಿಬೆಟ್ಟ, ಕುಂತಿಬೆಟ್ಟ ಮೊದಲಾದ ಬೆಟ್ಟಗುಡ್ಡಗಳನ್ನು ಹೊಂದಿದೆ. ಮಂಡ್ಯ ಜಿಲ್ಲೆಯಲ್ಲಿ ಪ್ರವಹಿಸುತ್ತಿರುವ ಕಾವೇರಿ, ಹೇಮಾವತಿ, ಶಿಂಷಾ, ವೀರವೈಷ್ಣವಿ ಮತ್ತು ಲೋಕಪಾವನಿ ನದಿಗಳಿಂದಾಗಿ ಈ ಜಿಲ್ಲೆಗೆ ಪಂಚನದಿಗಳ ನಾಡೆಂಬ ಹೆಗ್ಗಳಿಕೆ ಇದ್ದು, ಈ ಪ್ರದೇಶವು ಪ್ರಾಚೀನಕಾಲದಿಂದಲೂ ಮಾನವ ನಾಗರೀಕತೆಯ ವಿಕಾಸಕ್ಕೆ ಯೋಗ್ಯಸ್ಥಾನವೆಂದು ಪರಿಗಣಿಸಲ್ಪಟ್ಟಿದೆ. ಫಲವತ್ತಾದ ನದಿಕಣಿವೆಗಳು, ಬೆಟ್ಟಗುಡ್ಡಗಳ ಪ್ರದೇಶಗಳು, ಬಯಲುಪ್ರದೇಶ, ದಟ್ಟವಾದ ಅರಣ್ಯ, ನದಿ, ದ್ವೀಪಗಳು ಪ್ರಾಣಿಸಂಪತ್ತು, ವಾಸಿಸಲು ಯೋಗ್ಯವಾದ ನೈಸರ್ಗಿಕ ಗುಹೆಗಳು, ಶಿಲಾಯುಧಗಳನ್ನು ತಯಾರು ಮಾಡಲು ಅವಶ್ಯಕವಾದ ವಿವಿಧ ಜಾತಿಯ ಕಲ್ಲುಗಳೂ ಮುಂತಾದ ನೈಸರ್ಗಿಕ ಸಂಪತ್ತುಗಳಿಂದ ಕೂಡಿದ ಪ್ರದೇಶವಾಗಿ ಮಾನವ ವಿಕಾಸದ ಸರಣಿಯಲ್ಲಿ ಸಾಕಷ್ಟು ಪ್ರಭಾವವನ್ನು ಬೀರಿವೆ. ಈ ಜಿಲ್ಲೆಯಲ್ಲಿ ದೊರೆತಿರುವ ಪೂರ್ವೇತಿಹಾಸದ ನೆಲೆಗಳು ತೀರ ವಿರಳವಾದರೂ ಪಾಂಡವಪುರ ತಾಲೂಕಿನಲ್ಲಿ ಬೆಳಕಿಗೆ ಬಂದಿರುವ ಹೊಸಶಿಲಾಯುಗದ ನೆಲೆಗಳು ಗಮನಾರ್ಹವಾಗಿದೆ. ಪಾಂಡವಪುರ ಬಳಿಯ ಕುಂತೀಬೆಟ್ಟ ಮತ್ತು ಶ್ರೀರಂಗಪಟ್ಟಣ, ಬೆಳಕವಾಡಿ, ಮುತ್ತತ್ತಿ ಮುಂತಾದೆಡೆ ಪ್ರಾಗೈತಿಹಾಸಿಕ ನೆಲೆಗಳು ಪತ್ತೆಯಾಗಿವೆ. ಹಳೇಶಿಲಾಯುಗ ನವಶಿಲಾಯುಗ, ಕಬ್ಬಿಣಯುಗ ಮತ್ತು ಆದಿ ಇತಿಹಾಸ ಕಾಲ (ಕ್ರಿ.ಪೂ.೫೦೦ರ ನಂತರ) ಸಂಸ್ಕೃತಿಗಳಿಗೆ ಸೇರಿದ ಅವಶೇಷಗಳನ್ನು ಕುಂತೀಬೆಟ್ಟದಲ್ಲಿ ಶೋಧಿಸಲಾಗಿದೆ. ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಕಲ್ಲಿನ ಸೂಕ್ಷ್ಮ ಉಪಕರಣಗಳನ್ನು ಶ್ರೀರಂಗಪಟ್ಟಣದಲ್ಲಿ ಪತ್ತೆ ಹಚ್ಚಲಾಗಿದೆ. ಹೀಗೆ ಮಂಡ್ಯ ಜಿಲ್ಲೆಯು ಸಹಸ್ರಾರು ವರ್ಷಗಳಿಂದಲೂ ಮಾನವನ ನೆಲೆವೀಡಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಪೌರಾಣಿಕ ಪ್ರಸಿದ್ಧವಾದ ಕೇಂದ್ರಗಳೂ ಸಹ ಮಂಡ್ಯ ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿವೆ. ಅಗಸ್ತ್ಯ, ಕಣ್ವ, ಗೌತಮ ಮುಂತಾದ ಮಹಾನ್ ಋಷಿಗಳ ತಪೋಭೂಮಿಯಾಗಿತ್ತೆಂದೂ, ರಾಮಾಯಣ, ಮಹಾಭಾರತಗಳ ಮಹಾನ್ ವ್ಯಕ್ತಿಗಳು ಶ್ರೀರಂಗಪಟ್ಟಣದಲ್ಲಿ ಕೆಲವು ಕಾಲ ಸಂಚರಿಸಿ ತಂಗಿದ್ದರೆಂದೂ ನಂಬಿಕೆಯಿದೆ.

**ಪೌರಾಣಿಕ ಹಿನ್ನೆಲೆ**

ಸ್ಥಳಪುರಾಣದ ಪ್ರಕಾರ ಮಂಡ್ಯ ನಗರವಿರುವ ಪ್ರದೇಶವು ಕೃತಯುಗದಲ್ಲಿ ಮಹಾರಣ್ಯವಾಗಿದ್ದು, ಇಲ್ಲಿ ತಪಸ್ಸು ಮಾಡುತ್ತಿದ್ದ ಮುನಿಯೋರ್ವನು ಜನಾರ್ಧನ ಅಥವಾ ವರದರಾಜ ಮೂರ್ತಿಯನ್ನು ಪ್ರತಿಷ್ಠಾಪಿಸಿ ಒಂದು ದೇವಾಲಯವನ್ನು ನಿರ್ಮಿಸಿದನೆಂಬ ನಂಬಿಕೆಯಿದೆ. ಈತನು ತನ್ನ ತಪಸ್‌ಶಕ್ತಿಯಿಂದ ಪ್ರಾಣಿಗಳಿಗೂ ವೇದಗಳನ್ನು ಹೇಳಿಕೊಡುತ್ತಿದ್ದ ಕಾರಣ ಈ ಸ್ಥಳಕ್ಕೆ ವೇದಾರಣ್ಯವೆಂಬ ಹೆಸರು ರೂಢಿಗೆ ಬಂದಿತೆಂಬ ನಂಬಿಕೆಯಿದೆ. ಪೌರಾಣಿಕ ಕಥೆಯ ಪ್ರಕಾರ ದ್ವಾಪರಯುಗದಲ್ಲಿ ಸಂತಾನಾಪೇಕ್ಷೆಯಿಂದ ಈ ಸ್ಥಳಕ್ಕೆ ಬಂದು ಪೂಜಾ ಕೈಂಕರ್ಯದಲ್ಲಿ ತೊಡಗಿದ್ದ ಇಂದ್ರವರ್ಮ ದೊರೆಯು ತನಗೆ ವಂಶೋದ್ಧಾರಕ ಪುತ್ರನು ಜನಿಸಿದಾಗ ಆ ಶಿಶುವಿಗೆ ಸೋಮವರ್ಮನೆಂದು ನಾಮಕರಣ ಮಾಡಿದನು. ನಂತರ ಆ ಸೋಮವರ್ಮನು ಈ ಪ್ರದೇಶವನ್ನು ಒಂದು ಅಗ್ರಹಾರವನ್ನಾಗಿ ಮಾರ್ಪಡಿಸಿ ಊರಿನಲ್ಲಿ ಕೋಟೆಯನ್ನು ಕಟ್ಟಿಸಿ ಅದಕ್ಕೆ ಮಂಡೇವೇಮು ಅಥವಾ 'ಮಂಡೆಯ' ಎಂದು ಕರೆದನೆಂದು ನಂಬಿಕೆಯಿದೆ. ನಂತರ ಅದೇ ಮಂಡ್ಯವಾಯಿತೆಂಬ ಅಭಿಪ್ರಾಯವಿದೆ. ಈ ಪ್ರದೇಶವು ಹಿಂದೆ ಮಾಂಡವ್ಯ ಋಷಿಗಳ ವಾಸಸ್ಥಾನವಾಗಿದ್ದು ಅಲ್ಲಿರುವ ಲಕ್ಷ್ಮೀಜನಾರ್ಧನ ಹಾಗೂ ಸಕಲೇಶ್ವರ ಮೂರ್ತಿಗಳನ್ನು ಮಾಂಡವ್ಯರೇ ಪ್ರತಿಷ್ಠಾಪಿಸಿದರೆಂಬ ನಂಬಿಕೆಯಿದೆ. ಮಾಂಡವ್ಯ ಮುನಿಗಳಿಂದಾಗಿ ಅದಕ್ಕೆ ಮಂಡೆಯ (ಹಾಗೂ ಈ ಊರಿಗೆ ವಿಷ್ಣುಪುರವೆಂಬ ಹೆಸರೂ ಇತ್ತೆಂದು ತಿಳಿದುಬರುತ್ತದೆ.) ಎಂಬ ಹೆಸರು ಬಂತೆಂದು ಸ್ಥಳ ಪುರಾಣವು ತಿಳಿಸುತ್ತದೆ. ಇತರೆ ಕಥನಗಳ ಪ್ರಕಾರ ಈ ಜಿಲ್ಲೆಯು ಕದಂಬ, ಕಣ್ವ, ಮಹಾಋಷಿಗಳ ತಪೋಭೂಮಿಯಾಗಿತ್ತೆಂಬ ಪ್ರತೀತಿಯಿದೆ. ಮದ್ದೂರು ಕದಂಬಋಷಿಗಳ ಆಶ್ರಮವಾಗಿತ್ತೆಂದೂ ಹಾಗೂ ಈ ಊರಿಗೆ ಕದಂಬಕ್ಷೇತ್ರ, ಅರ್ಜುನಪುರಿ ಎಂಬ ಹೆಸರಿದ್ದು, ಇಲ್ಲಿರುವ ನರಸಿಂಹನ ವಿಗ್ರಹವನ್ನು ಕೃತಯುಗದಲ್ಲಿ ಬ್ರಹ್ಮದೇವರೇ ಪ್ರತಿಷ್ಠಾಪನೆ ಮಾಡಿದರೆಂಬ ನಂಬಿಕೆಯಿದೆ. ನಂತರ ತ್ರೇತಾಯುಗದಲ್ಲಿ ಕದಂಬಋಷಿಗಳಿಂದ ಮತ್ತು ದ್ವಾಪರಯುಗದಲ್ಲಿ ಶ್ರೀಕೃಷ್ಣಾರ್ಜುನರಿಂದ ಈ ವಿಗ್ರಹವು ಆರಾಧಿಸಲ್ಪಟ್ಟಿದೆ ಎಂಬ ಪ್ರತೀತಿಯಿದೆ. ಕಣ್ವ ಋಷಿಯ ಹೆಸರಿನಿಂದ ಈ ಪ್ರದೇಶಕ್ಕೆ ಕಣ್ವಪುರಿ (ಈಗಿನ ಕನ್ನಂಬಾಡಿ) ಎಂದೂ ಗೌತಮ ಋಷಿಯ ನಿವಾಸ ಸ್ಥಳವಾಗಿದ್ದ ಪ್ರದೇಶವನ್ನು ಪಾಂಡವಪುರವೆಂದೂ ಕರೆದಿರುವುದು ವ್ಯಕ್ತವಾಗುತ್ತದೆ. ಇದಕ್ಕೆ ಮೊದಲು ಈ ಪ್ರದೇಶದ ಜನರು ನೆರೆಯ ಬೆಟ್ಟದ ಮೇಲೆ ನೆಲೆಸಿದ್ದ ಬಕಾಸುರನೆಂಬ ರಾಕ್ಷಸನಿಗೆ 'ದೊಡ್ಡ ಎಡೆ' ಅಥವಾ 'ಹಿರಿಯೆಡೆ' ಇಡುತ್ತಿದ್ದುದರಿಂದ ಇದನ್ನು ಹಿರಿಯಡೆ ಎಂದು ಕರೆಯಲಾಗಿದ್ದು ನಂತರ ಹಿರೋಡೆಯಾಯಿತೆಂಬ ನಂಬಿಕೆಯಿದೆ. ಅಲ್ಲದೆ ಪ್ರತಿದಿನ ಸಾಯಂಕಾಲ ಬೆಟ್ಟದ ಪಕ್ಕದಲ್ಲಿರುವ ಗ್ರಾಮದವರು ಕಿರಿಯ ಎಡೆಯನ್ನು ಇಡುತ್ತಿದ್ದುದರಿಂದ ಆ ಗ್ರಾಮಕ್ಕೆ ಚಿಕ್ಕಯೆಡೆ ಎಂದು ಹೆಸರು ಬಂದಿತು. ನಂತರ, ಚಿಕ್ಕಾಡೆ ಎಂದು ಕರೆಯಲ್ಪಡುತ್ತಿದೆ. ತಮ್ಮ ವನವಾಸದ ಅವಧಿಯಲ್ಲಿ ಪಾಂಡವರು ಇಲ್ಲಿಗೆ ಬಂದು ಸ್ವಲ್ಪಕಾಲ ನೆಲೆಸಿದ್ದಾಗ ಭೀಮನು ಬಕಾಸುರನನ್ನು ಸಂಹಾರ ಮಾಡಿದ ಸ್ಥಳವು ಇದೇ ಎಂದು ನಂಬಲಾಗಿದೆ. ಪಾಂಡವರನ್ನು ಹೀಗೆ ತನ್ನ ಹಿನ್ನೆಲೆಯಲ್ಲಿ ಹೊಂದಿರುವ ಇಲ್ಲಿಯ ಕುಂತೀಬೆಟ್ಟವು ಮಹಾಭಾರತದೊಡನೆ ತನ್ನ ಸಂಬಂಧವನ್ನು ಥಳಕುಹಾಕಿಕೊಂಡಿದೆ. ಈ ಜಿಲ್ಲೆಯ ಪ್ರಮುಖ ಶ್ರೀವೈಷ್ಣವ ಕೇಂದ್ರವಾದ ಮೇಲುಕೋಟೆಯು ಚತುರ್‌ಯುಗಗಳಲ್ಲೂ ಮಹತ್ವ ಪಡೆದಿದ್ದು, ಪುರಾಣ ಪ್ರಸಿದ್ಧ ಪುರುಷರಿಂದ ಆರಾಧಿಸಲ್ಪಟ್ಟಿರುವ ಅಂಶವನ್ನು ಇಲ್ಲಿರುವ ಸ್ಥಳಪುರಾಣಗಳು ದಾಖಲಿಸಿವೆ. ವಿಶಿಷ್ಠಾದ್ವೈತದ ಪ್ರತಿಪಾದಕರಾದ ರಾಮಾನುಜಾಚಾರ್ಯರು ಇಲ್ಲಿ ಬಂದು ನೆಲೆಸಿದ್ದರು. ರಾಮಾನುಜಾಚಾರ್ಯರು ಮೇಲುಕೋಟೆಯ ಸಮೀಪವಿರುವ ತೊಂಡನೂರಿನಲ್ಲಿ ತಮ್ಮ ಪ್ರೌಢ ದಿನಗಳನ್ನು ಕಳೆದಿದ್ದರು. ಮದರಾಸಿನ ಸಮೀಪವಿರುವ ಶ್ರೀಪೆರಂಬೂದೂರಿನಲ್ಲಿ ಅಸೂರಿ ಕೇಶವ ಪೆರುಮಾಳ್ ಹಾಗೂ ಭೂಮಿ ಪಿರಾಂಡಿ (ಕಾಂತಿಮತಿ) ಎಂಬ ಧರ್ಮನಿಷ್ಠ ದಂಪತಿಗಳಿಗೆ ಪುತ್ರರಾಗಿ ಜನಿಸಿದ ರಾಮಾನುಜಾಚಾರ್ಯರು ಕಾಂಚೀಪುರದ ಯಮುನಾಚಾರ್ಯ ಯಾದವಪ್ರಕಾಶ ಎಂಬ ಶುದ್ಧ ಅದ್ವೈತೀಯ ಬಳಿ ಆಧ್ಯಾತ್ಮಿಕ ವಿದ್ಯಾಭ್ಯಾಸವನ್ನು ಪಡೆದು ಶ್ರೀವೈಷ್ಣವ ತತ್ವವನ್ನು ಪ್ರತಿಪಾದಿಸಿ, ತಮಿಳುನಾಡಿನಲ್ಲಿ ಸಂಭವಿಸಿದ ಧಾರ್ಮಿಕ ಘರ್ಷಣೆಯಿಂದಾಗಿ ಇಲ್ಲಿಗೆ

ವಲಸೆ ಬಂದ ರಾಮಾನುಜಾಚಾರ್ಯರು ನಾಗಮಂಗಲದ ಆಡಳಿತ ಕೇಂದ್ರವಾಗಿದ್ದ ಪಡುವಲ ಪಟ್ಟಣಕ್ಕೆ ಮೊದಲು ಬಂದರು. ಆನಂತರ ತೊಂಡನೂರಿಗೆ ವಲಸೆ ಹೋದರೆಂದು ಹೇಳಲಾಗುತ್ತದೆ. ಇಲ್ಲಿಂದ ಮೇಲುಕೋಟೆಗೆ ಹೋಗಿ ತಿರುಪತಿಯ ಮೂಲಕ ಕಂಚಿಗೆ ಪ್ರಯಾಣ ಮಾಡಿದರೆಂಬ ನಂಬಿಕೆಯಿದೆ. ಮುತ್ತತ್ತಿ ಈ ಜಿಲ್ಲೆಯ ಕಾವೇರಿತೀರದಲ್ಲಿರುವ ಒಂದು ಧಾರ್ಮಿಕ ಕ್ಷೇತ್ರವಾಗಿದೆ. ಲಂಕೆಯಿಂದ ಹಿಂದಿರುಗುವಾಗ ರಾಮ, ಲಕ್ಷ್ಮಣ, ಸೀತೆ ಹಾಗೂ ಆಂಜನೇಯ ಇಲ್ಲಿ ಸ್ವಲ್ಪ ಕಾಲ ತಂಗಿದ್ದರೆಂದು ಸ್ಥಳಪುರಾಣದಿಂದ ತಿಳಿದುಬರುತ್ತದೆ. ಈ ಪುರಾಣ ಕಥೆಯ ಅನುಸಾರ ಸೀತೆಯು ಕಾವೇರಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಅವಳ ಮೂಗುತಿಯ ಮುತ್ತು ನೀರಿನಲ್ಲಿ ಬಿದ್ದು ಹೋಗಿದ್ದರಿಂದ ಸೀತೆಗೆ ಬಹಳ ವ್ಯಸನ ಉಂಟಾಗಿ, ಕಡೆಗೆ ಈ ವಿಷಯ ತಿಳಿದ ಆಂಜನೇಯನು ನೀರಿನಲ್ಲಿ ಧುಮುಕಿ ಆ ಮುತ್ತನ್ನು ಹುಡುಕಿ ತಂದನಂತೆ. ಆಗ ಸೀತೆ ಅವನನ್ನು ಹರಸಿ ಈ ಕ್ಷೇತ್ರವು ಮುತ್ತು ಎತ್ತಿ (ಮುತ್ತೆತ್ತಿ) ತಂದ ಹನುಮಂತನ ಕ್ಷೇತ್ರವೆಂದು ಪ್ರಸಿದ್ಧಿ ಪಡೆಯಲಿ ಎಂದು ನುಡಿದಳೆಂಬ ಪ್ರತೀತಿಯಿದೆ. ಈಗ ಇಲ್ಲೊಂದು ಆಂಜನೇಯನ ದೇವಾಲಯವಿದ್ದು ಅದನ್ನು ಮುತ್ತೆತ್ತರಾಯ ಎಂದು ಕರೆಯಲಾಗುತ್ತಿದೆ. ಹೇಮಗಿರಿಯು ಹೇಮಾವತಿ ತೀರದ ಒಂದು ಧಾರ್ಮಿಕ ಸ್ಥಳವಾಗಿದ್ದು, ಎತ್ತರವಾದ ಬೆಟ್ಟದ ಮೇಲೆ ರಂಗನಾಥನ ದೇವಾಲಯವಿದೆ. ಇಲ್ಲಿಯ ಸ್ಥಳ ಪುರಾಣದ ಪ್ರಕಾರ ಮಹಾವಿಷ್ಣುವು ವೈಕುಂಠದಲ್ಲಿ ಬೇಸರವಾದಾಗ ಕೆಲವು ಕಾಲ ಇಲ್ಲಿ ಬಂದು ವಿಶ್ರಾಂತಿ ಪಡೆಯುತ್ತಿದ್ದನೆಂದೂ ಆದ ಕಾರಣ, ಇದನ್ನು ಪುಣ್ಯಕ್ಷೇತ್ರವೆಂದು ನಂಬಲಾಗಿದೆ. ಇದನ್ನು ಭೃಗುಋಷಿಗಳ ತಪೋಭೂಮಿ ಎಂದೂ ಕರೆಯಲಾಗುತ್ತದೆ. ಕಾವೇರಿ ದಂಡೆಯಲ್ಲಿರುವ ಬಲಮುರಿಯು ಅಗಸ್ತ್ಯ ಕ್ಷೇತ್ರವೆಂದು ಜನಪ್ರಿಯವಾಗಿದ್ದು, ಈಗ ಇಲ್ಲಿ ಅಗಸ್ತ್ಯೇಶ್ವರ ದೇವಾಲಯವಿದೆ. ಮಾರೇಹಳ್ಳಿಯ ಲಕ್ಷ್ಮೀನರಸಿಂಹನನ್ನು ಹಿಂದೆ ಗಜಾರಣ್ಯದಲ್ಲಿ ಲಂಬ-ಕರ್ಣರೆಂಬ ಮುನಿಗಳು ಪ್ರತಿಷ್ಠಾಪಿಸಿದರೆಂಬ ನಂಬಿಕೆಯಿದೆ. ನಾಗಮಂಗಲವು ಪುರಾಣ ಪ್ರಸಿದ್ಧ ಬಭ್ರುವಾಹನನೊಂದಿಗೆ ಸಂಬಂಧ ಹೊಂದಿದ್ದು, ಸಮೀಪದ ಆಲತಿ (ಹಾಲ್ತಿ) ಗಿರಿಯು ಪರಶುರಾಮ ಕ್ಷೇತ್ರವಾಗಿತ್ತೆಂಬ ದಂತಕತೆಯೂ ಇದೆ. ಮಳವಳ್ಳಿ ಸಮೀಪವಿರುವ ಕುಂದೂರು ಬೆಟ್ಟವು, ಹಿಂದೆ ಕಶ್ಯಪ ಹಾಗೂ ಅಗಸ್ತ್ಯ ಋಷಿಗಳ ಆಶ್ರಮವಿದ್ದ ಸ್ಥಳವೆಂಬ ನಂಬಿಕೆಯಿದ್ದು, ಇದರ ಬಳಿಯ ಗವಿರಾಯಸ್ವಾಮಿ ಬೆಟ್ಟದಲ್ಲಿ ಗವಕನೆಂಬ ರಾಕ್ಷಸನನ್ನು, ಶ್ರೀರಾಮನು ಕೊಂದನೆಂದು ಹೇಳಲಾಗುತ್ತದೆ. ಮಳವಳ್ಳಿ ತಾಲೂಕಿನ ಗಡಿಯಲ್ಲಿರುವ ಭೀಮನಕಂಡಿ ಬೆಟ್ಟ (ಕನಕಪುರ ತಾಲೂಕು) ವನ್ನು ಪಾಂಡವರೊಂದಿಗೆ ನಿಕಟ ಸಂಬಂಧ ಹೊಂದಿದ್ದ ಕೇಂದ್ರವೆಂದು ನಂಬಲಾಗಿದೆ.

**ಇತಿಹಾಸ ಪೂರ್ವಕಾಲ**

ಪರಿಸರಾತ್ಮಕವಾಗಿ ಪೂರ್ವೇತಿಹಾಸದ ಅಧ್ಯಯನವು ಹಿಂದಿನಿಂದಲೂ ಮಹತ್ವವನ್ನು ಪಡೆದಿರುವುದರಿಂದ ಇತಿಹಾಸದ ಈ ಹಂತವು ಹೆಚ್ಚು ಆಸಕ್ತಿಯುತವಾಗಿದೆ. ಮನುಕುಲದ ಇತಿಹಾಸ ಹಾಗೂ ಸಂಸ್ಕೃತಿಯ ಬಗ್ಗೆ ಅಧ್ಯಯನ ನಡೆಸುವವರಿಗೆ ಪರಿಸರದ ಪ್ರಾಮುಖ್ಯತೆಯ ಬಗ್ಗೆ ಹೆಚ್ಚಿನ ಅರಿವುಂಟಾಗುತ್ತದೆ. ಮಾನವೀಯ ಭೌಗೋಳವು ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಚಾರಗಳ ಮತ್ತು ಸಂಸ್ಥೆಗಳ ಪರಸ್ಪರ ಸಂಬಂಧಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡುವುದೇ ಆಗಿರುತ್ತದೆ. ಭೌಗೋಳಿಕವಾಗಿ ವಿವಿಧ ಪರಿಸರದಲ್ಲಿ ನೆಲೆಸಿರುವ ಮಾನವರು ತಮ್ಮದೇ ಆದ ವೈಶಿಷ್ಟ್ಯತೆಯನ್ನು ಹೊಂದಿದ್ದುದು ಗೋಚರವಾಗುತ್ತದೆ. ನದಿಯ ತೀರಗಳಲ್ಲಿ ಲಭ್ಯವಿರುವ ಮೃದುವಾದ ಕಲ್ಲುಗಳು ಆದಿಮಾನವರಿಗೆ ಅವಶ್ಯಕವಾದ ಉಪಕರಣ ಸಾಧನಗಳಾಗಿದ್ದವು. ಹೀಗಾಗಿ ನದಿಯ ಕಣಿವೆಗಳಲ್ಲಿ ಪೂರ್ವೇತಿಹಾಸದ ನಿವೇಶನಗಳು ಅಧಿಕವಾಗಿ ಕಂಡುಬರುತ್ತವೆ. ಕರ್ನಾಟಕದ ಪ್ರಮುಖ ನದಿಗಳಾದ ಕೃಷ್ಣಾ, ಭೀಮಾ, ತುಂಗಭದ್ರಾ, ಮಲಪ್ರಭಾ ಮತ್ತು ಕಾವೇರಿ ತೀರಗಳು ಮಧ್ಯ ಹಾಗೂ ನೂತನ ಶಿಲಾಯುಗದ ನಿವೇಶನಗಳನ್ನು ಹೊಂದಿದ್ದ ಅಂಶವು ಗಮನಾರ್ಹವಾಗಿದೆ. ನದಿಯ ತೀರಗಳೇ ಅಲ್ಲದೇ, ಭಾರತದಲ್ಲಿನ ಕೆಲವು ಒಳಪ್ರದೇಶಗಳಲ್ಲಿಯೂ ಪ್ರಾಚೀನ ಶಿಲಾಯುಗದ ಕೇಂದ್ರಗಳು ಹೇರಳವಾಗಿ ಕಂಡುಬರುತ್ತವೆ.

ಶಿಲಾವಿನ್ಯಾಸದ ಮಾಧ್ಯಮಗಳ ಬಗ್ಗೆ ಸಂಶೋಧನಾತ್ಮಕ ಅಧ್ಯಯನ ನಡೆಸಿರುವ ಹಲವು ತಜ್ಞರ ಪ್ರಕಾರ ಯೂರೋಪ್ ಪ್ರದೇಶಗಳಲ್ಲಿ ಕಂಡುಬರುವ ನೂತನ ಶಿಲಾಯುಗದ ಅವಶೇಷ ಅಥವಾ ಆಯುಧಗಳು ದಕ್ಷಿಣ ಭಾರತವೂ ಸೇರಿದಂತೆ ಏಷ್ಯಾದ ಹಲವು ಭಾಗಗಳಲ್ಲಿ ಕಂಡುಬಂದಿರುವುದು ವೈಶಿಷ್ಟ್ಯಪೂರ್ಣ ಅಂಶವಾಗಿದೆ. ಕರ್ನಾಟಕದ ತುಮಕೂರು ಜಿಲ್ಲೆಯ ಕಿಬ್ಬನಹಳ್ಳಿಯಲ್ಲಿ ಪ್ರಾಚೀನ ಶಿಲಾಯುಗದ ಲಕ್ಷಣಗಳಿರುವ ಆಯುಧಗಳು ದೊರೆತಿರುವುದು ಕುತೂಹಲಕಾರಿಯಾಗಿದೆ. ಈ ಆಯುಧಗಳು ಬಾಣಸಂದ್ರ ಬೆಟ್ಟಗಳ ಸಮೀಪದ ನಿವೇಶನದಲ್ಲಿ ದೊರೆತಿವೆ. ಈ ನಿವೇಶನದಲ್ಲಿ ಕಲ್ಲಿನ ಉಪಕರಣಗಳ ಜೊತೆಗೆ ಮರದ ಉಪಕರಣಗಳೂ ದೊರೆತಿರುವುದು ವಿಶೇಷವಾಗಿದೆ. ಕಲ್ಲಿನ ಆಯುಧಗಳಿಗೆ ಮರದ ಹಿಡಿಗಳನ್ನು ಬಳಸಿರುವುದು ಕಂಡುಬರುತ್ತದೆ.

ಪೂರ್ವೇತಿಹಾಸದ ಕಾಲವನ್ನು ಅನುಕ್ರಮವಾಗಿ (೧) ಹಳೇ ಶಿಲಾಯುಗ (ಪೆಲಿಯೋಲಿಥಿಕ್) (೨) ಸ್ಥಿತ್ಯಂತರ ಇಲ್ಲವೇ ಮಧ್ಯ ಶಿಲಾಯುಗ (ಮೆಸೋಲಿಥಿಕ್) ಮತ್ತು (೩) ನವಶಿಲಾಯುಗ (ನಿಯೋಲಿಥಿಕ್) ಎಂದು ವಿಂಗಡಿಸಲಾಗಿದೆ. ಹಳೇ ಶಿಲಾಯುಗವನ್ನು ಪುನಃ (ಅ) ಆದಿ ಹಳೇಶಿಲಾಯುಗ (ಆ) ಮಧ್ಯ ಹಳೇಶಿಲಾಯುಗ ಮತ್ತು (ಇ) ಅಂತಿಮ ಹಳೇ ಶಿಲಾಯುಗ ಎಂದು ಅನುಕ್ರಮವಾಗಿ ಮೂರು ಹಂತಗಳನ್ನಾಗಿ ವಿಂಗಡಿಸಲಾಗಿದೆ. ಶಿಲಾಯುಗದ ಪ್ರತಿಯೊಂದು ಹಂತವನ್ನೂ ಅಂದಿನ ಜನರು ತಮ್ಮ ಕಲ್ಲಿನ ಉಪಕರಣಗಳನ್ನು ತಯಾರಿಸಲು ಬಳಸಿದ ತಂತ್ರಜ್ಞಾನಗಳ ಮತ್ತು ಅವುಗಳನ್ನು ಸಿದ್ಧಪಡಿಸಿದ ಉಪಕರಣಗಳ ಆಕೃತಿಗಳಿಗನುಗುಣವಾಗಿ ನಿರ್ಧರಿಸಲಾಗಿದೆ. ಕರ್ನಾಟಕದ ಮೈಸೂರು ಪ್ರಾಂತ್ಯದಲ್ಲಿ ಪ್ರಾಚೀನ ಶಿಲಾಯುಗದ ಅವಶೇಷಗಳನ್ನು ಪತ್ತೆಹಚ್ಚುವ ಬಗ್ಗೆ ಪುರಾತತ್ವ ತಜ್ಞರಾದ ರಾಬರ್ಟ್ ಬ್ರೂಸ್‌ಫೂಟ್ ಮತ್ತು ಡಾ.ಎಂ.ಶೇಷಾದ್ರಿಯವರು ವಿಶದವಾಗಿ ಅಧ್ಯಯನ ನಡೆಸಿರುವರು. ಪ್ರಾಚೀನ ಶಿಲಾಯುಗದ ಉಪಕರಣಗಳು ಮಂಡ್ಯ ಜಿಲ್ಲೆಯಲ್ಲಿನ ಕಾವೇರಿ ದಂಡೆಯ ಮೇಲಿನ ಹಂಗರಹಳ್ಳಿಯಲ್ಲಿ ದೊರೆತಿದ್ದುದಾಗಿ ವಿದ್ವಾಂಸರಾದ ಶ್ರೀಪಾದರಾವ್ ಅವರು ವರದಿ ಮಾಡಿದ್ದಾರೆ. ಕರ್ನಾಟಕವು, ನೂತನ ಶಿಲಾಯುಗದ ಮಾನವನನ್ನು ಹೆಚ್ಚು ಪರಿಣಾಮಕಾರಿಯಾಗಿ ಆಕರ್ಷಿಸಿದೆ. ಕರ್ನಾಟಕದ ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರದಲ್ಲಿ ದೊರೆತಿರುವ ನೂತನ ಶಿಲಾಯುಗದ ಅವಶೇಷಗಳು ನುಣುಪಾಗಿದ್ದು ಬೂದುಬಣ್ಣದಲ್ಲಿವೆ. ಮಳವಳ್ಳಿ ತಾಲೂಕಿನ ಹುಲ್ಲಂಬಳ್ಳಿಗೆ ಎರಡು ಕಿ.ಮೀ.ದೂರದಲ್ಲಿರುವ ಮರಳಹಳ್ಳಿಯಲ್ಲಿ (ಬೇಚಿರಾಕ್) ಇಂಥದ್ದೇ ಒಂದು ಪ್ರಾಚೀನ ನೆಲೆಯಿರುವುದು ಕಂಡುಬಂದಿದೆ. ಇಲ್ಲಿ ನೂತನ ಶಿಲಾಯುಗ (ಸುಮಾರು ಕ್ರಿ.ಪೂ.೧೮೦೦–೭೦೦)ದ ನೆಲೆ ಮತ್ತು ಬೃಹತ್ ಶಿಲಾ ಸಂಸ್ಕೃತಿ (ಸುಮಾರು ಕ್ರಿ.ಪೂ.೪೦೦ರಿಂದ ಕ್ರಿ.ಶ.೧ನೇ ಶತಮಾನದವರೆಗೆ)ಯ ಶಿಲಾಗೋರಿಗಳಿರುವುದು (ಎಂ.ಎ.ಆರ್ ೧೯೪೭–೧೯೫೬) ಪತ್ತೆಯಾಗಿದ್ದು, ಇದನ್ನು ಜಿಲ್ಲೆಯ ಮೊದಲನೇ ಜನವಸತಿಯ ನೆಲೆಯೆಂದು ಗುರುತಿಸಲಾಗಿದೆ. ಈ ಜನರು ಉಪಯೋಗಿಸುತ್ತಿದ್ದ ಮಣ್ಣಿನ ಪಾತ್ರೆ ಹಾಗೂ ಇತರೇ ಅವಶೇಷಗಳು ಹೇರಳವಾಗಿದ್ದು, ಅವುಗಳು ಕಾಲಕ್ರಮೇಣ ಬಹಳಷ್ಟು ಸವೆದು ಹೋಗಿರುವ ಅಂಶವು ಕಂಡುಬಂದಿದೆ. ಆದರೂ ಕೂಡ ಈ ಸಂಸ್ಕೃತಿಗಳ ವಿಶಿಷ್ಟವಾದ ಮೃತ್ಪಾತ್ರೆ ಚೂರುಗಳನ್ನು ಗುರುತಿಸಲು ಸಾಧ್ಯವಾಗಿದೆ. ನೂತನ ಶಿಲಾ ತಾಮ್ರಯುಗದ ಮತ್ತೊಂದು ಅತಿ ವಿಶಿಷ್ಟ ಕಪ್ಪುಕಲ್ಲಿನ ಕೊಡಲಿಗಳನ್ನು ಈ ನೆಲೆಯಲ್ಲಿ ಪತ್ತೆಹಚ್ಚಲಾಗಿವೆ. ಈ ಜಿಲ್ಲೆಯಲ್ಲಿ ಬೃಹತ್ ಶಿಲಾಯುಗದ ಆರಂಭಕಾಲದ ಹಲವಾರು ನೆಲೆಗಳನ್ನು ಶೋಧಿಸಲಾಗಿದ್ದು, ಬೆಳಕವಾಡಿಯ ಬಳಿಯಲ್ಲಿ ಇಂಥಹ ಒಂದು ನಿವೇಶನವನ್ನು ಪತ್ತೆಹಚ್ಚಲಾಗಿದೆ. ಈ ಸ್ಥಳವು ಕಾವೇರಿ ನದಿಯ ದಂಡೆಯಲ್ಲಿದ್ದು, ಬಂಡೆಗಳಿಂದ ಆವೃತವಾಗಿದ್ದು, ಕಡಿದಾದ ಪ್ರಪಾತಗಳಿಂದಲೂ ಹಾಗೂ ಕಲ್ಲಾಸರೆಗಳಿಂದಲೂ ತುಂಬಿದೆ. ಕಳೆದ ಶತಮಾನದ ಕಡೆಯ ಪಾದದಲ್ಲಿ ರಾಬರ್ಟ್‌ಬ್ರೂಸ್‌ಫೂಟ್ ಈ ಪ್ರದೇಶದಲ್ಲಿ ಪರಿವೀಕ್ಷಣಾ ಕಾರ್ಯವನ್ನು ಕೈಗೊಂಡು ನವಶಿಲಾಯುಗ ಮತ್ತು ಬೃಹತ್ ಶಿಲಾಯುಗಗಳ ಅವಶೇಷಗಳನ್ನು ಪತ್ತೆಹಚ್ಚಿದ್ದಾರೆ. ಬೆಟ್ಟದ ಪಶ್ಚಿಮಭಾಗದ ಬುಡದಲ್ಲಿರುವ ಸಮತಟ್ಟಾದ ಭೂಪ್ರದೇಶವು ಫಲವತ್ತಾದ ಮತ್ತು ಹಸಿರು ಹಾಸಿನಿಂದ ಕೂಡಿದ ಭತ್ತ ಮತ್ತು ಕಬ್ಬಿನ ಗದ್ದೆಗಳಾಗಿ ಪರಿವರ್ತನೆಗೊಂಡಿದೆ. ಹಾಗೆಯೇ ಬೆಟ್ಟದ ಪೂರ್ವ ಮತ್ತು ದಕ್ಷಿಣ ದಿಕ್ಕಿನ ವಿಶಾಲ ಭೂಪ್ರದೇಶಗಳಲ್ಲಿ ಒಣಬೇಸಾಯವನ್ನು

ಕೈಗೊಂಡಿರುವುದು ವ್ಯಕ್ತವಾಗುತ್ತದೆ. ಉತ್ತರದಿಕ್ಕಿನ ಪ್ರದೇಶವನ್ನು ದೊಡ್ಡದಾದ ಕೆರೆಯು ಆವರಿಸಿಕೊಂಡಿದೆ. ಈ ಬೆಟ್ಟದ ಪೂರ್ವದಿಕ್ಕಿನ ಪ್ರದೇಶದಲ್ಲಿ ಕೆಲವು ಆದಿಶಿಲಾಯುಗದ ಉಪಕರಣಗಳನ್ನು ಸಂಗ್ರಹಿಸಿದುದಾಗಿ ಪುರಾತತ್ವ ಶಾಸ್ತ್ರಜ್ಞರಾದ ಡಾ.ಎಂ.ಎಸ್. ಕೃಷ್ಣಮೂರ್ತಿಯವರು ತಿಳಿಸಿದ್ದಾರೆ. ಬೆಟ್ಟದ ಪಶ್ಚಿಮ ತಪ್ಪಲಿನಲ್ಲಿರುವ ಕೆಲವು ಎಕರೆಗಳಷ್ಟು ಖುಷ್ಕಿ ಭೂಮಿಯು ಮಾನವ ನೆಲೆಯಾಗಿದ್ದಿತೆಂಬ ಕುರುಹುಗಳನ್ನು ಹೊಂದಿದ್ದು ಈ ಭಾಗವು ಪ್ರಾಕ್ತಾನ್ವೇಷಣೆಗೆ ಅನುಕೂಲಕರವಾಗಿದೆ. ಈ ನೆಲೆಯ ಪರಿಸರದಲ್ಲಿರುವ ಗದ್ದೆಗಳು ಭೂಪ್ರದೇಶಕ್ಕಿಂತಲೂ ಎತ್ತರದಲ್ಲಿದೆ. ಈ ಭೂಮಿಯಲ್ಲಿ ಒಣಬೇಸಾಯ ನಡೆಯುತ್ತಿದ್ದರೂ ಇಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಡಕೆ ಚೂರುಗಳು, ಬಳೆಯ ಚೂರುಗಳು, ಕವಡೆಗಳು ಮತ್ತಿತರ ಪ್ರಾಚೀನ ವಸ್ತುಗಳು ಈಗಲೂ ದೊರೆಯುತ್ತವೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಇಲ್ಲಿ ಉತ್ಖನನ ಕೈಗೊಂಡರೆ ಸಾಕಷ್ಟು ಅವಶೇಷಗಳು ಲಭ್ಯವಾಗಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಪರಿಸರದಲ್ಲಿ ಕಂಡುಬರುವ ಅವಶೇಷಗಳು ಉತ್ತರ ಕರ್ನಾಟಕದ ನವಶಿಲಾಯುಗದ ಬೂದಿದಿಬ್ಬಗಳನ್ನು ಬಹಳಷ್ಟು ಮಟ್ಟಿಗೆ ಹೋಲುತ್ತವೆ. ಬೆಟ್ಟಕ್ಕೆ ತಾಕಿದಂತಿರುವ ಪೂರ್ವದಿಕ್ಕಿನ ನಿವೇಶನದಲ್ಲಿ ಜೇಡಿಮಣ್ಣು ಸಂಗ್ರಹಗೊಂಡಿದ್ದು, ಗ್ರಾಮಸ್ಥರು ಈ ಮಣ್ಣನ್ನು ಇಟ್ಟಿಗೆ ತಯಾರಿಸಲು ಬಳಸುತ್ತಾರೆ. ಈ ಮಣ್ಣನ್ನು ಹದಗೊಳಿಸುವಾಗ ದೊರೆತ ಮಡಕೆಯ ಚೂರು ಮತ್ತು ಶಿಲಾಯುಧಗಳನ್ನು ಸಂಗ್ರಹಿಸಲಾಗಿದ್ದು, ಅವು ನವಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಇತಿಹಾಸ ಆರಂಭದ ಯುಗಗಳಿಗೆ ಸೇರಿದಂತಹವಾಗಿವೆ. ಇಲ್ಲಿ ಸಿಕ್ಕಿರುವ ಶಿಲಾಯುಧಗಳೆಂದರೆ ಬಹುಪಾಲು ಕಲ್ಲಿನ ಕೊಡಲಿಗಳು ಮತ್ತು ಕೈ ಕತ್ತಿಗಳಾಗಿವೆ. ನೂತನ ಶಿಲಾಯುಗ ಹಾಗೂ ಚಾಲ್ಕೊಲಿಥಿಕ್ ಮಾನವರು ತಮ್ಮ ಶವಗಳನ್ನು ಹಾಗೆಯೇ ಹೂಳುವುದು ಹಾಗೂ ಮಡಕೆಗಳಾಕಾರದ ಮೃತ್ಪಾತ್ರೆಗಳಲ್ಲಿಟ್ಟು ಹೂಳುವುದು ಎರಡೂ ಪದ್ಧತಿಗಳು ರೂಢಿಯಲ್ಲಿದ್ದುದು ವ್ಯಕ್ತವಾಗುತ್ತದೆ. ಈ ಕಾಲದಲ್ಲಿ ಬಳಸಲಾಗುತ್ತಿದ್ದ ಮಣ್ಣಿನ ಪಾತ್ರೆಗಳು ಮತ್ತು ಮೃತ್ಪಾತ್ರೆಗಳು ವಿವಿಧ ಆಕಾರದಲ್ಲಿದ್ದು ಹಲವು ಅಕ್ಕಪಕ್ಕಗಳಲ್ಲಿ ಹಿಡಿಗಳನ್ನು ಹೊಂದಿದ್ದ ಅಂಶ ಕಂಡುಬರುತ್ತದೆ.

ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ಆಸುಪಾಸಿನ ಪರಿಸರದಲ್ಲಿ ಬೃಹತ್ ಶಿಲಾಯುಗದ ಶಿಲಾಗೋರಿಗಳು ಕಂಡಬರುತ್ತವೆ. ಆದರೆ ಇವುಗಳ ವ್ಯವಸ್ಥಿತ ಅಧ್ಯಯನ ಇನ್ನೂ ಆಗಬೇಕೆಂದು ಡಾ.ಬಿ.ಕೆ.ಗುರುರಾಜಾರಾವ್ ಅಭಿಪ್ರಾಯಪಡುತ್ತಾರೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಹಲಗೂರಿನಲ್ಲಿ ಬೃಹತ್ ಶಿಲಾಯುಗದ ಎರಡು ಶಿಲಾಗೋರಿಗಳಿರುವ ಅಂಶ ಹಾಗೂ ಕಲ್ಲು ವೃತ್ತಗಳಿರುವುದನ್ನು ಪುರಾತತ್ವ ಶಾಸ್ತ್ರಜ್ಞ ಕೆ.ಆರ್.ಶ್ರೀನಿವಾಸನ್ ಅವರು ದಕ್ಷಿಣ ಭಾರತದ ಬೃಹತ್ ಶಿಲಾಯುಗದ ಸರ್ವೇಕ್ಷಣೆ (ಪುಟ ೧೦೩-೧೧೫) ಎಂಬ ಗ್ರಂಥದಲ್ಲಿ ವರದಿ ಮಾಡಿರುತ್ತಾರೆ. ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನಲ್ಲಿರುವ ಕುಂತಿಬೆಟ್ಟದ ಪರಿಸರವು ನವಶಿಲಾಯುಗ ಮತ್ತು ಬೃಹತ್ ಶಿಲಾಯುಗಗಳ ಅವಶೇಷಗಳನ್ನು ಹೊಂದಿರುವ ಅಂಶವನ್ನು ಪುರಾತತ್ವ ಶಾಸ್ತ್ರಜ್ಞ ರಾಬರ್ಟ್‌ಬ್ರೂಸ್‌ಫುಟ್ ಅವರು ಶೋಧಿಸಿರುವರು.

## ಕುಂತಿ ಬೆಟ್ಟದ ಪೂರ್ವೇತಿಹಾಸದ ನೆಲೆ

ಪಾಂಡವಪುರಕ್ಕೆ ಟಿಪ್ಪುಸುಲ್ತಾನನ ಕಾಲದಲ್ಲಿ ಫ್ರೆಂಚ್‌ರಾಕ್ಸ್ ಎಂದು ಕರೆಯಲಾಗುತ್ತಿತ್ತು. ಆ ಕಾಲದಲ್ಲಿ ಪ್ರಸಿದ್ಧವಾದ ಕುಂತಿಬೆಟ್ಟದಲ್ಲಿ ಫ್ರೆಂಚ್ ಸೇನೆಯು ಬೀಡುಬಿಟ್ಟಿದ್ದರಿಂದ ಈ ಬೆಟ್ಟಗಳಿಗೆ ಫ್ರೆಂಚ್‌ರಾಕ್ಸ್ ಎಂಬ ಹೆಸರು ಬಂದಿತೆಂದು ದಾಖಲೆಗಳಿಂದ ತಿಳಿದುಬರುತ್ತದೆ. ಕುಂತಿಬೆಟ್ಟವು ಸಮುದ್ರಮಟ್ಟಕ್ಕಿಂತಲೂ ೨೮೮೨ ಅಡಿಗಳಷ್ಟು ಎತ್ತರದಲ್ಲಿದ್ದು ಉತ್ತರದಿಂದ ದಕ್ಷಿಣಕ್ಕೆ ಚಾಚಿಕೊಂಡಿದೆ. ಈ ಬೆಟ್ಟವು ನಡುವೆಯಿರುವ ಚಿಕ್ಕ ಕೋಡಿನಿಂದ ಬೇರ್ಪಟ್ಟು ಎರಡು ಪ್ರತ್ಯೇಕ ಶಿಖರಗಳಿಂದ ಕೂಡಿದೆ. ಅವುಗಳಿಗೆ ಅಕ್ಕತಂಗಿ ಬೆಟ್ಟ (ಕುಂತಿಬೆಟ್ಟ) ಮತ್ತು ವನಕೆ ಬೆಟ್ಟವೆಂದು ಸ್ಥಳೀಯವಾಗಿ ಕರೆಯಲಾಗುತ್ತದೆ. ಈ ಬೆಟ್ಟದಲ್ಲಿ ಬೃಹದಾಕಾರದ ಸಹಜ ಗ್ರಾನೈಟ್ ಕಲ್ಲಾಸರೆ ಮತ್ತು ನೈಸರ್ಗಿಕ ಗುಹೆಗಳಿದ್ದು ಪ್ರಾಚೀನ ಮಾನವನ ವಾಸಕ್ಕೆ ಅನುಕೂಲವಾಗಿತ್ತು. ಡಾ.ಎಂ.ಎಸ್.ಕೃಷ್ಣಮೂರ್ತಿ

ಅವರು ನಡೆಸಿರುವ ಸಂಶೋಧನೆಯ ಪ್ರಕಾರ ಇಲ್ಲಿಯ ಗುಹೆಯೊಂದರಲ್ಲಿ ಅವರಿಗೆ ಆದಿಶಿಲಾಯುಗದ ವಸ್ತುಗಳು ಮತ್ತು ನವಶಿಲಾಯುಗದ ಮಡಿಕೆ ಚೂರುಗಳು ದೊರೆತಿವೆ. ಅವರ ಪ್ರಕಾರ ಇಲ್ಲಿಯ ಕಲ್ಲಾಸರೆಗಳಲ್ಲಿ ವರ್ಣಚಿತ್ರಗಳಿರುವ ಕುರುಹುಗಳು ಕಂಡುಬಂದವೆಂದೂ ಮತ್ತು ನೈಸರ್ಗಿಕ ಪರಿಣಾಮಗಳಿಂದ ಅವು ಮುಸುಕು ಮಸುಕಾಗಿ ಗುರುತು ಹಿಡಿಯಲಾಗದಷ್ಟು ಅಳಿಸಿ ಹೋಗಿವೆ ಎಂದೂ ಅವರು ಅಭಿಪ್ರಾಯಪಟ್ಟಿರುತ್ತಾರೆ.

ಕುಂತಿ ಬೆಟ್ಟದಲ್ಲಿ ಆದಿಹಳೇಶಿಲಾಯುಗ ಮತ್ತು ಮಧ್ಯಶಿಲಾಯುಗದ ಕಲ್ಲಿನ ಉಪಕರಣಗಳು ಕಂಡುಬಂದಿವೆ. ಅವುಗಳೆಂದರೆ ಕೈಗೊಡಲಿ, ಸ್ಕ್ರೇಪರ್, (Scaper), ಡಿಸ್ಕಾಯ್ಡ್ (Discoid) ಮತ್ತು ಫ್ಲೇಕ್ಸ್‌ಗಳು. ಇವುಗಳನ್ನು ಬೆಣಚುಕಲ್ಲಿನಿಂದ ತಯಾರಿಸಿರುವ ಅಂಶ ವ್ಯಕ್ತವಾಗುತ್ತದೆ. ಈ ಆಯುಧಗಳನ್ನು ನಂತರದ ಕಾಲದಲ್ಲಿ ಉಜ್ಜಿ ನುಣುಪಾಗಿಸಿರುವುದು ಕಂಡುಬರುತ್ತದೆ. ಈ ಬೆಟ್ಟದಲ್ಲಿ ಹೇರಳವಾಗಿರುವ ಅಗ್ನಿಶಿಲೆಯಲ್ಲಿ ತಯಾರು ಮಾಡಿದ ಸ್ಕ್ರೇಪರ್ ದೊರೆತಿದ್ದು, ಇದರಲ್ಲಿ ಕೆಲವೇ ಚಕ್ಕೆಗಳನ್ನು ತೆಗೆಯಲಾಗಿದೆ ಹಾಗೂ ಇದರ ಉಳಿದ ನಯವಾದ ಭಾಗವನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಇದೇ ಶಿಲಾವರ್ಗಕ್ಕೆ ಸೇರಿದ ಹಾಗೂ ಎಲ್ಲ ಮಗ್ಗುಲುಗಳಲ್ಲೂ ಕೆತ್ತಿದ ನಾಲ್ಕು ಅಂಗುಲ ಗಾತ್ರದ ಡಿಸ್ಕಾಯ್ಡ್ ಸಹ ದೊರೆತಿವೆ. ಇದರ ಒಂದು ಮಗ್ಗುಲನ್ನು ವಕ್ರವಕ್ರವಾಗಿ ಕೆತ್ತಲಾಗಿರುವುದರಿಂದ ಇದು ಅಬ್ಬೆವಿಲಿಯನ್ ಲಕ್ಷಣವುಳ್ಳ ಉಪಕರಣಗಳನ್ನು ನೆನಪಿಗೆ ತರುತ್ತದೆ. ಆದಿಶಿಲಾಯುಗದ ಇತರ ಉಪಕರಣಗಳಲ್ಲಿ ಅಗ್ನಿ ಶಿಲೆಯ ಕೋರ್‌ಗಳಿದ್ದು, ಇವುಗಳಿಂದಲೂ ಚಕ್ಕೆಗಳನ್ನು ತೆಗೆಯಲಾಗಿದೆ. ಇದೇ ಶಿಲೆಯ ಡೈಕ್‌ಗಳು ಈ ಪರಿಸರದಲ್ಲಿ ವಿಫುಲವಾಗಿದ್ದು, ಆದಿ ಮಾನವನು ಇವುಗಳನ್ನು ಫ್ಲೇಕ್ ಉಪಕರಣಗಳನ್ನು ತಯಾರಿಸಲು ಉಪಯೋಗಿಸಿಕೊಂಡಿರುವುದು ವ್ಯಕ್ತವಾಗುತ್ತದೆ. ಈ ಉಪಕರಣಗಳು ನೀಳವಾಗಿ ಸೂಕ್ಷ್ಮ ಚುಕ್ಕೆಗಳಿಂದ ಕೂಡಿದ್ದು ಸುಂದರವಾಗಿವೆ. ಈ ಫ್ಲೇಕ್ ಮತ್ತು ಕೋರ್‌ಗಳ ಕಾಲಮಾನವನ್ನು ಮಧ್ಯ ಆದಿ ಶಿಲಾಯುಗವೆಂದು ಗುರುತಿಸಬಹುದಾಗಿದೆ. ಈ ವಸ್ತುಗಳಲ್ಲದೇ ಅಗ್ನಿ ಶಿಲೆ ಮತ್ತು ಬೆಣಚು ಕಲ್ಲುಗಳಲ್ಲಿ ಮಾಡಿದ ಕೆಲವು ಗುಂಡುಗಳೂ ದೊರೆತಿವೆ. ಈ ಪರಿಸರದಲ್ಲಿ ಸರ್ವೇಕ್ಷಣೆ ಕೈಗೊಂಡಿದ್ದ ರಾಬರ್ಟ್‌ಬ್ರೂಸ್‌ಫೂಟ್‌ನು ನವಶಿಲಾಯುಗದ ಉಪಕರಣಗಳನ್ನು ಸಂಗ್ರಹಿಸಿದ್ದನು. ಹಾಗಿದ್ದರೂ ಈ ಸಂಸ್ಕೃತಿಗೆ ಸೇರಿದ ಒಂದು ಕೈಕೊಡಲಿಯೂ ತಮ್ಮ ಸಂಶೋಧನಾ ವೇಳೆಯಲ್ಲಿ ಕಂಡುಬರಲಿಲ್ಲವೆಂದು ಡಾ.ಎಂ.ಎಸ್.ಕೃಷ್ಣಮೂರ್ತಿಯವರು ಅಭಿಪ್ರಾಯಪಡುತ್ತಾರೆ. ಈ ಉಪಕರಣಗಳನ್ನು ಅತ್ಯಂತ ಪರಿಶ್ರಮದಿಂದ ತಯಾರಿಸಿ ಹೊಳಪನ್ನು ನೀಡಿ ಮಾಡಿದ್ದ ಕಾರಣ ಅವುಗಳನ್ನು ಸ್ಥಳೀಯರು ಕುತೂಹಲದಿಂದ ಆಯ್ದು ಸಂಗ್ರಹಿಸಿಟ್ಟುಕೊಂಡಿರಬಹುದಾಗಿರುವುದರಿಂದ ಅವುಗಳು ಸಂಶೋಧನಾ ಸಮಯದಲ್ಲಿ ತಮಗೆ ದೊರೆತಿರಲಾರದೆಂದು ಅವರು ಊಹಿಸಿರುತ್ತಾರೆ. ಅಲ್ಲದೆ ಈ ಆಯುಧಗಳು ದೊರೆಯುವ ಪರಿಸರದಲ್ಲಿ ಬೇಸಾಯ ನಡೆಸುತ್ತಿರುವುದರಿಂದಲೂ ಅವು ದೊರೆಯದಂತಾಗಿದೆ ಎನ್ನಬಹುದು. ಅದಾಗ್ಯೂ ಮಡಕೆಗಳ ಕೆಲವು ಚೂರುಗಳು ಇಲ್ಲಿ ಕಂಡುಬಂದಿವೆ. ಇವು ಕೆಲವೇ ತುಣುಕುಗಳಾದರೂ ಹಿಂದೆ ಇಲ್ಲಿ ನವಶಿಲಾಯುಗದ ಸಂಸ್ಕೃತಿಯು ಇದ್ದಿತೆಂಬ ಅಂಶವನ್ನು ಖಚಿತಪಡಿಸುತ್ತದೆ. ಈ ಭಾಗದ ಪರಿಸರದಲ್ಲೂ, ಕಲ್ಲಾಸರೆಯ ನೆಲೆಗಳಲ್ಲೂ ಹೊಳಪುಳ್ಳ ಬೂದುಬಣ್ಣದ ಮಡಕೆ ಚೂರುಗಳು ಮತ್ತು ಮೇಲ್ಭಾಗದಲ್ಲಿ ಕೊಂಚ ಹೊಳಪು ಹೊಂದಿದ್ದು ಒಳಭಾಗದಲ್ಲಿ ಒರಟಾಗಿರುವ ರಚನೆಯುಳ್ಳ ಮಡಕೆಯ ಚೂರುಗಳು ಕಂಡುಬರುತ್ತವೆ. ಇವುಗಳಲ್ಲದೇ ಬೂದಿಶಿಲೆಯಲ್ಲಿ ಸಿದ್ಧಪಡಿಸಲಾದ ಮೆದುವಾದ ಕವಣೆ ಕಲ್ಲುಗಳೂ ದೊರೆತಿವೆ.

ಈ ಪರಿಸರದಲ್ಲಿ ಅಪಾರವಾಗಿ ಕಂಡುಬರುವ ಮಡಕೆಯ ಚೂರುಗಳಿಂದ ಇಲ್ಲಿ ಪೂರ್ವೇತಿಹಾಸ ಸಂಸ್ಕೃತಿಯು ಹಿಂದೆ ಅಸ್ತಿತ್ವದಲ್ಲಿದ್ದ ಅಂಶವನ್ನು ಸಮರ್ಥಿಸಬಹುದಾಗಿದೆ. ಆದರೆ ಒಂದಾದರೂ ಬೃಹತ್ ಶಿಲಾ ಸಮಾಧಿಯು ಈ ಪರಿಸರದಲ್ಲಿ ಸಿಕ್ಕಿಲ್ಲದಿರುವುದು ಆಶ್ಚರ್ಯಕರವಾಗಿದೆ. ಸಾಮಾನ್ಯವಾಗಿ ಈ ರೀತಿಯ ಸಮಾಧಿಗಳು ಸಹಜವಾಗಿಯೇ ನಿವಾಸಗಳಿಂದ ದೂರವಿರುತ್ತಿದ್ದರಿಂದಲೂ ಹಾಗೂ ಈ ಆವರಣದಲ್ಲಿ ಕೃಷಿ ಚಟುವಟಿಕೆ ನಡೆಯುತ್ತಿರುವ ಕಾರಣದಿಂದಲೂ ಈ ಸಮಾಧಿಗಳು ನೈಸರ್ಗಿಕವಾಗಿ ನಾಶಗೊಂಡಿರಬೇಕೆಂಬ

ಅಭಿಪ್ರಾಯವಿದೆ. ಈ ಸಂಸ್ಕೃತಿಯ ವಿಶಿಷ್ಟವೆನಿಸಿದ ಕಪ್ಪು ಮಡಕೆ, ಕಪ್ಪು ಮಿಶ್ರಿತ ಕೆಂಪು ಮಡಕೆ ಮತ್ತು ಕೆಂಪು ಮಡಕೆಗಳನ್ನು ಚೆನ್ನಾಗಿ ಹದಮಾಡಿದ ಜೇಡಿಮಣ್ಣಿನಿಂದ ತಯಾರಿಸಲಾಗಿರುವುದು ಕಂಡುಬರುತ್ತದೆ. ಇವುಗಳನ್ನು ಚೆನ್ನಾಗಿ ಸುಟ್ಟಿರುವುದರಿಂದ ಕೆಲವು ಮಡಕೆಗಳು ಸಾಕಷ್ಟು ಹೊಳಪುಳ್ಳದ್ದಾಗಿವೆ. ಅಲ್ಲದೆ ಮಡಕೆಗಳು ಹಲವು ವಿಧವಾಗಿವೆ. ಕೆಳಮುಖವಾಗಿ ಬಾಗಿದ ಕಂಠವುಳ್ಳ ಬುಗರಿಯಾಕಾರದ ಬೋಗುಣಿ, ಚಪ್ಪಟೆಯಾಕಾರದ ಹಾಗೂ ಲಂಬವಾಗಿರುವ ಕಂಠವುಳ್ಳ ಅಂತಹದೇ ಬೋಗುಣಿ, ದುಂಡು ಕಂಠದ ಬೋಗುಣಿ, ತಟ್ಟೆ, ಲೋಟ, ವಿವಿಧ ಗಾತ್ರದ ಗಡಿಗೆ, ದುಂಡುತಳದ ಮತ್ತು ಹೊಳೆಯುವ ಅಗಲ ಬಾಯಿಯಿರುವ ಸಣ್ಣ ಮಡಕೆ, ಮುಚ್ಚಳ, ಕಾಲುಗಳುಳ್ಳ ಕಂಬ ಇತ್ಯಾದಿಗಳು ಇಲ್ಲಿ ದೊರೆತಿವೆ. ಹಲವು ಮಡಕೆ ಚೂರುಗಳ ಮೇಲೆ ಈ ಯುಗದ ವಿಶಿಷ್ಟವೆನಿಸಿದ ಗ್ರಾಫಿಕ್ ಚಿಹ್ನೆಗಳು ಕಂಡುಬರುತ್ತವೆ. ಜನವಸತಿಯ ತಾಣವೆನಿಸಿದ ಈ ಪರಿಸರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಡಕೆಯ ಚೂರುಗಳು ದೊರಕುತ್ತಿದ್ದು ಇತಿಹಾಸದ ಆರಂಭಕಾಲದ ಮಾನವ ಬದುಕಿನ ವಿಶಿಷ್ಟತೆಯ ಕುರುಹುಗಳನ್ನು ಸೂಚಿಸುತ್ತವೆ. ಅವುಗಳಲ್ಲಿ ಕಪ್ಪುಮಿಶ್ರಿತ ಕೆಂಪು ಮಡಿಕೆ, ಕೆಂಪು ಮಡಕೆ, ಕಪ್ಪು ಮಡಕೆ, ಕಂದು ಬಣ್ಣದ ಮಡಕೆ ಮತ್ತು ರಸೆಟ್ ಲೇಪಿತ ಕೆಯೊಲಿನ್‌ನಲ್ಲಿ ಚಿತ್ರಿಸಿದ ಮಡಕೆಗಳು ಮುಖ್ಯವಾದುವುಗಳಾಗಿವೆ. ಮಡಕೆ ಚೂರು, ಬೋಗುಣಿ, ತಟ್ಟೆ, ಲೋಟ, ಮುಚ್ಚಳ, ವಸ್ತುಗಳನ್ನು ಸಂಗ್ರಹಿಸುವ ಜಾಡಿ, ಕಾಲುಗಳುಳ್ಳ ಜಾಡಿ ಇತ್ಯಾದಿಗಳು ಈ ಪರಿಸರದಲ್ಲಿ ಶೋಧಿತವಾಗಿವೆ. ಇವುಗಳ ಪೈಕಿ ಬಣ್ಣದಿಂದ ಚಿತ್ರಿತವಾದ ಮಡಕೆಗಳು ಅತ್ಯಂತ ಗಮನಾರ್ಹವಾಗಿವೆ. ಕಪ್ಪುಮಿಶ್ರಿತ ಕೆಂಪುವರ್ಣದಿಂದ ಕೂಡಿದ ಈ ಮಡಕೆಗಳ ಮೇಲೆ ಕೆಯೋಲಿನ್‌ನಲ್ಲಿ ಚಿತ್ರಿಸಿದ ಅಡ್ಡ ಗುರುತಿನ ಗೆರೆಗಳಿವೆ. ಈ ಮಡಕೆಗಳು ರಸೆಟ್ ಲೇಪಿತವಾಗಿದ್ದು ಅವುಗಳ ಮೇಲೆ ವರ್ಣವನ್ನು ಬಳಿದಿರುವುದು ಕಂಡುಬಂದಿದೆ. ಈ ಯುಗದ ಕೆಲವೇ ಮಡಕೆಗಳು ಹೊಂದಿರುವ ಅಲಂಕಾರಗಳಲ್ಲಿ ಅಡ್ಡಡ್ಡಲಾದ ಸಮಾನಂತರವಾದ ಮತ್ತು ಓರೆಯಾದ ಗೆರೆಗಳೂ, ಬೆರಳುಗಳ ಸಹಾಯದಿಂದ ಮೂಡಿಸಲಾಗಿರುವ ಅಲಂಕಾರಗಳೂ ಮಡಕೆಯ ಮೇಲ್ಮೈ ಮೇಲೆ ಸುಂದರವಾಗಿ ಅಭಿವ್ಯಕ್ತಗೊಂಡಿರುವುದು ಗಮನಾರ್ಹವಾಗಿದೆ. ಒಟ್ಟಿನಲ್ಲಿ ಕುಂತಿಬೆಟ್ಟ ಪರಿಸರವು ಮಂಡ್ಯ ಜಿಲ್ಲೆಯ ಪ್ರಾಗ್‌ಚಾರಿತ್ರಿಕ ನೆಲೆಗಳಲ್ಲಿ ಅತ್ಯಂತ ಉತ್ಕೃಷ್ಟವಾದುದೆಂದು ಹೇಳಬಹುದಾಗಿದೆ. ಇಲ್ಲಿ ದೊರೆತಿರುವ ಅವಶೇಷಗಳು ಈ ನೆಲೆಯು ಆದಿಶಿಲಾಯುಗದಿಂದ ಇಂದಿನವರೆಗೆ ಸತತವಾಗಿ ಮಾನವನ ವಾಸಕ್ಕೆ ಯೋಗ್ಯವಾಗಿತ್ತೆಂಬುದನ್ನು ಸಮರ್ಥಿಸುತ್ತದೆ. ಈಗಾಗಲೇ ಬೆಳಕಿಗೆ ಬಂದಿರುವ ದಕ್ಷಿಣ ಕರ್ನಾಟಕದ ರಾಮನಾಥಪುರ (ಹಾಸನ ಜಿಲ್ಲೆ), ಶಿವಸಮುದ್ರ, ತಲಕಾಡು ಮತ್ತು ರಂಗನಾಥಪುರ (ಮೈಸೂರು ಜಿಲ್ಲೆ)ಗಳ ಆದಿ ಶಿಲಾಯುಗದ ನೆಲೆಗಳ ಜೊತೆಗೆ ಈ ನೆಲೆಯನ್ನು ಹೋಲಿಸಬಹುದಾಗಿದೆ ಎಂದು ಡಾ.ಎಂ.ಎಸ್.ಕೃಷ್ಣಮೂರ್ತಿ ಅವರು ಅಭಿಪ್ರಾಯಪಟ್ಟಿರುತ್ತಾರೆ. ಈಚೆಗೆ ಡಾ.ಬಿ.ಕೆ.ಗುರುರಾಜರಾವ್ ಅವರು ಮೈಸೂರು ನಗರದಲ್ಲಿ ದೊರೆತ ಮಧ್ಯ ಆದಿ ಶಿಲಾಯುಗಕ್ಕೆ ಸೇರಿದ ಕೆಲವು ಉಪಕರಣಗಳನ್ನು ಬೆಳಕಿಗೆ ತಂದಿದ್ದಾರೆ. ಹಾಗೆಯೇ ಶ್ರೀರಂಗಪಟ್ಟಣದ ಸೂಕ್ಷ್ಮ ಶಿಲಾಯುಗದ ಉಪಕರಣಗಳ ಕಾರ್ಖಾನೆಯು ಇದ್ದುದರ ಬಗ್ಗೆ ಸಿ.ಮಹದೇವ ವರದಿ ಮಾಡಿದ್ದಾರೆ. ಇವುಗಳ ಹಿನ್ನೆಲೆಯಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಕೆಲವು ನೆಲೆಗಳು ಆದಿ ಶಿಲಾಯುಗದ ಪೂರ್ವದಿಂದಲೂ ಮಾನವ ವಾಸಕ್ಕೆ ಯೋಗ್ಯವಾಗಿದ್ದುವೆಂದು ಕುಂತಿಬೆಟ್ಟದ ಉದಾಹರಣೆಯಿಂದ ಹೇಳಬಹುದಾಗಿದೆ. ಈ ನೆಲೆಯು ಆದಿಶಿಲಾಯುಗದಿಂದ ಇಂದಿನವರೆಗೆ ಅಳಿಯದೆ ಏಕಪ್ರಕಾರದ ಸಾಂಸ್ಕೃತಿಕ ಸನ್ನಿವೇಶವನ್ನು ಇನ್ನೂ ಉಳಿಸಿಕೊಂಡು ಬಂದಿರುವ ಒಂದು ಅಪರೂಪದ ನಿವೇಶನವಾಗಿದೆ.

ಬೃಹತ್‌ಗಾತ್ರದ, ಒರಟಾದ ಕಲ್ಲುಚಪ್ಪಡಿ (undressed) ಗಳನ್ನು ಉಪಯೋಗಿಸಿ ಸಮಾಧಿಗಳನ್ನು (Dolmens) ನಿರ್ಮಿಸುವ ನೂತನ ಪದ್ಧತಿಯನ್ನು ಆರಂಭಿಸಿದ 'ಬೃಹತ್ ಶಿಲಾಯುಗ ಸಂಸ್ಕೃತಿ'ಯ ಜನರು ವಿವಿಧ ರೀತಿಯ ಶವಸಂಸ್ಕಾರ ಪದ್ಧತಿಯನ್ನು ಅನುಸರಿಸುತ್ತಿದ್ದು, ಜಿಲ್ಲೆಯ ಮರಳಹಳ್ಳಿ, ಬೆಳಕವಾಡಿ, ಮುತ್ತತ್ತಿ, ಹಲಗೂರು, ಕುಂತಿಬೆಟ್ಟ, ಶೆಟ್ಟಿಹಳ್ಳಿ, ಸಣಬಕೊಪ್ಪಲು, ತೊಣ್ಣೂರು, ಮೇಲುಕೋಟೆ, ಹೊಸಕೋಟೆ ಮತ್ತು

ಸಿರಗನಹಳ್ಳಿಗಳಲ್ಲಿ ಈ ಸಂಸ್ಕೃತಿಯ ಕುರುಹುಗಳನ್ನು ಸಂಶೋಧಕರು ಪತ್ತೆಹಚ್ಚಿದ್ದಾರೆ. ಬೆಳಕವಾಡಿ ಮತ್ತು ಮರಳಹಳ್ಳಿಗಳಲ್ಲಿ ವಿವಿಧ ವರ್ಣದ ಮಡಕೆ ಚೂರುಗಳು ಲಭಿಸಿವೆ. ಹಲಗೂರು ಮತ್ತು ಸಣಬ ಕೊಪ್ಪಲುಗಳಲ್ಲಿ ಶಿಲಾಸಮಾಧಿಗಳು ಪತ್ತೆಯಾಗಿವೆ. ಮಿಗಿಲಾಗಿ ಹಲಗೂರಿನಲ್ಲಿ ಶಿಲಾವೃತ್ತ ಸಮಾಧಿಗಳಿರುವ ಅಂಶವನ್ನೂ ವಿದ್ವಾಂಸರು ವರದಿ ಮಾಡಿರುವರು. ಬೆಳಕವಾಡಿಯ ಪೂರ್ವೇತಿಹಾಸದ ನಿವೇಶನದ ಬಳಿಯಿರುವ ಪಾಳು ದೇವಾಲಯದಲ್ಲಿ ಪ್ರಾಣಿಗಳ ಮೂಳೆಗಳು ದೊರೆತಿರುವುದು ಕುತೂಹಲಕಾರಿಯಾಗಿದೆ. ತೊಣ್ಣೂರಿನ ಬಳಿಯ ಸಣಬ ಕೊಪ್ಪಲಿನ ಶಿಲಾಗೋರಿಯಲ್ಲಿ ಕಬ್ಬಿಣದ ಉಪಕರಣಗಳು ಲಭಿಸಿದ್ದು, ಮೇಲುಕೋಟೆಯ ಹೊಗರಿ ದೇವಾಲಯದ ಬಳಿ ಬಂಡೆಯೊಂದರ ಮೇಲೆ ಮಾನವನ ರೇಖಾಚಿತ್ರವಿದೆ. ಈ ನೆಲೆಗಳಲ್ಲಿ ಕಪ್ಪು, ಕೆಂಪು ಹಾಗೂ ಕಪ್ಪುಮಿಶ್ರಿತ ಕೆಂಪು ಹೊಳಪಿನಿಂದ ಕೂಡಿದ ಮಡಕೆ-ಕುಡಿಕೆಗಳು ಲಭಿಸಿದ್ದು ಅವುಗಳನ್ನು ಮೂಲತ: ಜೇಡಿ ಮಣ್ಣಿನಿಂದ ತಯಾರಿಸಲಾಗಿದೆ. ಕೆಳಮುಖವಾಗಿ ಬಾಗಿದ ಕಂಠವುಳ್ಳ ಚಪ್ಪಟೆಯಾಕಾರದ ಬೋಗುಣಿ, ತಟ್ಟೆ, ಲೋಟ, ಗಡಿಗೆ, ದುಂಡುತಳದ ಅಗಲ ಬಾಯಿಯ ಹೊಳಪುಳ್ಳ ಸಣ್ಣ ಸಣ್ಣ ಮಡಕೆ, ಮುಚ್ಚಳವುಳ್ಳ ಮಡಕೆ ಮುಂತಾದ ನಾನಾ ಮಾದರಿಯ ಮಡಕೆಗಳು ಪತ್ತೆಯಾಗಿದ್ದು, ಅವುಗಳಲ್ಲಿ ಕೆಲವಕ್ಕೆ ಎರಡೂ ಬದಿಯಲ್ಲಿ ಹಿಡಿಕೆಗಳಿವೆ. ಮಂಡ್ಯ ತಾಲೂಕು ತೂಬಿನಕೆರೆಯ ಗುಡ್ಡದಲ್ಲಿ ಚಕ್ರವ್ಯೂಹದಂತಹ ಬಯಲು ಬಂಡೆ ರೇಖಾಚಿತ್ರವನ್ನು ಇತ್ತೀಚೆಗೆ ಪತ್ತೆಹಚ್ಚಲಾಗಿದೆ.

ಜಿಲ್ಲೆಯ ಇನ್ನಷ್ಟು ಸ್ಥಳಗಳಲ್ಲಿ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಪತ್ತೆಯಾಗುವ ಸಾಧ್ಯತೆಗಳಿವೆ. ಸಿಂದಘಟ್ಟ ಬಳಿಯ ನಾರಾಯಣ ದುರ್ಗದ ಬೆಟ್ಟ ಶ್ರೇಣಿಯ ಮುದಿಬೆಟ್ಟದಲ್ಲಿರುವ ಹಲವಾರು ನೈಸರ್ಗಿಕ ಗವಿಗಳು ಶಿಲಾಯುಗ ಸಂಸ್ಕೃತಿಯ ಕುರುಹುಗಳನ್ನು ಹೊಂದಿರುವ ಸಾಧ್ಯತೆಗಳಿವೆ. ಮೇಲುಕೋಟೆಯ ಪಾಂಡವಪುರ ಗವಿ ಪರಿಸರ, ಮೈಲಾರಪಟ್ಟಣ, ಪಡವಲಪಟ್ಟಣ, ಕೋಟೆಬೆಟ್ಟಗಳನ್ನೂ ಈ ನಿಟ್ಟಿನಲ್ಲಿ ಪರಿಶೀಲಿಸುವ ಅಗತ್ಯವಿದೆ. ಹಲಸಹಳ್ಳಿ ಗವಿಮಠದಲ್ಲಿರುವ ನೂರಾರು ಕಿರುಶಿಲೆಗಳಲ್ಲಿ ಕೆಲವಾದರೂ ಶಿಲಾಯುಧಗಳಾಗಿರುವ ಸಾಧ್ಯತೆಗಳಿವೆ. ಹುಲಿವಾನದ ಕಾಲಭೈರವೇಶ್ವರನ ಜಾತ್ರೆಯಲ್ಲಿ ಪೂಜಿಸಲ್ಪಡುವ ಆಯುಧಗಳಲ್ಲಿ ಕೆಲವು ಶಿಲಾಯುಗದ ಆಯುಧಗಳನ್ನು ಹೋಲುತ್ತವೆಂಬ ಅಭಿಪ್ರಾಯವಿದೆ. ಆಲತಿ (ಹಾಲ್ತಿ) ಗಿರಿಯ ಗವಿಗೂ ಪರಶುರಾಮನಿಗೂ ಇರುವ ಸಂಬಂಧ; ಗವಿರಂಗನಾಥನಿಗೆ ಸಂಬಂಧಿಸಿದಂತೆ ಇರುವ ಜಾನಪದ ಕಥೆ; ಆ ಪ್ರದೇಶಗಳು ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಯಷ್ಟು ಪ್ರಾಚೀನವೆಂಬ ಅಂಶವನ್ನು ಸೂಚಿಸುತ್ತವೆ. ಹದ್ದಿನಕಲ್ಲು ಹನುಮಂತನಬೆಟ್ಟದಲ್ಲಿ ಪ್ರತೀ ಅಮಾವಾಸ್ಯೆಯಂದು ವಿಶೇಷವಾಗಿ ಜರುಗುವ ಕಲ್‌ಸೇವೆ (ದೆವ್ವ ಬಿಡಿಸುವ ತಂತ್ರ) ಶಿಲಾಯುಗದಷ್ಟು ಪ್ರಾಚೀನ ಆಚರಣೆಯಂತೆ ತೋರುತ್ತದೆ.

ಮೌರ್ಯರ ಮತ್ತು ಶಾತವಾಹನರ ಕಾಲಕ್ಕೆ ಸಂಬಂಧಿಸಿದ ಯಾವುದೇ ಶಾಸನವಾಗಲೀ ಅಥವಾ ಅವಶೇಷಗಳ ನಿವೇಶನಗಳಾಗಲೀ ಮಂಡ್ಯ ಜಿಲ್ಲೆಯಲ್ಲಿ ಇದುವರೆಗೂ ದೊರೆತಿಲ್ಲ.

### ಬನವಾಸಿಯ ಕದಂಬರು

ಶಾತವಾಹನರ ಸಮಕಾಲೀನರಾಗಿದ್ದ ಚುಟುಗಳೇ ಅಲ್ಲದೇ ಕರ್ನಾಟಕದಲ್ಲಿ ಬೇರೆ ಬೇರೆ ಸಣ್ಣಪುಟ್ಟ ರಾಜವಂಶಗಳೂ ಆಳ್ವಿಕೆ ಮಾಡುತ್ತಿದ್ದುವು. ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ಕ್ರಿ.ಶ.೩೪೫ರಲ್ಲಿ ಮಯೂರಶರ್ಮನಿಂದ ಕದಂಬವಂಶದ ಸಾಮ್ರಾಜ್ಯ ಸ್ಥಾಪನೆಯಾಯಿತು. ಶಿವಮೊಗ್ಗ ಜಿಲ್ಲೆಯ ತಾಳಗುಂದದ ಶಾಂತಿವರ್ಮನ ಶಾಸನದಲ್ಲಿ ಉಲ್ಲೇಖಿಸಿರುವಂತೆ ಷಟ್‌ಕರ್ಮನಿರತನಾಗಿದ್ದ ಮಯೂರಶರ್ಮನು ಬ್ರಾಹ್ಮಣ ವಂಶದ ಮಾನವ್ಯಸಗೋತ್ರದ ಹಾರಿತಿಪುತ್ರನೆಂದು ತನ್ನನ್ನು ಕರೆದುಕೊಂಡಿದ್ದಾನೆ. ಬನವಾಸಿಯ ಬಳಿಯ ಗುಡ್ನಾಪುರದ ಶಾಸನವು ಮಯೂರಶರ್ಮನ ತಾತ ವೀರಶರ್ಮನು ಚತುರ್ವೇದ ಸಂಹಿತೆಗಳ ಪಂಡಿತನಾಗಿದ್ದನೆಂದು ಉಲ್ಲೇಖಿಸುವುದಲ್ಲದೇ ಈತನು ವೀರಶರ್ಮನ ಮಗನಾಗಿದ್ದ ಬಂಧುಷೇಣನ ಪುತ್ರನೆಂದೂ ಸ್ಪಷ್ಟಪಡಿಸುತ್ತದೆ.

ವೀರಶರ್ಮನು ಮಯೂರಶರ್ಮನನ್ನು ಅಂದಿನ ಪ್ರಸಿದ್ಧ ಘಟಿಕಾಸ್ಥಾನವಾಗಿದ್ದ ಹಾಗೂ ಪಲ್ಲವರ ರಾಜಧಾನಿಯಾಗಿದ್ದ ಕಂಚೀಪುರಕ್ಕೆ ಉನ್ನತ ಶಿಕ್ಷಣಕ್ಕೆ ಕರೆದೊಯ್ದನು. ಅನಂತರ ಅಲ್ಲಿ ಅವರಿಂದ ಅಪಮಾನಿತನಾಗಿ ಬಂಡೆದ್ದು ಬನವಾಸಿಗೆ ಹಿಂದಿರುಗಿ ಕನ್ನಡ ಮೂಲದ ರಾಜವಂಶದ ಸಾಮ್ರಾಜ್ಯವನ್ನು ಬನವಾಸಿಯಲ್ಲಿ ಸ್ಥಾಪಿಸಿದ ಕೀರ್ತಿಗೆ ಪಾತ್ರನಾದನು. ಅಲ್ಲಿಯವರೆಗೆ, ಈ ಪ್ರದೇಶದ ಮೇಲೆ ಪಲ್ಲವರು ಹೊಂದಿದ್ದ ಹತೋಟಿಯನ್ನು ತಪ್ಪುವಂತೆ ಮಾಡಿ ಮಯೂರಶರ್ಮನು ತನ್ನನ್ನು ಸ್ವತಂತ್ರ್ಯ ರಾಜನೆಂದು ಘೋಷಿಸಿಕೊಂಡನು. ಕದಂಬ ಸಾಮ್ರಾಜ್ಯದ ಎಲ್ಲೆಗಳನ್ನು ಕಾವೇರಿ ತೀರದವರೆಗೂ ವಿಸ್ತರಿಸಿದನು. ಚಿಕ್ಕಮಗಳೂರು ಜಿಲ್ಲೆಯ ಬೀರೂರು ತಾಮ್ರಪಟ (ಎ.ಕ.ಸಂ: ೬–ಕ.ಡಿ:೧೬೨) ಶಾಸನದಲ್ಲಿ ಶಾಂತಿವರ್ಮನನ್ನು ಸಮಗ್ರ 'ಕರ್ಣಾಟಭೂವರ್ಗ ಭರ್ತಾರ' ಎಂದು ಕರೆದಿದ್ದು 'ಕರ್ಣಾಟ' ಎಂಬ ಹೆಸರನ್ನು ಪ್ರಥಮ ಬಾರಿಗೆ ಪ್ರಯೋಗಿಸಿರುವುದು ಕಂಡುಬರುತ್ತದೆ. ಕದಂಬ ಕಾಕುಸ್ಥವರ್ಮನು ತನ್ನ ಹೆಣ್ಣುಮಕ್ಕಳನ್ನು ಗುಪ್ತ, ವಾಕಟಕ, ಭಟಾರಿ ಹಾಗೂ ಗಂಗವಂಶದ ರಾಜಕುಮಾರರಿಗೆ ವಿವಾಹ ಮಾಡಿ ಕೊಟ್ಟ ಕಾರಣ, ಕದಂಬ ವಂಶವು ನೆರೆರಾಜ್ಯಗಳೊಂದಿಗೆ ಹಾರ್ದಿಕ ಸ್ನೇಹ ಬಾಂಧವ್ಯವನ್ನು ಬೆಳೆಸಿಕೊಳ್ಳಲು ಅನುಕೂಲವಾಯಿತು. ಹೀಗೆ ಕರ್ನಾಟಕದ ಉತ್ತರ ಭಾಗವು ಕದಂಬರ ಆಳ್ವಿಕೆಗೆ ಒಳಪಟ್ಟಿದ್ದಾಗ ದಕ್ಷಿಣ ಭಾಗವು ತಲಕಾಡಿನ ಗಂಗರ ಆಳ್ವಿಕೆಗೆ ಒಳಪಟ್ಟಿತು. ಈ ಎರಡೂ ರಾಜವಂಶಗಳು ಸೌಹಾರ್ದಯುತವಾಗಿದ್ದ ಕಾರಣ ಆಗ ಅಸ್ತಿತ್ವದಲ್ಲಿದ್ದ ಸಣ್ಣಪುಟ್ಟ ರಾಜ್ಯಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಕ್ರಿ.ಶ.ನಾಲ್ಕನೇ ಶತಮಾನದ ಮಧ್ಯಭಾಗದಲ್ಲಿ ರಾಜ್ಯಾಡಳಿತ ಮಾಡಲು ಪ್ರಾರಂಭಿಸಿದುವು. ಈ ಎರಡೂ ರಾಜವಂಶಗಳ ಆಳ್ವಿಕೆಯ ಕಾಲದಲ್ಲಿ ಕರ್ನಾಟಕವು ಸುಭದ್ರವಾದ ರಾಜಕೀಯ ಮತ್ತು ಸಾಂಸ್ಕೃತಿಕ ಅಸ್ತಿತ್ವವನ್ನು ಪಡೆದು ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯ ಪ್ರಗತಿಗೆ ಸುರಕ್ಷಿತವಾದ ತಳಹದಿಯನ್ನು ನಿರ್ಮಿಸಿದವು. ಉತ್ತರ ಕರ್ನಾಟಕದಲ್ಲಿ ಬನವಾಸಿ ಕದಂಬರ ಆಳ್ವಿಕೆಯ ಪ್ರಾರಂಭದೊಡನೆ ಕರ್ನಾಟಕ ಸಂಸ್ಕೃತಿಯ ಅನೇಕ ನವಪರಂಪರೆಗಳ ಉಗಮವಾಯಿತೆಂದು ಹಲವು ವಿದ್ವಾಂಸರುಗಳು ಅಭಿಪ್ರಾಯಪಟ್ಟಿರುತ್ತಾರೆ.

### ತಲಕಾಡಿನ ಗಂಗರು

ತಲಕಾಡಿನ ಗಂಗರು ಕರ್ನಾಟಕದ ದಕ್ಷಿಣ ಭಾಗದಲ್ಲಿ ಸುಮಾರು ನಾಲ್ಕನೇ ಶತಮಾನದ ಮಧ್ಯಭಾಗದಿಂದ ಹತ್ತನೇ ಶತಮಾನದ ಕೊನೆಯವರೆಗೂ ಆಳ್ವಿಕೆ ಮಾಡಿದರು. ಗಂಗ ರಾಜವಂಶದ ಆಳ್ವಿಕೆಯ ಅವಧಿಗಳು ಮತ್ತು ಇತಿಹಾಸ ಕಾಲಾನುಕ್ರಮಣಿಕೆಯ ಸ್ವರೂಪದ ಬಗ್ಗೆ ವಿದ್ವಾಂಸರಲ್ಲಿ ನಿರಂತರ ಚರ್ಚೆ ನಡೆಯುತ್ತಿದೆ. ಫ್ಲೀಟ್ ಅವರು ಗಂಗರ ಬಹುಪಾಲು ತಾಮ್ರಶಾಸನಗಳು, ಕೂಟ (spurious) ಶಾಸನಗಳೆಂದೂ ಐತಿಹಾಸಿಕ ಪುರಾವೆಗಳಿಲ್ಲವೆಂದು ಅಭಿಪ್ರಾಯಪಟ್ಟರೆ ಬಿ.ಎಲ್.ರೈಸ್ ಅವರು ಗಂಗರ ಕಾಲದ ಹೆಚ್ಚಿನ ತಾಮ್ರ ಶಾಸನಗಳು ನೈಜವಾದುವೆಂದು ಆದುದರಿಂದ ಅವರ ಇತಿಹಾಸ ರಚನೆಗೆ ಈ ತಾಮ್ರ ಶಾಸನಗಳು ವಿಶ್ವಾಸಾರ್ಹವೆಂದೂ ಭಾವಿಸಿದ್ದಾರೆ. ಗಂಗರ ಉಗಮದ ವಿಚಾರಗಳು ಕ್ರಿ.ಶ.೧೧ನೇ ಶತಮಾನದಿಂದೀಚಿನ ಶಾಸನಗಳಲ್ಲಿ ಮಾತ್ರ ಕಂಡುಬರುತ್ತದೆ. ಅವುಗಳ ಪ್ರಕಾರ ಈ ವಂಶದವರು ಮೊದಲು ಅಯೋಧ್ಯೆಯಲ್ಲಿ ಆಳುತ್ತಿದ್ದರೆಂದು ಅನಂತರ ಅಹಿಚ್ಛತ್ರ ಎಂಬ ಸ್ಥಳಕ್ಕೆ ಹೋದರೆಂದೂ ತರುವಾಯ ದಡಿಗ ಮತ್ತು ಮಾಧವ ಎಂಬ ಇಬ್ಬರು ರಾಜಕುಮಾರರು ದಕ್ಷಿಣದಲ್ಲಿರುವ ಗಂಗಪೆರೂರಿಗೆ ವಲಸೆ ಹೋಗಿ ನಂದಗಿರಿ (ನಂದೀಬೆಟ್ಟ) ಮತ್ತು ಕುವಲಾಲಪುರ (ಕೋಲಾರ) ಎಂಬ ಮುಖ್ಯ ನಗರಗಳನ್ನುಳ್ಳ ಗಂಗವಾಡಿ–೯೬೦೦೦ ಪ್ರಾಂತ್ಯದಲ್ಲಿ ತಮ್ಮ ಸುಭದ್ರ ಸಾಮ್ರಾಜ್ಯದ ಸ್ಥಾಪನೆಯನ್ನು ಮಾಡಿದರೆಂಬ ಅಂಶವು ಸ್ಪಷ್ಟವಾಗುತ್ತದೆ. ಕಲ್ಲೂರುಗುಡ್ಡದ ಕ್ರಿ.ಶ.೧೧೨೨ರ ಶಾಸನದ ಪ್ರಕಾರ, ಗಂಗರು ಸೂರ್ಯವಂಶದವರಾಗಿದ್ದು, ಇಕ್ವಾಕು ವಂಶಕ್ಕೆ ಸೇರಿದವರೆಂದು ತಿಳಿದುಬರುತ್ತದೆ. ಈ ನಂಬಿಕೆಯ ಪ್ರಕಾರ ರಾಜ ಹರಿಶ್ಚಂದ್ರ ಮತ್ತು ಆತನ ಪತ್ನಿ ರೋಹಿಣಿ ದೇವಿಯರ ಮಗನಾಗಿದ್ದ ಭರತನ ಪತ್ನಿ ವಿಜಯ ಮಹಾದೇವಿಯು ಗರ್ಭವತಿಯಾಗಿದ್ದಾಗ ಗಂಗಾನದಿಯಲ್ಲಿ ಸ್ನಾನ ಮಾಡಿದ ನಂತರ ಜನಿಸಿದ ಮಗನಿಗೆ ಗಂಗದತ್ತ (ಗಂಗೆಯ ವರಪ್ರಸಾದದ ಶಿಶು) ಎಂದು

ನಾಮಕರಣ ಮಾಡಿದಳೆಂದು ಪ್ರತೀತಿಯಿದೆ. ಗಂಗದತ್ತನು ಈ ವಂಶದ ಮೂಲದವನೆಂದು ಹಾಗೂ ಆತನು ತನ್ನ ವಂಶೋದ್ಧಾರಕನಿಗೆ ಗಂಗವಂಶದವನೆಂದು ಕರೆದ ಕಾರಣ ಈ ರಾಜವಂಶಕ್ಕೆ ಗಂಗರೆಂದು ಕರೆಯಲಾಯಿತೆಂದು ಶಾಸನಗಳಿಂದ ಖಚಿತವಾಗುತ್ತದೆ. ಅವರು ನಂದಗಿರಿ ಮತ್ತು ಕುವಲಾಲಪುರ ಎಂಬ ಮುಖ್ಯ ನಗರಗಳನ್ನು ಹೊಂದಿದ್ದ ಗಂಗವಾಡಿ–೯೬,೦೦೦ ಪ್ರಾಂತ್ಯದಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿದರೆಂದೂ ಶಾಸನಗಳಿಂದ ತಿಳಿದುಬರುತ್ತದೆ. ಸ್ವಲ್ಪ ಕಾಲಾನಂತರ ಅವರು ತಮ್ಮ ರಾಜಧಾನಿಯನ್ನು ಕುವಲಾಲಪುರದಿಂದ ಮಣ್ಣೆ (ಮಾನ್ಯಪುರ)ಗೂ ನಂತರ ತಲಕಾಡಿಗೂ ಬದಲಾಯಿಸಿದರು.

ಈ ಸ್ಥಳಗಳ ಪೈಕಿ ಅಯೋಧ್ಯೆ ಮತ್ತು ಅಹಿಚ್ಛತ್ರಗಳನ್ನು ಉತ್ತರ ಭಾರತದಲ್ಲಿಯೂ ಗಂಗಪೆರೂರು ಆಂಧ್ರಪ್ರದೇಶದ ಕಡಪ ಜಿಲ್ಲೆಯಲ್ಲಿಯೂ ಇರುವ ಸ್ಥಳಗಳೆಂದು ಗುರುತಿಸಲಾಗಿದೆ. ನಂದಿಗಿರಿಯು ಬೆಂಗಳೂರಿನ ಸಮೀಪದಲ್ಲಿರುವ ನಂದಿಬೆಟ್ಟ ಮತ್ತು ಕುವಲಾಲಪುರವನ್ನು ಈಗಿನ ಕೋಲಾರವೆಂದು ಗುರುತಿಸಲಾಗಿದೆ. ಗಂಗರು ಅಯೋಧ್ಯೆ ಮತ್ತು ಅಹಿಚ್ಛತ್ರದಿಂದ ಬಂದವರು ಎನ್ನುವ ವಾದವನ್ನು ಇತಿಹಾಸಕಾರರು ಒಪ್ಪಿರುವುದಿಲ್ಲ. ಆದುದರಿಂದ ಇವರು ಕರ್ನಾಟಕದ ಮೂಲದವರೆಂಬ ವಾದಕ್ಕೆ ಪುಷ್ಟಿ ದೊರೆಯುತ್ತದೆ ಹಾಗೂ ಬಹುಪಾಲು ವಿದ್ವಾಂಸರು ಈ ವಾದವನ್ನು ಅಂಗೀಕರಿಸಿರುತ್ತಾರೆ. ಇವರ ಶಾಸನಗಳ ಪ್ರಕಾರ ಕೊಂಗುಣಿವರ್ಮನು ಈ ವಂಶದ ಮೊದಲ ದೊರೆ. ಆತನು ಕಾಣ್ವಾಯನ ಗೋತ್ರಕ್ಕೆ ಸೇರಿದ್ದು, ಜಾಹ್ನವೇಯ ಕುಲದವನೆಂದು ತಿಳಿದುಬರುತ್ತದೆ. ಅವನು ಸ್ವಸಾಮರ್ಥ್ಯದಿಂದ ಗಂಗವಂಶದ ಸಾಮ್ರಾಜ್ಯ ಸ್ಥಾಪನೆ ಮಾಡಿದನು. ಜೈನ ಆಕರಗಳ ಪ್ರಕಾರ ಸಿಂಹನಂದಿ ಎಂಬ ಮುನಿಯು ಇವರ ರಾಜ್ಯದ ಸ್ಥಾಪನೆಗೆ ಕಾರಣನೆಂದು ಹಾಗೂ ಗಂಗರು ಮೂಲತಃ ಜೈನ ಪರಂಪರೆಗೆ ಸೇರಿದವರೆಂದೂ ಪ್ರತೀತಿಯಿದೆ. ಈ ಪರಂಪರಾನುಗತ ಕಥೆಯ ಪ್ರಕಾರ ಸಿಂಹನಂದಿಯು, ದಡಿಗ ಮತ್ತು ಮಾಧವ ಎಂಬ ಸಹೋದರರು ರಾಜ್ಯ ಸ್ಥಾಪನೆಗೆ ಅರ್ಹರೆಂದು ಅಭಿಪ್ರಾಯಪಟ್ಟು ಪದ್ಮಾವತಿ ಯಕ್ಷಿಯ ವರಪ್ರಸಾದದಿಂದ ಅವರಿಗೆ ಕತ್ತಿಯನ್ನು ಮತ್ತು ರಾಜ್ಯವನ್ನು ಕೊಟ್ಟನೆಂದು ಹೇಳಲಾಗುತ್ತದೆ. ಆದರೆ, ಈ ವಾದಕ್ಕೆ ಯಾವುದೇ ಸಮಕಾಲೀನ ದಾಖಲೆಯಾಗಲೀ ಅಥವಾ ಶಾಸನಗಳಾಗಲೀ ಆಧಾರವನ್ನು ನೀಡುವುದಿಲ್ಲವೆಂದು ವಿದ್ವಾಂಸರುಗಳಾದ ಡಾ.ಎಸ್.ಶ್ರೀಕಂಠಶಾಸ್ತ್ರಿ ಮತ್ತು ಡಾ.ಎಸ್.ನಾಗರಾಜು ಅವರು ಅಭಿಪ್ರಾಯಪಡುತ್ತಾರೆ. ಈ ಸಾಂಪ್ರದಾಯಿಕ ಕಥೆಗಳ ಸತ್ಯಾಸತ್ಯತೆ ಏನೇ ಇದ್ದರೂ ಬಲು ಸೂಕ್ಷ್ಮವಾದ ಇತಿಹಾಸದ ಎಳೆಯೊಂದನ್ನು ಇದರಲ್ಲಿ ಗುರುತಿಸಬಹುದಾಗಿದೆ. ಕರ್ನಾಟಕದವರೇ ಆದ ದಡಿಗ ಮತ್ತು ಮಾಧವ ಎಂಬ ಗಂಗಪರಾಕ್ರಮಿಗಳು ಸುಮಾರು ನಾಲ್ಕನೇ ಶತಮಾನದ ಮಧ್ಯಭಾಗದಲ್ಲಿ ಸಣ್ಣ ಪ್ರಮಾಣದ ರಾಜ್ಯವನ್ನು ಸ್ಥಾಪನೆ ಮಾಡಿದರು. ಸಮಕಾಲೀನ ದಾಖಲೆಗಳ ಪ್ರಕಾರ ಕೊಂಗುಣಿವರ್ಮ ಮತ್ತು ದಡಿಗ ಎಂಬ ಎರಡು ಹೆಸರುಗಳು ಒಂದೇ ವ್ಯಕ್ತಿಯನ್ನು ಕುರಿತದ್ದು ಎಂದು ಬಹುಮಂದಿ ವಿದ್ವಾಂಸರು ಒಪ್ಪಿರುತ್ತಾರೆ. ಆಶ್ಚರ್ಯವೆಂದರೆ ಗಂಗರ ಪ್ರಾಚೀನ ಶಾಸನಗಳಲ್ಲಿ ದಡಿಗನ ಹೆಸರೇ ಕಾಣಬರುವುದಿಲ್ಲ. ಅವುಗಳು ಕೇವಲ ಕೊಂಗುಣಿವರ್ಮನನ್ನು ಮಾತ್ರ ಹೆಸರಿಸುತ್ತವೆ. ತಮಿಳು ಶಾಸನಗಳು ಈ ವಂಶವನ್ನು ಕೊಂಗುಣಿ ಅರಸರ್ ಎಂದು ತಿಳಿಸುತ್ತವೆ. ಈತನೇ ಈ ರಾಜವಂಶದ ಪ್ರಥಮ ಅರಸನೆಂದು ಹಾಗೂ ಈ ವಂಶಕ್ಕೆ ಗಂಗವಂಶವೆಂಬ ಹೆಸರು ಬಂದಿತೆಂದು ಹೇಳಲಾಗುತ್ತದೆ. ಆನಂತರ ಅವನ ಮಗನಾದ ಮೊದಲನೇ ಮಾಧವನು ಅಧಿಕಾರಕ್ಕೆ ಬಂದನು. ಇವನು ನಂದಿವರ್ಮ ಪಲ್ಲವಮಲ್ಲನ ನೇತೃತ್ವದಲ್ಲಿ ಗಂಗರ ರಾಜಧಾನಿ ಕುವಲಾಲಪುರದ ಮೇಲೆ ಮಾಡಿದ ದಾಳಿಯನ್ನು ತಡೆಗಟ್ಟಿದ್ದು ಮಾತ್ರವಲ್ಲದೇ ನಾಲ್ಕನೇ ಶತಮಾನದಲ್ಲಿ ಗಂಗರ ಸಾಮ್ರಾಜ್ಯದ ಸುಭದ್ರ ತಳಹದಿಯನ್ನು ಸ್ಥಾಪಿಸಲು ಕಾರಣನಾದನು. ಮಾಧವನು ನಂದಗಿರಿ ಅಥವಾ ನಂದೀಬೆಟ್ಟದಲ್ಲಿ ಭದ್ರಕೋಟೆಯನ್ನು ನಿರ್ಮಿಸಿಕೊಂಡು ಆಳ್ವಿಕೆ ಮಾಡಿದನೆಂಬ ಅಂಶ ಶಾಸನಗಳಿಂದ ವ್ಯಕ್ತವಾಗುತ್ತದೆ. ಕೊಂಗುಣಿವರ್ಮನ ಕೆಲವು ವಿವರಗಳು ಮೈಸೂರು ಮತ್ತು ನಿಟ್ಟೂರು ತಾಮ್ರಪಟ ಶಾಸನಗಳಿಂದ ತಿಳಿದುಬರುತ್ತದೆ. ಮೈಸೂರು (ಎ.ಕ.ಶಾಸನ ಸಂಖ್ಯೆ ೧೧೩) ತಾಮ್ರಪಟವು ಕೊಂಗುಣಿವರ್ಮ ಧರ್ಮಮಹಾರಾಜನು ಕಾಣ್ವಾಯನಗೋತ್ರದಲ್ಲಿ ಜನಿಸಿದವನೆಂದು

ಹಾಗೂ ಮಹಾರಾಜಾಧಿರಾಜ ಎಂಬ ಬಿರುದು ಪಡೆದಿದ್ದ ಮಾಧವನು ಈತನ ಮಗನೆಂದೂ ಉಲ್ಲೇಖಿಸುತ್ತದೆ. ಕೊಂಗುಣಿವರ್ಮನು ಹಲವಾರು ಶಾಸ್ತ್ರಾಧ್ಯಯನಗಳಿಂದ ಶಿಸ್ತಿನ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದನೆಂದೂ ಶಾಸನಗಳು ತಿಳಿಸುತ್ತವೆ. ಒಂದನೇ ಮಾಧವನನ್ನು ಚಿನ್ನವನ್ನು ಪರೀಕ್ಷಿಸುವ ಓರೆಗಲ್ಲಿಗೆ ಹೋಲಿಸಿ ಕವಿಗಳಿಗೆ ಮತ್ತು ವಿದ್ವಾಂಸರಿಗೆ ಆಶ್ರಯದಾತನಾಗಿದ್ದನೆಂದೂ ಮತ್ತು ತನ್ನ ಸೈನ್ಯಶಕ್ತಿಗೆ ಉಂಟಾಗಿದ್ದ ಹಲವು ಅಡೆತಡೆಗಳನ್ನು ಸ್ವಸಾಮರ್ಥ್ಯದಿಂದ ಹೋಗಲಾಡಿಸಿಕೊಂಡನೆಂದೂ ತಿಳಿದುಬರುತ್ತದೆ. ಈತನು 'ದತ್ತಕಸೂತ್ರಾವೃತ್ತಿ' ಎಂಬ ಗ್ರಂಥಕ್ಕೆ ಭಾಷ್ಯವನ್ನು ರಚಿಸಿದನೆಂದೂ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಮಾಧವವರ್ಮನ ನಂತರ ಅವನ ಮಗ ಹರಿವರ್ಮನು ಅಧಿಕಾರಕ್ಕೆ ಬಂದನು. ಶ್ರೀರಂಗಪಟ್ಟಣದಲ್ಲಿ ದೊರೆತಿರುವ ತಾಮ್ರಪಟದಲ್ಲಿ (ಎ.ಕ.ಸಂ.೬ಶಾಸನ-ಸಂಖ್ಯೆ:೬೬) ಕೊಂಗುಣಿವರ್ಮನಿಂದ ಆರಂಭಗೊಂಡ ಗಂಗರ ವಂಶಾವಳಿಯನ್ನು ಕೊಡಲಾಗಿದೆ. ಹರಿವರ್ಮನ ಮಗ ವಿಷ್ಣುಗೋಪನನ್ನು ಹೆಸರಿಸಿರುವ ಈ ಶಾಸನದಲ್ಲಿ ತ್ರಿವಿಕ್ರಮನ ಮಗನನ್ನು ದುಗ್ಗನೆಂದು ಕರೆಯಲಾಗಿದೆ. ಗಂಗರ ಪ್ರಮುಖ ಪ್ರಾಂತ್ಯವಾಗಿದ್ದ ಚಿಕ್ಕಗಂಗವಾಡಿಯು ಗಂಗವಾಡಿ-೯೬೦೦೦ದ ಆಡಳಿತ ವಿಭಾಗದ ಮುಖ್ಯ ಕೇಂದ್ರಸ್ಥಳವಾಗಿದ್ದು ಆ ಕಾಲದ ಪ್ರಮುಖ ಪ್ರಾಚೀನ ನಗರವಾಗಿತ್ತೆಂದು ಶಾಸನಗಳಿಂದ ಖಚಿತವಾಗುತ್ತದೆ. ಮಾಧವವರ್ಮನ ತರುವಾಯ ಅಧಿಕಾರಕ್ಕೆ ಬಂದ ಹರಿವರ್ಮನನ್ನು ಆರ್ಯವರ್ಮ ಮತ್ತು ಕೃಷ್ಣವರ್ಮನೆಂದು ಹಲವು ಬಾರಿ ಸಂಬೋಧಿಸಿರುವುದು ಖಚಿತವಾಗುತ್ತದೆ. ಕೆಲವು ವಿದ್ವಾಂಸರು ಆರ್ಯವರ್ಮ ಮತ್ತು ಕೃಷ್ಣವರ್ಮ ಇಬ್ಬರೂ ಹರಿವರ್ಮನ ಸಹೋದರರೆಂದು ಕರೆದಿದ್ದು ಅದಕ್ಕೆ ಯಾವುದೇ ಆಧಾರವಿಲ್ಲವಾಗಿದೆ. ಪ್ರಾಯಶಃ ಹರಿವರ್ಮನು ತಲಕಾಡನ್ನು ತನ್ನ ದ್ವಿತೀಯ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನೆಂದು ದಾಖಲೆಗಳಿಂದ ತಿಳಿದು ಬರುತ್ತದೆ.

ಹರಿವರ್ಮನ ತರುವಾಯ ಅವನ ಮಗನಾದ ಎರಡನೇ ಮಾಧವನು ಸಿಂಹಾಸನವನ್ನು ಅಲಂಕರಿಸಿದನು. ಪೆನುಗೊಂಡೆ ತಾಮ್ರ ಶಾಸನದ ಪ್ರಕಾರ ಈತನು ಪಲ್ಲವ ಸ್ಕಂದವರ್ಮನ ಸಹಾಯದೊಂದಿಗೆ ಅಧಿಕಾರಕ್ಕೆ ಬಂದನೆಂದು ತಿಳಿದು ಬರುತ್ತದೆ. ಎರಡನೇ ಮಾಧವನ ತಮ್ಮಂದಿರಾದ ವಿಷ್ಣುಗೋಪ ಮತ್ತು ವೀರವರ್ಮರು ಪ್ರಸಿದ್ಧರಾಗಿದ್ದುದು ಮಾತ್ರವಲ್ಲದೇ ಸ್ವಸಾಮರ್ಥ್ಯವನ್ನೂ ಬೆಳೆಸಿಕೊಂಡಿದ್ದರು. ವಿಷ್ಣುಗೋಪನು ಎರಡನೇ ಮಾಧವನ ತರುವಾಯ ಅಧಿಕಾರಕ್ಕೆ ಬಂದು ಸುಮಾರು ಎರಡು ದಶಕಗಳ ಕಾಲ ಆಳ್ವಿಕೆ ಮಾಡಿದನು. ಈತನ ತರುವಾಯ ಮುಮ್ಮಡಿ ಮಾಧವನು ತಡಂಗಾಲ ಮಾಧವನೆಂಬ ಬಿರುದುಗಳಿಸಿ ಪಟ್ಟಕ್ಕೆ ಬಂದನು. ಈತನು ಬನವಾಸಿಯ ಕದಂಬ ರಾಜ ಕಾಕುತ್ಸವರ್ಮನ ಮಗಳನ್ನು ವಿವಾಹವಾದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಮುಮ್ಮಡಿ ಮಾಧವನ ನಂತರ ಅವನ ಮಗ ಅವಿನೀತನು ಅಪ್ರಾಪ್ತ ವಯಸ್ಕನಾಗಿದ್ದಾಗಲೇ (ಕ್ರಿ.ಶ. ಸು. ೪೬೯-೫೨೯) ಪಟ್ಟಾಭಿಷಿಕ್ತನಾದನು. ಈತನು ಸುಮಾರು ೬೦ ವರ್ಷಗಳ ಕಾಲ ಆಳ್ವಿಕೆ ಮಾಡಿದನು. ಅವಿನೀತನು ಪುನ್ನಾಟದ ರಾಜ ಸ್ಕಂದವರ್ಮನ ಮಗಳಾದ ಜೇಷ್ಠಾದೇವಿಯನ್ನು ವಿವಾಹವಾಗಿದ್ದನು. ಅವಿನೀತನ ನಂತರ ಅವನ ಮಗನಾದ ದುರ್ವಿನೀತನು ಬಲ ಪ್ರಯೋಗದಿಂದ ತನ್ನ ಮಲ ಸಹೋದರನನ್ನು ಪದಚ್ಯುತಗೊಳಿಸಿ ಸಿಂಹಾಸನಗ್ರಹಣ ಮಾಡಿದ್ದನ್ನು ದಿವೇ ಅಗರ್ ತಾಮ್ರಪಟ ಶಾಸನವು ಸ್ಪಷ್ಟಪಡಿಸುತ್ತದೆ.

ದುರ್ವಿನೀತನು (ಸು.೫೨೯-೫೭೯) ಗಂಗ ವಂಶದಲ್ಲೇ ಅತ್ಯಂತ ಪ್ರಭಾವಶಾಲಿ ದೊರೆಯಾಗಿದ್ದನು. ದುರ್ವಿನೀತನು ಪರಾಕ್ರಮಶಾಲಿ ರಾಜನಾಗಿದ್ದುದು ಮಾತ್ರವಲ್ಲದೇ ಸ್ವತ: ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ಅಪರಿಮಿತ ಪಾಂಡಿತ್ಯವನ್ನು ಹೊಂದಿದ್ದನು. ಈತನು ೧೫ ಸರ್ಗಗಳಲ್ಲಿ ಮೂಲತಃ ಸಂಸ್ಕೃತದಲ್ಲಿ ಭಾರವಿ ರಚಿಸಿದ ಕಿರಾತಾರ್ಜುನೀಯ ಕಾವ್ಯಕ್ಕೆ ಟೀಕೆಯನ್ನು ರಚಿಸಿರುವನೆಂದು ಪ್ರತೀತಿಯಿದೆ. ಈತನ ಆಳ್ವಿಕೆಯ ಅವಧಿಯಲ್ಲಿ ಪುನ್ನಾಟ ಹಾಗೂ ಪನ್ನಾಡ (ಬಾಣ?) ಭಾಗಗಳು ಗಂಗಸಾಮ್ರಾಜ್ಯದಲ್ಲಿ ವಿಲೀನಗೊಂಡವು. ಈತನು, ಪ್ರಾಕೃತ ಭಾಷೆಯಲ್ಲಿ ರಚಿತವಾಗಿದ್ದ ಗುಣಾಢ್ಯನ 'ವಡ್ಡಕಥಾ' ಕೃತಿಯನ್ನು ಕನ್ನಡ ಭಾಷೆಗೆ ಭಾಷಾಂತರಿಸಿದನೆಂದು

ದಾಖಲೆಗಳಿಂದ ವ್ಯಕ್ತವಾಗುತ್ತದೆ. ಇವನ ಕಾಲಕ್ಕೆ ಸೇರಿದ ನಲ್ಲಾಳ ತಾಮ್ರ ಶಾಸನದಲ್ಲಿ ದುರ್ವಿನೀತನು ಸಂಗೀತ, ನೃತ್ಯ, ಆನೆಗಳನ್ನು ಪಳಗಿಸುವ ಹಾಗೂ ಆಯುರ್ವೇದ ಶಾಸ್ತ್ರದ ಬಗ್ಗೆ ಜ್ಞಾನ ಹೊಂದಿದ್ದ ವಿವರಗಳು ಉಲ್ಲೇಖಗೊಂಡಿವೆ. ಈತನು ವಿವಿಧ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದಂತೆಯೇ ಚಾಣಕ್ಯ ಅಥವಾ ಕೌಟಲ್ಯನ ಅರ್ಥಶಾಸ್ತ್ರಕ್ಕೆ ಸರಿಸಮನಾದ ನೀತಿಶಾಸ್ತ್ರದ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದನೆಂದು ತಿಳಿದುಬರುತ್ತದೆ. ಅಲ್ಲದೆ ಸಂಸ್ಕೃತ ವ್ಯಾಕರಣಕ್ಕೆ 'ಶಬ್ದಾವತಾರ' ಎಂಬ ವ್ಯಾಖ್ಯಾನವನ್ನು ಈತನೇ ರಚಿಸಿರುವನೆಂದು ನಂಬಿಕೆಯಿದ್ದರೂ, ಇದನ್ನು ಮೂಲತಃ ಜೈನ ವಿದ್ವಾಂಸ ಪೂಜ್ಯಪಾದನು ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದು ದುರ್ವಿನೀತನು ಕನ್ನಡ ಭಾಷೆಗೆ ಭಾಷಾಂತರಿಸಿರಬಹುದೆಂಬ ಖಚಿತ ಅಭಿಪ್ರಾಯವಿದೆ. ದುರ್ವಿನೀತನು ಬಾದಾಮಿ ಚಾಳುಕ್ಯರ ಅಧಿಕಾರವನ್ನು ಒಪ್ಪಿಕೊಂಡಿದ್ದನೆಂದೂ ಹಾಗೂ ಒಂದನೇ ಪುಲಿಕೇಶಿಯು ತನ್ನ ನೆರೆಹೊರೆಯ ಸಾಮ್ರಾಜ್ಯಗಳನ್ನು ಗೆದ್ದುಕೊಂಡು ಸಾಂಕೇತಿಕವಾಗಿ ಅಶ್ವಮೇಧಯಾಗವನ್ನು ನೆರವೇರಿಸಲು ಈತನು ನೆರವಾದನೆಂದು ಊಹಿಸಲಾಗಿದೆ. ಮುಷ್ಕರ ಮತ್ತು ಪೊಲಾವೀರ ಅವರುಗಳನ್ನೊಳಗೊಂಡಂತೆ ಒಟ್ಟು ಮೂರು ಮಕ್ಕಳನ್ನು ದುರ್ವಿನೀತನು ಹೊಂದಿದ್ದನು. ಈತನ ತರುವಾಯ ಅವನ ಇಬ್ಬರು ಮಕ್ಕಳು ಒಬ್ಬರ ತರುವಾಯ ಒಬ್ಬರಂತೆ ಅಧಿಕಾರಕ್ಕೆ ಬಂದರು. ನಂತರ ಮುಷ್ಕರನ ಮಗ ಶ್ರೀವಿಕ್ರಮನು ಪಟ್ಟಕ್ಕೆ ಬಂದನು. ಶ್ರೀವಿಕ್ರಮನು ೧೪ ವಿಶಿಷ್ಠ ವಿದ್ಯೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದನು. ತ್ರಿವಿಕ್ರಮನ ತರುವಾಯ ಭೂವಿಕ್ರಮನು ಅಧಿಕಾರಕ್ಕೆ ಬಂದು ಬಾದಾಮಿಯ ಚಾಳುಕ್ಯ ದೊರೆಯೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದು ಮಾತ್ರವಲ್ಲದೇ ಪಲ್ಲವ ಪರಮೇಶ್ವರವರ್ಮನನ್ನು ವಿಳಾಂದೆ ಎಂಬ ಸ್ಥಳದಲ್ಲಿ ಕ್ರಿ.ಶ.೬೭೦ರಲ್ಲಿ ಪರಾಭವಗೊಳಿಸಲು ವಿಕ್ರಮಾದಿತ್ಯನಿಗೆ ಸಹಾಯ ಮಾಡಿದನೆಂದು ತಿಳಿದುಬರುತ್ತದೆ. ಭೂವಿಕ್ರಮನ ಕಿರಿಯ ತಮ್ಮನಾದ ಮೊದಲನೇ ಶಿವಮಾರನು ಕ್ರಿ.ಶ.೬೭೯ರಲ್ಲಿ ಗಂಗ ಸಾಮ್ರಾಜ್ಯದ ಸಿಂಹಾಸನವನ್ನು ಅಲಂಕರಿಸಿದನು. ಮಂಡ್ಯ ತಾಲೂಕಿನ ಹಲ್ಲೇಗೆರೆ ಶಾಸನವು ಆತನ ಆಳ್ವಿಕೆಯ ಕಲದ ಪ್ರಥಮ ದಾಖಲೆಯಾಗಿದ್ದು, ಶಿವಮಾರನು ಅಧಿಕಾರಕ್ಕೆ ಬಂದ ವರ್ಷವನ್ನು ಕರಾರುವಾಕ್ಕಾಗಿ ನಿರ್ಧರಿಸಲು ಸಹಾಯವಾಗುತ್ತದೆ. ಈ ಶಾಸನವು ಕ್ರಿ.ಶ.೭೧೩ರ ತಾಮ್ರಪಟವಾಗಿದ್ದು ಒಂದನೇ ಶಿವಮಾರನು ದುರ್ವಿನೀತನ ಆಳ್ವಿಕೆಯ ನೂರು ವರ್ಷಗಳ ನಂತರ ಪಟ್ಟಕ್ಕೆ ಬಂದುದರ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸುತ್ತದೆ. ಈ ಆಧಾರದ ಮೇಲೆ ದುರ್ವಿನೀತನು ಕಾಲವನ್ನು ಸುಮಾರು ಕ್ರಿ.ಶ.೫೨೯ರಿಂದ ೫೭೯ಎಂದು ನಿರ್ಧರಿಸಲು ಸಾಧ್ಯವಾಗಿದೆ. ಈ ಶಾಸನದಲ್ಲಿ ಅವಿನೀತನ ಮಗ ದುರ್ವಿನೀತನು ತನ್ನ ಮಲಸೋದರನಿಂದ ರಾಜ್ಯವನ್ನು ಕಿತ್ತುಕೊಂಡ ವಿಷಯ ಪ್ರಸ್ತಾಪವಾಗಿಲ್ಲ. ಆದರೆ, ಈ ಸಂಗತಿಯು ಈಗಾಗಲೇ ಚರ್ಚಿಸಿದಂತೆ ದಿವೇಅಗರ್ ಶಾಸನದಲ್ಲಿ ಸ್ಪಷ್ಟವಾಗಿ ಉಲ್ಲೇಖಗೊಂಡಿದೆ. ಹಲ್ಲೇಗೆರೆ ಶಾಸನದಲ್ಲಿ ಕೆರಗೋಡು ವಿಷಯದ ವ್ಯಾಪ್ತಿಯಲ್ಲಿದ್ದ ಕೆರಗೋಡನ್ನು ಒಳಗೊಂಡಂತೆ ಅದರ ಉತ್ತರಕ್ಕೆ ಆಸುಪಾಸಿನಲ್ಲಿದ್ದ ಕೊಳುಗೋಳು, ಬೆಳ್ಕೆರೆ ಮೊದಲಾದ ಗ್ರಾಮಗಳನ್ನು ಸಂಪರ್ಕಿಸುವ ಸೇತುವೆಯ ನಿರ್ಮಾಣದ ಬಗ್ಗೆ ದಾಖಲಿಸಲಾಗಿದೆ. ಈ ಸಂದರ್ಭದಲ್ಲಿ ಪಲ್ಲವ ತಟಾಕ ಎಂದು ಪುನರ್ ನಾಮಕರಣ ಮಾಡಿದ ಗ್ರಾಮವನ್ನು ಮಾರಶರ್ಮನ ಮಗ ಮಾಧವಶರ್ಮ ಮತ್ತು ಆತನ ಮೊಮ್ಮಗ ಭಾವಶರ್ಮನಿಗೂ ದಾನ ನೀಡಿದ ಬಗ್ಗೆ ಶಾಸನವು ಉಲ್ಲೇಖಿಸಿದೆ.

ಮೊದಲನೇ ಶಿವಮಾರನ ತರುವಾಯ ಅವನ ಮೊಮ್ಮಗನಾದ ಶ್ರೀಪುರುಷ (ಕ್ರಿ.ಶ.೭೨೬–೮೮) ನು ಅಧಿಕಾರಕ್ಕೆ ಬಂದುದರ ಬಗ್ಗೆ ಜವಳಿ ತಾಮ್ರಶಾಸನವು ಖಚಿತಪಡಿಸುತ್ತದೆ. ಶ್ರೀಪುರಷನು ಕಂಚಿಗೆ ಮುತ್ತಿಗೆ ಹಾಕಿ ಪಲ್ಲವ ನಂದಿವರ್ಮನನ್ನು ಪರಾಭವಗೊಳಿಸಿ ಪೆರ್ಮನಡಿ ಎಂದು ಬಿರುದು ಗಳಿಸಿದನು. ಈತನಿಗೆ ಚಾಳುಕ್ಯವಂಶದ ಎರಡನೇ ವಿಕ್ರಮಾದಿತ್ಯನು ಈ ಯುದ್ಧದಲ್ಲಿ ಬೆಂಬಲಿಸಿದ್ದನೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ನಂತರ ಪಾಂಡ್ಯವಂಶದ ತೆರಮಾರನು ಗಂಗವಂಶದ ರಾಜಕುಮಾರಿಯನ್ನು ಅಪಹರಿಸಿ ವಿವಾಹವಾದನೆಂದು ಪ್ರತೀತಿಯಿದೆ. ಇದೇ ಸಮಯದಲ್ಲಿ ಶ್ರೀಪುರುಷನು ವಂಬೈ (ವಣಬೈ) ಎಂಬ ಸ್ಥಳದಲ್ಲಿ ಈತನಿಂದ ಪರಾಭವವನ್ನು ಅನುಭವಿಸಿದ ಕಾರಣ ಮಾನ್ಯಪುರಕ್ಕೆ (ನೆಲಮಂಗಲ ತಾಲೂಕಿನ ಮಣ್ಣೆ) ಕುವಲಾಲಪುರದಿಂದ ತನ್ನ ರಾಜಧಾನಿಯನ್ನು

ಸ್ಥಳಾಂತರಿಸಿದನೆಂಬ ಶಾಸನದಿಂದ ಸ್ಪಷ್ಟವಾಗುತ್ತದೆ. ಬಾದಾಮಿ ಚಾಳುಕ್ಯರನ್ನು ಕ್ರಿ.ಶ.೭೫೩ರಲ್ಲಿ ಸೋಲಿಸಿ ಬೃಹದ್ ಸಾಮ್ರಾಜ್ಯದ ಭವಿಷ್ಯತ್ತನ್ನು ಹೊಂದಿದ್ದ ಈತನು ರಾಷ್ಟ್ರಕೂಟರನ್ನು ಹಲವಾರು ನಿರ್ಣಾಯಕ ಯುದ್ಧಗಳಲ್ಲಿ ಎದುರಿಸಿದ ಬಗ್ಗೆ ದಾಖಲೆಗಳಿವೆ.

ಹೆಚ್ಚುಕಡಿಮೆ ಇದೇ ಸಮಯದಲ್ಲಿ ರಾಷ್ಟ್ರಕೂಟ ಮೊದಲನೇ ಕೃಷ್ಣನು ಮಣ್ಣೆಯನ್ನು ವಶಪಡಿಸಿಕೊಳ್ಳಲು ತನ್ನ ಸೈನ್ಯ ಸಮೇತನಾಗಿ ಧಾಳಿ ಮಾಡಿದಾಗ ಗಂಗ ಶ್ರೀಪುರುಷನು ಈತನನ್ನು ಬಳ್ಳಾರಿ ಜಿಲ್ಲೆಯ ಕಂಪಿಲಿಯವರೆಗೂ ಹಿಮ್ಮೆಟ್ಟಿಸಿಕೊಂಡು ಹೋದನೆಂದು ದಾಖಲೆಗಳಿಂದ ತಿಳಿದುಬರುತ್ತದೆ. ಶ್ರೀಪುರುಷನು ಚಾಳುಕ್ಯ ಹಾಗೂ ನೊಳಂಬ ರಾಜವಂಶಗಳಿಂದ ತನ್ನ ರಾಣಿಯರನ್ನು ಆರಿಸಿ ವಿವಾಹ ಸಂಬಂಧ ಬೆಳೆಸಿಕೊಂಡಿದ್ದನಾದರೂ, ಕೊನೆಗೆ ನೊಳಂಬರು ಈತನ ವಿರುದ್ಧ ಸಂಚು ನಡೆಸಿ ರಾಷ್ಟ್ರಕೂಟರೊಡನೆ ಕೈಜೋಡಿಸಿದ ಘಟನೆಯು ಶಾಸನಗಳಿಂದ ದೃಢಪಡುತ್ತದೆ. ಶ್ರೀಪುರುಷನು ಸ್ವತಃ ಉತ್ತಮ ಪಂಡಿತನಾಗಿದ್ದು ಸಂಸ್ಕೃತ ಭಾಷೆಯಲ್ಲಿ ಗಜಶಾಸ್ತ್ರ ವೆಂಬ ವೈದ್ಯಶಾಸ್ತ್ರ ಕೃತಿಯನ್ನು ರಚಿಸಿದನೆಂದು ಪ್ರತೀತಿಯಿದೆ. ಮಂಡ್ಯ ಜಿಲ್ಲೆಯಲ್ಲಿ ಈತನ ಮೂರು ಶಾಸನಗಳು ಮಾತ್ರ ಲಭ್ಯವಾಗಿದ್ದು, ಅವುಗಳ ಪೈಕಿ ನಾಗಮಂಗಲ ತಾಲೂಕಿನ ದೇವರಹಳ್ಳಿಯ (ನಾಗಮಂಗಲ ೧೪೯ ಎ.ಕ.ಸಂ:೬) ತಾಮ್ರಶಾಸನವು ಪ್ರಮುಖವಾಗಿದೆ. ಸಂಸ್ಕೃತ ಭಾಷೆಯಲ್ಲಿರುವ ಈ ಶಾಸನದಲ್ಲಿ ಶ್ರೀಪುರುಷನವರೆವಿಗೂ ಗಂಗ ವಂಶಾವಳಿಯನ್ನು ನೀಡಿ ಈತನನ್ನು ಪೃಥ್ವಿ ಕೊಂಗುಣಿ ಮಹಾರಾಜ ಎಂದು ಕರೆಯಲಾಗಿದೆ ಹಾಗೂ ಈ ಸಮಯದಲ್ಲಿ ಈತನು ಮಾನ್ಯಪುರದಲ್ಲಿ (ಮಣ್ಣೆ) ವಾಸಿಸುತ್ತಿದ್ದನೆಂದೂ ದಾಖಲಿಸಲಾಗಿದೆ. ಬಾಣವಂಶದ ನೀರ್ಗುಂದ ಯುವರಾಜ (ದುಂಡು) ಮತ್ತು ಅವನ ಮಗ ಪರಮಗೂಳ ಅಥವಾ ಪೃಥ್ವಿ ನೀರ್ಗುಂದ ರಾಜ ಇವರುಗಳ ಹೆಸರುಗಳನ್ನು ಇದೇ ಶಾಸನದಲ್ಲಿ ದಾಖಲಿಸಲಾಗಿದ್ದು ಶ್ರೀಪುರುಷನಿಗೆ ಜನಹಿತದೇವ ಎಂಬ ಇನ್ನೊಂದು ಹೆಸರಿದ್ದುದನ್ನು ಉಲ್ಲೇಖಿಸಿದೆ. ಅವನ ಮೊಮ್ಮಗ ಹಾಗೂ ಆತನ ಸತಿ ಕುಂದಚ್ಚಿ ಇವರುಗಳ ಪ್ರಾರ್ಥನೆಯ ಮೇರೆಗೆ ನೀರ್ಗುಂದ ವಿಷಯದ ಪೊನ್ನಳ್ಳಿ ಗ್ರಾಮವನ್ನು ಶ್ರೀಪುರದ ಉತ್ತರ ದಿಕ್ಕಿನಲ್ಲಿ ಹೊಸದಾಗಿ ನಿರ್ಮಿಸಲಾದ ಲೋಕತಿಲಕ ಜಿನ ಭವನಕ್ಕೆ ನೀಡಲಾದ ಹಲವು ದಾನಗಳ ಬಗ್ಗೆ ಶಾಸನವು ವಿವರಿಸುತ್ತದೆ. ದುಗ್ಗಮಾರ, ಶಿವಮಾರ ಮತ್ತು ವಿಜಯಾದಿತ್ಯ ಎಂಬ ಈತನ ಮೂವರು ಮಕ್ಕಳ ಪೈಕಿ ವಿಜಯಾದಿತ್ಯನು ಚಾಳುಕ್ಯ ವಂಶಕ್ಕೆ ಸೇರಿದ ವಿಜಯಮಹಾದೇವಿಯ ಪುತ್ರನೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ವಿಜಯಮಹಾದೇವಿಯು ಬಾದಾಮಿ ಚಾಳುಕ್ಯ ದೊರೆ ವಿಜಯಾದಿತ್ಯನ ಮಗಳೆಂದು ತಿಳಿದುಬರುತ್ತದೆ. ಮಳವಳ್ಳಿ ತಾಲೂಕಿನ ಪೂರಿಗಾಲಿ ಗ್ರಾಮದ ಹೊಲವೊಂದರಲ್ಲಿರುವ ಶಾಸನದ ಪ್ರಕಾರ ಶ್ರೀಪುರುಷನ ಆಳ್ವಿಕೆಯ ಅವಧಿಯಲ್ಲಿ ಕೊಂಗಾಣಿಕೆರೆ ಎಂದು ಕರೆದು ಕೆರೆಯನ್ನು ಕಟ್ಟಿದ ವಿವರಗಳಿದ್ದು, ಕುಂದಸೆಟ್ಟಿ ಎಂಬ ಅಧಿಕಾರಿಯು ವಡಗೆರೆ–೩೦೦ ಎಂಬ ಆಡಳಿತ ವಿಭಾಗವನ್ನು ಹಾಗೂ ಮುದಗಂದೂರ ಸಿಂಗದೇವರಸನು ಪುವಗ್ರಾಮವನ್ನು ಆಳುತ್ತಿದ್ದನೆಂದ ಈ ಶಾಸನವು ದಾಖಲಿಸಿದೆ. ಶ್ರೀಪುರುಷನ ಕಾಲಕ್ಕೆ ಸೇರಿದ ಅನೇಕ ವೀರಗಲ್ಲು ಶಾಸನಗಳಲ್ಲಿ ಅವನು ರಾಷ್ಟ್ರಕೂಟರ ಮೇಲೆ ನಡೆಸಿದ ಯುದ್ಧಗಳ ಬಗ್ಗೆ ವಿವರಗಳು ಸಿಗುತ್ತವೆ. ಶ್ರೀಪುರುಷನು ರಾಷ್ಟ್ರಕೂಟರನ್ನು ಸೋಲಿಸುವಲ್ಲಿ ಸಮರ್ಥನಾದರೂ ಅವನ ಶಕ್ತಿ ಮತ್ತು ಸಂಪತ್ತುಗಳೆಲ್ಲವೂ ಬಹಳವಾಗಿ ಕುಂಠಿತವಾದುವು. ಈತನು ತನಗೆ ಅವಿಧೇಯತೆಯನ್ನು ವ್ಯಕ್ತಪಡಿಸಿದ ನೊಳಂಬರನ್ನು ಹೇಮಾವತಿ ಮತ್ತು ಮಡಕಶಿರಾ ಸಮೀಪದ ಹೆಂಜೇರು (ಈಗ ಆಂಧ್ರಪ್ರದೇಶದಲ್ಲಿದೆ) ಎಂಬ ಸ್ಥಳದಲ್ಲಿ ಸೋಲಿಸಬೇಕಾಯಿತು ಹೀಗೆ ಶ್ರೀಪುರುಷನು ತನ್ನ ಪ್ರಬಲ ಶಕ್ತಿಯಿಂದ ಗಂಗ ಸಾಮ್ರಾಜ್ಯವನ್ನು ಹೆಚ್ಚಿನ ನಷ್ಟವಿಲ್ಲದಂತೆ ಸಂರಕ್ಷಿಸಿದನು. ಶ್ರೀಪುರುಷನು ತನ್ನ ಪರಾಕ್ರಮತೆಯ ಫಲವಾಗಿ ರಾಜಕೇಸರಿ, ರಣಭಾಜನ, ಭೀಮಕೋಪ, ಕೊಂಗುಣಿ ರಾಜಾಧಿರಾಜ ಪರಮೇಶ್ವರ ಮೊದಲಾದ ಬಿರುದುಗಳನ್ನು ಧರಿಸಿದನು. ಅಲ್ಲದೆ ಪೃಥ್ವೀಕೊಂಗುಣಿ ಮುತ್ತರಸ ಎಂಬ ಹೆಸರಿನಿಂದಲೂ ಪ್ರಸಿದ್ಧನಾಗಿದ್ದನು. ಶ್ರೀಪುರುಷನು ಜೀವಿಸಿರುವವರೆಗೂ ರಾಷ್ಟ್ರಕೂಟರು ಗಂಗರ ಮೇಲೆ ಅಧಿಕಾರವನ್ನು ಸಂಪಾದಿಸಲು ಸಾಧ್ಯವಾಗಲಿಲ್ಲ.

ಶ್ರೀಪುರುಷನ ತರುವಾಯ ಎರಡನೇ ಶಿವಮಾರನು ಕ್ರಿ.ಶ.೭೮೮ರಲ್ಲಿ ಗಂಗ ಸುಂಹಾಸನವನ್ನು ಅಲಂಕರಿಸಿ, ಗಂಗವಂಶದ ಪ್ರಬಲ ಉತ್ತರಾಧಿಕಾರಿಯಾದನು. ಈತನು ಅಧಿಕಾರಕ್ಕೆ ಬಂದ ಕಾಲವನ್ನು ಜವಳಿ ತಾಮ್ರಪಟವು ದೃಢೀಕರಿಸುತ್ತದೆ. ಇಮ್ಮಡಿ ಶಿವಮಾರನೂ ಸಹ ರಾಷ್ಟ್ರಕೂಟರ ವಿರುದ್ಧ ಹೋರಾಡಬೇಕಾಯಿತು. ರಾಷ್ಟ್ರಕೂಟ ದೊರೆ ಧೃವನು ಈತನನ್ನು ಮುದಗುಂಡೂರು ಯುದ್ಧದಲ್ಲಿ ಪರಾಭವಗೊಳಿಸಿ ಸೆರೆಹಿಡಿದುಕೊಂಡು ಹೋದನು. ಶಿವಮಾರನ ಸ್ಥಾನದಲ್ಲಿ ಧೃವನು ತನ್ನ ಮಗನಾದ ಸ್ಥಂಬನನ್ನು ಗಂಗವಾಡಿಯ ರಾಜ್ಯಪಾಲನನ್ನಾಗಿ ನೇಮಕ ಮಾಡಿದನು. ಸ್ಥಂಬನೂ ಸಹ ಮಾನ್ಯಪುರದಿಂದಲೇ ಆಡಳಿತವನ್ನು ನಿರ್ವಹಿಸಿದನು. ಧೃವನ ಮರಣಾನಂತರ ಆತನ ಇಬ್ಬರ ಮಕ್ಕಳ ನಡುವೆ ಸಂಭವಿಸಿದ ಅಧಿಕಾರ ಕಲಹದ ಪರಿಣಾಮವಾಗಿ ಮೂರನೇ ಗೋವಿಂದನು ಪಟ್ಟಕ್ಕೆ ಬಂದು ಇಮ್ಮಡಿ ಶಿವಮಾರನು ಇನ್ನು ಮುಂದೆ ತನ್ನನ್ನು ಬೆಂಬಲಿಸಬಹುದೆಂಬ ನಿರೀಕ್ಷೆಯೊಂದಿಗೆ ಗೋವಿಂದನು ಆತನನ್ನು (ಎರಡನೇ ಶಿವಮಾರನನ್ನು) ಬಿಡುಗಡೆ ಮಾಡಿದನು. ಆದರೆ, ಶಿವಮಾರನು ಮೂರನೇ ಗೋವಿಂದನನ್ನು ಬೆಂಬಲಿಸುವ ಬದಲು ಸ್ಥಂಬನಿಗೆ ಬೆಂಬಲ ನೀಡಿದನು. ಆದರೆ ಸ್ಥಂಬನು ಸೋತಾಗ ಶಿವಮಾರನು ಪುನಃ ಬಂಧಿಸಲ್ಪಟ್ಟನು. ಗಂಗವಾಡಿ ಪ್ರಾಂತ್ಯದ ಮುಖ್ಯ ಅಧಿಕಾರವನ್ನು ಶಿವಮಾರನ ಮಗನಾದ ಯುವರಾಜ ಮಾರಸಿಂಹನಿಗೆ ಕ್ರಿ.ಶ.೭೯೬ರಲ್ಲಿ ವಹಿಸಿಕೊಡಲಾಯಿತು. ನಂತರ ಮುಮ್ಮಡಿ ಗೋವಿಂದನಿಗೂ ಮತ್ತು ಸ್ತಂಭನಿಗೂ ಯುದ್ಧವು ನಡೆದು, ಸ್ತಂಭನು ಪರಾಜಿತನಾದನು. ಆದರೆ ಗೋವಿಂದನು ತನ್ನ ಹೃದಯ ವೈಶಾಲ್ಯದಿಂದ ಸ್ತಂಭನನ್ನು ಮತ್ತೆ ಗಂಗವಾಡಿಯ ಪ್ರಾಂತ್ಯಾಧಿಕಾರಿಯನ್ನಾಗಿ ನೇಮಿಸಿದನು. ಇಮ್ಮಡಿ ಶಿವಮಾರನು ಅಮೋಘವರ್ಷನೊಡನೆ ಕ್ರಿ.ಶ.೮೧೬ರಲ್ಲಿ ನಡೆದ ಯುದ್ಧದಲ್ಲಿ ಮಡಿದನೆಂದು ಪ್ರತೀತಿಯಿದೆ. ಶಿವಮಾರನು ತನ್ನ ಜೀವಿತಕಾಲದ ಬಹುಭಾಗವನ್ನು ರಾಷ್ಟ್ರಕೂಟರ ಕಾರಾಗೃಹದಲ್ಲಿ ಕಳೆದರೂ ಕೂಡ, ಆತನು ಸಾಹಿತ್ಯ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಆಸಕ್ತಿವಹಿಸಿದನು. ಅವನು ಅನೇಕ ಧಾರ್ಮಿಕ ಸಂಸ್ಥೆಗಳಿಗೆ ದತ್ತಿಗಳನ್ನು ಕೊಟ್ಟನು. 'ಗಜಾಷ್ಟಕ' ಹಾಗೂ 'ಸೇತುಬಂಧ' ಎಂಬ ಗ್ರಂಥವನ್ನೂ ಈತನೇ ರಚಿಸಿದನೆಂದು ಹೇಳಲಾಗುತ್ತದೆ. ಶಿವಮಾರನು ಜೈನಧರ್ಮದ ಅನುಯಾಯಿಯಾಗಿದ್ದು, ಶ್ರವಣಬೆಳಗೊಳದ ಚಂದ್ರಪ್ರಭ ಬಸದಿಯನ್ನು ನಿರ್ಮಿಸಿದನೆಂದು ಜೈನ ದಾಖಲೆಗಳಿಂದ ವ್ಯಕ್ತವಾಗುತ್ತದೆ. ಶ್ರೀರಂಗಪಟ್ಟಣದ ಗಂಜಾಮ್ ತಾಮ್ರ ಶಾಸನದಲ್ಲಿ ಹರಿವರ್ಮನ ಮಗ ವಿಷ್ಣುಗೋಪನನ್ನು ಹೆಸರಿಸಿದ್ದು, ತ್ರಿವಿಕ್ರಮನ ಮಗನನ್ನು ದುಗ್ಗನೆಂದು ಹೆಸರಿಸಲಾಗಿದೆ. ಇಮ್ಮಡಿ ಶಿವಮಾರನ ಮಗ ಮಾರಸಿಂಹ ಎರೆಯಪ್ಪನ ಆಳ್ವಿಕೆಯ ಕಾಲದಲ್ಲಿ ಆತನ ಅನುಮತಿಯಿಂದ ಕಲಿನೊಳಂಬಾಧಿರಾಜ ಕೊಲ್ಲಿಯರಸ ಮತ್ತು ಆತನ ಮಗನೂ ಕೂಡಿಕೊಂಡು (ಒಡನಿಳ್ದು) ಅರ್ಪೊರೆ ಗ್ರಾಮದ ಒಡೆಯನಾದ ಪೆನ್ನಾದಿ ಎಂಬಾತನಿಗೆ ತಿಪ್ಪೆರೂರು ಗ್ರಾಮವನ್ನು ಬ್ರಹ್ಮದೇಯವಾಗಿ ಕೊಟ್ಟ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ. ಇಮ್ಮಡಿ ಶಿವಮಾರನ ಮಗ ಮಾರಸಿಂಹನು ರಾಜ್ಯಾಡಳಿತ ಮಾಡಲಿಲ್ಲ, ಏಕೆಂದರೆ ಆತನು ಯುವರಾಜನಾಗಿದ್ದಾಗಲೇ ಮಡಿದನೆಂಬ ಪ್ರತೀತಿಯಿದೆ. ಆಲೂರಿನ ಕ್ರಿ.ಶ.೭೯೬ರ ತಾಮ್ರಶಾಸನದ ಪ್ರಕಾರ ಆ ವೇಳೆಗೆ ಮಾರಸಿಂಹನು ರಾಷ್ಟ್ರಕೂಟರ ಅಧೀನದಲ್ಲಿ ಗಂಗ ಮಂಡಲಾಧಿಪತ್ಯವನ್ನು ವಹಿಸಿಕೊಂಡಿರಬೇಕೆಂದು ಹೇಳಲಾಗಿದೆ. ಈ ಶಾಸನದಲ್ಲಿ ಹರಿವರ್ಮ, ಭಿಷ್ಣುಗೋಪ, ಮಾಧವ ಅವನೀತ, ದುರ್ವಿನೀತ, ಶ್ರೀವಿಕ್ರಮ, ದುಗ್ಗ, ಶಿವಮಾರ, ಶ್ರೀಪುರುಷ ಹಾಗೂ ಶಿವಮಾರದೇವ ಇವರುಗಳ ವಂಶಾವಳಿಯನ್ನು ಸವಿವರವಾಗಿ ನೀಡಲಾಗಿದೆ. ಮಾರಸಿಂಹನ ಸಹೋದರನಾದ ಪೃಥ್ವೀಪತಿಯು ಇನ್ನೂ ಬಾಲಕನಾಗಿದ್ದುದರಿಂದ ಗಂಗ ಸಿಂಹಾಸನವನ್ನು ಶಿವಮಾರನು ತನ್ನ ತಮ್ಮ ವಿಜಯಾದಿತ್ಯನಿಗೆ ವಹಿಸಿಕೊಟ್ಟನು. ಆದರೆ ಅವನು ತನಗೆ ರಾಜತ್ವ ಬೇಡವೆಂದು ಹೇಳಿ ತನ್ನ ಮಗ ಮೊದಲನೇ ರಾಚಮಲ್ಲನನ್ನು ರಾಜನನ್ನಾಗಿ ಮಾಡಿದನು.

ಅಧಿಕಾರಕ್ಕೆ ಬಂದ ತಕ್ಷಣ ರಾಚಮಲ್ಲನು ರಾಷ್ಟ್ರಕೂಟರಿಂದ ಸ್ವತಂತ್ರನಾಗಲು ಪ್ರಯತ್ನಿಸಿದನು. ತನ್ನ ಪ್ರಯತ್ನಕ್ಕೆ ನೊಳಂಬರ ಸಹಾಯವನ್ನು ಪಡೆಯುವ ಸಲುವಾಗಿ ರಾಚಮಲ್ಲನು ಅವರೊಡನೆ ವೈವಾಹಿಕ ಸಂಬಂಧವನ್ನು ಬೆಳೆಸಿದನು. ತನ್ನ ಮಗಳಾದ ಜಾಯಬ್ಬೆಯನ್ನು ನೊಳಂಬ ರಾಜ ಪೊಳಲ್ಚೋರನಿಗೆ ಕೊಟ್ಟು

ವಿವಾಹ ಮಾಡಿದನು. ಈ ಮಧ್ಯದಲ್ಲಿ ರಾಷ್ಟ್ರಕೂಟ ಅಮೋಘವರ್ಷನು ರಾಜ್ಯಪಾಲನಾದ ಬಂಕೇಶನ ನೇತೃತ್ವದಲ್ಲಿ ಒಂದು ಸೈನ್ಯವನ್ನು ರಾಚಮಲ್ಲನ ಮೇಲೆ ಕಳುಹಿಸಿದನು. ರಾಚಮಲ್ಲನು ಮೊದಮೊದಲು ಜಯಶಾಲಿಯಾದರೂ ಗಂಗವಾಡಿಯನ್ನು ಸಂಪೂರ್ಣವಾಗಿ ತನ್ನ ಅಧಿಪತ್ಯದಲ್ಲಿ ಇಟ್ಟುಕೊಳ್ಳಲು ವಿಫಲನಾದನು. ಹೀಗಾಗಿ ಅವರಲ್ಲಿ ಒಂದು ವಿಧವಾದ ಆತಂಕಕಾರಿ ಸಂಬಂಧವು ಬೆಳೆಯಿತು. ರಾಚಮಲ್ಲನು ನೀತಿಮಾರ್ಗ ಪೆರ್ಮನಡಿ ಎಂದೂ ಕರೆಯಲ್ಪಡುತ್ತಿದ್ದನು. ರಾಚಮಲ್ಲನ ತರುವಾಯ ಕ್ರಿ.ಶ.೮೪೩ರಲ್ಲಿ ಅವನ ಮಗ ಎರೆಗಂಗ ನೀತಿಮಾರ್ಗನು ಅಧಿಕಾರಕ್ಕೆ ಬಂದನು. ಅಮೋಘವರ್ಷನು ಗಂಗವಂಶದ ರಾಜಕುಮಾರಿ ಚಂದ್ರಬ್ಬಲಬ್ಬೆಯನ್ನು ವಿವಾಹವಾದ ಕಾರಣ ಗಂಗರೊಡನೆ ಸ್ನೇಹಬಾಂಧವ್ಯವನ್ನು ಬೆಳೆಸಿಕೊಂಡಿದ್ದನು. ಎರೆಗಂಗನ ಜ್ಯೇಷ್ಠ ಪುತ್ರನಾದ ಎರಡನೇ ರಾಚಮಲ್ಲನು (ಕ್ರಿ.ಶ. ೮೭೦–೯೧೯) ಉತ್ತರಾಧಿಕಾರಿಯಾದನು. ಎರಡನೇ ರಾಚಮಲ್ಲನು ಅಧಿಕಾರಕ್ಕೆ ಬಂದ ಆರಂಭದಲ್ಲೇ ಆತನ ವಿರುದ್ಧ ತಿರುಗಿಬಿದ್ದ ನೊಳಂಬ ಮಹೇಂದ್ರನನ್ನು ಎದುರಿಸಬೇಕಾಯಿತು. ನಂತರ ಕ್ರಿ.ಶ. ೮೯೫ರಲ್ಲಿ ಬೂತುಗನ ಮಗ ಇಮ್ಮಡಿ ಎರೆಗಂಗನು ಮಹೇಂದ್ರನನ್ನು ಸೋಲಿಸಿ ಗಂಗರು ಕಳೆದುಕೊಂಡಿದ್ದ ರಾಜಕೀಯ ಎಲ್ಲೆಗಳನ್ನು ಪುನಃ ಹಿಂದಕ್ಕೆ ಪಡೆದನು. ಹಿಂದೆ ಕಳೆದುಕೊಂಡಿದ್ದ ಹೆಂಜೇರು ಪ್ರದೇಶವನ್ನು ನೊಳಂಬರಿಂದ ಪುನಃ ಗೆದ್ದುಕೊಂಡನು. ಮದ್ದೂರು ತಾಲೂಕಿನ ತಾಯಲೂರು (ತೈಲೂರು) ಗ್ರಾಮದ ಕೆರೆಯ ಉತ್ತರ ಕೋಡಿಯ ಬಳಿ ನಿಂತಿದ್ದ ಕಂಬದ ಮೇಲಿರುವ ಶಾಸನವು ತಾಯಲೂರು ಗ್ರಾಮದ ಗಾವುಂಡಸ್ವಾಮಿಯ ಮಗ ನಾಗಮ್ಮಯ್ಯನು ನಿರ್ಮಿಸಿದ ದೇವಾಲಯದ ಬಗ್ಗೆ ಉಲ್ಲೇಖಿಸುತ್ತದೆ. ಕ್ರಿ.ಶ.೮೯೫–೯೬ರ ಈ ಶಾಸನದಲ್ಲಿ ನೊಳಂಬಾಧಿರಾಜ ಮಹೇಂದ್ರನ ಬಗ್ಗೆ ಉಲ್ಲೇಖವಿದ್ದು ಸತ್ಯವಾಕ್ಯ ಪೆರ್ಮನಡಿ ಎಂಬ ಹೆಸರು ಇದ್ದ ಇಮ್ಮಡಿ ರಾಚಮಲ್ಲನು ಆಳುತ್ತಿದ್ದನೆಂದು ಸ್ಪಷ್ಟವಾಗಿ ತಿಳಿಸುತ್ತದೆ. ಶ್ರೀರಂಗಪಟ್ಟಣದ (ಗೌತಮಕ್ಷೇತ್ರ) ಎದುರಿಗೆ ಕಾವೇರಿನದಿಯ ಉತ್ತರದಂಡೆಯ ಸಮೀಪ ಗದ್ದೆಯೊಂದರಲ್ಲಿರುವ ಶಾಸನವು ಸತ್ಯವಾಕ್ಯ ಪೆರ್ಮನಡಿಯ ಆಳ್ವಿಕೆಯ (ಇಮ್ಮಡಿ ರಾಚಮಲ್ಲ) ೩೪ನೇ ವರ್ಷ (೯–೧೦ನೇ ಶತಮಾನ) ದ್ದಾಗಿದ್ದು, ಕೇಸಿಗನೆಂಬ ಅಧಿಕಾರಿಗೆ ಪೆರ್ಬಾಣಪಲ್ಲಿಯನ್ನು ಖರೀದಿಸಲು ವಿಶೇಷವಾಗಿ ಅನುಮತಿ ನೀಡಿರುವ ಅಂಶವನ್ನು ಈ ಶಾಸನವು ದಾಖಲಿಸಿದೆ. ಈತನಿಗೆ ಈ ಅಧಿಕಾರವನ್ನು ತಲೆನೆರೆ ಎಂಬ ಸ್ಥಳದಲ್ಲಿ ನದಿಗೆ ಅಣೆಕಟ್ಟು ಕಟ್ಟುವ ಸಲುವಾಗಿ ನೀಡಲಾಗಿತ್ತೆಂದು ಶಾಸನದಲ್ಲಿ ದಾಖಲಿಸಲಾಗಿದೆ. ಕಲ್ಬಪ್ಪುಗಿರಿ ಅಥವಾ ಕಲ್ಬಪ್ಪುಗಿರಿ (ಶ್ರವಣಬೆಳಗೊಳ) ಪ್ರದೇಶದ ಜೈನ ಗುರು ಮತಿಸಾಗರ ಪಂಡಿತದೇವ ಭಟಾರ ಎಂಬುವವರ ಕೋರಿಕೆಯ ಮೇಲೆ ಈ ಕಟ್ಟೆಕಟ್ಟುವ ಕಾರ್ಯವನ್ನು ಕೈಗೊಳ್ಳುವಂತೆ ಮಾಡಲಾಯಿತೆಂದೂ ಹಾಗೂ ಕಲ್ಬಪ್ಪುಗಿರಿಯಲ್ಲಿ (ಶ್ರವಣಬೆಳಗೊಳ) ಭದ್ರಬಾಹು ಮತ್ತು ಚಂದ್ರಗುಪ್ತ ಎಂಬ ಜೈನ ಮುನಿಗಳು ವಾಸವಿದ್ದು ಆ ಸ್ಥಳವನ್ನು ಪವಿತ್ರಗೊಳಿಸಿರುವರೆಂದು ಶಾಸನವು ತಿಳಿಸುತ್ತದೆ. ಕೃಷ್ಣರಾಜಪೇಟೆ ತಾಲೂಕಿನ ಹೊನ್ನೇನಹಳ್ಳಿಯ ಕ್ರಿ.ಶ.ಒಂಬತ್ತನೇ ಶತಮಾನದ ಶಾಸನವು ಕುಲವಲಾಪುರದ ಗಂಗ ಎರೆಯಪ್ಪರಸನು ಬಾಳ್ಗಳ್ಚು ಸಂಪ್ರದಾಯಕ್ಕಾಗಿ ಕೋಂಗಾಲ್ನಾಡಿಗೆ ಸೇರಿದ ಸ್ಥಳದಲ್ಲಿ ಭೂಮಿಯನ್ನು ದಾನವಾಗಿ ನೀಡಿದ ಬಗ್ಗೆ ದಾಖಲಿಸಿದೆ. ಪಾಂಡವಪುರ ತಾಲೂಕಿನ ಮಲ್ಲಿಗೆರೆ ಗ್ರಾಮದ ಕ್ರಿ.ಶ.೯೦೬–೦೭ರ ಶಾಸನವು ಇಮ್ಮಡಿ ರಾಚಮಲ್ಲ ಮತ್ತು ಎರೆಯಪ್ಪರಸರುಗಳು ಒಟ್ಟಿಗೆ ಆಳ್ವಿಕೆ ಮಾಡುತ್ತಿದ್ದುದರ ಬಗ್ಗೆ ವಿವರಿಸುತ್ತದೆ. ಸತ್ಯವಾಕ್ಯ ಪೆರ್ಮನಡಿ ಎಂದು ಶಾಸನದಲ್ಲಿ ಉಲ್ಲೇಖಿಸಲಾಗಿದ್ದು ಆ ವ್ಯಕ್ತಿಯು ಇಮ್ಮಡಿ ರಾಚಮಲ್ಲನೇ ಎಂದು ಹೇಳಲಾಗುತ್ತದೆ. ಕೊವಳಾಲಪುರವರೇಶ್ವರ ನಂದಗಿರಿನಾಥ ಕೊಂಗುಣಿವರ್ಮನನ್ನು ಧರ್ಮ ಮಹಾರಾಜಾಧಿರಾಜ ಎಂದು ವರ್ಣಿಸಲಾಗಿದೆ. ಇದೇ ತಾಲೂಕಿನ ಕ್ಯಾತನಹಳ್ಳಿಯ (ಪಾಂ.ಪು.೧೬ ಎಕ ಸಂ ೬) ಶಾಸನದಲ್ಲಿ ಚಾಗಿ ಪೆರ್ಮ್ಮನಡಿ ಎಂಬ ಅಧಿಕಾರಿಯು ಕಟ್ಟಿಸಿದ ಕಲ್ಲಬಸದಿಗೆ ಸತ್ಯವಾಕ್ಯ ಪೆರ್ಮ್ಮನಡಿ ಮತ್ತು ಎರೆಯಪ್ಪರಸನು ಹಲವು ದಾನಗಳನ್ನು ನೀಡಿದುದರ ಬಗ್ಗೆ ಉಲ್ಲೇಖಿಸಲಾಗಿದೆ. ಕೂಳಗೆರೆಯ ಕ್ರಿ.ಶ.೯೧೭ರ ಶಾಸನವು ತಿಳಿಸುವಂತೆ ಅರೆತಿಪ್ಪೂರಿನ, ದೊಡ್ಡ ಬೆಟ್ಟದ ಮೇಲೆ ಈಗಲೂ ಕಾಣಸಿಗುವ ಸುಮಾರು ೧೨ ಅಡಿ ಎತ್ತರದ ಬಾಹುಬಲಿಯ ಏಕಶಿಲಾ ಮೂರ್ತಿಯು ಶ್ರವಣಬೆಳಗೊಳದ ಗೊಮ್ಮಟಮೂರ್ತಿಗಿಂತ ಪ್ರಾಚೀನವಾದದ್ದಾಗಿದೆ.

ಎರೆಯಪ್ಪರಸನ ಮೂವರು ಮಕ್ಕಳಾದ ನರಸಿಂಹ (೯೧೯–೨೫ ಕ್ರಿ.ಶ.), ಕಕ್ಕೆಯ ಗಂಗ ಅಥವಾ ಮುಮ್ಮಡಿ ರಾಚಮಲ್ಲ (೯೨೩–೯೩೬) ಹಾಗೂ ಅನಂತರ ಇಮ್ಮಡಿ ಬೂತುಗ (ಕ್ರಿ.ಶ.೯೩೬–೬೦) ಇವರು ಒಬ್ಬರ ತರುವಾಯ ಒಬ್ಬರಂತೆ ಅಧಿಕಾರಕ್ಕೆ ಬಂದು ಗಂಗ ಸಾಮ್ರಾಜ್ಯದ ಮುನ್ನಡೆಯನ್ನು ತಲಕಾಡಿನಿಂದ ನಿರ್ದೇಶನ ಮಾಡಿದರು. ಇಮ್ಮಡಿ ಬೂತುಗನು ರಾಷ್ಟ್ರಕೂಟ ದೊರೆ ಮುಮ್ಮಡಿ ಅಮೋಘವರ್ಷ ಅಥವಾ ಬದ್ದೆಗದೇವನ ಸಹಾಯದೊಂದಿಗೆ ತನ್ನ ಹಿರಿಯಣ್ಣನನ್ನು ಪದಚ್ಯುತಗೊಳಿಸಿ ಅಧಿಕಾರಕ್ಕೆ ಬಂದನು. ಇಮ್ಮಡಿ ಬೂತುಗನು ಬದ್ದೆಗದೇವನ ಮಗಳಾದ ರೇವಕನಿಮ್ಮಡಿಯನ್ನು ವಿವಾಹವಾಗಿದ್ದುದರಿಂದಾಗಿ ಸ್ವಾಭಾವಿಕವಾಗಿ ಮುಮ್ಮಡಿ ಅಮೋಘವರ್ಷನು ಈತನಿಗೆ ಸಿಂಹಾಸನವನ್ನೇರಲು ಸಹಾಯವನ್ನೊದಗಿಸಿದನು. ಇದಲ್ಲದೆ ಬೂತುಗನು ಮುಮ್ಮಡಿ ಕೃಷ್ಣ ಮತ್ತು ಬದ್ದೆಗದೇವರಸುಗಳಿಗೆ ಕ್ರಿ.ಶ.೯೩೬ರಲ್ಲಿ ನಾಲ್ಕನೇ ಗೋವಿಂದನ ವಿರುದ್ಧದ ಬಂಡಾಯದಲ್ಲಿ ಸಹಾಯ ಮಾಡಿದ್ದನು.

ಅಲ್ಲಿಂದಾಚೆಗೆ ಗಂಗರು ರಾಷ್ಟ್ರಕೂಟರಿಗೆ ಸ್ನೇಹಿತರಾದದ್ದೇ ಅಲ್ಲದೇ ಅವರ ಮುಂದಿನ ರಾಜಕೀಯ ಹೆಜ್ಜೆಗಳಿಗೆ ಒತ್ತಾಸೆಯಾಗಿ ನಿಂತರು. ಇದರ ಪರಿಣಾಮವಾಗಿ ಗಂಗರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡರು. ಮದ್ದೂರು ತಾಲೂಕಿನ ಆತಕೂರು ಗ್ರಾಮದ ಉತ್ತರಕ್ಕೆ ಚಲ್ಲೇಶ್ವರ ದೇವಾಲಯದ ಬಳಿಯಿದ್ದ ವೀರಗಲ್ಲು ಶಾಸನ ಈಗ ಬೆಂಗಳೂರಿನ ವಸ್ತುಸಂಗ್ರಹಾಲಯದಲ್ಲಿದೆ. (ಕ್ರಿ.ಶ.೯೫೦) ಈ ವೀರಗಲ್ಲಿನ ಮೇಲ್ಭಾಗದಲ್ಲಿ ರೋಷಾವೇಷದಿಂದ ಕಾಡುಹಂದಿಯೊಂದಿಗೆ ಹೋರಾಡುತ್ತಿರುವ ನಾಯಿಯ ಶಿಲ್ಪವಿದ್ದು, ಈ ಶಾಸನವು ಅತ್ಯಂತ ಸ್ವಾರಸ್ಯಕರವಾಗಿದೆ. ರಾಷ್ಟ್ರಕೂಟ ಮುಮ್ಮಡಿ ಕೃಷ್ಣನು ತಕ್ಕೋಳಂ ಯುದ್ಧದಲ್ಲಿ ತೊಡಗಿದ್ದಾಗ, ಗಂಗ ಪೆರ್ಮನಡಿ ಇಮ್ಮಡಿ ಬೂತುಗ ಮತ್ತು ಅವನ ಅಂಕಕಾರ (ಮಾವುತ) ಮಣಲಾರನು ರಣರಂಗದಲ್ಲಿ ಪ್ರಮುಖ ಪಾತ್ರವಹಿಸಿ, ಚೋಳ ರಾಜಾದಿತ್ಯನ ಮೇಲೆ ಎರಗಿ ಅವನನ್ನು ಕೊಂದ ವಿಷಯವನ್ನು ದಾಖಲಿಸಿದೆ. ಬೂತುಗನ ಪರಾಕ್ರಮಕ್ಕೆ ಮಾರುಹೋದ ಮುಮ್ಮಡಿಕೃಷ್ಣನು ಅವನಿಗೆ ಬನವಾಸಿ–೧೨,೦೦೦, ಬೆಳ್ವೊಲ–೩೦೦, ಪುಲಿಗೆರೆ–೩೦೦, ಕಿಸುಕಾಡು–೭೦ ಮತ್ತು ಬಾಗಿನಾಡು–೭೦ ಆಡಳಿತ ವಿಭಾಗಗಳನ್ನು ಉಡುಗೊರೆಯಾಗಿ ನೀಡಿದನು. ಬೂತುಗನಿಗೆ ನೆರವಾದ ಮಾವುತ ಮಣಲಾರನ ಸಾಹಸಕ್ಕಾಗಿ, ಅವನ ಕೋರಿಕೆಯಂತೆ ಚಕ್ರವರ್ತಿ ಮುಮ್ಮಡಿ ಕೃಷ್ಣನು ತನ್ನ ನೆಚ್ಚಿನ ನಾಯಿ ಕಾಳಿಯನ್ನು ಮಣಲಾರನಿಗೆ ಉಡುಗೊರೆ ನೀಡಿದ ಸಂದರ್ಭದಲ್ಲಿ, ಆತಕೂರು–೧೨ ಪ್ರದೇಶವನ್ನು ಆತನಿಗೆ ಉಂಬಳಿಯಾಗಿ ನೀಡಿ ಬೂತುಗನು ಗೌರವಿಸಿದನು. ಮುಂದೆ ನೆಚ್ಚಿನ ನಾಯಿ ಕಾಳಿಯೊಂದಿಗೆ ಕಾಡುಹಂದಿಯ ಬೇಟೆಗೆ ಮಣಲಾರನು ಹೋಗಿದ್ದ ಸಂದರ್ಭದಲ್ಲಿ ಹಂದಿಯನ್ನು ಕೊಂದು ಮಡಿದ ನಾಯಿ ಕಾಳಿಯ ಸಲುವಾಗಿ ಈ ವೀರಗಲ್ಲನ್ನು ನಿಲ್ಲಿಸಿ, ಅದರ ದೈನಂದಿನ ಪೂಜೆಗೆಂದು ಗೊರವರನ್ನು ನೇಮಿಸಿ ದತ್ತಿ ಬಿಡುವ ಮೂಲಕ ಅಮರ ಪ್ರಾಣಿ ಪ್ರೇಮವನ್ನು ಮೆರೆದಿರುವ ಅಂಶವನ್ನು ಈ ಶಾಸನವು ದಾಖಲಿಸಿದೆ. ಈ ಶಾಸನದಲ್ಲಿ ಇಮ್ಮಡಿ ಬೂತುಗನು ಎರೆಯಪ್ಪನ ಮಗ ರಾಚಮಲ್ಲನನ್ನು ಕೊಂದ ಎಂದು ಸ್ಪಷ್ಟವಾಗಿ ದಾಖಲಿಸಲಾಗಿದೆ. ಇದರ ಅರ್ಥ ಆತ ಇನ್ನೊಬ್ಬ ವ್ಯಕ್ತಿಯ ಮಗನೆಂದೂ ಹಾಗೂ ಖಾಸಾ ಅಣ್ಣತಮ್ಮಂದಿರಲ್ಲವೆಂಬ ಅಂಶ ಸ್ಪಷ್ಟವಾಗುತ್ತದೆ.

ನಿಷ್ಠಾವಂತ ಜೈನನಾಗಿದ್ದ ಬೂತುಗನು ಸ್ವತಃ ಉತ್ತಮ ಪಂಡಿತನೂ ಆಗಿದ್ದನು. ಬೂತುಗನ ಮರಣಾನಂತರ ಅವನ ಮಗ ಮರುಳದೇವನು ಸ್ವಲ್ಪಕಾಲದವರೆಗೆ ಆಳ್ವಿಕೆ ಮಾಡಿದನು. (೯೬೦–೬೩). ನಂತರ ಇಮ್ಮಡಿ ಮಾರಸಿಂಹನು ಸಾಮ್ರಾಜ್ಯದ ಆಡಳಿತವನ್ನು ವಹಿಸಿಕೊಂಡನು. ಇಮ್ಮಡಿ ಬೂತುಗನ ಇನ್ನೊಂದು ಶಾಸನವು (ಧನಗೂರು–ಮಳವಳ್ಳಿ–೫೦–ಎ.ಕ.ಸಂ.೭) ಬಹಳಷ್ಟು ಶಿಥಿಲವಾಗಿದೆ. ಬಡಗರೆ ನಾಡಿನ ಧನಗನೂರು ಗ್ರಾಮವನ್ನು ಸತ್ಯಾವಾಕ್ಯಗಂಗನ ಆದೇಶದ ಮೇಲೆ ಪುಣ್ಣಿಗದ ಮಾಚಯ್ಯನು ಮಡಿದ ಮಹಾಸತಿಯ ಸ್ಮರಣೆಗಾಗಿ ಆಚಮನೆಂಬ ಅಧಿಕಾರಿಗೆ ಕಲ್ನಾಡು ವಿಧಿಯನ್ನನುಸರಿಸಿ ದತ್ತಿಬಿಟ್ಟ ವಿಚಾರವನ್ನು ಈ ಶಾಸನದಲ್ಲಿ ದಾಖಲಿಸಲಾಗಿದೆ. ಈ ಶಾಸನವು ಇಮ್ಮಡಿ ಬೂತುಗನ ಕಾಲಕ್ಕೆ ಅಂದರೆ ಕ್ರಿ.ಶ.೯೬೦ಕ್ಕೆ ಸೇರುತ್ತದೆ. ಬೂತುಗನ ನಂತರ ಕಲ್ಯಾಣದ ಚಾಳುಕ್ಯರು ಪ್ರಬಲರಾಗಿ ರಾಷ್ಟ್ರಕೂಟರ ಆಡಳಿತವನ್ನು ಕೊನೆಗಾಣಿಸಿದರು. ಆದರೆ, ಇಮ್ಮಡಿ ಮಾರಸಿಂಹನು

ರಾಷ್ಟ್ರಕೂಟ ದೊರೆ ನಾಲ್ಕನೇ ಇಂದ್ರ (ಮುಮ್ಮಡಿ ಕೃಷ್ಣನ ಮೊಮ್ಮಗ)ನನ್ನು ಬಂಕಾಪುರದಲ್ಲಿ ಪಟ್ಟಾಭಿಷಿಕ್ತನನ್ನಾಗಿ ಮಾಡುವಲ್ಲಿ ಸಹಕರಿಸಿದ್ದನು. ಇದರಿಂದಾಗಿ ಕಲ್ಯಾಣದ ಚಾಳುಕ್ಯರ ಮೊದಲ ಅರಸ ಇಮ್ಮಡಿ ತೈಲಪನ ಅವಕೃಪೆಗೆ ಮುಮ್ಮಡಿ ಮಾರಸಿಂಹನು ಪಾತ್ರನಾಗಬೇಕಾಯಿತು.

ಮುಮ್ಮಡಿ ಮಾರಸಿಂಹನು ಕ್ರಿ.ಶ.೯೬೩ರಿಂದ ಕ್ರಿ.ಶ. ೯೭೪ರವರೆಗೆ ಪ್ರಬಲನಾಗಿ ಆಳ್ವಿಕೆ ಮಾಡಿದನು. ಈತನು ಕೈಗೊಂಡ ಪ್ರಮುಖ ಸಾಧನೆಯೆಂದರೆ ನೊಳಂಬರನ್ನು ಸೋಲಿಸಿ ನೊಳಂಬಾಂತಕ ಎಂದು ಬಿರುದುಗಳಿಸಿದ್ದು. ಮಾರಸಿಂಹನು ಸಾಹಿತ್ಯ, ಧರ್ಮ ಮತ್ತು ವಾಸ್ತುಕಲಾ ಕ್ಷೇತ್ರದಲ್ಲಿಯೂ ಖ್ಯಾತನಾಗಿದ್ದನು. ಇವನ ಮಂತ್ರಿಯಾದ ಚಾವುಂಡರಾಯನು ಶ್ರವಣಬೆಳಗೊಳದಲ್ಲಿ ಬೃಹತ್ ಪ್ರಮಾಣದ ಏಕಶಿಲೆಯ ಬಾಹುಬಲಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ಭಾರತೀಯ ಶಿಲ್ಪಕಲಾ ಇತಿಹಾಸದಲ್ಲಿ ಗಂಗರ ಹೆಸರು ಅಮರವಾಗುವಂತೆ ಮಾಡಿರುವನು. ಅನೇಕ ಖ್ಯಾತ ಜೈನ ಮುನಿಗಳಿಗೆ ಮಾರಸಿಂಹನು ಆಶ್ರಯದಾತನಾಗಿದ್ದನು. ಈತನು ಶ್ರದ್ಧಾವಂತ ಜೈನಧರ್ಮೀಯನಾಗಿದ್ದು, ಸಲ್ಲೇಖನ ವ್ರತವನ್ನು ಕೈಗೊಂಡು ಇಹಲೋಕವನ್ನು ತ್ಯಜಿಸಿದನೆಂಬ ಪ್ರತೀತಿಯಿದೆ. ಮಾರಸಿಂಹನಿಗೆ ಸತ್ಯವಾಕ್ಯ, ನಾಲ್ಕನೇಯ ರಾಚಮಲ್ಲ, ರಕ್ಕಸಂಗ ಮತ್ತು ಅರುಮೋಳಿದೇವ ಎಂಬ ನಾಲ್ವರು ಮಕ್ಕಳಿದ್ದರು. ಈ ಸಹೋದರರಲ್ಲಿ ಅಧಿಕಾರಕ್ಕೋಸ್ಕರ ಅಂತಃಕಲಹಗಳು ಉಂಟಾದವು. ಚಾವುಂಡರಸನು ತನ್ನ ರಾಜನಾಗಿದ್ದ ಮಾರಸಿಂಹನ ತಮ್ಮ ಗೋವಿಂದರಸನ ವಿರುದ್ಧವಾಗಿ ನಾಲ್ಕನೇ ರಾಚಮಲ್ಲನ ಪರವಾಗಿ ಸಹಾಯಕ್ಕೆ ನಿಂತನು. ಆಂತರಿಕ ಕಲಹಗಳ ಬಗ್ಗೆ ತಿಳಿದಿದ್ದ ಚಾಳುಕ್ಯ ತೈಲಪನು ಈ ವಂಶದ ಆಡಳಿತದಲ್ಲಿ ಮಧ್ಯಪ್ರವೇಶ ಮಾಡಿ ಎಲ್ಲರನ್ನೂ ಸೋಲಿಸಿ ಗಂಗವಾಡಿಯನ್ನು ಚಾಳುಕ್ಯ ಸಾಮ್ರಾಜ್ಯದೊಳಗೆ ಲೀನವಾಗಿಸಿಕೊಂಡನು. ಆದರೂ. ನಾಲ್ಕನೇ ರಾಚಮಲ್ಲನು ಕ್ರಿ.ಶ.೯೯೯ರವರೆಗೆ ಒಂದು ಚಿಕ್ಕನಗರದಲ್ಲಿ ಅರಸನಾಗಿ ಮುಂದುವರಿದನು. ಇದನ್ನೂ ಅವನು ಹೆಚ್ಚು ಕಾಲ ಉಳಿಸಿಕೊಳ್ಳಲಾರದೇ ಹೋದನು. ಏಕೆಂದರೆ, ಚೋಳರು ಇವನನ್ನು ಪರಾಭವಗೊಳಿಸಿ ಗಂಗರ ಅಳಿದುಳಿದ ಸಾಮ್ರಾಜ್ಯವನ್ನು ತಮ್ಮ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡರು. ಮಂಡ್ಯ ಜಿಲ್ಲೆಯಲ್ಲಿ ಇಮ್ಮಡಿ ಮಾರಸಿಂಹನ ಶಾಸನವು ನಾಗಮಂಗಲ (ನಾಗಮಂಗಲ–೧೨–ಎ.ಕ.೭)ದ ಪ್ರವಾಸಿಮಂದಿರದ ಎದುರಿಗಿದೆ. ಈ ವೀರಗಲ್ಲು ಶಾಸನದಲ್ಲಿ ಇಡುಗೂರ ಗಾವುಂಡ ತನದಕಯ್ಯನೆಂಬ ವೀರನು, ಅಪಹರಿಸಿದ ದನಗಳನ್ನು ಸಂರಕ್ಷಿಸುವ ಕಾರ್ಯದಲ್ಲಿ ನಿಧನನಾದನೆಂದು ದಾಖಲಿಸಲಾಗಿದೆ. ಈ ಶಾಸನವು ಮುಮ್ಮಡಿ ಮಾರಸಿಂಹನ ಆಡಳಿತದ ಮೊದಲ ವರ್ಷದ (ಕ್ರಿ.ಶ.೯೬೩–೯೪)ಲ್ಲಿ ರಚಿಸಲಾಗಿದ್ದು ಅಪೂರ್ಣವಾಗಿದೆ.

ಮಂಡ್ಯ ತಾಲೂಕಿನ ಹಳೇಬೂದನೂರಿನ ಸುಮಾರು ಕ್ರಿ.ಶ.೯೭೫ರ ಶಾಸನದಲ್ಲಿ ಗಂಗ ಸತ್ಯವಾಕ್ಯ ಗೋವಿಂದರ ಹಾಗೂ ರಕ್ಕಸಗಂಗ (ಕ್ರಿ.ಶ.೯೮೫–೧೦೨೪)ರನ್ನು ಹೆಸರಿಸುತ್ತಾ ಸೋವರಾಸಿ ಭಟಾರರು ಬೂದನೂರಿನಲ್ಲಿ ನಿರ್ಮಿಸಿದ ಕೆರೆಯ ನಿರ್ವಹಣೆಗೆಂದು ಬೂದನೂರಿನ ಗೌಡರು ಭೂಮಿಯನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಮಂಡ್ಯ ತಾಲೂಕಿನ ಕೊತ್ತತ್ತಿ ಗ್ರಾಮದ ಬೋರೇದೇವರ ಗುಡಿಯ ಬಳಿ ನಿಂತಿರುವ ವೀರಗಲ್ಲು ಶಾಸನವು ಇವನ ಕಾಲದ್ದಾಗಿದ್ದು, ಕ್ರಿ.ಶ.೯೭೭–೭೮ರಲ್ಲಿ ಪೆರೂರಿನಲ್ಲಿ ಪಲ್ಲವರ ವಿರುದ್ಧ ಸಂಭವಿಸಿದ ಯುದ್ಧದಲ್ಲಿ ಮಡಿದ ಈಶ್ವರಗಂಡನೆಂಬ ವೀರನ ಸ್ಮರಣಾರ್ಥವಾಗಿ ನಿರ್ಮಾಣವಾದ ದೇವಾಲಯಕ್ಕೆ ಕೊತ್ತತ್ತಿ ಗ್ರಾಮವನ್ನು ದತ್ತಿಬಿಟ್ಟ ಸಂಗತಿಯನ್ನು ತಿಳಿಸುತ್ತದೆ. ಗಂಗರ ಕೊನೆಯ ಅರಸನಾದ ರಕ್ಕಸಗಂಗನು ಸುಮಾರು ೧೦೦೪ರಲ್ಲಿ ಚೋಳ ರಾಜರಾಜನ ಆಳ್ವಿಕೆಯಲ್ಲಿ ಯುವರಾಜ ರಾಜೇಂದ್ರ ಚೋಳನೆದುರು ತಲಕಾಡಿನಲ್ಲಿ ಜರುಗಿದ ಘೋರಯುದ್ಧದಲ್ಲಿ ಸೋಲುವುದರೊಂದಿಗೆ ಗಂಗವಾಡಿ ಪ್ರದೇಶ ಚೋಳರ ಕೈಸೇರಿತು. ಗಂಗರ ಕಾಲದಲ್ಲಿ ಗುತ್ತಲಿನ ಆರ್ಕೇಶ್ವರ ದೇವಾಲಯವು ಜಿನಬಸದಿಯಾಗಿತ್ತೆಂಬ ಅಂಶವು ಆ ಗುಡಿಯ ಜೀರ್ಣೋದ್ಧಾರ ಕಾಲದಲ್ಲಿ ಪತ್ತೆಯಾದ ೧೦೩೪ರ ಶಾಸನದಿಂದ ವೇದ್ಯವಾಗುತ್ತದೆ. ಗಂಗರಾಜ ಲೋಕ ವಿದ್ಯಾಧರನ ನಿರ್ವಾಣವನ್ನು ದಾಖಲಿಸಿರುವ ನಿಶಿಧಿ ಶಾಸನ ಇದಾಗಿದ್ದು, ಗಂಗರ ಕೊನೆಯ ಅರಸರುಗಳ ಬಗ್ಗೆ ಹೊಸ ಬೆಳಕನ್ನು ಚೆಲ್ಲುವ ಈ ಶಾಸನವನ್ನು ಆಧಾರವಾಗಿಟ್ಟುಕೊಂಡು

ಗಂಗರ ಇತಿಹಾಸವನ್ನು ಕನಿಷ್ಠ ಅರ್ಧಶತಮಾನದಷ್ಟು ಮುಂದಕ್ಕೆ ಗುರುತಿಸಬಹುದೆಂದು ಡಾ. ಹಂ. ಪಾ. ನಾಗರಾಜಯ್ಯನವರು ಅಭಿಪ್ರಾಯಪಟ್ಟಿದ್ದು, ಗಂಗರ ಭಿನ್ನ ಶಾಖೆಗಳನ್ನು ಅರಿಯುವಲ್ಲಿ ಮಂಡ್ಯ ಜಿಲ್ಲೆಯ ಗಂಗ ಶಾಸನಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ.

ಮಂಡ್ಯ ಜಿಲ್ಲೆಯಲ್ಲಿ ಅನೇಕ ಕೆರೆ-ಕಟ್ಟೆ ಹಾಗೂ ಹಲವಾರು ದೇವಾಲಯಗಳು ಗಂಗರ ಕಾಲದಲ್ಲಿ ನಿರ್ಮಾಣಗೊಂಡ ಬಗ್ಗೆ ಶಾಸನೋಲ್ಲೇಖಗಳಿವೆ. ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯವನ್ನು ಕ್ರಿ.ಶ.೮೯೪ರಲ್ಲಿ ತಿರುಮಲಯ್ಯನೆಂಬ ಗಂಗ ಅಧಿಕಾರಿಯು ಕಟ್ಟಿಸಿದ್ದನೆಂದು ಶಿಕಾರಿಪುರ ತಾಲೂಕಿನ ಶಾಸನವೊಂದನ್ನು ಆಧರಿಸಿ ವಿದ್ವಾಂಸರು ಅಭಿಪ್ರಾಯಪಟ್ಟಿದ್ದರಾದರೂ, ಇದಕ್ಕೆ ಪೂರಕವಾಗಿ ಅವರು ನೀಡುವ ಶಾಸನೋಲ್ಲೇಖದ ಅಲಭ್ಯತೆಯಿಂದಾಗಿ ಈ ಅಭಿಪ್ರಾಯವನ್ನು ಖಚಿತಪಡಿಸಲು ಸಾಧ್ಯವಾಗುವುದಿಲ್ಲ. ನಾಗಮಂಗಲ ತಾಲೂಕಿನ ಕಂಬದಹಳ್ಳಿಯ ಪ್ರಸಿದ್ಧ ಪಂಚಕೂಟ ಬಸದಿಯ ಸಂಕೀರ್ಣದಲ್ಲಿರುವ ಅತ್ಯಂತ ಪ್ರಾಚೀನದ್ದೆನ್ನಲಾಗುವ ತ್ರಿಕೂಟ ಬಸದಿಯು ಸುಮಾರು ಕ್ರಿ.ಶ.೯೦೦ರ ರಚನೆಯೆಂದು ಅಭಿಪ್ರಾಯಪಡಲಾಗಿದೆ. ಪಾಂಡವಪುರ ತಾಲೂಕಿನ ಕ್ಯಾತನಹಳ್ಳಿಯ ಕಲ್ಲು ಬಸದಿಯನ್ನು ಗಂಗ ರಾಜ ಸತ್ಯವಾಕ್ಯ ಪೆರ್ಮ್ಮನಡಿ ಹಾಗೂ ಎರೆಯಪ್ಪರಸರ ಇಚ್ಛೆಯಂತೆ ಅಧಿಕಾರಿ ಚಾಗಿ ಪೆರ್ಮಾನಡಿಯು ನಿರ್ಮಿಸಿದನೆಂದು ಅಲ್ಲಿಯ ಶಾಸನದಿಂದ ಗೊತ್ತಾಗುತ್ತದೆ. ದೇವರಹಳ್ಳಿ ತಾಮ್ರಶಾಸನವು ಕ್ರಿ.ಶ.೭೭೬-೭೭ರ ಸುಮಾರಿಗೆ ರಚನೆಯಾದ ಬಸದಿಯೊಂದನ್ನು ಉಲ್ಲೇಖಿಸುತ್ತದೆ. ನಾಗಮಂಗಲ ತಾಲೂಕಿನ ಅರಣಿಯ ಕ್ರಿ.ಶ. ೯೭೨ರ ಶಾಸನದಲ್ಲಿ, ಗಂಗ ಮಂತ್ರಿ ಮಾಬಲಯ್ಯನು ತಾನು ಕಟ್ಟಿಸಿರಬಹುದಾದ ಕೆರೆಯ ನಿರ್ವಹಣೆಗೆಂದು ಬಿತ್ತುವಟ್ಟ ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ. ಮಂಡ್ಯ ತಾಲೂಕಿನ ಬೇಲೂರಿನಲ್ಲಿ ಕೆರೆಯೊಂದನ್ನು ಗಂಗ ಪೆರ್ಗಡೆ ಬಾಸಣಯ್ಯನು ಕಟ್ಟಿಸಿ ಅದಕ್ಕೆ ತೂಬನ್ನು ಅಳವಡಿಸಿದ ವಿಚಾರ ಗಂಗ ಪೆರ್ಮ್ಮನಡಿಯ ಕ್ರಿ.ಶ.೮೯೭ರ ಶಾಸನದಲ್ಲಿ ಕಂಡುಬರುತ್ತದೆ. ಮದ್ದೂರು ತಾಲೂಕಿನ ವೈದ್ಯನಾಥಪುರದ ದೇವಾಲಯವು ಗಂಗರ ಕಾಲದ ರಚನೆಯಾಗಿದ್ದು, ಅದಕ್ಕೆ ಇಮ್ಮಡಿ ಶಿವಮಾರನು ಹಲಗೂರು ಗ್ರಾಮವನ್ನು ದಾನವಾಗಿ ನೀಡಿದ್ದ ಅಂಶ ಹೊಯ್ಸಳ ವಿಷ್ಣುವರ್ಧನನ ಕಾಲದ ಮೂರು ಅಥವಾ ನಾಲ್ಕು ಶಾಸನಗಳಲ್ಲಿ ಸಾಂದರ್ಭಿಕವಾಗಿ ದಾಖಲಿಸಲ್ಪಟ್ಟಿದೆ. ಆ ಅವಧಿಯಲ್ಲೇ ಹಲಗೂರಿನಲ್ಲಿ ಒಂದು ಕೆರೆಯೂ ನಿರ್ಮಾಣವಾಯಿತೆಂದು ತಿಳಿದುಬರುತ್ತದೆ. ನೀರಾವರಿ ಸೌಕರ್ಯವನ್ನು ವಿಸ್ತರಿಸುವ ಮೂಲಕ ಖುಷ್ಕಿ ಭೂಮಿಯನ್ನು ತರಿ ಭೂಮಿಯನ್ನಾಗಿ ಪರಿವರ್ತಿಸಲು ಮುಂದಾದ ಅಂಶವನ್ನು ಗಂಗ ನೀತಿಮಾರ್ಗನ ಮಳವಳ್ಳಿ ತಾಲೂಕಿನ ಯಮ್ಮದೂರು ಶಾಸನವು ಉಲ್ಲೇಖಿಸುತ್ತದೆ. ಜಿಲ್ಲೆಯ ಅರೆ ತಿಪ್ಪೂರು, ಮದ್ದೂರು ಆತಕೂರು, ಕಂಬದಹಳ್ಳಿ, ಗುತ್ತಲು, ಬೇಲೂರು, ಕೆರಗೋಡು, ಬೂದನೂರು, ಹಲಗೂರು, ಅರಣಿ, ಮುದಗುಂಡೂರು, ಕೊತ್ತತ್ತಿ, ಎಲೇಕೊಪ್ಪ, ಕಲ್ಕುಣಿ, ಆಲೇನಹಳ್ಳಿ, ಚಿನಕುರುಳಿ, ಹಲ್ಲೆಗೆರೆ, ಕೊಮ್ಮೇರಹಳ್ಳಿ, ಮುಂತಾದ ಊರುಗಳು ಗಂಗರ ಕಾಲದ ಪ್ರಮುಖ ನೆಲೆಗಳಾಗಿವೆ.

ರಾಷ್ಟ್ರಕೂಟರ ಉಲ್ಲೇಖವಿರುವ ಆತಕೂರು ಶಾಸನ (ಕ್ರಿ.ಶ.೯೫೦)ದಿಂದ, ಗಂಗರು ರಾಷ್ಟ್ರಕೂಟರ ಸಾಮಂತರಾಗಿದ್ದ ಅಂಶ ವೇದ್ಯವಾದರೆ, ಕಾಡಕೊತ್ತನಹಳ್ಳಿಯ ಕ್ರಿ.ಶ.೯೮೭ರ ಶಾಸನವು ಗಂಗವಾಡಿಗೆ ಬಲ್ಲಪನು (ವಲ್ಲಭ) ಬಂದಿದ್ದ ಅಂಶವನ್ನು ನಿವೇದಿಸುತ್ತಿದ್ದು, ಇವನು ರಾಷ್ಟ್ರಕೂಟ ವಲ್ಲಭನಾಗಿರಬೇಕೆಂಬ ಅಭಿಪ್ರಾಯವಿದೆ. ಇಂದು ಕನ್ನಂಬಾಡಿ ಜಲಾಶಯದಲ್ಲಿ ಮುಳುಗಡೆಯಾಗಿರುವ ಕನ್ನಂಬಾಡಿ ಅಗ್ರಹಾರವು ಒಂದನೆಯ ಕೃಷ್ಣ (ಕ್ರಿ.ಶ.೭೫೭-೭೭೩) ನಿಂದ ಸ್ಥಾಪಿಸಲ್ಪಟ್ಟಿದ್ದು, ಅಲ್ಲಿಯ ಸುಂದರ ಕನ್ನೇಶ್ವರ ಗುಡಿಯು ಇವನ ನಿರ್ಮಾಣವೆಂದು ಹೇಳುತ್ತಾ, ಇದಕ್ಕೆ ಪೂರಕವಾಗಿ ಕಡಬ ತಾಮ್ರ ಶಾಸನವನ್ನು (ಕ್ರಿ.ಶ.೮೧೨) ವಿದ್ವಾಂಸರು ಉಲ್ಲೇಖಿಸುತ್ತಾದರೂ ಇದನ್ನು ಪುಷ್ಟೀಕರಿಸಲು ಪೂರಕ ದಾಖಲೆಗಳ ಅಗತ್ಯವಿದೆ. ರಾಷ್ಟ್ರಕೂಟರು ಹಾಗೂ ಗಂಗರ ನಡುವೆ ಜರುಗಿದ ಮುದಗುಂದೂರು ಯುದ್ಧ ನಿರ್ಣಾಯಕವಾಗಿದ್ದು, ಗಂಗರ ರಾಜಕೀಯ ಬದುಕಿನ ಮೇಲೆ ಮಹತ್ವದ ಪ್ರಭಾವವನ್ನು ಅದು ಬೀರಿದ್ದು, ಮಂಡ್ಯ ತಾಲೂಕಿನ ಮುದಗುಂಡೂರೇ ಅದೆಂದು ವಿದ್ವಾಂಸರು ತರ್ಕಿಸಿದ್ದಾರೆ.

**ಚೋಳರು**

ಚೋಳ ವಂಶದ ಆಳ್ವಿಕೆಯು ಮಂಡ್ಯ ಜಿಲ್ಲಾ ಪ್ರದೇಶದಲ್ಲಿ ಮೊದಲನೇ ರಾಜರಾಜನಿಂದ ಆರಂಭಗೊಂಡು ಮೊದಲನೇ ಕುಲೋತ್ತುಂಗನವರೆಗೂ ಸುಮಾರು ಒಂದು ಶತಮಾನಗಳ ಕಾಲ ಮುಂದುವರಿಯಿತು. ಮೈಸೂರು ಜಿಲ್ಲೆಯ ತಲಕಾಡು ಚೋಳರ ಎಲ್ಲಾ ಚಟುವಟಿಕೆಗಳಿಗೂ ಕೇಂದ್ರವಾಗಿತ್ತು. ಗಂಗರ ಆಳ್ವಿಕೆಯನ್ನು ಕೊನೆಗಾಣಿಸಿ, ಚೋಳರು ತಲಕಾಡನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ತಲಕಾಡನ್ನು ಅವರು ಒಂದನೇ ರಾಜರಾಜನ (ಕ್ರಿ.ಶ.೯೮೫–೧೦೧೬) ನೆನಪಿಗಾಗಿ ರಾಜರಾಜಪುರವೆಂದು ಪುನರ್‌ನಾಮಕರಣ ಮಾಡಿದ್ದರು. ಈ ಜಿಲ್ಲೆಯಲ್ಲಿ ಚೋಳರ ಒಟ್ಟು ಏಳು ಶಾಸನಗಳು ದೊರೆತಿವೆ. ಇವುಗಳ ಪೈಕಿ ಎರಡು ಒಂದನೇ ರಾಜರಾಜನಿಗೆ ಸೇರಿದವು. ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದ ಪ್ರವಾಸಿಮಂದಿರಕ್ಕೆ ಹೋಗುವ ದಾರಿಯಲ್ಲಿರುವ ವೀರಗಲ್ಲು ಶಾಸನವು ಕ್ರಿ.ಶ.೧೦೧೧ರಲ್ಲಿ ಈ ಪ್ರದೇಶವನ್ನು ರಾಜರಾಜದೇವನು (ಬಹುಶಃ ಚೋಳರಾಜ) ಆಳುತ್ತಿದ್ದಾಗ ಚಿಕ್ಕವಂಗಲ ಎಂಬ ಸ್ಥಳದಲ್ಲಿ (ಚಿನಕುರಳಿ) ಬಂಗಲಿ ಎರೆಯಮ್ಮನ ಮಗ ನಾಗಯ್ಯನೆಂಬ ವೀರನು ತುರುಗಳನ್ನು ಸಂರಕ್ಷಿಸುವ ಕಾರ್ಯದಲ್ಲಿ ಮರಣ ಹೊಂದಿದ ವಿಚಾರವನ್ನು ತಿಳಿಸುತ್ತದೆ. ಶ್ರೀರಂಗಪಟ್ಟಣದ ಬಲಮುರಿ ಕ್ಷೇತ್ರದಲ್ಲಿರುವ ಶಾಸನವು ಕನ್ನಡ ಭಾಷೆಯಲ್ಲಿದ್ದು ಚೋಳವಂಶದ ಮೊದಲನೇ ರಾಜರಾಜನು ಈ ಭಾಗವನ್ನು ಆಳುತ್ತಿದ್ದಾಗ ಪಂಚವ ಮಹಾರಾಯನೆಂಬ ಮಹಾದಂಡನಾಯಕನು ವೆಂಗಿ ಮಂಡಲ ಮತ್ತು ಗಂಗ ಮಂಡಲಗಳ ಆಡಳಿತ ಅಧಿಕಾರವನ್ನು ಹೊಂದಿದ್ದನೆಂದು ದಾಖಲಿಸಿದೆ. ಈತನು ತನ್ನ ಪರಾಕ್ರಮದಿಂದ ತುಳುವ, ಕೊಂಕಣ ಮತ್ತು ಬೆಳವೊಲ ಸಂಸ್ಥಾನಗಳನ್ನು ಗೆದ್ದುಕೊಂಡ ಕಾರಣ ಮುಮ್ಮಡಿ ಚೋಳನು (ರಾಜರಾಜನ) ಗಂಧವಾರಣೆ ಎಂಬ ಬಿರುದುಗಳಿಸಿ ಕೊಂಡನೆಂದು ಈ ಶಾಸನವು ತಿಳಿಸುತ್ತದೆ. ಪಂಚವ ಮಹಾರಾಯ ಮಹಾದಂಡನಾಯಕನು ಬಳ್ಳೇಗೊಳದ ಬಲಮುರಿ (ಬಲಂಬು ತೀರ್ಥ) ಕ್ಷೇತ್ರದ ದೇವರಿಗೆ (ಹೆಸರು ಇಲ್ಲ) ನಿರಂತರವಾಗಿ ದಿನಕ್ಕೆ ಎರಡು ಬಾರಿ ದೀಪವನ್ನು ಪ್ರಜ್ವಲಿಸಲು ಉತ್ತರಾಯಣ ಸಂಕ್ರಾಂತಿಯಂದು ದಾನ ನೀಡಿದನೆಂದು ಇದೇ ಶಾಸನದಲ್ಲಿ ದಾಖಲಿಸಲಾಗಿದೆ. ಮದ್ದೂರು ತಾಲೂಕಿನ ವೈದ್ಯನಾಥಪುರದ ವೈದ್ಯನಾಥೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಸೂರ್ಯನಾರಾಯಣನ ಗುಡಿಯ ಗೋಡೆಯಲ್ಲಿರುವ ಶಾಸನವು ಸುಮಾರು ೧೧ನೇ ಶತಮಾನದ ಲಕ್ಷಣವನ್ನು ಹೊಂದಿದ್ದು ಮೊದಲನೇ ರಾಜೇಂದ್ರಚೋಳನ ಕಾಲಕ್ಕೆ ಸೇರಿದೆ. ಇದರಲ್ಲಿ ರಾಜೇಂದ್ರಚೋಳನನ್ನು ವಿಜಯೋತ್ತುಂಗವರ್ಮನೆಂದು ಕರೆದು ವಿದ್ಯಾಧರ ತೋರಣಂ, ಒತ್ತೊಳಿಪುನ ಮಣಿ, ತವಮುಂಕನ ಮಣಿ ಮೊದಲಾದ ಬಿರುದು ಬಾವಲಿಗಳಿಂದ ಗೌರವಿಸಿರುವುದು ವ್ಯಕ್ತವಾಗುತ್ತದೆ. ಶ್ರೀರಂಗಪಟ್ಟಣ ತಾಲೂಕಿನ ಬೊಮ್ಮೂರು ಅಗ್ರಹಾರದ ಹೊಲದಲ್ಲಿರುವ ತಮಿಳು ಶಾಸನವು ಕ್ರಿ.ಶ.೧೧೦೨–೦೩ರಲ್ಲಿ ಚೋಳರಾಜ ಕುಲೋತ್ತುಂಗನು ತನ್ನ ೩೩ನೇ ಆಳ್ವಿಕೆಯ ವರ್ಷದಲ್ಲಿ ತನ್ನ ಅಧೀನದ ಮಾಂಡಲಿಕನಾಗಿದ್ದ ಪೋಮನ್ ಇರಾಮನ್ ವಾನವಾನ್ ಮಾದೇವಿ ಚತುರ್ವೇದಮಂಗಳದ ವ್ಯಾಪ್ತಿಯಲ್ಲಿದ್ದ ಕಲಸತ್ತಪಾಡಿ ಎಂಬ ಗ್ರಾಮದ ಕೆರೆಯ ಕಟ್ಟೆಯನ್ನು ಜೀರ್ಣೋದ್ಧಾರಗೊಳಿಸಿದ ಬಗ್ಗೆ ತಿಳಿಸುತ್ತದೆ. ಮಂಡ್ಯ ತಾಲೂಕಿನ ಚನ್ನಪ್ಪನ ದೊಡ್ಡಿಯಲ್ಲಿರುವ ಭಗ್ನ ಶಾಸನದಲ್ಲಿ ಉತ್ತಮ ಚೋಳ ಹಾಗೂ ರಾಜಕೊಪರ್ರೈಕೇಸರಿ ಎಂಬ ಪದಗಳನ್ನು ಮಾತ್ರ ಗುರುತಿಸಲಾಗಿದೆ. ಈ ಶಾಸನವು ಕ್ರಿ.ಶ.೧೨ನೇ ಶತಮಾನದ ಲಕ್ಷಣವನ್ನು ವ್ಯಕ್ತಪಡಿಸುತ್ತದೆ. ಗಂಗರ ನಂತರ ದೀರ್ಘಕಾಲ ಆಳಿದ ಚೋಳರ ಹಳೇಬೂದನೂರು ಶಾಸನದಲ್ಲಿ ರಕ್ಕಸಗಂಗನು ೧೦೦೪ರಲ್ಲಿ ರಾಜೇಂದ್ರನ ಮಾಂಡಲಿಕನಾಗಿದ್ದನೆಂದು ಉಲ್ಲೇಖಿಸಲಾಗಿದೆ. ಆಗ ಮಂಡ್ಯವು ಚೋಳರ ಮುಡಿಗೊಂಡ ಚೋಳಮಂಡಲಕ್ಕೆ ಸೇರಿದ್ದು ರಾಜೇಂದ್ರಚೋಳ ಒಳನಾಡಿನಲ್ಲಿ ಇತ್ತು. ಮದ್ದೂರಿನ ದೇಶೇಶ್ವರ ದೇವಾಲಯಕ್ಕೆ ರಾಜೇಂದ್ರಚೋಳನು ದಾನವನ್ನು ನೀಡಿದಂತೆ ತೋರುತ್ತದೆ. ಶ್ರೀರಂಗಪಟ್ಟಣದ ಬೊಮ್ಮೂರು ಅಗ್ರಹಾರವನ್ನು ಬಹುಶ: ಚೋಳರೇ ಸ್ಥಾಪಿಸಿದರೆಂದು ತಿಳಿದುಬರುತ್ತದೆ. ಇದನ್ನು ವಾನವಾನ್ ಮಾದೇವಿ ಚತುರ್ವೇದಿಮಂಗಲಂ ಎಂದು ಕರೆದಿದ್ದು ಇದು ಚೋಳ ರಾಣಿಯೊಬ್ಬಳ ಸ್ಮರಣೆಗಾಗಿ ಸ್ಥಾಪಿಸಿದ

ಸ್ಥಳವಾಗಿರಬಹುದು. ಪಾಂಡವಪುರ ತಾಲೂಕಿನ ಕನ್ನಂಬಾಡಿಯ ಕಣ್ಣೇಶ್ವರ ದೇವಾಲಯದಲ್ಲಿರುವ ಚೋಳ ಕುಲೋತ್ತುಂಗನ ಕ್ರಿ.ಶ.೧೧೧೮–೧೯ರ ಕನ್ನಡ ಶಾಸನವು (ಆಳ್ವಿಕೆಯ ೪೫ನೇ ವರ್ಷ) ಮಾದಿಯಣ್ಣ ಮತ್ತು ಲಕಣ್ಣ ಎಂಬ ಅಧಿಕಾರಿಗಳು ಎರಡು ದೇವಾಲಯಗಳನ್ನು ನಿರ್ಮಿಸಿದ ಬಗ್ಗೆ ವಿವರಣೆ ನೀಡುತ್ತದೆ. ಆ ದೇವಾಲಯಗಳಿಗೆಂದು ಕೋವರ ಬೊಮ್ಮಗಾವುಂಡ ಹಾಗೂ ಅವನ ಮಗ ಮಾಚಗಾವುಂಡರು ಕೊಂಗಜೀಯರ್ ಪಂಡಿತರಿಗೆ ಬಿಟ್ಟ ದಾನಗಳನ್ನು ದಾಖಲಿಸಿದೆ. ಚೋಳರ ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿರುವುದು ಕಡಿಮೆಯಾದರೂ ಅವರ ಆಡಳಿತವು ಈ ಪ್ರದೇಶದಲ್ಲಿ ಪ್ರಬಲವಾಗಿ ಸ್ಥಾಪಿತವಾಗಿತ್ತೆಂಬುದು ನಂತರದ ಕಾಲದ ತಮಿಳು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಅವರು ರೂಪಿಸಿ ಸ್ಥಾಪಿಸಿದ ಆಡಳಿತ ವ್ಯವಸ್ಥೆ ಜಿಲ್ಲೆಯಲ್ಲಿ ಎಷ್ಟು ಪ್ರಬಲವಾಗಿತ್ತೆಂದರೆ ಮುಂದೆ ಹೊಯ್ಸಳ ಹಾಗೂ ವಿಜಯನಗರದ ಅರಸರ ಕಾಲದವರೆಗೂ ತಮಿಳು ಭಾಷೆಯೇ ಈ ಭಾಗದಲ್ಲಿ ಆಡಳಿತ ಭಾಷೆಯಾಗಿ ಮುಂದುವರಿದ ಅಂಶ ಈ ಭಾಗದಲ್ಲಿ ದೊರೆತಿರುವ ಆಯಾ ಕಾಲದ ಶಾಸನಗಳಿಂದ ದೃಢಪಟ್ಟಿದೆ. ಸುಮಾರು ೧೧ನೇ ಶತಮಾನಕ್ಕೆ ಸೇರಿದ ಹಳೇಬೂದನೂರು ವೀರಗಲ್ಲು ಶಾಸನವು, ಕುಂದೂರು ನಾಡನ್ನು ಆಳುತ್ತಿದ್ದ ಕನ್ನಯ್ಯನ ಮಗನಾದ ರಾಜೇಂದ್ರ ಚೋಳನು ತುರುಗೋಳದಲ್ಲಿ ಕಾದಾಡುತ್ತಾ ಮಡಿದ ಅಂಶವನ್ನು ದಾಖಲಿಸಿದ್ದು, ಜಿಲ್ಲೆಯ ಮೇಲೆ ಚೋಳರ ಆಡಳಿತ ಎಷ್ಟು ಪ್ರಭಾವ ಬೀರಿತ್ತೆಂದು ಈ ಶಾಸನದಿಂದ ವ್ಯಕ್ತವಾಗುತ್ತದೆ.

**ಹೊಯ್ಸಳರು**

ಗಂಗವಾಡಿಯಲ್ಲಿ ತಲಕಾಡಿನ ಗಂಗರು ತಮ್ಮ ಅಧಿಕಾರವನ್ನು ಕಳೆದುಕೊಂಡ ಮೇಲೆ ಹೊಯ್ಸಳರು ತಮ್ಮ ಸಾಮ್ರಾಜ್ಯದ ಪ್ರಾಬಲ್ಯತೆಯನ್ನು ವಿಸ್ತರಿಸಿಕೊಂಡು, ಗಂಗವಾಡಿಯ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡಿದ್ದರು. ಚಂಗಾಳ್ವರು, ಕೊಂಗಾಳ್ವರು ಚೋಳರ ಪರಮಾಧಿಕಾರವನ್ನು ಒಪ್ಪಿಕೊಂಡಿದ್ದರು. ಇದೇ ಸಮಯದಲ್ಲಿ ನೊಳಂಬರು ಸಾಮಂತರಾಗಿ ಪ್ರಬಲರಾದರು. ಚೋಳರು ಮೇಲಿಂದ ಮೇಲೆ ಚಾಳುಕ್ಯರೊಂದಿಗೆ ಕಾದಾಡಿದರು. ಇಂಥಹ ರಾಜಕೀಯ ಅರಾಜಕತೆಯ ಪರಿಸ್ಥಿತಿಯಲ್ಲಿ ಹೊಯ್ಸಳ ವಂಶದ ಆಳ್ವಿಕೆಯು ಪ್ರಾರಂಭವಾಯಿತು. ಚಿಕ್ಕಮಗಳೂರಿನ ಅಂಗಡಿ ಗ್ರಾಮ ಎಂದು ಗುರುತಿಸಲಾದ ಶಶಕಪುರ (ಸೊಸೆವೂರು)ದ ಸಳ ಎಂಬಾತನು ಈ ಸಾಮ್ರಾಜ್ಯದ ಸ್ಥಾಪಕನೆಂಬ ಪ್ರತೀತಿಯಿದೆ. ಈತನು ತನ್ನ ಜೈನ ಗುರುವಿನ ಆದೇಶದ ಮೇಲೆ ಹುಲಿಯೊಂದನ್ನು ಕೊಂದ ಕಾರಣ ಹೊಯ್‌ಸಳ ಅಥವಾ ಪೊಯ್‌ಸಳನೆಂದು ನಂತರ ಜನಪ್ರಿಯಗೊಂಡಿದ್ದು ವ್ಯಕ್ತವಾಗುತ್ತದೆ. ಶಿವಮೊಗ್ಗ ಜಿಲ್ಲೆ ಸೊರಬದ ಶಾಸನದ ಪ್ರಕಾರ ಈ ಜೈನ ಯತಿ ಸುದತ್ತನೆಂದೂ ಹಾಗೂ ನಗರ ಶಾಸನದ ಪ್ರಕಾರ ವರ್ಧಮಾನ ಮುನೀಂದ್ರನೆಂದು ತಿಳಿದುಬರುತ್ತದೆ. ಆದರೆ ಈ ಸಳನ ಕಾಲವಾಗಲೀ ಅಥವಾ ಮುನಿಯ ಕಾಲವಾಗಲೀ ಎಲ್ಲೂ ಪ್ರಸ್ತಾಪವಾಗಿಲ್ಲ. ನಂತರ ಸಳನ ಪೌರಾಣಿಕ ಕಥೆಯನ್ನು ಆಧಾರ ಮಾಡಿಕೊಂಡು ಹೊಯ್ಸಳ ವಂಶದವರು ಹುಲಿಯನ್ನು ಕೊಲ್ಲುತ್ತಿರುವ ಸಳನನ್ನು ತಮ್ಮ ರಾಜ್ಯದ ಲಾಂಛನವನ್ನಾಗಿ ಘೋಷಿಸಿಕೊಂಡರು. ಈ ರಾಜ ಲಾಂಛನವು ಹೊಯ್ಸಳರು ನಂತರ ನಿರ್ಮಿಸಿದ ದೇವಾಲಯ ಕಟ್ಟಡಗಳ ಮೇಲೆ ಮೂಡಿಬಂದಿರುವುದು ಪ್ರಮುಖವಾಗಿ ಕಂಡುಬರುತ್ತದೆ. ಹೊಯ್ಸಳರು ಮೂಲತಃ ಮಲೆನಾಡು ಪ್ರದೇಶಕ್ಕೆ ಸೇರಿದ ಕುದುರೆಮುಖ ಪರ್ವತ ಶ್ರೇಣಿಯ ಮೂಡಿಗೆರೆ ತಾಲೂಕಿನ ಸೊಸೆವೂರು (ಇಂದಿನ ಅಂಗಡಿ) ಗ್ರಾಮದವರೆಂದು ದಾಖಲೆಗಳಿಂದ ದೃಢಪಡುತ್ತದೆ. ನಂತರ ತಮ್ಮ ರಾಜಧಾನಿಯನ್ನು ಬೇಲೂರಿಗೂ ಹಾಗೂ ಸ್ವಲ್ಪ ಸಮಯದ ತರುವಾಯ ದೋರಸಮುದ್ರ (ಹಳೇಬೀಡು)ಕ್ಕೂ ಸ್ಥಳಾಂತರಿಸಿಕೊಂಡರು. ಕೃಷ್ಣರಾಜಪೇಟೆ ತಾಲೂಕಿನ ಅಗ್ರಹಾರ ಬಾಚಹಳ್ಳಿಯ ಶಾಸನದಲ್ಲಿ (ಕ್ರಿ.ಶ.೧೨೯೧) ಮನಿಯೊಬ್ಬನು ಹೋಯ್ ಸಳ ಎಂದು ಕೂಗಿದ ತಕ್ಷಣ ಹೆಬ್ಬುಲಿಯನ್ನು ಪೊಯ್ಸಳ ಅಥವಾ ಸಳನು ಕೊಂದ ಕಾರಣ ಈತನ ವಂಶಕ್ಕೆ ಪೊಯ್ಸಳ–ಹೊಯ್‌ಸಳ ಅಥವಾ ಹೊಯ್ಸಳ ಎಂಬ ಹೆಸರು ಬಂದಿತೆಂದು ಸ್ಪಷ್ಟವಾಗಿ ಈ ಶಾಸನವು ತಿಳಿಸುವುದಲ್ಲದೇ ಈ ವಂಶದ ಪ್ರಥಮ ದೊರೆ ವಿನಯಾದಿತ್ಯ ಎಂದು

ಖಚಿತಪಡಿಸುತ್ತದೆ. ಈ ಶಾಸನದಲ್ಲಿ ಹೊಯ್ಸಳ ವಂಶಾವಳಿಯನ್ನು ವಿನಯಾದಿತ್ಯನಿಂದ ಆರಂಭಿಸಿ ಇಮ್ಮಡಿ ನರಸಿಂಹನವರೆಗೆ ನೀಡಲಾಗಿದೆ. ನರಸಿಂಹನು ಬಿಜ್ಜಳದೇವಿ ಎಂಬ ರಾಣಿಗೆ ಜನಿಸಿದವನಾಗಿದ್ದು ಅವನ ತಂದೆ ಸೋಯಿದೇವನೆಂದು ವಿವರಿಸುತ್ತದೆ. ಈ ವಂಶದ ಅರಸರು ಸೇವುಣರಂತೆ ತಾವೂ ಯಾದವ ನಾರಾಯಣರೆಂದೂ ದ್ವಾರಾವತೀಪುರವರಾಧೀಶ್ವರೆಂದೂ ಕರೆದುಕೊಂಡರು. ಆದರೆ, ಗೋವಿಂದನಹಳ್ಳಿಯ ೧೨೪೦ರ ಶಾಸನವು ಸಳನು 'ವಿತಾಯುಧವ್ರತ'ವನ್ನು ಕೈಗೊಂಡು, ನಿರಾಯುಧನಾಗಿ ದೇವಿಯನ್ನು ಆರಾಧಿಸುತ್ತಿದ್ದಾಗ, ನುಗ್ಗಿ ಬಂದ ಹುಲಿಯನ್ನು ಕಂಡ ಮುನಿಯು 'ಹೊಯ್‌ಸಳ' ಎಂದು ಕೂಗಿ ಒಗೆದ ಸಲಾಕೆಯಿಂದಲೇ ಹುಲಿಯನ್ನು ಸಳನು ಕೊಂದನೆಂದು ವಿವರಿಸುತ್ತದೆ. ಇವರು ಕ್ರಿ.ಶ.೧೧ನೇ ಶತಮಾನದಿಂದ ಪ್ರಾಬಲ್ಯಕ್ಕೆ ಬಂದರೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಚೋಳರ ದಂಡನಾಯಕನಾಗಿದ್ದ ಅಪ್ರಮೇಯನ ವಿರುದ್ಧ ತಲಕಾಡಿನ ಸಮೀಪದ ಕಲಿಯೂರಿನಲ್ಲಿ ಹೊಯ್ಸಳರ ನಾಯಕನೊಬ್ಬ ಕದನ ಹೂಡಿದ್ದು ಆ ನಾಯಕನನ್ನು ಈ ವಂಶಕ್ಕೆ ಸೇರಿದ ಪ್ರಾರಂಭದ ವ್ಯಕ್ತಿಯಾದ ನೃಪಕಾಮನೆಂದು ಇತ್ತೀಚೆಗೆ ಗುರುತಿಸಲಾಗಿದೆ (ಕ್ರಿ.ಶ.೧೦೦೬). ಈ ವೇಳೆಗಾಗಲೇ ಗಂಗವಾಡಿಯಲ್ಲಿ ಅಳುತ್ತಿದ್ದ ಗಂಗರು ಕ್ರಮೇಣ ಕಣ್ಮರೆಯಾಗಿದ್ದರು. ನೃಪಕಾಮನು ಕ್ರಿ.ಶ.೧೦೦೬ರಿಂದ ೧೦೪೫ರವರೆಗೆ ದೀರ್ಘಕಾಲ ಆಡಳಿತವನ್ನು ಮಾಡಿದನು. ಈತನ ಮಗ ಹಾಗೂ ಉತ್ತರಾಧಿಕಾರಿಯಾದ ವಿನಯಾದಿತ್ಯನು ಮೊದಲ ಬಾರಿಗೆ ೧೦೪೭ರ ಶಾಸನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವನು. ಗಂಗವಾಡಿ ಪ್ರಾಂತ್ಯವು ಬಹುತೇಕ ಇವನ ಹತೋಟಿಗೊಳಪಟ್ಟಿತು. ವಿನಯಾದಿತ್ಯನು ವೇಲಾಪುರ (ಬೇಲೂರು) ವನ್ನು ತನ್ನ ರಾಜಧಾನಿ ಪಟ್ಟಣವಾಗಿ ಆರಿಸಿಕೊಂಡು ತನ್ನ ಸಾಮ್ರಾಜ್ಯವನ್ನು ಬಲಪಡಿಸಿಕೊಂಡನು. ಈತನು ಕ್ರಿ.ಶ.೧೦೪೫–೯೮ರವರೆಗೆ ಐದು ದಶಕಗಳ ಕಾಲ ಆಳ್ವಿಕೆ ಮಾಡಿದನು. ನಂತರ ಎರಡು ವರ್ಷ ಕಳೆಯುವುದರಲ್ಲಿಯೇ ಎರೆಯಂಗ (ಕ್ರಿ.ಶ. ೧೦೯೮–೧೧೦೦) ನೂ ಸಹ ಅಕಾಲ ಮರಣ ಹೊಂದಿದನು. ಆತನಿಗೆ ಏಚಲದೇವಿ ಮತ್ತು ಮಹಾದೇವಿಯರೆಂಬ ಇಬ್ಬರು ಅರಸಿಯರೂ, ಒಂದನೇ ಬಲ್ಲಾಳ, ವಿಷ್ಣುವರ್ಧನ ಮತ್ತು ಉದಯಾದಿತ್ಯ ಎಂಬ ಮೂರು ಜನ ಗಂಡು ಮಕ್ಕಳಿದ್ದರು. . ಒಂದನೇ ಬಲ್ಲಾಳನು ಎರೆಯಂಗನ ತರುವಾಯ ಅಧಿಕಾರಕ್ಕೆ ಬಂದನು. ಈತನು ತನ್ನ ಸಹೋದರರಾದ ವಿಷ್ಣುವರ್ಧನ ಮತ್ತು ಉದಯಾದಿತ್ಯರ ಸಮರ್ಥ ನೆರವಿನಿಂದ ಪರಾಮಾರ ವಂಶದ ಜಗದ್ದೇವನನ್ನು ಪರಾಭವಗೊಳಿಸಿ ಹಿಮ್ಮೆಟ್ಟಿಸಿದನು (ಕ್ರಿ.ಶ.೧೧೦೦). ಕೃಷ್ಣರಾಜಪೇಟೆ ತಾಲೂಕಿನ ಮಾರುಗೋನಹಳ್ಳಿಯ ವೀರಗಲ್ಲು ಶಾಸನವು ಕ್ರಿ.ಶ.೧೧೦೩ರಲ್ಲಿ ಹೊಯ್ಸಳ ರಾಜ ಒಂದನೇ ಬಲ್ಲಾಳನು ಗಂಗವಾಡಿ–೯೬,೦೦೦ ಆಡಳಿತ ವಿಭಾಗದ ಮೇಲೆ ತನ್ನ ಹತೋಟಿಯನ್ನು ಸ್ಥಾಪಿಸಿಕೊಂಡ ಬಗ್ಗೆ ವಿವರ ನೀಡುತ್ತದೆ.

ಬಲ್ಲಾಳನ ನಂತರ ಕ್ರಿ.ಶ.೧೧೦೮ರಲ್ಲಿ ವಿಷ್ಣುವರ್ಧನನು ಸಿಂಹಾಸನವನ್ನಲಂಕರಿಸಿ ೧೧೪೮ರವರೆಗೂ ಪ್ರಬಲನಾಗಿ ಆಳ್ವಿಕೆ ಮಾಡಿದನು. ಹೊಯ್ಸಳ ರಾಜರುಗಳ ಪೈಕಿ ವಿಷ್ಣುವರ್ಧನನನ್ನು ರಾಜಕೀಯವಾಗಿ ಹಾಗೂ ಆಡಳಿತಾತ್ಮಕವಾಗಿ ಅತ್ಯಂತ ಜನಪ್ರಿಯ ರಾಜನೆಂದು ಪರಿಗಣಿಸಲಾಗಿದೆ. ಗಂಗವಾಡಿ ಪ್ರದೇಶದ ಮೇಲೆ ಹಿಡಿತ ಹೊಂದಿದ್ದ ಚೋಳರನ್ನು ಕ್ರಿ.ಶ.೧೧೧೪ರಲ್ಲಿ ಪರಾಭವಗೊಳಿಸಿ ತಲಕಾಡಿನಿಂದ ಅವರನ್ನು ತೆರವು ಮಾಡಿಸಿ 'ತಲಕಾಡುಗೊಂಡ' ಎಂಬ ಬಿರುದನ್ನು ಧರಿಸುವ ಮೂಲಕ ಹೊಯ್ಸಳರ ಪ್ರಾಬಲ್ಯವನ್ನು ಸ್ಥಾಪಿಸುವಲ್ಲಿ ವಿಷ್ಣುವರ್ಧನನು ನಾಂದಿ ಹಾಡಿದನು. ಚೋಳರು ಪರಾಭವಗೊಂಡರೂ ತಲಕಾಡಿನಿಂದ ಕಾಲ್ತೆಗೆಯಲು ಒಪ್ಪದ ಚೋಳ ಸಾಮಂತ ಆದಿಯಮ ಹಾಗೂ ದಂಡನಾಯಕ ನರಸಿಂಹವರ್ಮರನ್ನು ಸಂಪೂರ್ಣವಾಗಿ ಸೋಲಿಸಿ ಕಂಚಿಯವರೆಗೂ ಅವರನ್ನು ಹಿಮ್ಮೆಟ್ಟಿಸಿಕೊಂಡು ಹೋಗುವ ಮೂಲಕ ಚೋಳರ ಸೊಕ್ಕನ್ನು ಮುರಿದ ಹೊಯ್ಸಳ ದಂಡನಾಯಕ ಗಂಗರಾಜನ ಈ ಮಹತ್ತರ ಸಾಧನೆಯನ್ನು ಅರೆತಿಪ್ಪೂರಿನ ಕ್ರಿ.ಶ.೧೧೧೭ರ ಶಾಸನವು ವಿವರವಾಗಿ ದಾಖಲಿಸಿದೆ. ಚಾಳುಕ್ಯರ ಪರಮಾಧಿಕಾರವನ್ನು ಕಿತ್ತೊಗೆದು ಸ್ವತಂತ್ರ ಸಾಮ್ರಾಜ್ಯವನ್ನು ಸ್ಥಾಪಿಸುವ ಹಂಬಲವನ್ನು ಹೊಂದಿದ್ದ ವಿಷ್ಣುವರ್ಧನನು ಚಾಳುಕ್ಯ ವಿಕ್ರಮಾದಿತ್ಯನ ವಿರುದ್ಧ ಆರಂಭದ ಹೋರಾಟಗಳಲ್ಲಿ

ಯಶಸ್ಸು ಕಂಡಿದ್ದರೂ ಅಂತಿಮವಾಗಿ ಚಾಳುಕ್ಯ ಚಕ್ರೇಶ್ವರನಿಗೆ ತಲೆಬಾಗಬೇಕಾಯಿತೆಂದು ಈವರೆಗೆ ನಂಬಲಾಗಿತ್ತು. ವಿಷ್ಣುವರ್ಧನನ ಅಂತ್ಯದ ಬಗ್ಗೆ ವಿದ್ವಾಂಸರಲ್ಲಿ ನಿರ್ದಿಷ್ಟವಾದ ಅಭಿಪ್ರಾಯವಿಲ್ಲದಿರುವುದು ಗಮನಿಸಬೇಕಾದ ಅಂಶವಾಗಿದೆ. ಒಂದು ಅಭಿಪ್ರಾಯದ ಪ್ರಕಾರ ಆತನು ಕ್ರಿ.ಶ.೧೧೪೧ರಲ್ಲಿ ಬಂಕಾಪುರದಲ್ಲಿ ನಿಧನನಾದನೆಂದು ತಿಳಿದುಬಂದರೆ ಆತನು ಕ್ರಿ.ಶ. ೧೧೫೨ರವರೆಗೂ ರಾಜ್ಯಭಾರ ಮಾಡಿರಬಹುದೆಂಬ ಮತ್ತೊಂದು ಅಭಿಪ್ರಾಯವಿದೆ. ಆದರೆ, ರಾಜ್ಯದ ವಿವಿಧೆಡೆ ವಿಷ್ಣುವರ್ಧನನ ಶಾಸನಗಳು ಸುಮಾರು ಕ್ರಿ.ಶ.೧೧೪೮ರವರೆಗೂ ದೊರೆತಿರುವುದು ಗಮನಾರ್ಹವಾಗಿದೆ. ಆದರೆ ಮಾರೇಹಳ್ಳಿಯ ಕ್ರಿ.ಶ.೧೧೪೮ರ ಶಾಸನವನ್ನು ಆಧರಿಸಿ ವಿಷ್ಣುವರ್ಧನನು ೧೧೪೮ರವರೆಗೂ ಬದುಕಿದ್ದನೆಂದು ಹೇಳಬಹುದಾಗಿದೆ. ಆ ವೇಳೆಗಾಗಲೇ ಆತ ಚಕ್ರವರ್ತಿಯಾಗಿದ್ದನೆಂದು ಇದೇ ಶಾಸನದಲ್ಲಿ ದಾಖಲೆಗೊಂಡಿದ್ದು "ವಿಷ್ಣುವರ್ಧನನು ಕ್ರಿ.ಶ. ೧೧೪೮ರ ನಂತರ ನಿಧನನಾಗಿರಬಹುದೆಂದು ಇದೇ ಶಾಸನದ ಆಧಾರದಿಂದ" ಡಾ.ಎಂ.ಜಿ.ಮಂಜುನಾಥ ಅಭಿಪ್ರಾಯಪಡುತ್ತಾರೆ. ಈತನು ನಾಲ್ಕು ದಶಕಗಳಿಗೂ ಹೆಚ್ಚು ಕಾಲ ರಾಜ್ಯವನ್ನಾಳಿ ಸಾಂಸ್ಕೃತಿಕ, ಧಾರ್ಮಿಕ, ವಾಸ್ತುಶಿಲ್ಪ ಮತ್ತು ಶಿಲ್ಪಕಲಾ ಕ್ಷೇತ್ರಗಳಲ್ಲಿ ಗಣನೀಯವಾದ ಸಾಧನೆ ಮಾಡಿದನು. ವಿಷ್ಣುವರ್ಧನನ ಹಿರಿಯ ಮಗನಾದ ಬಲ್ಲಾಳನು ಸು.೧೧೩೩ಕ್ಕೂ ಮೊದಲೇ ಮರಣ ಹೊಂದಿದ್ದನು. ಅದೇ ವರ್ಷ ಇನ್ನೊಬ್ಬ ಮಗನಾದ ನರಸಿಂಹನು ಜನಿಸಿದನು. ಆತನು ಬಾಲ್ಯಾವಸ್ಥೆಯಲ್ಲಿದ್ದಾಗಲೇ ಯುವರಾಜ ಪಟ್ಟ ಅವನಿಗೆ ಲಭಿಸಿತು.

ವಿಷ್ಣುವರ್ಧನನು ಬೆಳಗೊಳ ವಿಭಾಗದ ಆಡಳಿತವನ್ನು ಮಾಡುತ್ತಿದ್ದಾಗ ಬೆಳಗೊಳಕ್ಕೆ ವಿಷ್ಣುವರ್ಧನ ಚತುರ್ವೇದಿಮಂಗಳಮ್ ಎಂದು ಕರೆದಿರುವುದು ಉಲ್ಲೇಖಾರ್ಹ. ಕೃಷ್ಣರಾಜಪೇಟೆ ತಾಲೂಕಿನ ಮಾಳಗೂರು ಕೆರೆಯ ಹಿಂದಿರುವ ಈಶ್ವರ ದೇವಾಲಯದಲ್ಲಿರುವ ಶಾಸನದಲ್ಲಿ ಕ್ರಿ.ಶ.೧೧೧೭ರಲ್ಲಿ ಹೊಯ್ಸಳ ವಿಷ್ಣುವರ್ಧನನು ಆಳ್ವಿಕೆ ಮಾಡುತ್ತಿದ್ದಾಗ ಕಬ್ಬಾಹು–೧೦೦೦ದ ವ್ಯಾಪ್ತಿಯಲ್ಲಿದ್ದ ಮಾಳಿಗೆ ಎಂಬ ಆಡಳಿತ ವಿಭಾಗವನ್ನು ಪಟ್ಟಮಹಾದೇವಿ ಶಾಂತಲೆಯು ತನ್ನ ಮೈದುನ ಬಲ್ಲೆಯ ನಾಯಕನ ಅಧೀನದಲ್ಲಿ ಆಳ್ವಿಕೆ ಮಾಡುತ್ತಿದ್ದುದನ್ನು ಉಲ್ಲೇಖಿಸಿದೆ ಹಾಗೂ ಬಲ್ಲೆಯ ನಾಯಕ ಮತ್ತು ಈ ಸ್ಥಳದ ಗಾವುಂಡರುಗಳು ಊರಿನ ಐವತ್ತು ಒಕ್ಕಲುಗಳ ಸಮ್ಮುಖದಲ್ಲಿ ಮಾಳಿಗೆಯ ಕರ್ಮ್ಮಟೇಶ್ವರ ದೇವರಿಗೆ ನೀಡಿದ ಭೂ ದಾನದ ಬಗ್ಗೆ ದಾಖಲಿಸಿದೆ. ಕೃಷ್ಣರಾಜಪೇಟೆ ತಾಲೂಕಿನ ಹೊಸಹೊಳಲು ಗ್ರಾಮದ ಪಾರ್ಶ್ವನಾಥ ಬಸದಿಯ ದಕ್ಷಿಣಕ್ಕಿರುವ ಶಾಸನವು ಕ್ರಿ.ಶ.೧೧೧೮ರಲ್ಲಿ ಗಂಗವಾಡಿ–೯೬೦೦೦ ಆಡಳಿತ ವಿಭಾಗದ ಮೇಲೆ ಹೊಯ್ಸಳರ ಆಳ್ವಿಕೆಯನ್ನು ದಾಖಲಿಸಿದೆ ಮತ್ತು ಕತ್ತರಿಘಟ್ಟ ಎಂಬ ಸ್ಥಳದಲ್ಲಿ ನೊಳಂಬಿಸೆಟ್ಟಿ ಅಥವಾ ದೋರಸಮುದ್ರದ ಪಟ್ಟಣಸ್ವಾಮಿ ನೊಳಂಬ ಸೆಟ್ಟಿಯ ಪತ್ನಿ ದೇಮಿಕಬ್ಬೆಯು ತ್ರಿಕೂಟ ಜಿನಾಲಯವನ್ನು ನಿರ್ಮಿಸಿದ ಬಗ್ಗೆ ತಿಳಿಸುತ್ತದೆ. ವಿಷ್ಣುವರ್ಧನನ ತರುವಾಯ ಒಂದನೇ ನರಸಿಂಹನು ಸುಮಾರು ಕ್ರಿ.ಶ.೧೧೪೯ರಲ್ಲಿ ಅಧಿಕಾರಕ್ಕೆ ಬಂದಾಗ, ಕಳಚೂರಿ ವಂಶದ ಬಿಜ್ಜಳನು ಹೊಯ್ಸಳರನ್ನು ಬನವಾಸಿಯಿಂದ ಹೊರದೂಡಲು ಬಲಪ್ರಯೋಗ ಮಾಡಿದನು. ಹೀಗೆ ಶ್ರಮದಿಂದ ಸಾಧಿಸಿದ ಪ್ರದೇಶಗಳು ಹಂತಹಂತವಾಗಿ ಕೈ ಜಾರುತ್ತಿದ್ದರೂ ರಾಜನು ಸ್ವಲ್ಪವೂ ವಿಚಲಿತನಾಗಲಿಲ್ಲ. ಈತನ ತರುವಾಯ ಅಧಿಕಾರಕ್ಕೆ ಬಂದ ಇಮ್ಮಡಿ ಬಲ್ಲಾಳನು ಮೂರು ದಶಕಗಳಿಗೂ ಹೆಚ್ಚು ಕಾಲ (ಕ್ರಿ.ಶ. ೧೧೭೩–೧೨೨೦) ರಾಜ್ಯಾಡಳಿತ ಮಾಡಿದನು. ಇವನ ಆಳ್ವಿಕೆಯ ಕಾಲವನ್ನು ಹೊಯ್ಸಳರ ಇತಿಹಾಸದಲ್ಲಿ ಅತ್ಯಂತ ವೈಭವಯುತವಾದ ಅಧ್ಯಾಯವೆಂದು ಪರಿಗಣಿಸಲಾಗಿದೆ. ಸಾಮಂತರಾಗಿದ್ದ ಚಂಗಾಳ್ವ ಮತ್ತು ಕೊಂಗಾಳ್ವರ ಪ್ರತಿಭಟನೆಯನ್ನು ಅಡಗಿಸಿದ ಬಳಿಕ ಉಚ್ಚಂಗಿಯ ಕೋಟೆಯ ಮೇಲೆ ದಾಳಿಮಾಡಿ ಪಾಂಡ್ಯರನ್ನು ಪರಾಭವಗೊಳಿಸಿ ಅದನ್ನು ತನ್ನ ಹತೋಟಿಗೆ ತೆಗೆದುಕೊಂಡು (ಕ್ರಿ.ಶ. ೧೧೭೭) ತುಂಗಭದ್ರೆಯ ಉತ್ತರಭಾಗದ ಬನವಾಸಿಗೆ ಹೋದನು. ಆದರೆ ಇಲ್ಲಿ ಕಳಚೂರಿ ಸಂಕಮನ ಸೈನ್ಯವನ್ನು ಎದುರಿಸಬೇಕಾಗಿ ಬಂದಾಗ ಹಿಂದಕ್ಕೆ ಬಂದನು. ಇಮ್ಮಡಿ ಬಲ್ಲಾಳನ ತರುವಾಯ ಎರಡನೇ ನರಸಿಂಹನು ಅಧಿಕಾರಕ್ಕೆ ಬಂದು (ಕ್ರಿ.ಶ. ೧೨೨೦–೧೨೩೫) ಚೋಳರನ್ನು ಹಿಮ್ಮೆಟ್ಟಿಸಿ ಸಾಮ್ರಾಜ್ಯವನ್ನು ಭದ್ರಪಡಿಸಿದನು. ಆದರೆ ಈ ವೇಳೆಗಾಗಲೇ ಬನವಾಸಿಯು ಸೇವುಣರ ಪ್ರಬಲ ನೆಲೆಯಾಗಿ ಉಳಿಯುವಂತಾಯಿತು. ಈತನ ತರುವಾಯ ಸೋಮೇಶ್ವರನು

(೧೨೩೫–೧೨೫೩) ಹೊಯ್ಸಳ ಸಿಂಹಾಸನವನ್ನೇರಿ ತುಂಗಭದ್ರೆಯ ದಕ್ಷಿಣಕ್ಕೆ ಮಾತ್ರ ತನ್ನ ಆಸಕ್ತಿಯನ್ನು ಸೀಮಿತಗೊಳಿಸಿಕೊಂಡನು. ಸೋಮೇಶ್ವರನು ಕಣ್ಣಾನೂರಿನಲ್ಲಿ ಮೊದಲು ಹೊಯ್ಸಳ ಸಾಮ್ರಾಜ್ಯದ ರಾಜ್ಯಪಾಲನಾಗಿದ್ದ ಕಾರಣ ದೋರಸಮುದ್ರಕ್ಕಿಂತಲೂ ಅವನಿಗೆ ಕಣ್ಣಾನೂರಿನಲ್ಲಿ ಹೆಚ್ಚು ಆಸಕ್ತಿಯಿದ್ದಂತೆ ತೋರುತ್ತದೆ. ಸೋಮೇಶ್ವರನ ಆಳ್ವಿಕೆಯ ಉತ್ತರಾರ್ಧದಲ್ಲಿ ಈತನ ಇಬ್ಬರು ಮಕ್ಕಳಾದ ಮುಮ್ಮಡಿ ನರಸಿಂಹ ಮತ್ತು ರಾಮನಾಥರ ನಡುವೆ ಅಂತಃಕಲಹಗಳು ಉದ್ಭವಿಸಿದ ಪರಿಣಾಮವಾಗಿ ರಾಜ್ಯವನ್ನು ಇಬ್ಭಾಗಗೊಳಿಸುವುದರ ಮೂಲಕ ಈ ಸಮಸ್ಯೆಯನ್ನು ನಿವಾರಿಸಬೇಕಾಯಿತು. ದೋರಸಮುದ್ರ ಎಂಬ ಸ್ಥಳನಾಮದ ಬಗ್ಗೆ ಹಲವಾರು ಅಭಿಪ್ರಾಯಗಳಿವೆ. ಪಾರಂಪರಿಕ ಅಭಿಪ್ರಾಯದಂತೆ ದೋರ ಎಂಬ ಪದವು ಸಂಸ್ಕೃತದ ದ್ವಾರ ಪದಕ್ಕೆ ಸರಿಸಾಟಿಯಾದುದೆಂದು ಅರ್ಥೈಸಲಾಗಿದೆ. ದೋರ ಎಂಬುದು ರಾಷ್ಟ್ರಕೂಟ ಧೃವನ ಇನ್ನೊಂದು ಹೆಸರೆಂದು, ಇನ್ನೊಂದು ಅಭಿಪ್ರಾಯವಿದೆ. ಹಾನಗಲ್ ತಾಲೂಕಿನ ನರೆಗಲ್ ಶಾಸನದಲ್ಲಿ (ಎ.ಇ.–vi p.163) ಧೃವನನ್ನು ರಾಷ್ಟ್ರಕೂಟ ದೋರನೆಂದು ಕರೆದಿರುವುದು ಕಂಡುಬರುತ್ತದೆ. ದೋರ ಎಂಬ ಅಧಿಕಾರಿಯು ಸಮುದ್ರದ ರೀತಿಯಲ್ಲಿ ದೊಡ್ಡಕೆರೆಯನ್ನು ಕಟ್ಟಿಸಿದ ಕಾರಣ (ಎಂ.ಎ.ಆರ್–೧೯೨೪ ಪು.೮೦) ಈ ಸ್ಥಳಕ್ಕೆ ದೋರಸಮುದ್ರವೆಂಬ ಅನ್ವರ್ಥನಾಮ ರೂಢಿಗೆ ಬಂದಿರಬೇಕೆಂಬ ಖಚಿತ ಅಭಿಪ್ರಾಯವಿದೆ. ಈ ಕೆರೆಯು ಹಾಸನ ತಾಲೂಕಿನಲ್ಲಿದ್ದು, ದೋರನಹಳ್ಳಿ ಅಥವಾ ದೋರಗ್ರಾಮವೆಂಬ ಸ್ಥಳವು ಐತಿಹಾಸಿಕವಾಗಿ ಗುರುತಿಸಲ್ಪಟ್ಟಿರುವ ದೋರಸಮುದ್ರಕ್ಕೆ ದಕ್ಷಿಣ ದಿಕ್ಕಿನಲ್ಲಿ ಅನತಿ ದೂರದಲ್ಲಿದೆ. ಹೊಯ್ಸಳರು ತಮ್ಮನ್ನು ಯಾದವ ವಂಶದ ದ್ವಾರವತಿ ಪುರವರಾಧೀಶ್ವರ (ದ್ವಾರಕಾಪುರ) ರೆಂದು ಕರೆದುಕೊಂಡಿರುವುದು ಅನೇಕ ಶಾಸನಗಳಿಂದ ವ್ಯಕ್ತವಾಗುತ್ತದೆ. ದೋರಸಮುದ್ರ ಅಥವಾ ದ್ವಾರಸಮುದ್ರವು ಈಗಿನ ಹಳೇಬೀಡೇ ಎಂಬ ಅಭಿಪ್ರಾಯವನ್ನು ಎಲ್ಲ ವಿದ್ವಾಂಸರೂ ಒಪ್ಪಿರುತ್ತಾರೆ. ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿದ ಕೂಡಲೇ ಸೋಮೇಶ್ವರನು ತನ್ನ ಹಿರಿಯ ಮಗ ಮುಮ್ಮಡಿನರಸಿಂಹನಿಗೆ ರಾಜ್ಯದ ಉತ್ತರಭಾಗವನ್ನು ವಹಿಸಿಕೊಟ್ಟನು. ಹಾಗೆಯೇ ಸಾಮ್ರಾಜ್ಯದ ದಕ್ಷಿಣದ ಪ್ರದೇಶಗಳನ್ನು ಕಿರಿಯ ಮಗನಾದ ರಾಮನಾಥನಿಗೆ ವಹಿಸಿಕೊಟ್ಟನು. ಈ ವ್ಯವಸ್ಥೆಯಲ್ಲಿ ಕೆಲವು ಆಡಳಿತಾತ್ಮಕ ದೋಷಗಳು ಕಂಡು ಬಂದ ಕಾರಣ ಇವರಿಬ್ಬರ ನಡುವಿನ ಒಡಕು ವಿಸ್ತೃತಗೊಂಡಿತು. ಮುಮ್ಮಡಿ ನರಸಿಂಹನ ತರುವಾಯ ಕ್ರಿ.ಶ.೧೨೯೧ರಲ್ಲಿ ಆತನ ಮಗ ಮುಮ್ಮಡಿಬಲ್ಲಾಳನು ಸಿಂಹಾಸನವನ್ನೇರಿದನು. ಈತನು ಐದು ದಶಕಗಳಿಗೂ ಹೆಚ್ಚು ಕಾಲ (ಕ್ರಿ.ಶ. ೧೨೯೧–೧೩೪೨) ಆಳ್ವಿಕೆ ಮಾಡಿದನು. ನಂತರ ಸಾಮ್ರಾಜ್ಯವು ಉತ್ತರಭಾರತದ ಅಲ್ಲಾವುದ್ದೀನ್ ಖಿಲ್ಜಿಯು ಸೇನಾಧಿಪತಿಯಾಗಿದ್ದ ಮಲ್ಲಿಕ್ ಕಾಫುರನ ದಾಳಿಗೆ ಸಿಲುಕಿದ ಕಾರಣ ವೈಭವಯುತವಾಗಿ ಮೆರೆದ ಹೊಯ್ಸಳ ಸಾಮ್ರಾಜ್ಯವು ಸಂಪೂರ್ಣವಾಗಿ ಪತನಗೊಂಡಿತು.

ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಹೊಯ್ಸಳರದು ಸಿಂಹಪಾಲು. ಏಕೆಂದರೆ, ಈ ವಂಶದ ಸುಮಾರು ೨೪೬ ಶಾಸನಗಳು ಇಲ್ಲಿಯವರೆಗೂ ವರದಿಯಾಗಿವೆ. ಇವರ ಶಾಸನಗಳು ಹೊಯ್ಸಳ ಸಾಮ್ರಾಜ್ಯದ ಕುತೂಹಲಕರ ಸಂಗತಿಗಳನ್ನು ತಿಳಿಸುವುದಲ್ಲದೇ ಕನ್ನಡ, ತಮಿಳು ಹಾಗೂ ಸಂಸ್ಕೃತ ಮಿಶ್ರ ಭಾಷೆಗಳಲ್ಲಿ ರಚಿಸಲ್ಪಟ್ಟಿವೆ. ಹೊಯ್ಸಳರ ಇತಿಹಾಸವನ್ನು ಕುರಿತು ಹಾಗೂ ಅವರ ಉದಯದ ಬಗ್ಗೆ ಪ್ರಚಲಿತವಿರುವ ಪಾರಂಪರಿಕ ಕಥೆಯನ್ನು ತಿಳಿಸುವ ಹಲವು ಶಾಸನಗಳಿವೆ (ಎ.ಕ.ಸಂ.೬–ಕೃಪೇ:೩೯,೬೯) ಹಾಗೂ ಹೊಯ್ಸಳರ ಆಡಳಿತಕ್ಕೆ ಸಂಬಂಧಿಸಿದಂತೆ ಕ್ರಿ.ಶ.೧೧ನೇ ಶತಮಾನದ ಮಧ್ಯಭಾಗದಲ್ಲಿಯೇ ಅವರು ಚೋಳರ ಆಡಳಿತವನ್ನು ಮಂಡ್ಯ ಜಿಲ್ಲೆಯ ಕೆಲವು ಭಾಗಗಳಲ್ಲಿ ವಿರೋಧಿಸಿ ಅಲ್ಲಿ ತಳಊರಿದ ವಿಚಾರವನ್ನು ಸೂಚಿಸುತ್ತವೆ. ಆ ಸಮಯದಲ್ಲಿ ಅವರು ಕಲ್ಯಾಣ ಚಾಳುಕ್ಯರ ಮಾಂಡಲಿಕರಾಗಿದ್ದರು. ವಿನಯಾದಿತ್ಯನ ಕ್ರಿ.ಶ. ೧೦೪೮–೪೯ರ ತೊಣಚಿಯ ಶಾಸನ ಹಾಗೂ ಎರೆಯಂಗನ ಕ್ರಿ.ಶ. ೧೦೫೨ರ ಹಳೆಯಬೂದನೂರು ಶಾಸನಗಳು ಇವುಗಳ ಪೈಕಿ ಉಲ್ಲೇಖನೀಯ. ವಿಷ್ಣುವರ್ಧನನ ಸೋದರ ವಿನಯಾದಿತ್ಯನು ಕ್ರಿ.ಶ. ೧೧೨೦ರ ಸುಮಾರಿಗೆ ಶ್ರೀರಂಗಪಟ್ಟಣದಲ್ಲಿ ಅಧಿಕಾರಿಯಾಗಿದ್ದು ನಂತರ ಬಹುಶ:

ಅವನು ಚೋಳರ ವಿರುದ್ಧ ಯುದ್ಧದಲ್ಲಿ ಹತನಾದನೆಂದು ತಿಳಿದುಬರುತ್ತದೆ. ಇದಲ್ಲದೇ ಮಂಡ್ಯ ಜಿಲ್ಲೆಯ ತೊಣ್ಣೂರು ಹೊಯ್ಸಳರ ಕಾಲದಲ್ಲಿ ಒಂದು ಪ್ರಮುಖ ಆಡಳಿತ ಕೇಂದ್ರವಾಗಿತ್ತು. ತೊಣ್ಣೂರು ಇವರ ದ್ವಿತೀಯ ರಾಜಧಾನಿಯಾಗಿತ್ತೆಂಬ ಅಭಿಪ್ರಾಯವೂ ಇದೆ. ಮಂಡ್ಯ ತಾಲೂಕಿನ ಹಳೇಬೂದನೂರಿನ ಸೋಮೇಶ್ವರ ದೇವಾಲಯದ ಬಳಿಯಿರುವ ವೀರಗಲ್ಲು ಶಾಸನವು ಭಗ್ನಗೊಂಡಿದ್ದು ಕ್ರಿ.ಶ.೧೦೫೨ರಲ್ಲಿ ಹೊಯ್ಸಳ ಮಂಡಳೇಶ್ವರ ಎರೆಯಂಗನು ನಂದನ ಸಂವತ್ಸರದಲ್ಲಿ ಆಳುತ್ತಿದ್ದಾಗ ವೀರನೊಬ್ಬನ ಮರಣದ ಬಗ್ಗೆ ಉಲ್ಲೇಖಿಸುತ್ತದೆ. ಅಧಿಪನನ್ನು ವಿನಯಾದಿತ್ಯನ ಮಗ ಹೊಯ್ಸಳ ಎರೆಯಂಗನೆಂದು ಗುರುತಿಸಲಾಗಿದೆ. ಈ ಶಾಸನದ ಉಲ್ಲೇಖವೇ ಎರೆಯಂಗನ ಪ್ರಥಮ ಉಲ್ಲೇಖವೂ ಆಗಿರುತ್ತದೆ. ವಿಲಿಯಂ ಕೊಯಿಲ್ಹೊ ಅವರ ಹೊಯ್ಸಳವಂಶ ಗ್ರಂಥದಲ್ಲಿ ಕ್ರಿ.ಶ.೧೦೪೪ರ ಹೊತ್ತಿಗೆ ವಿನಯಾದಿತ್ಯನು ತನ್ನ ಮಗನೊಡಗೂಡಿ ಗಂಗವಾಡಿಯನ್ನು ಆಳುತ್ತಿದ್ದನೆಂದು ಉಲ್ಲೇಖವಿದೆ. ಆದರೆ ಕೊಯಿಲ್ಹೊ ಅವರು ಉಲ್ಲೇಖಿಸಿರುವ ಶಾಸನದ ಕಾಲ ಕ್ರಿ.ಶ.೧೦೬೩ ಎಂದು ಖಚಿತಪಡಿಸಲಾಗಿದೆ. ನಾಗಮಂಗಲ ತಾಲೂಕಿನ ಬಿಂಡಿಗನವಿಲೆ ಶಾಸನವು ಕ್ರಿ.ಶ.೧೦೮೯ರಲ್ಲಿ ಹೊಯ್ಸಳ ರಾಜ್ಯದಲ್ಲಿ ಹಸುಗಳನ್ನು ಅಪಹರಿಸಿದ ಘಟನೆಯನ್ನು ಹಾಗೂ ಹರಮನೆಂಬ ವೀರನ ಹೆಸರನ್ನು ಉಲ್ಲೇಖಿಸುತ್ತದೆ. ಇದೇ ತಾಲೂಕಿನ ಎಲೇಕೊಪ್ಪ (ನಾಗಮಂಗಲ–೧೨೧)ದ ಶಾಸನವು ಪೋಸಳೇದೇವರ ಬಸದಿಗೆ ಮಣಿಯಮರಸನು ನೀಡಿದ ದಾನದ ಬಗ್ಗೆ ಉಲ್ಲೇಖಿಸುತ್ತದೆ. ಹೊಯ್ಸಳ ಸೇನಾನಿ ಗಂಗರಾಜನನ್ನು ಉಲ್ಲೇಖಿಸುವ ಶಾಸನವು ಕ್ರಿ.ಶ.೧೧೧೭ರಲ್ಲಿ ತಿಪ್ಪೂರು ಗ್ರಾಮವನ್ನು ಈತನು ವಿಷ್ಣುವರ್ಧನನಿಂದ ದತ್ತಿಯಾಗಿ ಪಡೆದ ಬಗ್ಗೆ ತಿಳಿಸುತ್ತದೆ. ಈ ಶಾಸನವು ಜೈನ ಶಾಸನವಾಗಿದ್ದು ತಿಂತ್ರಿಣಿಘಚ್ಛದ ಮೇಘಚಂದ್ರ ಸಿದ್ಧಾಂತದೇವರ ಬಗ್ಗೆ ಉಲ್ಲೇಖಿಸಿದ್ದು ಬಹಳಷ್ಟು ಮಟ್ಟಿಗೆ ಇದರಲ್ಲಿ ಬರುವ ಸಾಲುಗಳು ಶ್ರವಣಬೆಳಗೊಳದ ಶಾಸನಗಳೊಂದಿಗೆ ಹೋಲುತ್ತವೆ. ನಾಗಮಂಗಲ ತಾಲೂಕಿನ ಕಂಬದಹಳ್ಳಿಯ ಶಾಸನವು ಹೊಯ್ಸಳ ವಿಷ್ಣುವರ್ಧನನ ಪರವಾಗಿ ಪಿರಿಯ ದಂಡನಾಯಕ ಗಂಗರಾಜನು ಚೋಳರ ವಶದಲ್ಲಿದ್ದ ತಲಕಾಡನ್ನು ದಾಳಿಮಾಡಿ ವಶಪಡಿಸಿಕೊಂಡ ವಿಷಯವನ್ನು ಪ್ರಸ್ತಾಪಿಸುತ್ತದೆ. ಇದೇ ಶಾಸನವು ಬಿಂಡಿಗನವಿಲೆಯ ತೀರ್ಥಕ್ಕಾಗಿ ನೀಡಿದ ಭೂದಾನವನ್ನು ಉಲ್ಲೇಖಿಸುತ್ತದೆ.

ಕೃಷ್ಣರಾಜಪೇಟೆ ತಾಲೂಕಿನ ಸಾಸಲು ಗ್ರಾಮದ ಶಾಸನದಲ್ಲಿ ಹೊಯ್ಸಳ ಬಿಟ್ಟಿದೇವನು ಕ್ರಿ.ಶ.೧೧೨೧ರಲ್ಲಿ ಭೋಗೇಶ್ವರ ದೇವರಿಗೆ ನೀಡಿದ ಭೂದಾನವನ್ನು ದಾಖಲಿಸಿದೆ. ಪಾಂಡವಪುರ ತಾಲೂಕಿನ ತಿರುಮಲ ಸಾಗರಛತ್ರದಲ್ಲಿರುವ ಶಾಸನವು ಗಂಗವಾಡಿ–೯೬೦೦೦ ಪ್ರಾಂತವು ಹೊಯ್ಸಳದೇವನ ಆಡಳಿತಾತ್ಮಕ ಹತೋಟಿಯಲ್ಲಿ ಇದ್ದ ಅಂಶವನ್ನು ದೃಢಪಡಿಸುತ್ತದೆ ಮತ್ತು ಇದೇ ಸ್ಥಳದಲ್ಲಿ ಬಳೆಗಾರ ಕುಲಕ್ಕೆ ಸೇರಿದ ಬೀವಿಸೆಟ್ಟಿ ಹಾಗೂ ಬೋಕಬ್ಬೆಯ ಮಗ ಬಮ್ಮಣ್ಣನು ಇಂಗಿಲಿಕನ ಕುಪ್ಪೆ ಎಂಬ ಸ್ಥಳದಲ್ಲಿ ಸ್ವಯಂಭೂ ದೇವಾಲಯವನ್ನು ಹಾಗೂ ಧರ್ಮರಾಶಿ ಪಂಡಿತನ ಮಗ ಸಮಭಟ್ಟ ಮತ್ತು ಹೊನ್ನಾದೇವಿಯ ಆದೇಶದಂತೆ ಅಧಿಕಾರಿಗಳು ನೀರಾವರಿ ಕಟ್ಟೆಯನ್ನು ಕಟ್ಟಿಸಿ ಉಡಹಳ್ಳಿಯ ಧರ್ಮರಾಶಿ ಪಂಡಿತರಿಗೆ ದಾನ ನೀಡಿದ ವಿಚಾರವನ್ನು ದಾಖಲೆ ಮಾಡಿದೆ. ಮದ್ದೂರು ತಾಲೂಕಿನ ವೈದ್ಯನಾಥಪುರದ ಶಾಸನದಲ್ಲಿ (ಮದ್ದೂರು–೬೮) ಕ್ರಿ.ಶ. ೧೧೩೨ರಲ್ಲಿ ಹೊಯ್ಸಳ ವಿಷ್ಣುವರ್ಧನನು ಗಂಗವಾಡಿ–೯೬೦೦೦, ನೊಳಂಬವಾಡಿ–೩೨,೦೦೦, ಬನವಾಸಿ–೧೨,೦೦೦ ಮತ್ತು ಹಾನುಂಗಲ–೫೦೦ ಮೊದಲಾದ ಆಡಳಿತ ವಿಭಾಗಗಳನ್ನು ತನ್ನ ರಾಜಧಾನಿಯಾದ ದೋರಸಮುದ್ರದಿಂದ ಆಳ್ವಿಕೆ ಮಾಡುತ್ತಿದ್ದನೆಂದು ದಾಖಲಿಸಿದೆ. ಹೊಯ್ಸಳರಿಗೆ ಮೊದಲು ಗಂಗ ಶಿವಮಾರಸಿಂಹನು ಹಲಗೂರು ಗ್ರಾಮದ ಕೆಳಲೆನಾಡನ್ನು ಮದ್ದೂರು ಅಥವಾ ನರಸಿಂಹ ಚತುರ್ವೇದಿ ಮಂಗಲದ (ಈಗಿನ ಶಿವಪುರವನ್ನು ಮದ್ದೂರು ಎಂದೂ ಉಲ್ಲೇಖಿಸಿದೆ) ಸ್ವಯಂಭೂವೈಜನಾಥ ದೇವಾಲಯಕ್ಕೆ ಕೊಟ್ಟಿದ್ದ ದಾನಗಳನ್ನು ನವೀಕರಿಸಿರುವ ಅಂಶವನ್ನು ವ್ಯಕ್ತಪಡಿಸುತ್ತದೆ. ಈ ಶಾಸನವು ಮಂಡ್ಯ ಜಿಲ್ಲೆಯಲ್ಲಿ ಹೊಯ್ಸಳರ ಆಡಳಿತವು ವ್ಯಾಪಕವಾಗಿದ್ದುದರ ವಿವರಗಳನ್ನು ನೀಡುತ್ತದೆ. ಹೊಯ್ಸಳರ ಕಾಲದ ಕಳಲೆನಾಡು (ಹಲಗೂರಿನ ಪರಿಸರ), ಕಲ್ಕುಣಿನಾಡು (ನಾಗಮಂಗಲ ಪ್ರದೇಶ),

ಎಡತೊರೆನಾಡು, ಶ್ರೀರಂಗಪಟ್ಟಣಸೀಮೆ, ಸಿಂಧಘಟ್ಟ ಸೀಮೆ ಮೊದಲಾದ ಆಡಳಿತ ವಿಭಾಗಗಳು ಇವನ ಅನೇಕ ಶಾಸನಗಳಲ್ಲಿ ಪದೇಪದೇ ಉಲ್ಲೇಖಿತವಾಗಿರುವುದು ಕಂಡುಬರುತ್ತದೆ. ನಾಗಮಂಗಲದ ಭುವನೇಶ್ವರ ದೇವಾಲಯದಲ್ಲಿರುವ ಶಾಸನದಲ್ಲಿ ಕ್ರಿ.ಶ.೧೧೩೪ರಲ್ಲಿ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಕಲ್ಕುಣಿ ನಾಡಿನಲ್ಲಿರುವ ನಾಗಮಂಗಲದ ಶಂಕರನಾರಾಯಣ ದೇವಾಲಯವನ್ನು ಆತನ ಪಟ್ಟದರಸಿ ಬಮ್ಮಲದೇವಿ (ಪಲ್ಲವ ವಂಶದ ಗೋವಿಂದರಾ ಮತ್ತು ಚಾವುಂಡಬ್ಬರಸಿಯ ಮಗಳೆಂಬ ಉಲ್ಲೇಖವಿದೆ) ಯು ಜೀರ್ಣೋದ್ಧಾರ ಮಾಡಿದ ವಿಚಾರವನ್ನು ದಾಖಲಿಸಿದೆ. ಈ ದೇವಾಲಯಕ್ಕೆ ಅಕ್ಕನಕಟ್ಟೆ ಎಂಬ ಗ್ರಾಮವನ್ನು ದತ್ತಿಬಿಟ್ಟ ವಿಚಾರವೂ ಇದೆ. ಕೃಷ್ಣರಾಜಪೇಟೆ ತಾಲೂಕಿನ ಹುಬ್ಬಹಳ್ಳಿಯ ಶಾಸನವು ಕ್ರಿ.ಶ.೧೧೪೦ರಲ್ಲಿ ಹೊಯ್ಸಳ ವಿಷ್ಣುವರ್ಧನನು ಹಳ್ಳದ ಬೀಡಿನಿಂದ (ಹಳೇಬೀಡು) ಆಳ್ವಿಕೆ ಮಾಡುತ್ತಿದ್ದಾಗ ಮಹಾಸಾಮಂತ ಮಾಚಯ್ಯನಾಯಕನು ಮಾಕೇಶ್ವರ ದೇವಾಲಯವನ್ನು ಹಾಗೂ ಕೆರೆಯನ್ನೂ ನಿರ್ಮಿಸಿದ ಬಗ್ಗೆ ದಾಖಲಿಸುತ್ತದೆ. ಈ ಶಾಸನದಲ್ಲಿ ಮಾಚಯ್ಯ ನಾಯಕನ ವಂಶವೃಕ್ಷವನ್ನು ನೀಡಲಾಗಿದೆ. ಕೃಷ್ಣರಾಜಪೇಟೆ ತಾಲೂಕಿನ ನಾಗರಘಟ್ಟ ಕೆರೆಯ ಬಳಿಯಿರುವ ಮಲ್ಲೇಶ್ವರ ದೇವಾಲಯದಲ್ಲಿರುವ ಶಾಸನವು ಭಗ್ನವಾಗಿದ್ದು ಹೊಯ್ಸಳ ವಿಷ್ಣವರ್ಧನನು ಯಶಸ್ವಿಯಾಗಿ ಕೈಗೊಂಡ ತಲಕಾಡು, ವಿರಾಟಪುರ (ಹಾನಗಲ್) ಮೊದಲಾದ ದಿಗ್ವಿಜಯಗಳ ಬಗ್ಗೆ ದಾಖಲಿಸುತ್ತಾ ರಾಜನ ವಿವರಗಳನ್ನು ನೀಡುತ್ತದೆ. ಈ ಶಾಸನವು ಕೇರಳನಾಯಕ ಹಾಗೂ ಮಲ್ಲಜೀಯನ ಮಗ ಮಹಾದೇವನೆಂಬ ಆಡಳಿತಾಧಿಕಾರಿಯು ನಾಗರಘಟ್ಟ ಗ್ರಾಮದಲ್ಲಿ ಮಹಾದೇವ ದೇವಾಲಯವನ್ನು ನಿರ್ಮಿಸಿ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಇದೇ ತಾಲೂಕಿನ ಭದ್ರನಕೊಪ್ಪಲು ಶಾಸನದಲ್ಲಿ ವಿಷ್ಣುವರ್ಧನನು ನುಂಗಲಿ ಗ್ರಾಮದ ಮೇಲೆ ದಾಳಿ ಮಾಡುವ ಮುನ್ನ ತೊಳೊಂಚೆಯ ಕರಿದೇವರಿಗೆ ಪೂಜೆ ಸಲ್ಲಿಸಿ ಹಲವು ದಾನಗಳನ್ನು ಉತ್ತರಾಯಣ ಸಂಕ್ರಾಂತಿಯ ದಿನದಂದು ನೀಡಿದ ಬಗ್ಗೆ ದಾಖಲಿಸಿದೆ. ಇದೇ ತಾಲೂಕಿನ ಹಿರೀಕಳಲೆಯ ಬಸವ ದೇವಾಲಯದ ಬಳಿಯಿರುವ ಶಾಸನವು ತ್ರಿಭುವನಮಲ್ಲ ಹೊಯ್ಸಳ ವಿಷ್ಣುವರ್ಧನನು ಗಂಗವಾಡಿ-೯೬೦೦೦ದಲ್ಲಿ ತನ್ನ ಆಡಳಿತ ಹತೋಟಿಯನ್ನು ಪ್ರತಿಷ್ಠಾಪಿಸಿದ ತರುವಾಯ ಪಿರಿಯ ಕಳಿಲೆಯು ಕಿಕ್ಕೇರಿ-೧೨ ಆಡಳಿತ ವಿಭಾಗದ ವ್ಯಾಪ್ತಿಯಲ್ಲಿದ್ದು, ಅಲ್ಲಿ ಚಿನ್ನಮ್ಮ ಎಂಬ ಅಧಿಕಾರಿಯು ಆಡಳಿತ ನಡೆಸುತ್ತಿದ್ದುದರ ಬಗ್ಗೆ ತಿಳಿಸುತ್ತದೆ. ಕೃಷ್ಣರಾಜಪೇಟೆ ತಾಲೂಕಿನ ಬಸ್ತಿ ಎಂಬ ಸ್ಥಳದಲ್ಲಿಯ ಶಾಸನದಲ್ಲಿ ವಿಷ್ಣುವರ್ಧನನ ಮಂತ್ರಿಯಾಗಿದ್ದ ಪುಣಿಸಾಮಯ್ಯನು ಬಸದಿಯನ್ನು ನಿರ್ಮಿಸಿದ ಬಗ್ಗೆ ಹಾಗೂ ಮಾಣಿಕ್ಯದೊಡಲೂರು ಮತ್ತು ಮಾವಿನಕೆರೆ ಗ್ರಾಮಗಳನ್ನು ಬಸದಿಗಾಗಿ ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ. ಶಾಸನದ ಬಹುತೇಕ ಭಾಗವು ಭಗ್ನಗೊಂಡಿದೆ ಹಾಗೂ ಅಸ್ಪಷ್ಟವಾಗಿದೆ. ಪಾಂಡವಪುರ ತಾಲೂಕಿನ ಶಂಭುಹಳ್ಳಿಯ ಹೊಲದಲ್ಲಿರುವ ಕಂಬ ಶಾಸನದಲ್ಲಿ ವಿಷ್ಣುವರ್ಧನನು ತನ್ನ ತಾಯಿ ಮಾದಲಮಹಾದೇವಿಯು ನಿರ್ಮಿಸಿದ ತುವ್ವಲೇಶ್ವರ ದೇವರಿಗೆ ಯಾದವಪುರವನ್ನು ದಾನವಾಗಿ ನೀಡಿ ಅದರ ಹೆಸರನ್ನು ಶಂಕರಹಳ್ಳಿಯೆಂದು ಬದಲಾಯಿಸಿದ ಬಗ್ಗೆಯೂ ದಾಖಲಿಸಿದೆ. ಇದೇ ತಾಲೂಕಿನ ತೊಣ್ಣೂರಿನ ಅಮ್ಮನವರ ಗುಡಿಯ ನವರಂಗ ಮಂಟಪದ ಗೋಡೆಯಲ್ಲಿರುವ ಶಾಸನದಲ್ಲಿ ಈ ದೇವಾಲಯದ ಓಲಗಶಾಲೆ (ಮಂಟಪವನ್ನು)ಯನ್ನು ವಿಷ್ಣುವರ್ಧನನ ಆದೇಶದ ಮೇಲೆ ಮಹಾಪ್ರಧಾನ ತಂತ್ರಾದಿಷ್ಟಾಯಕ ಮಹಾಸಾಮಂತ ಹೆಗಡೆ ಸುರಿಗೆಯ ನಾಗಯ್ಯನು ನಿರ್ಮಿಸಿದ ಬಗ್ಗೆ ಉಲ್ಲೇಖಿಸಿದೆ.

ವಿಷ್ಣುವರ್ಧನನ ತರುವಾಯ ಆಳ್ವಿಕೆ ಮಾಡಿದ ಹೊಯ್ಸಳದೊರೆ ಒಂದನೇ ನರಸಿಂಹನ ಒಟ್ಟು ಎಂಟು ಶಾಸನಗಳು ಜಿಲ್ಲೆಯಲ್ಲಿ ಲಭ್ಯವಾಗಿದ್ದು ಅವುಗಳಲ್ಲಿ ಕೃಷ್ಣರಾಜಪೇಟೆ ತಾಲೂಕಿನ ತೆಂಗಿನಘಟ್ಟದ ಈಶ್ವರ ದೇವಾಲಯದ ಬಳಿಯಿರುವ ಶಾಸನವು ಕ್ರಿ.ಶ.೧೧೩೩ರಲ್ಲಿ ಕೊಳ್ಳಿಅಯ್ಯ ಮತ್ತು ಚಾವುಂಡವ್ವೆಯ ಮಗ ಹಡವಳದ ಕಾವಣ್ಣನು ಹೊಯ್ಸಳ ನರಸಿಂಹನ ಆದೇಶದ ಮೇಲೆ ಹೊಯ್ಸಳೇಶ್ವರ ದೇವಾಲಯವನ್ನು ಮತ್ತು ಕೆರೆಯನ್ನು ತೆಂಗಿನಕಟ್ಟೆಯೆಂಬ ಸ್ಥಳದಲ್ಲಿ ನಿರ್ಮಿಸಿದ ಬಗ್ಗೆ ಉಲ್ಲೇಖಿಸುತ್ತದೆ. ಈ ಶಾಸನವು ಕೇವಲ ದೇವರಿಗೆ

ಬಿಟ್ಟ ಭೂಮಿದಾನವನ್ನು ಮಾತ್ರ ದಾಖಲಿಸದೇ ಕಿಕ್ಕೇರಿಯ ಜನಪ್ರಿಯ ಶಿಲ್ಪಿ ಹಾಲೋಜನ ಮಗನಾದ ಬಮ್ಮೋಜನಿಗೂ ಭೂಮಿಯನ್ನು ದಾನ ನೀಡಿದ ಬಗ್ಗೆ ಉಲ್ಲೇಖಿಸುತ್ತದೆ. ಪಾಂಡವಪುರ ತಾಲೂಕಿನ ತೊಣ್ಣೂರಿನ ಕೃಷ್ಣ ದೇವಾಲಯದಲ್ಲಿರುವ ಶಾಸನದಲ್ಲಿ ಕ್ರಿ.ಶ.೧೧೪೦ರಲ್ಲಿ ಹೊಯ್ಸಳ ನರಸಿಂಹನು ರಾಜಧಾನಿ (ಉಪ) ಕೋಡಾಲದಿಂದ ಆಳುತ್ತಿರುವಾಗ ಯಾದವನಾರಾಯಣ ಚತುರ್ವೇದಿ ಮಂಗಲ (ತೊಣ್ಣೂರು) ದಲ್ಲಿ ನಾರಾಯಣ ದೇವಾಲಯವನ್ನು ನಿರ್ಮಿಸಿದ ಬಗ್ಗೆ ದಾಖಲಿಸಿದೆ. ಇದೇ ರಾಜನ ಇನ್ನೊಂದು ಶಾಸನವೂ ಇದೇ ಸ್ಥಳದಲ್ಲಿದ್ದು ಕ್ರಿ.ಶ.೧೧೫೭ರಲ್ಲಿ ಜಗದೇಕಮಲ್ಲ ಒಂದನೇ ನರಸಿಂಹನು ವಿತ್ತಿರುಂದ ಪೆರುಮಾಳ್ ಹಾಗೂ ಲಕ್ಷ್ಮೀ ದೇವರುಗಳನ್ನು ತೊಣ್ಣೂರಿನಲ್ಲಿ ಪ್ರತಿಷ್ಠಾಪಿಸಿ ದಾನ ನೀಡಿದುದರ ಬಗ್ಗೆ ತಿಳಿಸುತ್ತದೆ. ಕೃಷ್ಣರಾಜಪೇಟೆ ತಾಲೂಕಿನ ಬಸ್ತಿ ಹೊಸಕೋಟೆ ಎಂಬ ಸ್ಥಳದಲ್ಲಿರುವ ಬಸದಿಯ ಎದುರಿನ ಮಾನಸ್ತಂಭದ ಮೇಲಿನ ಶಾಸನವು ಶಿಥಿಲವಾಗಿದ್ದು ಕ್ರಿ.ಶ.೧೧೬೫ರಲ್ಲಿ ಒಂದನೇ ನರಸಿಂಹನು ಆಳುತ್ತಿದ್ದ ಕಾಲದಲ್ಲಿ (ರಾಜನ ಹೆಸರು ಸ್ಪಷ್ಟವಾಗಿಲ್ಲ, ಕಾಲದ ದೃಷ್ಟಿಯಿಂದ ಊಹಿಸಬಹುದಾಗಿದೆ) ವಿಷ್ಣುವರ್ಧನನು ನಿರ್ಮಿಸಿದ ಬಸದಿಗೆ ನೀಡಲಾದ ಭೂಮಿಯ ಉತ್ಪತ್ತಿಯ ಮೇಲೆ ಹಲವು ತೆರಿಗೆಗಳನ್ನು ರದ್ದುಗೊಳಿಸಿದ ಬಗ್ಗೆ ಹಾಗೂ ಇದನ್ನು ಕಾರ್ಯಗತಗೊಳಿಸಿದ ಮಾಣಿಕ್ಯವೊಳಲಿನ ಅಧಿಕಾರಿ ಸೋಮಯ್ಯನ ಬಗ್ಗೆಯೂ ಉಲ್ಲೇಖಿಸುತ್ತದೆ. ಇದೇ ತಾಲೂಕಿನ ಕಿಕ್ಕೇರಿಯ ಶಾಸನವು ಕ್ರಿ.ಶ.೧೧೭೧ರಲ್ಲಿ ಬರ್ಮಯ್ಯ ಸಾಮಂತನ ಪತ್ನಿ ಬಮ್ಮವ್ವ ನಾಯಕಿತಿಯ ಕಟ್ಟಿಸಿದ ಬ್ರಹ್ಮೇಶ್ವರ ದೇವಾಲಯಕ್ಕೆ ಹಲವು ದಾನಗಳನ್ನು ನೀಡಿದುದರ ವಿವರಗಳನ್ನು ತಿಳಿಸುತ್ತದೆ.

ಒಂದನೇ ನರಸಿಂಹನ ತರುವಾಯ ಅಧಿಕಾರಕ್ಕೆ ಬಂದ ಇಮ್ಮಡಿ ಬಲ್ಲಾಳನು ನಾಲ್ಕು ದಶಕಗಳಿಗೂ ಹೆಚ್ಚು ಕಾಲ (ಕ್ರಿ.ಶ.೧೧೭೩-೧೨೨೦) ರಾಜ್ಯಾಡಳಿತವನ್ನು ಮಾಡಿದನು. ಈತನ ಆಡಳಿತಾವಧಿಯನ್ನು ಹೊಯ್ಸಳರ ಇತಿಹಾಸದಲ್ಲಿ ಅತ್ಯಂತ ವೈಭವಯುತ ಅಧ್ಯಾಯವೆಂದು ಪರಿಗಣಿಸಲಾಗಿದೆ. ಇವನು ಅಧಿಕಾರಕ್ಕೆ ಬಂದ ತಕ್ಷಣ ಸಾಮಂತರಾಗಿದ್ದ ಚಂಗಾಳ್ವ ಮತ್ತು ಕೊಂಗಾಳ್ವರ ಪ್ರತಿಭಟನೆಗಳನ್ನು ಅಡಗಿಸಿ ನಂತರ ಉಚ್ಚಂಗಿಯ ಕೋಟೆಯ ಮೇಲೆ ದಾಳಿ ಮಾಡಿ ಪಾಂಡ್ಯರನ್ನು ಪರಾಭವಗೊಳಿಸಿ ತನ್ನ ವಶಕ್ಕೆ ತೆಗೆದುಕೊಂಡನು. ತುಂಗಭದ್ರೆಯ ಉತ್ತರದಲ್ಲಿ ತನ್ನ ದಂಡಯಾತ್ರೆಯನ್ನು ಮುಂದುವರಿಸಿ, ಕಳಚೂರಿಯ ಸಂಕಮನ ಸೈನ್ಯವನ್ನು ಎದುರಿಸಬೇಕಾಗಿ ಬಂದಾಗ ಗತ್ಯಂತರವಿಲ್ಲದೇ ಹಿಂದಕ್ಕೆ ಸರಿದನು. ಈತನ ಆಳ್ವಿಕೆಯಡಿಯಲ್ಲಿ ಹೊಯ್ಸಳ ಸಾಮ್ರಾಜ್ಯವು ಸ್ವತಂತ್ರ ರಾಜಸತ್ತೆಯಾಗಿ ರೂಪುಗೊಂಡಿತು. ಈತನು ಗಿರಿದುರ್ಗಮಲ್ಲ, ಶನಿವಾರಸಿದ್ಧಿ ಮೊದಲಾದ ಬಿರುದುಗಳನ್ನು ಧರಿಸುವಂತಾಯಿತು. ಕಳಚೂರಿಗಳ ಪತನಾ (ಕ್ರಿ.ಶ.೧೧೮೩) ನಂತರ ಈತನು ರಾಜಕೀಯ ಸಾರ್ವಭೌಮತ್ವಕ್ಕಾಗಿ ಸೇವುಣರೊಂದಿಗೆ ಸೆಣಸಬೇಕಾಯಿತು. ಹೊಯ್ಸಳ ಇಮ್ಮಡಿ ಬಲ್ಲಾಳನ ಕಾಲದ ಹಲವಾರು ಶಾಸನಗಳು ಈ ಜಿಲ್ಲೆಯಲ್ಲಿ ಲಭ್ಯವಾಗಿವೆ. ಅವುಗಳ ಪೈಕಿ ಕ್ರಿ.ಶ.೧೧೭೪ರ ಶಾಸನದಲ್ಲಿ ತೊಣ್ಣೂರಿನ ಲಕ್ಷ್ಮೀನಾರಾಯಣ ದೇವಾಲಯದ ಮಂಟಪವೊಂದನ್ನು ಈತನು ನಿರ್ಮಿಸಿದ ಬಗ್ಗೆ ದಾಖಲಿಸಿದೆ. ಇದೇ ಸ್ಥಳದಲ್ಲಿರುವ ಇನ್ನೊಂದು ಶಾಸನವು ಇಮ್ಮಡಿ ಬಲ್ಲಾಳನ ಅಧಿಕಾರಿಗಳಾದ ಹಿರಿಯ ಹೆಗ್ಗಡೆ ಮಾಚಯ್ಯ, ಹೆಗ್ಗಡೆ ಕೇಶಿಯಣ್ಣ ಮತ್ತು ಹೆಗ್ಗಡೆ ಕೊಮ್ಮಣ್ಣರು ಎಣ್ಣೆಗಾಣಗಳನ್ನು ದಾನ ನೀಡಿದ ಬಗ್ಗೆ ಉಲ್ಲೇಖಿಸುತ್ತದೆ. ಮಾಚಯ್ಯನನ್ನು ದಂಡಾಧಿಷ್ಠನಾಯಕನೆಂದು ಕರೆದಿರುವುದು ವ್ಯಕ್ತವಾಗುತ್ತದೆ. ಇದೇ ತಾಲೂಕಿನ ಕ್ಯಾತನಹಳ್ಳಿಯ ಕೋದಂಡರಾಮ ದೇವಾಲಯದ ಬಳಿಯಿರುವ ಶಾಸನವು ಕ್ರಿ.ಶ. ೧೧೭೫ರಲ್ಲಿ ವೀರಬಲ್ಲಾಳನ ಆಳ್ವಿಕೆಯ ಅವಧಿಯಲ್ಲಿ, ಮಹಾಪ್ರಧಾನ ಸರ್ವಾಧಿಕಾರಿ ಎರೆಯಣ್ಣನು ಶ್ರೀಕರಣದ ಕಲಿಯಣನಿಂದ ಭೂಮಿಯನ್ನು ಯಾದವನಾರಾಯಣ ಚತುರ್ವೇದಿ ಮಂಗಳದ ಕೊಡೆಹಾಳ ಜೈನ ಬಸದಿಗೆ ದಾನ ನೀಡಿದ ವಿಚಾರವನ್ನು ತಿಳಿಸುತ್ತದೆ. ಇದೇ ತಾಲೂಕಿನ ತೊಣ್ಣೂರಿನ ಕೃಷ್ಣ ದೇವಾಲಯದ ಬಳಿಯಿರುವ ಶಾಸನವು ಕ್ರಿ.ಶ.೧೧೭೭ರಲ್ಲಿ ಇಮ್ಮಡಿ ಬಲ್ಲಾಳನು ಭೋಗನಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಗಳನ್ನು ದತ್ತಿಬಿಟ್ಟ ವಿಚಾರವಿದ್ದು ಈ ಗ್ರಾಮಗಳಲ್ಲಿ ಚಾಲನೆಯಲ್ಲಿದ್ದ ಮಗ್ಗ ಮತ್ತು ಮನೆಗಳಿಂದ ವಸೂಲಾದ

ತೆರಿಗೆಗಳನ್ನು ವಿತ್ತಿರುಂದಪೆರುಮಾಳ್ (ಕೃಷ್ಣ) ದೇವರ ಕೈಂಕರ್ಯಗಳಿಗೆ ಉಪಯೋಗಿಸಬೇಕೆಂದು ಆದೇಶವಿತ್ತಿರುವ ವಿಚಾರವನ್ನು ತಿಳಿಸುತ್ತದೆ. ಈ ದಾನದ ಅನುಷ್ಠಾನಕ್ಕಾಗಿ ಮಹಾಪ್ರಧಾನ ಸರ್ವಾಧಿಕಾರಿ ತಂತ್ರಾಧಿಷ್ಠನಾಯಕ ಮಹಾಪಾಸಾಯಿತ ಮಾಚಿಮಯ್ಯ ಹಾಗೂ ಅವನ ಜೊತೆಗೆ ಹೆಗ್ಗಡೆ ಕೇಸಿಯಣ್ಣ, ಹೆಗ್ಗಡೆ ಕೊಮ್ಮಣ್ಣ, ಹೆಗ್ಗಡೆ ಮಹಾದೇವಣ್ಣ ಮತ್ತು ಮಹಾಪ್ರಧಾನ (ಹೆಸರು ಅಳಿಸಿಹೋಗಿದೆ) ಮೊದಲಾದ ಅಧಿಕಾರಿಗಳನ್ನು ನೇಮಕ ಮಾಡಿದ ವಿವರಗಳಿವೆ. ಇದೇ ಸ್ಥಳದ ಇನ್ನೊಂದು ಶಾಸನದಲ್ಲಿ (ಕ್ರಿ.ಶ.೧೧೯೯) ವೀರಬಲ್ಲಾಳನು ಆಳುತ್ತಿದ್ದಾಗ ಮಹಾಪ್ರಧಾನ, ಸರ್ವಾಧಿಕಾರಿ, ಸೇನಾಧಿಪತಿ ಮಹಾಪಸಾಯಿತ ದಂಡನಾಯಕ ಅಚ್ಯುತಿಮಯ್ಯನ ಮಕ್ಕಳಾದ ನೀಲಯ್ಯ ಹಾಗೂ ಚಾಮಯ್ಯರು ನೀಡಿದ ಹಲವು ದಾನಗಳನ್ನು ದಾಖಲಿಸಿದೆ. ಮೇಲೆ ಹೇಳಿರುವ ಕ್ರಿ.ಶ.೧೧೭೭ರ ಶಾಸನದಲ್ಲಿ ಉಲ್ಲೇಖಿಸಿರುವ ಮಹಾಪ್ರಧಾನನು ಈತನೇ ಎಂದು ಹೇಳಲಾಗುತ್ತದೆ. ಕೃಷ್ಣರಾಜಪೇಟೆ ತಾಲೂಕಿನ ತೊಣಚಿಯ ಈಶ್ವರ ದೇವಾಲಯದ ಬಳಿಯಿರುವ ಶಾಸನವು ಕ್ರಿ.ಶ.೧೧೯೧ರಲ್ಲಿ ಹೊಯ್ಸಳ ವೀರಬಲ್ಲಾಳನು ದೋರಸಮುದ್ರದಲ್ಲಿ ಆಳ್ವಿಕೆ ಮಾಡುತ್ತಿದ್ದ ಸಮಯದಲ್ಲಿ ಊರಿನ ಪ್ರಭು ಗಾವುಂಡರುಗಳ ಹಾಗೂ ಪೋರ ತಲೆಯ ಮಾಳೆ ಸಾವಂತನ ಕೋರಿಕೆಯ ಮೇರೆಗೆ ತೊಳಂಚೆಯ ಸಿದ್ಧನಾಥ ದೇವರ ಪೂಜಾ ಕೈಂಕರ್ಯಗಳಿಗೆಂದು ನೀಡಿದ ದಾನಗಳನ್ನು ದಾಖಲಿಸಿದೆ. ಇದೇ ತಾಲೂಕಿನ ಅಗ್ರಹಾರ ಬಾಚಹಳ್ಳಿಯ ಹುಣಸೇಶ್ವರ ದೇವಾಲಯದ ಮಂಟಪದಲ್ಲಿರುವ ವೀರಗಲ್ಲು ಶಾಸನದಲ್ಲಿ ಕ್ರಿ.ಶ.೧೧೭೯ರಲ್ಲಿ ಹೊಯ್ಸಳದೊರೆ ವೀರಬಲ್ಲಾಳನ ಆದೇಶದಂತೆ ಮಹಾಸಾಮಂತ ಬಬ್ಬೆಯ ನಾಯಕನು ಕಳಚೂರಿಯ ಸಂಕಮದೇವನ ವಿರುದ್ಧ ಗುಂದದಕೊಪ್ಪಲು ಎಂಬ ಸ್ಥಳದಲ್ಲಿ ಸಂಭವಿಸಿದ ಭೀಕರ ಯುದ್ಧದಲ್ಲಿ ಮರಣವನ್ನಪ್ಪಿದ ವಿಚಾರವನ್ನು ದಾಖಲಿಸಿದೆ. ಈ ಸಂದರ್ಭದಲ್ಲಿ ಬಾಚೆಯಹಳ್ಳಿಯ ಗಂಡನಾರಾಯಣಶೆಟ್ಟಿ ಎಂಬ ಅಧಿಕಾರಿಯು ಕಬ್ಬಾಹು ನಾಡನ್ನು ಆಳುತ್ತಿದ್ದನೆಂದು ಶಾಸನವು ತಿಳಿಸುತ್ತದೆ ಹಾಗೂ ಬಬ್ಬೆಯ ನಾಯಕನ ವಂಶಾವಳಿಯನ್ನು ನೀಡಿದೆ. ಇದೇ ಸ್ಥಳದಲ್ಲಿರುವ ಇನ್ನೊಂದು ವೀರಗಲ್ಲು ಶಾಸನವು ಕ್ರಿ.ಶ.೧೧೨೪ರಲ್ಲಿ ಬಲ್ಲಗಾವುಂಡನ ಮಗ ಕೇತನನು ಹೊಯ್ಸಳ ನಾಯಕನೊಬ್ಬನ ಮೇಲೆ ಎರೆಗಿದಾಗ ನಡೆದ ಸೆಣಸಾಟದಲ್ಲಿ ಮರಣವನ್ನಪ್ಪಿದ ವಿಚಾರವನ್ನು ತಿಳಿಸುತ್ತದೆ. ಈ ವೀರಗಲ್ಲಿನಲ್ಲಿರುವ ವಿವರಗಳ ಪ್ರಕಾರ ವೀರನು ಸ್ತ್ರೀಯರನ್ನು, ಹಸುಗಳನ್ನು ಮತ್ತು ಎಮ್ಮೆಗಳನ್ನು ಅಪಹರಣಕಾರರ ವಶದಿಂದ ಪಾರುಗೊಳಿಸಿದ ಬಗ್ಗೆ ಉಲ್ಲೇಖವಿದೆ. ಶ್ರೀರಂಗಪಟ್ಟಣದ ರಂಗನಾಥ ದೇವಾಲಯದ ಗರ್ಭಗೃಹದ ತಳಪಾದಿಯ ಮೇಲಿನ ಶಾಸನವು ಕ್ರಿ.ಶ.೧೨೧೦ರಲ್ಲಿ ವೀರಬಲ್ಲಾಳ ದೇವನು ಬ್ರಹ್ಮಪುರಂ ಅಥವಾ ಚತುರ್ಮುಖನಾರಾಯಣ ಚತುರ್ವೇದಿ ಮಂಗಲಕ್ಕೆ ಗ್ರಾಮವನ್ನು ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ. ಪಾಂಡವಪುರ ತಾಲೂಕಿನ ಕೆನ್ನಾಳಿನ ಶಾಸನದಲ್ಲಿ ವೀರಬಲ್ಲಾಳನಿಗಿದ್ದ ಪೃಥ್ವೀವಲ್ಲಭ, ಮಹಾರಾಜಾಧಿರಾಜ, ಮಲೆರಾಜಾರಾಜ, ಮಲಪರೊಳುಗಂಡ, ಗಂಡಭೇರುಂಡ, ಕದನಪ್ರಚಂಡ, ಏಕಾಂಗವೀರ, ಛಲದಂಕರಾಮ, ಶನಿವಾಸಿದ್ಧಿ, ಗಿರಿದುರ್ಗಮಲ್ಲ, ಅಸಹಾಯಸೂರ ಮೊದಲಾದ ಬಿರುದುಗಳ ಬಗ್ಗೆ ದಾಖಲಿಸಿದೆ. ಇಮ್ಮಡಿ ಬಲ್ಲಾಳನ ತೊಣ್ಣೂರಿನ ಇನ್ನೊಂದು ಶಾಸನದಲ್ಲಿ ಕ್ರಿ.ಶ.೧೧೭೪ರಲ್ಲಿ ಯಾದವನಾರಾಯಣ ಚತುರ್ವೇದಿ ಮಂಗಲದ ಲಕ್ಷ್ಮೀನಾರಾಯಣ ದೇವರಿಗೆ ಆವಶ್ಯಕವಾದ ಎಣ್ಣೆಯ ಉತ್ಪಾದನೆಗಾಗಿ ಗಾಣವನ್ನು ದತ್ತಿಬಿಟ್ಟ ವಿವರಗಳನ್ನು ದಾಖಲಿಸಿದೆ. ಇದರಲ್ಲಿ ತೊಣ್ಣೂರು ಅಗ್ರಹಾರದ ಹಿರಿಯ ಹೆಗ್ಗಡೆ, ಮಾಚಯ್ಯ, ಹೆಗ್ಗಡೆ ಕೇಸಿಯಣ್ಣ ಮತ್ತು ಹೆಗ್ಗಡೆ ಕೋಮಣ್ಣ ಮೊದಲಾದವರ ಹೆಸರುಗಳಿದ್ದು ಮಾಚಯ್ಯನನ್ನು 'ದಂಡದಧಿಷ್ಠಾಯಕ' ಮತ್ತು 'ಮಹಾಪಸಾಯ್ತ' ಮುಂತಾದ ಆಡಳಿತ ಪದವಿಗಳಿಂದ ಗೌರವಿಸಿದ್ದನ್ನು ದಾಖಲಿಸಲಾಗಿದೆ. ಇದೇ ತಾಲೂಕಿನ ಹಳೇಬೀಡು ಗ್ರಾಮದ ಕಂಭೇಶ್ವರ ದೇವಾಲಯದ ತಳಪಾದಿಯ ಮೇಲೆ ಇರುವ ಶಾಸನವು ಹೊಯ್ಸಳ ವೀರಬಲ್ಲಾಳದೇವನು ಬನದ ತೊಂಡನೂರಿನ ಕಂಬೇಶ್ವರ ದೇವರಿಗೆ ಕೆರಗೋಡು ನಾಡಿನ ವ್ಯಾಪ್ತಿಯಲ್ಲಿದ್ದ ಮಲೆಯನಹಳ್ಳಿಯನ್ನು ದತ್ತಿಬಿಟ್ಟ ವಿವರಗಳನ್ನು ತಿಳಿಸುತ್ತದೆ.

ಇಮ್ಮಡಿ ನರಸಿಂಹನ ಎರಡು ಶಾಸನಗಳು ಈ ಜಿಲ್ಲೆಯಲ್ಲಿ ಲಭ್ಯವಿದ್ದು ತೊಣ್ಣೂರಿನಲ್ಲಿರುವ ಶಾಸನವು ಕ್ರಿ.ಶ.೧೨೨೩ರಲ್ಲಿ ಬೆಟ್ಟಹಳ್ಳಿ, ಶಿರಿಮಕ್ಕನಹಳ್ಳಿ, ಮಾರುಹಳ್ಳಿ ಮೊದಲಾದ ಗ್ರಾಮಗಳನ್ನು ಮಹಾಪ್ರಧಾನ ಹೆಗ್ಗಡೆ

ದಾಮಣ್ಣನು ಕೃಷ್ಣದೇವರಿಗೆ ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ. ಕೃಷ್ಣರಾಜಪೇಟೆ ತಾಲೂಕಿನ ಅಗ್ರಹಾರ ಬಾಚಿಹಳ್ಳಿಯಲ್ಲಿರುವ ವೀರಗಲ್ಲು ಶಾಸನವು ಕ್ರಿ.ಶ.೧೩ನೇ ಶತಮಾನದ ಲಕ್ಷಣವನ್ನು ಹೊಂದಿದ್ದು ಹೊಯ್ಸಳ ರಾಜ ಎರಡನೇ ನರಸಿಂಹನ ಕಾಲದಲ್ಲಿ ಈ ಪ್ರದೇಶವನ್ನು ಮಹಾಸಾಮಂತ ಬಬ್ಬೆಯ ನಾಯಕನು ಆಡಳಿತ ನಿರ್ವಹಿಸುತ್ತಿದ್ದಾಗ ಮಹಾದೇವ ನಾಯಕನೆಂಬ ವೀರನು ಬಾಚೆಯಹಳ್ಳಿ ಪ್ರದೇಶದಲ್ಲಿ ಸಂಭವಿಸಿದ ಭೀಕರ ಯುದ್ಧದಲ್ಲಿ ಮರಣವನ್ನಪ್ಪಿದ ವಿಚಾರವನ್ನು ದಾಖಲಿಸಿದೆ. ಹೊಯ್ಸಳ ಸೋಮೇಶ್ವರನ ನಾಲ್ಕು ಶಾಸನಗಳು ಲಭ್ಯವಿದೆ. ಕೃಷ್ಣರಾಜಪೇಟೆ ತಾಲೂಕಿನ ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯದಲ್ಲಿರುವ ನಾಗರಿ ಶಾಸನವು (ಕ್ರಿ.ಶ.೧೨೩೬) ಹೊಯ್ಸಳ ಸೋಮೇಶ್ವರನ ಆಳ್ವಿಕೆಯ ಬಗ್ಗೆ ಉಲ್ಲೇಖಿಸುತ್ತದೆ. ಇದರಲ್ಲಿ ಸಳನಿಂದ ಆರಂಭಿಸಿ ಹೊಯ್ಸಳರ ವಂಶವೃಕ್ಷವನ್ನು ದಾಖಲಿಸಲಾಗಿದೆ. ಈ ಶಾಸನವು ರಾಜನ ಮಂತ್ರಿಗಳು ಹಾಗೂ ಕೇತಯ್ಯನ ಮಕ್ಕಳಾದ ಬೋಗಯ್ಯ ಮತ್ತು ಮುರಾರಿ ಮಲ್ಲಯ್ಯ ಇವರುಗಳಿಗೆ ಸೋಮೇಶ್ವರನು ಕಬ್ಬಾಹು ನಾಡಿನ ವ್ಯಾಪ್ತಿಯಲ್ಲಿದ್ದ ತೆಂಗಿನಕಟ್ಟ ಗ್ರಾಮ ಹಾಗೂ ೧೧ ಹಳ್ಳಿಗಳನ್ನು ದಾನವಾಗಿ ಕೊಟ್ಟ ವಿವರಗಳನ್ನು ದಾಖಲಿಸಿದ್ದು, ಈ ದಂಡನಾಯಕರುಗಳು ಈ ಪ್ರದೇಶವನ್ನು ಪ್ರಸನ್ನ ಸೋಮನಾಥಪುರ ಎಂಬ ಅಗ್ರಹಾರವನ್ನಾಗಿ ಪರಿವರ್ತಿಸಿದ ಬಗ್ಗೆ ತಿಳಿಸುತ್ತದೆ. ಇದೇ ಸ್ಥಳದಲ್ಲಿರುವ ದ್ವಾರಪಾಲಕರ ಪೀಠದ ಶಾಸನವು ಕ್ರಿ.ಶ.೧೩ನೇ ಶತಮಾನದ ಶೈಲಿಯಲ್ಲಿದ್ದು ರೂವಾರಿ ಶಿಲ್ಪಿ ಮಲ್ಲಿತಮ್ಮನ ಹೆಸರನ್ನು ದಾಖಲಿಸಿದೆ. ಇದೇ ದೇವಾಲಯದ ಹೊರ ಭಿತ್ತಿಯಲ್ಲಿ ವಿಷ್ಣುವಿನ ದಶಾವತಾರದ ಶಿಲ್ಪಗಳಿದ್ದು ಅವರುಗಳ ಹೆಸರನ್ನು ಕೆಳಗೆ ಕೆತ್ತಲಾಗಿದೆ. ಇದೇ ತಾಲೂಕಿನ ಜಾಕನಕೆರೆ ಗ್ರಾಮದ ದಮ್ಮೇಶ್ವರ ದೇವಾಲಯದ ಬಳಿಯಿರುವ ಶಾಸನವು ಭಗ್ನವಾಗಿದ್ದು ಕ್ರಿ.ಶ.೧೨೪೨ರಲ್ಲಿ ಹೊಯ್ಸಳ ವೀರ ಸೋಮೇಶ್ವರನು ಅಳುತ್ತಿದ್ದಾಗ ದಮ್ಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದ ಬಗ್ಗೆ ತಿಳಿಸುತ್ತದೆ. ಈತನ ಅಧಿಕಾರಿಯಾಗಿದ್ದ ಬೆಳ್ಳಿಯ ವಂಶಕ್ಕೆ ಸೇರಿದ ಕಲ್ಲಗೌಡನ ವಂಶಾವಳಿಯನ್ನು ನೀಡುತ್ತಾ ದಮ್ಮಗೌಡ, ಹರಿಯಗೌಡ, ಮಾರದೇವ, ಕಲ್ಲಗೌಡ ಹಾಗೂ ಇವರುಗಳ ಪತ್ನಿಯರಾದ ಬೊಮ್ಮಗಾವುಂಡಿ, ಬೀಚ ಗಾವುಂಡಿ, ಹಿರಿಯ ಗಾವುಂಡಿ ಮತ್ತು ಮಾಚಿ ಗಾವುಂಡಿ ಇವರುಗಳ ಹೆಸರನ್ನೊಳಗೊಂಡಂತೆ ವಂಶಾವಳಿಯನ್ನು ಶಾಸನದಲ್ಲಿ ದಾಖಲಿಸಲಾಗಿದೆ. ಇದೇ ತಾಲೂಕಿನ ಅಗ್ರಹಾರ ಬಾಚಹಳ್ಳಿಯಲ್ಲಿರುವ ಶಾಸನವು ಕ್ರಿ.ಶ.೧೨೪೨ರಲ್ಲಿ ಕಬ್ಬಾಹುನಾಡಿನ ವ್ಯಾಪ್ತಿಯಲ್ಲಿದ್ದ ಬಾಚಿಯಹಳ್ಳಿಯನ್ನು ಕೂರೆಯ ನಾಯಕನು ಆಳುತ್ತಿದ್ದಾಗ ಕನ್ನಯನಾಯಕನೆಂಬ ಅಧಿಕಾರಿಯು ಬಾಚೆಯಹಳ್ಳಿಯನ್ನು ಆಕ್ರಮಿಸಿದಾಗ ನಡೆದ ಭೀಕರ ಯುದ್ಧದಲ್ಲಿ ಪಟ್ಟಣಸ್ವಾಮಿ ಮಲೆಯನು ಸುಭಟರಿ (ಶತ್ರುಗಳ)ಂದ ಇರಿತಕ್ಕೆ ಒಳಗಾಗಿ ಮರಣವನ್ನಪ್ಪಿದ ವಿಚಾರವನ್ನು ದಾಖಲಿಸಿದೆ. ಈ ವೀರಗಲ್ಲು ಶಾಸನವನ್ನು ಮಲೆಯನ ಹಿರಿಯ ಅಕ್ಕ ಮಾಳವ್ವೆಯು ಆತನ ಸ್ಮಾರಕವಾಗಿ ನೆಡೆಸಿದಳೆಂದೂ ದಾಖಲಿಸಿದೆ. ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಗ್ರಾಮದ ಶಾಸನವು ಚನ್ನಕೇಶವ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ. ಕೃಷ್ಣರಾಜಪೇಟೆ ತಾಲೂಕಿನ ಅಗ್ರಹಾರ ಬಾಚಿಹಳ್ಳಿಯ ಶಾಸನವು ಕ್ರಿ.ಶ.೧೨೫೮ರಕ್ಕೆ ಸೇರಿದ್ದು ಇದರಲ್ಲಿ ಈ ಗ್ರಾಮಕ್ಕೆ ಸೇರಿದ ಒಂದೇ ಮನೆತನದ ಏಳು ತಲೆಮಾರಿನವರು ಆತ್ಮಾರ್ಪಣೆ ಮಾಡುವುದರ ಮೂಲಕ ಯುದ್ಧದಲ್ಲಿ ಮಡಿದ ಹೊಯ್ಸಳ ಅರಸ ಎರೆಯಂಗನಿಂದ ಸೋಮೇಶ್ವರನವರೆಗಿನ ಚಕ್ರವರ್ತಿಗಳ ಆತ್ಮಕ್ಕೆ ಶಾಂತಿಕೋರಿ ಗರುಡರಾದ ಹೃದಯವಿದ್ರಾವಕ ವಿಚಾರವನ್ನು ದಾಖಲಿಸಲಾಗಿದೆ. ಭೌಗೋಳಿಕವಾಗಿ ಕಬ್ಬಾಹುನಾಡಿನ ವ್ಯಾಪ್ತಿಗೆ ಒಳಪಟ್ಟಿದ್ದ ಈ ಪ್ರದೇಶವನ್ನು ಆಳುತ್ತಿದ್ದ ಮುಗಿಲ ಮನೆತನದವರು ಮೂಲತಃ ವ್ಯಾಪಾರಿಗಳಾಗಿದ್ದು ಕ್ರಮೇಣ ಸೇನಾವೃತ್ತಿಯನ್ನು ಅವಲಂಬಿಸಿ ಸಾಮಂತರಾದರೆಂದು ತಿಳಿದುಬರುತ್ತದೆ. ಅಗ್ರಹಾರ ಮತ್ತು ಗ್ರಾಮಗಳ ಸಂರಕ್ಷಣೆಯ ಜವಾಬ್ದಾರಿ ಹೊತ್ತಿದ್ದ ಇವರು ತಮ್ಮದೇ ಆದ ಸುರಕ್ಷಿತ ವ್ಯವಸ್ಥೆಯನ್ನು ಕಟ್ಟಿಕೊಂಡಿದ್ದರು. ಆದರೆ ಮುಖ್ಯವಾಗಿ ಈ ಮನೆತನದವರು ಹೊಯ್ಸಳರಿಗೆ ಗರುಡರಾಗಿದ್ದರೆಂಬುದು (ಅಂಗರಕ್ಷಕರು) ಬಹಳ ಪ್ರಮುಖವಾಗುತ್ತದೆ. ಅಪ್ರತಿಮ ಸ್ವಾಮಿ ನಿಷ್ಠೆಯನ್ನು ಹೊಂದಿದ್ದ ಈ ಗರುಡರು ಆತ್ಮಾರ್ಪಣೆ ಮಾಡಿಕೊಳ್ಳುವ ಸಂದರ್ಭದಲ್ಲಿ ತಮ್ಮ ಪರಿವಾರ ಹಾಗೂ ಸತಿಯರೊಂದಿಗೆ ಪ್ರಾಣವನ್ನು ತ್ಯಾಗ ಮಾಡುತ್ತಿದ್ದರು ಎಂದು ಶಾಸನವು ದಾಖಲಿಸಿದೆ. ಮುಗಿಲ ಮನೆತನದಲ್ಲಿ ಹಿಂದೆ ಗರುಡರಾದವರ ವಂಶಾವಳಿಯನ್ನು ಈ ರೀತಿ

ಶಾಸನದಲ್ಲಿ ನೀಡಲಾಗಿದೆ. ಗಂಡನಾರಾಯಣ ಸೆಟ್ಟಿ ಮತ್ತು ಮಾರವ್ವೆ ನಾಯಕಿ, ಹೊಯ್ಸಳಸೆಟ್ಟಿ ಹಾಗೂ ಪತ್ನಿ ಮಾಚವ್ವೆ ನಾಯಕಿ, ಕೂರೆಯ ನಾಯಕ ಮತ್ತು ಮಾರವ್ವೆ, ಶಿವನೇಯ ನಾಯಕ, ಲಕ್ಕೆಯ ನಾಯಕ ಮತ್ತು ಪತ್ನಿ ಗಂಗಾದೇವಿ ಹಾಗೂ ಕನ್ನೆಯ ನಾಯಕ. ಇವರುಗಳನ್ನು ಲೆಂಕರುಗಳು ಮತ್ತು ಕನ್ನಡಿಗ ಮನೆವಾಳ್ತನವನ್ನು ನಡೆಸಿಕೊಂಡು ಹೋಗುತ್ತಿದ್ದ ಸೇನಾನಾಯಕರುಗಳೆಂದು ಕರೆದು ಕಬ್ಬಾಹುನಾಡನ್ನು ಆಳ್ವಿಕೆ ಮಾಡುತ್ತಿದ್ದರೆಂದು ಶಾಸನವು ದಾಖಲಿಸಿದೆ. ಈ ಸ್ಥಳದಲ್ಲಿ ಇರುವ ಗರುಡ ಸ್ತಂಭಗಳು ಹೊಯ್ಸಳ ಅರಸನಿಗೆ ಪ್ರಾಣ ತ್ಯಾಗ ಮಾಡಿದ ಸ್ಮಾರಕಗಳಾಗಿವೆ.

ಮುಮ್ಮಡಿ ನರಸಿಂಹನ ಒಟ್ಟು ಹತ್ತು ಶಾಸನಗಳು ಈ ಜಿಲ್ಲೆಯಲ್ಲಿ ಲಭ್ಯವಿದ್ದು ಅವುಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದಾಗಿದೆ. ಕೃಷ್ಣರಾಜಪೇಟೆ ತಾಲೂಕಿನ ಭೈರಾಪುರದ ಶಾಸನವು ಕ್ರಿ.ಶ.೧೨೬೭ರಲ್ಲಿ ಬೊಮ್ಮನಾಯಕನಹಳ್ಳಿ ಅಥವಾ ಭೈರಾಪುರದಲ್ಲಿ ಮಹಾಪ್ರಧಾನ ಸೋಮೆಯ ದಂಡನಾಯಕನ ಹಿರಿಯ ಅಕ್ಕ ರೇಕವ್ವೆಯು ಭೈರವೇಶ್ವರ ದೇವಾಲಯವನ್ನು ನಿರ್ಮಾಣ ಮಾಡಿ ಈ ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿದ ಬಗ್ಗೆ ವಿವರಿಸುತ್ತದೆ. ದೇವಾಲಯಕ್ಕೆ ನೀಡಲಾದ ಹಲವು ದಾನಗಳ ವಿವರವನ್ನು ಶಾಸನದಲ್ಲಿ ನೀಡಲಾಗಿದೆ. ತೊಣ್ಣೂರು ಈತನ ಕಾಲದಲ್ಲಿಯೂ ಹೊಯ್ಸಳರ ದ್ವಿತೀಯ ರಾಜಧಾನಿಯಾಗಿ ಮುಂದುವರೆಯಿತು. ತೊಣ್ಣೂರಿನ ಕೈಲಾಸೇಶ್ವರ ದೇವಾಲಯದ ತಳಪಾದಿಯ ಮೇಲಿರುವ ಶಾಸನವು ಕ್ರಿ.ಶ.೧೨-೧೩ನೇ ಶತಮಾನದ ಲಕ್ಷಣವನ್ನು ವ್ಯಕ್ತಪಡಿಸುತ್ತಲಿದ್ದು ಹೊಯ್ಸಳ ನರಸಿಂಹದೇವನ ಆಳ್ವಿಕೆಯ ಅವಧಿಯಲ್ಲಿ ದೇವಪಿಳ್ಳೈ ಎಂಬ ಸ್ಥಾನಪತಿಯು ಕೈಲಾಸೇಶ್ವರ ದೇವರಿಗೆ ರಾಜನು ನೀಡಿದ ದತ್ತಿ ದಾನಗಳನ್ನು ಸಂರಕ್ಷಿಸಿ ಕಾರ್ಯರೂಪಕ್ಕೆ ತರುವಲ್ಲಿ ನಿಗಾವಹಿಸುತ್ತಿದ್ದ ಅಂಶವನ್ನು ತಿಳಿಸುತ್ತದೆ. ಇದೇ ಊರಿನ ಖಾಸಗಿ ಹೊಲದಲ್ಲಿರುವ ಶಾಸನವು ಕ್ರಿ.ಶ.೧೨೭೬ರಲ್ಲಿ ಹೊಯ್ಸಳ ಮುಮ್ಮಡಿ ನರಸಿಂಹನ ಆಳ್ವಿಕೆಯ ಕಾಲದಲ್ಲಿ ತಿರುನಾರಾಯಣ ಪೆರಮಾಳ್ ದೇವರಿಗೆ ಯಾದವನಾರಾಯಣ ಚತುರ್ವೇದಿ ಮಂಗಲಂ (ತೊಣ್ಣೂರು) ಅಗ್ರಹಾರದ ಮಹಾಜನಗಳು ಬಿಟ್ಟ ದತ್ತಿಯನ್ನು ದಾಖಲಿಸಿದೆ. ಇದೇ ತಾಲೂಕಿನ ಕಾಚೇನಹಳ್ಳಿ ದೇವಾಲಯದ ಹೊರಗೋಡೆಯ ಮೇಲೆ ಕೆತ್ತಲಾಗಿದ್ದ ಶಾಸನವು ಭಗ್ನವಾಗಿದ್ದು ಕ್ರಿ.ಶ.೧೨೬೯ರಲ್ಲಿ ಹೊಯ್ಸಳ ನರಸಿಂಹದೇವನು ಆಳುತ್ತಿದ್ದಾಗ ಇದೇ ಸ್ಥಳದ ಮಲ್ಲಿಕಾರ್ಜುನ ದಣ್ಣಾಯಕನೆಂಬ ಅಧಿಕಾರಿಯು ಹಲವು ದಾನಗಳನ್ನು ನೀಡಿದ ವಿಚಾರವನ್ನು ತಿಳಿಸುತ್ತದೆ. ಪಾಂಡವಪುರ ತಾಲೂಕಿನ ಹೊಸಕೋಟೆ ಗ್ರಾಮದ ನಿಷ್ಕಾಮೇಶ್ವರ ದೇವಾಲಯದ ಗರ್ಭಗೃಹದ ದಕ್ಷಿಣ ಗೋಡೆಯ ಮೇಲಿನ ಶಾಸನವು ಶಿಥಿಲಗೊಂಡಿದ್ದು ಕ್ರಿ.ಶ.೧೨೭೩-೭೪ರಲ್ಲಿ ಮುಮ್ಮಡಿ ನರಸಿಂಹನು ಈ ಪ್ರದೇಶವನ್ನು ಆಳುತ್ತಿದ್ದಾಗ ಈ ದೇವಾಲಯದ (ನಿಷ್ಕಾಮೇಶ್ವರ) ಸ್ಥಾನಪತಿ ನಿಕ್ಕೀಶ್ವರಮ್ ಶಂಭೂವಿಗೂ ಹಾಗೂ ನಾಯಕ ದೇವನ ಮಗ ಉಯ್ಯಕೊಂಡ ಪಿಳ್ಳೈ ಇಬ್ಬರಿಗೂ ದೇವಾಲಯದ ಸೇವೆಗಾಗಿ ನೀಡಿದ ದತ್ತಿಯನ್ನು ದಾಖಲಿಸುತ್ತದೆ.

ಮುಮ್ಮಡಿ ಬಲ್ಲಾಳನ ಕಾಲದ ಅತಿ ಹೆಚ್ಚು ಅಂದರೆ ೧೫ ಶಿಲಾ ಶಾಸನಗಳು ಈ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ದೊರೆತಿವೆ. ಕೃಷ್ಣರಾಜಪೇಟೆ ತಾಲೂಕಿನ ಚಟ್ಟನಹಳ್ಳಿಯ ವೀರಗಲ್ಲು ಶಾಸನದಲ್ಲಿ ಕ್ರಿ.ಶ.೧೩೦೩ರಲ್ಲಿ ಮುಮ್ಮಡಿ ಬಲ್ಲಾಳನು ರಾಜ್ಯಾಡಳಿತವನ್ನು ಮಾಡುತ್ತಿದ್ದಾಗ ಬೆಮ್ಮತ್ತೂರ ಕಲ್ಲಿನ (ಚಿತ್ರದುರ್ಗ) ಸೋಮೆಯ ದಣ್ಣಾಯಕನು ಕಂಪಿಲನ ವಿರುದ್ಧ ಹೊಳಲ್ಕೆರೆಯಲ್ಲಿ ಭೀಕರ ಯುದ್ಧವು ಸಂಭವಿಸಿದಾಗ ಚಟ್ಟನಹಳ್ಳಿಯವನಾಗಿದ್ದ ಹಡಪದ ಸಾಯಣ್ಣನೆಂಬ ವೀರನು ಕಾದಾಡಿ ಮರಣವನ್ನಪ್ಪಿದನೆಂದು ದಾಖಲಿಸಿದೆ. ಇದೇ ತಾಲೂಕಿನ ಹರಿಹರಪುರ ಗ್ರಾಮದ ಚನ್ನಕೇಶವ ದೇವಾಲಯದಲ್ಲಿರುವ ಶಾಸನದಲ್ಲಿ ಕ್ರಿ.ಶ.೧೩೧೧ರಲ್ಲಿ ಹೊಯ್ಸಳ ಮುಮ್ಮಡಿ ಬಲ್ಲಾಳನ ರಾಜಗುರು ಸರ್ವಜ್ಞ ವಿಷ್ಣುಭಟ್ಟಯ್ಯನ ಮಗ ಹರಿಹರ ಭಟ್ಟೋಪಾಧ್ಯಾನಿಗೆ ಮೊಡವನಕೋಡಿ, ಚಂಡಿಚೊಳೆ, ಕೂಡಲುಗುಪ್ಪ ಮೊದಲಾದ ಗ್ರಾಮಗಳನ್ನು ದಾನವಾಗಿ ನೀಡಲಾಯಿತೆಂದು ದಾಖಲಿಸಿದೆ. ಹರಿಹರಪುರದಲ್ಲಿ ನಿರ್ಮಿಸಲಾದ ನೀರಾವರಿ ಅಣೆಕಟ್ಟೆ ಹಾಗೂ ಕೃಷಿ ನಾಲೆಯನ್ನು ತಪಾಸಣೆ ಕೈಗೊಳ್ಳುವ ಸಲುವಾಗಿ ಮುಮ್ಮಡಿ

ಬಲ್ಲಾಳನು ಭೇಟಿಕೊಟ್ಟ ವಿಚಾರವನ್ನೂ ಉಲ್ಲೇಖಿಸುತ್ತದೆ. ಈ ದಾಖಲೆಯಲ್ಲಿ ರಾಜನು ವಿಧಿಸಿದ ಹೆಜ್ಜುಂಕ ಹಾಗೂ ನಾಡಸುಂಕಗಳೆಂಬ ಎರಡು ತೆರಿಗೆಗಳ ಬಗ್ಗೆ ವಿವರಿಸಲಾಗಿದೆ. ಇದೇ ತಾಲೂಕಿನ ಕೈಗೋನಹಳ್ಳಿಯ ವೀರಗಲ್ಲು ಶಾಸನವು ಅಸ್ಪಷ್ಟವಾಗಿದ್ದು ಹೊಯ್ಸಳ ವೀರನರಸಿಂಹನ ಆಳ್ವಿಕೆಗೆ ಸೇರಿದೆ. ಇದರಲ್ಲಿ ಸಂಕಿಯವರ ಕುಟುಂಬಕ್ಕೆ ಸೇರಿದ ಕಪಿಗೊಂಡ, ಕರಕಗೌಡ, ಭುವಗೌಡ, ಗೌಡಗೊಡ್ಡ, ರಾಯಗೌಡ ಮತ್ತು ಮುರಾರಿರಾಯ ಮೊದಲಾದವರನ್ನು ಹೆಸರಿಸಲಾಗಿದ್ದು ಶಾಸನದ ಉಳಿದ ವಿವರಗಳು ಸ್ಪಷ್ಟವಾಗಿ ತಿಳಿಯುವುದಿಲ್ಲ. ಇದೇ ತಾಲೂಕಿನ ವರಾಹನಾಥ ಕಲ್ಲಹಳ್ಳಿಯ ವರಾಹನಾಥ ದೇವಾಲಯದ ಬಳಿಯಿರುವ ಶಾಸನದಲ್ಲಿ ಕ್ರಿ.ಶ.೧೩೩೪ರಲ್ಲಿ ಮುಮ್ಮಡಿ ಬಲ್ಲಾಳನು ಆಳ್ವಿಕೆ ಮಾಡುತ್ತಿದ್ದಾಗ ಕಲ್ಲಹಳ್ಳಿ ಗ್ರಾಮವನ್ನು ಮಹಾಪ್ರಧಾನ ಆದಿಸಿಂಗೆಯ ನಾಯಕನು ಹೊಯ್ಸಳ ರಾಣಿ ದೇಮಲಾದೇವಿಯ ನೆನಪಿಗಾಗಿ ದೇವಲಾಪುರ ಅಗ್ರಹಾರವೆಂದು ಹೆಸರನ್ನು ಬದಲಿಸಿದ ವಿವರಗಳನ್ನು ದಾಖಲಿಸಿದೆ. ಈ ದಾನವನ್ನು ಹೊಯ್ಸಳ ರಾಜನ ರಾಜಗುರು ಗುಮ್ಮಟದೇವನು ದೇವಲಾಪುರ ಅಗ್ರಹಾರದ ಸಮಸ್ತ ಮಹಾಜನಗಳ ಸಮ್ಮುಖದಲ್ಲಿ ಮಾಡಿದನೆಂದು ಶಾಸನದಲ್ಲಿ ದಾಖಲಿಸಲಾಗಿದೆ. ಶಾಸನದ ಕೊನೆಯ ಸಾಲುಗಳಲ್ಲಿ ನಾಡಸೇನಭೋವ ಕಾಮಯದಣ್ಣಾಯಕ ಹಾಗೂ ಸೇನಭೋವ ರಾಮಂಣ ಮೊದಲಾದ ಅಧಿಕಾರಿಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಪಾಂಡವಪುರ ತಾಲೂಕಿನ ತೊಣ್ಣೂರಿನ ಕೃಷ್ಣದೇವಾಲಯದ ಮಹಾದ್ವಾರದ ಬಳಿಯಿರುವ ಶಾಸನವು ಕ್ರಿ.ಶ.೧೩ನೇ ಶತಮಾನದ ಲಕ್ಷಣವನ್ನು ವ್ಯಕ್ತಪಡಿಸುತ್ತಿದ್ದು, ಇದರ ಮೇಲಿರುವ ಗೋಪುರವನ್ನು ವೀರಬಲ್ಲಾಳನ ತಿರುಗೋಪುರ ಎಂದು ಕರೆದಿರುವುದನ್ನು ದಾಖಲಿಸಲಾಗಿದೆ. ಇದೇ ತಾಲೂಕಿನ ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದಲ್ಲಿರುವ ಶಾಸನವು ಕ್ರಿ.ಶ.೧೪ನೇ ಶತಮಾನ ಅಂದರೆ ಮುಮ್ಮಡಿಬಲ್ಲಾಳನ ಆಳ್ವಿಕೆಯಲ್ಲಿ ಮಹಾಪ್ರಧಾನ ಪೆರುಮಾಳೆ ದಂಣ್ಣಾಯಕನ ಮಕ್ಕಳಾದ ಮಾದಪ್ಪ ದಣ್ಣಾಯಕ ಮತ್ತು ಕೇತಪ್ಪ ದಣ್ಣಾಯಕ ಎಂಬ ಇಬ್ಬರು ಅಧಿಕಾರಿಗಳು ಲಕ್ಷ್ಮಣದಾಸ ಎಂಬ ಅಧಿಕಾರಿಗೆ ಆಡಳಿತವನ್ನು ವಹಿಸಿಕೊಟ್ಟಿರುತ್ತಾರೆಂದು ತಿಳಿಸುತ್ತದೆ. ಈ ದೇವಾಲಯದ ಮೂಲದೇವರನ್ನು ಮೇಲುಕೋಟೆಯ ತಿರುನಾರಾಯಣ ದೇವರೆಂದು ಕರೆದಿರುವುದು ಶಾಸನದಿಂದ ವ್ಯಕ್ತವಾಗುತ್ತದೆ. ಇದೇ ತಾಲೂಕಿನ ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದ ದೊಡ್ಡ ಅಡುಗೆ ಮನೆಯ ಗೋಡೆಯ ಮೇಲಿರುವ ಶಾಸನವು ಕ್ರಿ.ಶ.೧೪ನೇ ಶತಮಾನದ ಲಕ್ಷಣವನ್ನು ವ್ಯಕ್ತಪಡಿಸುತ್ತಿದ್ದು ಹೊಯ್ಸಳ ವೀರಬಲ್ಲಾಳನು ಸಾಮ್ರಾಜ್ಯವನ್ನು ಆಳ್ವಿಕೆ ಮಾಡುತ್ತಿದ್ದ ಅವಧಿಯಲ್ಲಿ ಮಹಾಪ್ರಧಾನ ಪೆರುಮಾಳ ದಣ್ಣಾಯಕನ ಮಕ್ಕಳಾದ ಮಾದಪ್ಪ ದಣ್ಣಾಯಕ ಮತ್ತು ಕೇತಪ್ಪ ದಣ್ಣಾಯಕ ಇವರುಗಳು ಲಕ್ಷ್ಮಣದಾಸ ಎಂಬ ನಾರಾಯಣನ ಪುರೋಹಿತನಿಗೆ ಮೇಲುಕೋಟೆಯ ತಿರುನಾರಾಯಣನ ನಿವೇದನೆಗಾಗಿ ವಾರ್ಷಿಕ ೧೫ ಗುಳಗಳ ಏಲಕ್ಕಿಯನ್ನು ದಾನವಾಗಿ ನೀಡುತ್ತಿದ್ದುದರ ಬಗ್ಗೆ ದಾಖಲಿಸಿದೆ. ಮಳವಳ್ಳಿ ತಾಲೂಕಿನ ಅಂತರವಳ್ಳಿ ಗ್ರಾಮದ ಸೋಮೇಶ್ವರ ದೇವಾಲಯದ ತಳಪಾದಿಯ ಕಲ್ಲಿನ ಶಾಸನದಲ್ಲಿ ಕ್ರಿ.ಶ.೧೨–೧೩ನೇ ಶತಮಾನದ ಲಕ್ಷಣವನ್ನು ಹೊಂದಿದ್ದು ಹೊಯ್ಸಳ ಅರಸು ವೀರಬಲ್ಲಾಳನ ಅಳ್ವಿಕೆಯ ಅವಧಿಯಲ್ಲಿ ಆಡಳಿತ ನಿರ್ವಹಿಸುತ್ತಿದ್ದ ಮಹಾಪ್ರಧಾನಿ ಚಂದ್ರಮೂಳಿಯಣ್ಣನು ಕಳಲೆನಾಡಿನ ತೇನಪಾಗ್ಯೆ ಅನದಾನಪಳ್ಳಿಯ (ಅಂತರವಳ್ಳಿಯ) ಕೈಲಾಸಸ್ಥಾನ ದೇವಾಲಯದ ಆವರಣದಲ್ಲಿ ಚಂದ್ರಮೌಳೀಶ್ವರ ದೇವಾಲಯವನ್ನು ಕಟ್ಟಿಸಿದ ಬಗ್ಗೆ ಉಲ್ಲೇಖಿಸುತ್ತದೆ. ಪಾಂಡವಪುರ ತಾಲೂಕಿನ ಹಳೇಬೀಡು ಗ್ರಾಮದಲ್ಲಿರುವ ಶಾಸನವು ಮುಮ್ಮಡಿಬಲ್ಲಾಳನ ಕಾಲಕ್ಕೆ ಸೇರಿದ್ದು ಮಹಾಪ್ರಧಾನ ಹಿರಿಯಕೊಟ್ಟರವ ಹೆಗ್ಗಡೆಯ ಮಗ ಮಂಚಯನಾಯಕನು ಹಳೆಯಬೀಡನ್ನು ಆಳುತ್ತಿದ್ದು ಇದೇ ಸ್ಥಳದಲ್ಲಿ ಭೈರವದೇವರ ದೇವಾಲಯವನ್ನು ಕಟ್ಟಿಸಿ ಮೂಲವಿಗ್ರಹವನ್ನು ಪ್ರತಿಷ್ಠಾಪಿಸಿದ ಬಗ್ಗೆ ದಾಖಲಿಸಿದೆ. ಪಾಂಡವಪುರ ತಾಲೂಕಿನ ತೊಣ್ಣೂರಿನ ವಾಹನ ಮಂಟಪದ ಶಾಸನದ ಬಲಪಾರ್ಶ್ವದಲ್ಲಿರುವ ಭಗ್ನವಾಗಿರುವ ಶಾಸನದಲ್ಲಿ ಹೊಯ್ಸಳ ಸಾಮ್ರಾಟನು (ಹೆಸರು ತಿಳಿಯುವುದಿಲ್ಲ) ವಿವಿಧ ರಾಜ್ಯಗಳ ದಿಗ್ವಿಜಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ದೋರಸಮುದ್ರಕ್ಕೆ ಹಿಂದಿರುಗಿದ ವಿಚಾರವನ್ನು ತಿಳಿಸುತ್ತದೆ. ಹೊಯ್ಸಳರ ಕಾಲದ ಕಳಲೆನಾಡು (ಈಗಿನ ಹಲಗೂರು ಪರಿಸರ) ಕಲ್ಕುಣಿನಾಡು (ನಾಗಮಂಗಲ ಪರಿಸರ) ಎಡತೊರೆ ನಾಡು (ಕೆ.ಆರ್.ನಗರ

ಪ್ರದೇಶ), ಶ್ರೀರಂಗಪಟ್ಟಣಸೀಮೆ, ಸಿಂಧಘಟ್ಟಸೀಮೆ ಮೊದಲಾದ ಆಡಳಿತ ವಿಭಾಗಗಳು ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಮುಮ್ಮಡಿಬಲ್ಲಾಳನು ಐದು ದಶಕಗಳಿಗೂ ಹೆಚ್ಚುಕಾಲ ಆಳ್ವಿಕೆ ಮಾಡಿದನು. ಆದರೆ ಅವನು ಕಳೆದು ಹೋದ ರಾಜ್ಯದ ಸಡಿಲವಾದ ಸೂತ್ರಗಳನ್ನು ಸಂಚಯಿಸಲು ಮತ್ತು ಅನಿವಾರ್ಯಗಳ ವಿರುದ್ಧ ಧೈರ್ಯವಾಗಿ ಸೆಣಸಲು ಸಮರ್ಥ ಪ್ರಯತ್ನಗಳನ್ನೂ ಮಾಡಿದನು. ದುರದೃಷ್ಟವಶಾತ್ ಆತನಿಗೆ ಉತ್ತರದಲ್ಲಿ ಬದಲಾಗುತ್ತಿರುವ ರಾಜಕೀಯ ಪರಿಸ್ಥಿತಿಯನ್ನು ತಿಳಿದುಕೊಂಡು ಸಂದರ್ಭೋಚಿತ ತಯಾರಿ ಮಾಡುವ ಹೊತ್ತಿಗಾಗಲೇ ಮುಪ್ಪು ಕವಿದಿತ್ತು. ಉತ್ತರದ ದೆಹಲಿಯಲ್ಲಿ ಸುಲ್ತಾನರ ರಾಜ್ಯವು ಸ್ಥಾಪಿಸಲ್ಪಟ್ಟು ಬಲ್ಲಾಳನು ಅಧಿಕಾರಕ್ಕೆ ಬರುವ ಮುನ್ನ ಜಲಾಲ್‌ವುದ್‌ದೀನ್ ಖಿಲ್ಜಿಯು ಸುಲ್ತಾನನಾಗಿ ಆಳುತ್ತಿದ್ದನು. ಆತನ ಸೋದರಳಿಯನೇ ಅಲ್ಲಾಉದ್ದೀನ್‌ಖಿಲ್ಜಿ. ಅಲ್ಲಾಉದ್ದೀನ್‌ಖಿಲ್ಜಿಯು ೧೨೯೬ರಲ್ಲಿ ಸೇಉಣರ ರಾಜಧಾನಿಯನ್ನು ಮುತ್ತಿ ಅಪಾರವಾದ ಸಂಪತ್ತನ್ನು ಕೊಳ್ಳೆಹೊಡೆದು ಹಿಂದಿರುಗಿದನು. ಸೇಉಣ ರಾಮಚಂದ್ರನು ಮುಸ್ಲಿಮರ ದಾಳಿಯ ಅಪಾಯವನ್ನು, ಗುರುತಿಸಲು ನಿರಾಕರಿಸಿದನು. ಮತ್ತೊಮ್ಮೆ ಅಲ್ಲಾಉದ್ದೀನನು ತನ್ನ ಸೇನಾನಿಯಾದ ಮಲ್ಲಿಕ್ ಕಾಫುರನನ್ನು ಹೊಯ್ಸಳರ ರಾಜಧಾನಿಯನ್ನು ಹಾಗೂ ಇನ್ನೂ ದಕ್ಷಿಣದ ಕೋರಮಂಡಲ ತೀರಪ್ರದೇಶವನ್ನು ಮುತ್ತಿಗೆ ಹಾಕಲು ೧೩೧೦ರಲ್ಲಿ ಕಳುಹಿಸಿದನು. ದಕ್ಷಿಣದಲ್ಲಿದ್ದ ಬಲ್ಲಾಳನು ಅವಸರದಿಂದ ರಾಜಧಾನಿಗೆ ಮರಳಿ ಪ್ರಬಲವಾದ ತಡೆಯನ್ನು ಒಡ್ಡಿದನು. ಆದರೆ ಮಹಮದೀಯರ ಸೇನೆಯು ತಾವೇ ಹೆಚ್ಚು ಸಮರ್ಥವೆಂದು ತೋರಿಸಿಕೊಟ್ಟಿತು. ನಂತರ ೧೩೧೮ರಲ್ಲಿ ಮಲ್ಲಿಕ್‌ಕಾಫುರನು ಕಂಪಿಲನ ಮೇಲೆ ಎರಗಿದನು. ಹೊಯ್ಸಳರಿಗೂ ಕಂಪಿಲನಿಗೂ ಯುದ್ಧವು ೧೩೨೦ರಲ್ಲಿ ಸಂಭವಿಸಿ ಹೊಯ್ಸಳ ಸೈನ್ಯ ಅತ್ಯಂತ ದುರ್ಬಲಗೊಂಡಿತು. ಪುನಃ ಚೇತರಿಸಿಕೊಳ್ಳಲು ಹೊಯ್ಸಳರಿಗೆ ಸಾಧ್ಯವಾಗದೆ, ಸಾಮ್ರಾಜ್ಯದ ಪೂರ್ಣ ಪತನವಾಯಿತು. ಬಲ್ಲಾಳನನ್ನು ಹೃದಯವಿದ್ರಾವಕವಾಗಿ ಕೊಂದು ಹಾಕಲಾಯಿತು, ಎಂದು ಇಬ್ಬನ್ ಬತೂತ ಎಂಬ ಪರ್ಶಿಯನ್ ಪ್ರವಾಸಿಯು ವರದಿ ಮಾಡಿರುತ್ತಾನೆ.

ಹೀಗೆ ಹೊಯ್ಸಳರ ಆಡಳಿತಾವಧಿಯಲ್ಲಿ ರಾಜ್ಯದ ಇತರೆ ಭಾಗಗಳಲ್ಲಾದಂತೆ ಈ ಜಿಲ್ಲೆಯಲ್ಲೂ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಗಣನೀಯ ಪ್ರಮಾಣದಲ್ಲಿ ಅಭಿವೃದ್ಧಿಯಾಯಿತು. ಬೌದ್ಧ, ಜೈನ, ಶೈವ, ವೈಷ್ಣವ ಹಾಗೂ ಶ್ರೀವೈಷ್ಣವ ಧರ್ಮಗಳು, ರಾಜಾಶ್ರಯದಲ್ಲಿ ಬೇಲೂರು ಶಾಸನದಲ್ಲಿ ಉಲ್ಲೇಖಗೊಂಡಂತೆ 'ಯಂಶೈವಾ.................ಬ್ರಹ್ಮೇತಿ ವೇದಾಂತಿನೋ' ಎಂಬ ಉದಾರ ತತ್ವಗಳಿಗನುಗುಣವಾಗಿ ಎಲ್ಲ ಧರ್ಮೀಯರು ಸರಿಸಮವಾದ ರಕ್ಷಣೆ ಪಡೆದಿದ್ದರು. ಕಂಬದಹಳ್ಳಿ, ಬೋಗಾದಿ, ಬೆಳ್ಳೂರು, ಸೂರನಹಳ್ಳಿ, ತಿಪ್ಪೂರು, ಬಸ್ತಿಹೊಸಕೋಟೆ, ಬಸರಾಳು, ಬೂದನೂರು, ತೆಂಗಿನಘಟ್ಟ, ಕಿಕ್ಕೇರಿ, ಸಿಂದಘಟ್ಟ, ಗೋವಿಂದನಹಳ್ಳಿ, ಹೊಸಹೊಳಲು, ತೊಣ್ಣೂರು, ಬೆಳಗೊಳ, ಶ್ರೀರಂಗಪಟ್ಟಣ, ಮೇಲುಕೋಟೆ ಮೊದಲಾದ ಸ್ಥಳಗಳು ಸಾಂಸ್ಕೃತಿಕ ಮಹತ್ವ ಪಡೆದವು. ಅದರಲ್ಲೂ, ಮೇಲುಕೋಟೆಯು ಶ್ರೀವೈಷ್ಣವ ಧರ್ಮೀಯರಿಗೆ ಪವಿತ್ರ ಯಾತ್ರಾಸ್ಥಳವಾಗಿ ಪ್ರಾಮುಖ್ಯತೆಗಳಿಸಿತು. ಈ ಜಿಲ್ಲೆಯಲ್ಲಿ ಕಂಡುಬರುವ ೧೦೦ಕ್ಕೂ ಹೆಚ್ಚು ದೇವಾಲಯಗಳು ಅವರ ಅಪ್ರತಿಮ ಸಾಂಸ್ಕೃತಿಕ ಹಾಗೂ ಕಲಾ ಪ್ರೌಢಿಮೆಗೆ ಹಿಡಿದ ಕೈಗನ್ನಡಿಯಾಗಿದೆ.

## ವಿಜಯನಗರ ಸಾಮ್ರಾಜ್ಯ

ಹೊಯ್ಸಳ ಸಾಮ್ರಾಜ್ಯದ ವಿನಾಶದ ನಂತರ ಉಂಟಾಗಿದ್ದ ರಾಜಕೀಯ ಶೂನ್ಯವು, ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ನಿವಾರಣೆಗೊಂಡು ರಾಜಕೀಯ ಭದ್ರತೆಗೆ ಎಡೆಮಾಡಿಕೊಟ್ಟಿತು. ಸಂಗಮನ ಮಕ್ಕಳಾದ ಹರಿಹರ, ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ ಇವರುಗಳು ಹೊಯ್ಸಳ ವಂಶದೊಡನೆ ಸಂಬಂಧ ಹೊಂದಿದ್ದರು. ವಿಜಯನಗರದ ಹರಿಹರನು ತನ್ನ ಮಗಳನ್ನು ಹೊಯ್ಸಳ ಅಧಿಕಾರಿ ಸೋಮಯ್ಯ ದಂಡನಾಯಕ ಮಗ ಬಲ್ಲಪ್ಪ ದಂಡನಾಯಕನಿಗೆ ವಿವಾಹ ಮಾಡಿಕೊಟ್ಟಿದ್ದನು. ಮುಮ್ಮಡಿ ಬಲ್ಲಾಳನ ತಂಗಿಯನ್ನು ಸೋಮಯ್ಯನು ವಿವಾಹವಾಗಿದ್ದನು ಮತ್ತು ಮುಮ್ಮಡಿಬಲ್ಲಾಳನ ಸೋದರನ ಮಗನು ಹರಿಹರನ ಅಳಿಯನಾಗಿದ್ದನು. ಸೋಮನಾಥಪುರ

(ಟಿ.ನರಸೀಪುರ ತಾಲೂಕು) ದೇವಾಲಯವನ್ನು ನಿರ್ಮಿಸಿದ ಸೋಮಯ್ಯ ದಂಡನಾಯಕನು, ಮೇಲೆ ಹೆಸರಿಸಿರುವ ಸೋಮಯ್ಯ ದಂಡನಾಯಕನ ಮೊಮ್ಮಗನೆಂದು ಹಲವಾರು ವಿದ್ವಾಂಸರು ಒಪ್ಪಿರುತ್ತಾರೆ. ಸಂಗಮ ವಂಶ ಮತ್ತು ಹರಿಹರನು ಬೇಲೂರಿನ ಕೇಶವ (ವಿಜಯನಾರಾಯಣ) ದೇವಾಲಯದೊಡನೆ ಹೊಂದಿದ್ದ ಸಂಬಂಧಗಳು ಹಾಗೂ ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ಕಂಡುಬರುವ ಹಲವು ಸಿಂಹ ಶಿಲ್ಪಗಳು ಮತ್ತು ಅವರು ಧರಿಸಿದ್ದ ಬಿರುದುಗಳಾದ ಭಾಷೆಗೆ ತಪ್ಪದ 'ರಾಯರಗಂಡ' ಹಾಗೂ 'ಮೂರು ರಾಯರ ಗಂಡ' ಇವುಗಳು ಸಂಸ್ಕೃತ ಶಾಸನಗಳಲ್ಲೂ ಕಂಡುಬರುವುದರಿಂದ ವಿಜಯನಗರ ಅರಸರು ಮೂಲತಃ ತೆಲಗು ದೇಶದವರಲ್ಲದೇ ಕನ್ನಡ ಮೂಲದವರೆಂಬ ವಾದವು ಪುಷ್ಠಿ ಪಡೆಯುತ್ತದೆ. ಆದರೆ ವಾರಂಗಲ್‌ನ ತೆಲುಗು ಶಾಸನಗಳು ಅವರನ್ನು ತೆಲುಗು ಮೂಲದವರೆಂದು ಪ್ರತಿಪಾದಿಸುತ್ತವೆ. ಮುಮ್ಮಡಿ ಬಲ್ಲಾಳನು ತನ್ನ ಸಾಮ್ರಾಜ್ಯ ಉತ್ತರ ಭಾಗದ ರಾಜಧಾನಿಯನ್ನು 'ವಿರೂಪಾಕ್ಷ ಹೊಸ ಪಟ್ಟಣ' ವೆಂದು ಕರೆದಿದ್ದು, ಇದು 'ಹಂಪಿ' ಇರಬೇಕೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಹೊಸ ಪಟ್ಟಣದ ಆಡಳಿತವನ್ನು ನಿರ್ವಹಿಸಲು ಬಲ್ಲಾಳನು ಹರಿಹರನನ್ನು ನೇಮಿಸಿದ್ದನೆಂಬ ಅಭಿಪ್ರಾಯವಿದೆ. ವಿಜಯನಗರದ ಸ್ಥಾಪನೆಯು ಕ್ರಿ.ಶ.೧೩೩೬ರಲ್ಲಿ ಸಂಭವಿಸಿತೆಂಬ ಸಾಂಪ್ರದಾಯಿಕ ನಂಬಿಕೆಯಿದ್ದು, ಉಡುಪಿ ಜಿಲ್ಲೆಯ ಬಾರ್ಕೂರಿನಲ್ಲಿ ದೊರೆತ ಹಸ್ತಪ್ರತಿ ದಾಖಲೆಗಳನ್ನು ಪರೀಕ್ಷಿಸಿದ ಫ್ರಾನ್ಸಿಸ್‌ಬುಕಾನನ್ ಸಹ ಇದೇ ದಿನಾಂಕವನ್ನು ಸಮರ್ಥಿಸಿರುವುದು ಗಮನಾರ್ಹವಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ವಿಜಯನಗರದ ಕಾಲದ ೧೦೦ಕ್ಕೂ ಮೀರಿದ ಶಾಸನಗಳಿದ್ದು, ಮೊದಲನೇ ಹರಿಹರನ ಕಾಲದ ಶಾಸನವು ಮಂಡ್ಯ ತಾಲೂಕಿನಲ್ಲಿ ಕಂಡುಬರುವುದರಿಂದ ವಿಜಯನಗರದ ಸಾಮ್ರಾಜ್ಯಕ್ಕೂ ಮತ್ತು ಈ ಜಿಲ್ಲೆಗೂ ಇದ್ದ ಪ್ರಾಚೀನ ಸಂಬಂಧಗಳಿಗೆ ಮೂಲ ಆಧಾರವಾಗಿದೆ. ಈ ತಾಲೂಕಿನ ಬೀಚೇನಹಳ್ಳಿಯ ಶಾಸನವು (ಮಂಡ್ಯ-೧೯) ನವಲುವಶಿ ಎಂಬ ಸ್ಥಳದ ಭೀಮನೆಂಬ ವೀರನ ಪತ್ನಿ ತಿಮ್ಮವ್ವೆಯು ತನ್ನ ಪತಿಯ ಸ್ಮರಣಾರ್ಥವಾಗಿ ಹಾಕಿಸಿದ ವೀರಗಲ್ಲು ಶಾಸನವಾಗಿದ್ದು ವಿಜಯನಗರದ ವೀರ ಬುಕ್ಕಣ್ಣಒಡೆಯನ ಆಳ್ವಿಕೆಯ ಬಗ್ಗೆ ಉಲ್ಲೇಖಿಸುತ್ತದೆ. ಈ ಶಾಸನವನ್ನು ಕ್ರಿ.ಶ.೧೩೪೧ರ ಮೊದಲನೇ ಹರಿಹರನ ಕಾಲದ್ದೆಂದು ಗುರುತಿಸಲಾಗಿದೆ. ಈ ಪ್ರದೇಶವನ್ನು ಮೊದಲನೇ ಹರಿಹರನು ಆಳುತ್ತಿದ್ದು ತನ್ನ ತಮ್ಮನಾದ ಬುಕ್ಕನು ಈತನ ಆಡಳಿದಲ್ಲಿ ನೆರವಾಗುತ್ತಿದ್ದನೆಂಬ ಅಂಶವು ನಂತರದ ಶಾಸನಗಳಿಂದ ವ್ಯಕ್ತವಾಗುತ್ತದೆ. ಮದ್ದೂರು ತಾಲೂಕಿನ ಅರುವನಹಳ್ಳಿಯ ಶಾಸನಗಳಲ್ಲಿ ಬಡವಾರ ವಂಶದ ಭಟ್ಟರ ಬಾಚಿಯಪ್ಪ ಮತ್ತು ಅವನ ವಂಶದ ವಿವರಗಳು ಕಂಡುಬರುತ್ತವೆ. ಅವನನ್ನು ನೀತಿರಾಯಂಬಾಮೂಲ, ಪರಹಾರಾದು ಇಭಾಟು, ಸೊನ್ನಾಕೋದಂಡಿ, ಸೊನ್ನಾಕೋತ್ಸತಿ ಮುಂತಾದ ವಿಚಿತ್ರ ಬಿರುದು ಬಾವುಲಿಗಳಿಂದ ಶಾಸನಗಳಲ್ಲಿ ಹೊಗಳಿರುವುದು ಕಂಡುಬರುತ್ತದೆ. ಈತನು ಕೀರ್ತಿದೇವನ ಮಗನಾಗಿದ್ದು, ಅವನು ಬುಕ್ಕರಾಯಸಮುದ್ರ, ಕೀರ್ತಿಸಮುದ್ರ, ಮಾಳವ್ವೆಯ ಕೆರೆ, ಬಾಚಪ್ಪನ ಕೆರೆಗಳನ್ನು ಅನುಕ್ರಮವಾಗಿ ಅರಸನ, ತಂದೆಯ, ತಾಯಿಯ ಮತ್ತು ತನ್ನ ಹೆಸರಿನಲ್ಲಿ ನಿರ್ಮಿಸಿ ಬಾಚಪಟ್ಟಣ ಎಂಬ ಊರನ್ನೂ ನೆಲೆಗೊಳಿಸಿ ಸಾಲುಮರಗಳನ್ನು ನೆಡೆಸಿದನೆಂದೂ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಅವನು ಕ್ರಿ.ಶ.೧೩೫೮ರ ಹೊತ್ತಿಗೆ ಮೊದಲನೇ ಬುಕ್ಕರಾಯನ ಆಳ್ವಿಕೆಯ ಅವಧಿಯಲ್ಲಿಯೇ ಈ ಕಾರ್ಯಗಳನ್ನು ಸಾಧಿಸಿದ್ದನು. ಇವನ ವಂಶವೃಕ್ಷವನ್ನು ಬಡವರ ಕುಲತಿಲಕ ಕೀರ್ತಿಯರಸ ಮತ್ತು ಆತನ ಪತ್ನಿ ಮಾಳವ್ವೆ ಇವರಿಂದ ಆರಂಭಿಸಿ ಅವನ ಮಕ್ಕಳಾದ ಹಿರಿಯ ಬಯಿಚಪ್ಪ, ಚಿಕ್ಕಬಯಿಚಪ್ಪ, ಬಾಚಿಯಪ್ಪ, ದೇವಪ್ಪ ಮತ್ತು ಅವನ ಪತ್ನಿ ಬಯಿಚಿಕ್ಕ ಹಾಗೂ ನಾಗರಸ ಇವರುಗಳ ಹೆಸರುಗಳನ್ನು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಇನ್ನೊಂದು ವಂಶಾವಳಿಯಲ್ಲಿ ಬಾಚಿಯಪ್ಪ ಮತ್ತು ರಾಮಭದ್ರಾದೇವಿ ಇವರಿಂದ ಆರಂಭಿಸಿ ಇವರ ಮಕ್ಕಳಾದ ಬುಕ್ಕಂಣ, ಕೀರ್ತಿದೇವ, ಕಂಪಣ್ಣ ಹಾಗೂ ಚವನಪ್ಪ ಇವರುಗಳ ಹೆಸರುಗಳನ್ನು ದಾಖಲಿಸಲಾಗಿದೆ.

ಮದ್ದೂರು ತಾಲೂಕಿನ ಬೊಪ್ಪಸಂದ್ರ ಗ್ರಾಮದಲ್ಲಿ ದೊರೆತಿರುವ ಕ್ರಿ.ಶ.೧೩೬೩ರ ಶಾಸನವು ವಿಜಯನಗರ ಅರಸು ವೀರಬುಕ್ಕಣ್ಣಒಡೆಯನ ಆಳ್ವಿಕೆಯಲ್ಲಿ ಈತನು ಬೊಪ್ಪಸಮುದ್ರದ ವ್ಯಾಪ್ತಿಯಲ್ಲಿದ್ದ ಫಲವತ್ತಾದ ಭೂಮಿಯನ್ನು ತೀರ್ಥದ ತಿಪ್ಪೂರು ಗ್ರಾಮದ ಬೊಮ್ಮಣ್ಣನ ಮಗ ಪಿರಿಯಣ್ಣನಿಗೆ ದಾನವಾಗಿ ನೀಡಿದ ಬಗ್ಗೆ ಉಲ್ಲೇಖಿಸುತ್ತದೆ. ಹಾದರಿವಾಗಿಲು ಗ್ರಾಮದ ತೆಳ್ಳರ (ಎಣ್ಣೆ ತೆಗೆಯುವವರ) ಕುಟುಂಬದ ಬಗ್ಗೆಯೂ ಶಾಸನದಲ್ಲಿ ಉಲ್ಲೇಖವಿದೆ. ಮದ್ದೂರು ತಾಲೂಕಿನ ಅರುವನಹಳ್ಳಿಯ ಶಾಸನವು (ಮದ್ದೂರು–೮೭) ವಿಜಯನಗರದ ಬುಕ್ಕರಾಯನ ಮಗ ಹರಿಹರನ ಕಾಲಕ್ಕೆ ಸೇರಿದ್ದು ಬಡವಾರ ಕೀರ್ತಿದೇವನೆಂಬ ಅಧಿಕಾರಿಯ ಮಗ ಭಟ್ಟರ ಬಾಚಿಯಪ್ಪನ (ಬಾಚಿರಾಜ) ಮರಣವನ್ನು ದಾಖಲಿಸುತ್ತಾ ಆತನು ನಿರ್ಮಿಸಿದ ಬುಕ್ಕರಾಯಸಮುದ್ರ, ಕೀರ್ತಿಸಮುದ್ರ, ಮಾಲವ್ವನ ಕೆರೆ ಇತ್ಯಾದಿಗಳ ಬಗ್ಗೆ ಉಲ್ಲೇಖಿಸುತ್ತದೆ. ಬೊಪ್ಪಸಂದ್ರದ ಸಿದ್ದೇಶ್ವರ ದೇವಾಲಯದ ಬಳಿ ಇರುವ ಕ್ರಿ.ಶ.೧೩೮೮ರ ಶಾಸನವು ವಿಜಯನಗರದ ಕಾಲಕ್ಕೆ ಸೇರಿದ್ದು ಹಾದರಿವಾಗಿಲು ಗ್ರಾಮದ ವ್ಯಾಪ್ತಿಯಲ್ಲಿದ್ದ ಬೊಪ್ಪಸಮುದ್ರ ಎಂಬ ಹಳ್ಳಿಯನ್ನು ಭಟ್ಟರ ಬಾಚಿಯಪ್ಪನ ಮಕ್ಕಳಾದ ಬುಕ್ಕಣ್ಣ, ಕೆಂಪಣ್ಣ ಮತ್ತು ಚೌಡಪ್ಪ ಇವರುಗಳಿಗೆ ದತ್ತಿಯಾಗಿ ಬಿಟ್ಟ ವಿಚಾರವನ್ನು ದಾಖಲಿಸಿದೆ. ಮದ್ದೂರು ತಾಲೂಕಿನ ಬೊಪ್ಪಸಂದ್ರ (ಮದ್ದೂರು–೧೧೦) ಗ್ರಾಮದಲ್ಲಿರುವ ಕ್ರಿ.ಶ.೧೪೨೭ರ ಇನ್ನೊಂದು ಶಾಸನದಲ್ಲಿ ಭಟ್ಟರ ಬಾಚಿಯಪ್ಪನ ಮಕ್ಕಳಾದ ಬುಕ್ಕಣ್ಣ, ಕಂಪಣ್ಣ ಮತ್ತು ಚವಡಪ್ಪ ಇವರುಗಳಿಗೆ ತೆಳ್ಳರ ವಂಶದ ದೇವಪ್ಪ ಮತ್ತು ಸಹದೇವರು ಹಾದರಿವಾಗಿಲ ಕಾಲುವಳ್ಳಿಯಾದ ಬೊಪ್ಪಸಮುದ್ರವನ್ನು ಕೆಂಪೊತ್ತಿ (ದತ್ತಿ) ಕೊಟ್ಟಂತೆ ದಾಖಲಿಸಲಾಗಿದೆ. ಈ ಶಾಸನದ ಪ್ರಕಾರ ಗೌಡಿಕೆಗಾಗಿಯೂ ಹಾಗೂ ಆ ಗ್ರಾಮದ ದೇವರುಗಳಿಗೆ ಕಳಶ ಕನ್ನಡಿಗಾಗಿಯೂ ದತ್ತಿಬಿಟ್ಟಿರುವ ವಿಚಾರ ವ್ಯಕ್ತವಾಗುತ್ತದೆ. ದಾನಕೊಟ್ಟ ಗ್ರಾಮ ಹಾಗೂ ಭೂಮಿಯನ್ನು ಕಿರುಕುಳ, ಬೆಡು, ಬಿನುಗು, ಗ್ರಾಮಗದ್ಯಾಣ, ದಳಮಿಲಿ, ನಿಬಂಧಿ, ಹೊದಕೆ, ಹೋಬಳಿ ಮುಂತಾದ ತೆರಿಗೆಗಳಿಂದ ಮುಕ್ತಗೊಳಿಸಿದ ಬಗ್ಗೆ ಶಾಸನವು ದಾಖಲಿಸಿದೆ. ಹೀಗೆಯೇ ಇನ್ನೂ ಅನೇಕ ಸಣ್ಣಪುಟ್ಟ ರಾಜ ಮನೆತನಗಳ ಇತಿಹಾಸವನ್ನು ರಚಿಸಲು ಅವಶ್ಯಕವಾದ ಶಾಸನ ಸಾಮಗ್ರಿಯು ಈ ಜಿಲ್ಲೆಯಲ್ಲಿ ಸಾಕಷ್ಟು ಸಿಗುತ್ತವೆ. ಹೊಸಹೊಳಲು ಗ್ರಾಮದ ಕ್ರಿ.ಶ.೧೪–೧೫ನೇ ಶತಮಾನದ ಲಕ್ಷಣವಿರುವ ಶಾಸನವು ವಿಜಯನಗರದ ಬುಕ್ಕಣ್ಣ ಒಡೆಯನ ಕಾಲಕ್ಕೆ ಸೇರಿದ್ದು, ಹೊಳಲಿನ ಬಯಿರೇಯದಣ್ಣಾಯಕ ಹಾಗೂ ಬಾಲಿಯಕೆರೆಗಳ ಉಲ್ಲೇಖವಿದೆ. ಮದ್ದೂರು ತಾಲೂಕಿನ ಹಾಗಲಹಳ್ಳಿಯ ಶಾಸನದಲ್ಲಿ (ಮ–೧೦೨) ಕ್ರಿ.ಶ.೧೩೯೨ರಲ್ಲಿ ಇಮ್ಮಡಿ ಹರಿಹರನು ವಿಜಯನಗರವನ್ನು ಆಳ್ವಿಕೆ ಮಾಡುತ್ತಿದ್ದಾಗ ಬಡವಾರ ವಂಶದ ಅರುಹನಹಳ್ಳಿಯ ಬಾಚಿಯಪ್ಪನ ಮಗ ಬುಕ್ಕಣ್ಣನು ಹಾದರಿವಾಗಿಲಿನ ಸಾಯನಾಯಕನ ಮಗನಾದ ದೇವರಪ್ಪ ಹಾಗೂ ಅವನ ಇಬ್ಬರು ಪುತ್ರರಾದ ರಾಮಣ್ಣ ಮತ್ತು ಅಲ್ಲಪ್ಪ ಇವರುಗಳಿಗೆ ಋಣವನ್ನು ತೀರಿಸಲು ಭೂಮಿಯನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಈ ಶಾಸನವನ್ನು ಈ ಸ್ಥಳದ ಸೇನಭೋವನಾಗಿದ್ದ ಚೌಡೋಜನ ಮಗ ಮಾಯಿತಮ್ಮನೆಂಬ ಶಿಲ್ಪಿಯು ಕಲ್ಲಿನ ಮೇಲೆ ಕೆತ್ತಿದ ಬಗ್ಗೆ ಉಲ್ಲೇಖವಿದೆ. ಮದ್ದೂರು ತಾಲೂಕಿನ ವೈದ್ಯನಾಥಪುರದ ಕ್ರಿ.ಶ.೧೪೦೬ರ ಶಾಸನವು ಕಳಲೆನಾಡಿನ ಅಗ್ರಹಾರ ನರಸಿಂಹ ಚತುರ್ವೇದಿ ಮಂಗಲ (ಮದ್ದೂರು)ದ ನರಸಿಂಗದೇವನು ವೈದ್ಯನಾಥ ದೇವರಿಗೆ ನೀಡಿದ ಹಲವು ದಾನಗಳನ್ನು ಉಲ್ಲೇಖಿಸುತ್ತದೆ. ಇದೇ ಶಾಸನವು ವಿಜಯನಗರದ ಹರಿಹರನ ಮಗನಾದ ಎರಡನೇ ಬುಕ್ಕರಾಯನ ಆಳ್ವಿಕೆಯ ಬಗ್ಗೆ ದಾಖಲಿಸಿದೆ. ಮಳವಳ್ಳಿ ತಾಲೂಕಿನಲ್ಲೂ ಎರಡನೇ ಬುಕ್ಕರಾಯನ ಆಳ್ವಿಕೆಯು ವ್ಯಾಪಿಸಿದ್ದು, ಇದೇ ತಾಲೂಕಿನ ಮಾರೇಹಳ್ಳಿಯ (ಮ.ವ.–೭೧) ಕ್ರಿ.ಶ.೧೪೦೬ರ ಶಾಸನದಲ್ಲಿ ಇಮ್ಮಡಿ ಬುಕ್ಕರಾಯನ ಆಳ್ವಿಕೆಯನ್ನು ಉಲ್ಲೇಖಿಸುತ್ತಾ ಈ ಸ್ಥಳದ ಮಹಾಪ್ರಧಾನನಾಗಿದ್ದ ಹೆಗ್ಗಪ್ಪನು ಚೋಳೇಂದ್ರ ಚತುರ್ವೇದಿ ಮಂಗಲಂ ಎಂದು ಕರೆಯಲ್ಪಡುತ್ತಿದ್ದ ಮೊದಲ್ ಜಾತಿ ಗ್ರಾಮದ ನರಸಿಂಹ ದೇವಾಲಯಕ್ಕೆ ಬಿಟ್ಟ ದಾನದ ವಿಚಾರವನ್ನು ದಾಖಲಿಸಿದೆ.

ತನ್ನ ಸ್ವಂತ ಮಕ್ಕಳಾದ ವಿರೂಪಾಕ್ಷ ದೇವರಾಯ ಮತ್ತು ಇಮ್ಮಡಿ ಬುಕ್ಕರಾಯನನ್ನು ಪ್ರಾಂತಾಧಿಕಾರಿಗಳಾಗಿ ನೇಮಿಸುವುದರ ಮೂಲಕ ಇಮ್ಮಡಿ ಹರಿಹರನು ರಾಜ್ಯದ ಆಡಳಿತದ ಪದ್ಧತಿಯಲ್ಲಿ ಪ್ರಮುಖ ಬದಲಾವಣೆಗಳನ್ನು

ಜಾರಿಗೆ ತಂದನು. ರಾಜನೀತಿಯಲ್ಲೂ ಆಧ್ಯಾತ್ಮಿಕ ಜೀವನದಲ್ಲೂ ಈತನಿಗೆ ಕಾಳಾಮುಖ ಪಂಥದ ಗುರುಗಳಾಗಿದ್ದ ಕ್ರಿಯಾಶಕ್ತಿ ವಿದ್ಯಾರಣ್ಯರು ಮಾರ್ಗದರ್ಶಕರಾಗಿದ್ದರು. ಈತನ ಮರಣಾನಂತರ ಮೂವರು ಸೋದರರಾದ ಇಮ್ಮಡಿಬುಕ್ಕ, ಇಮ್ಮಡಿ ವಿರೂಪಾಕ್ಷ ಮತ್ತು ಒಂದನೇ ದೇವರಾಯರಲ್ಲಿ ರಾಜ್ಯಾಧಿಕಾರಕ್ಕಾಗಿ ಅಂತಃಕಲಹಗಳೇರ್ಪಟ್ಟವು. ಇದು ಎರಡು ವರ್ಷಗಳ ಕಾಲ ಮುಂದುವರಿದು ಅಂತಿಮವಾಗಿ ಮೊದಲನೇ ದೇವರಾಯನು (ಕ್ರಿ.ಶ. ೧೪೦೬–೨೨) ಪಟ್ಟಕ್ಕೆ ಬಂದನು. ದೇವರಾಯನ ಬಳಿಕ ಅಧಿಕಾರಕ್ಕೆ ಬಂದ ಆತನ ಮಗ ವೀರಜಯರಾಯನು ಕೇಲವ ಎರಡು ವರ್ಷಗಳ ಕಾಲ ಅಂದರೆ ಕ್ರಿ.ಶ. ೧೪೨೪ರವರೆಗೂ ಆಳ್ವಿಕೆ ಮಾಡಿದನು. ಈತನ ತರುವಾಯ ಬಂದ ಪ್ರೌಢದೇವರಾಯನನ್ನು 'ಅಭಿನವ ವೀರದೇವರಾಯ' ಮತ್ತು 'ಪ್ರತಾಪ ದೇವರಾಯ' ಎಂಬ ಅಭಿದಾನಗಳಿಂದಲೂ ಕರೆಯಲಾಗುತ್ತಿತ್ತು. ಇಮ್ಮಡಿ ದೇವರಾಯನು ಉತ್ತರಾಧಿಕಾರಿಯಾದ ಮೇಲೆ ಎರಡು ದಶಕಗಳಿಗೂ ಹೆಚ್ಚು ಕಾಲ (ಕ್ರಿ.ಶ. ೧೪೨೬–೧೪೪೬) ಆಳಿದನು. ಈತನು 'ಗಜವೇಂಟೆಕಾರ' ನೆಂಬ ಪ್ರಶಸ್ತಿಯನ್ನು ಹೊಂದಿದ್ದನೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಇಮ್ಮಡಿ ದೇವರಾಯನ ಐದು ಶಾಸನಗಳು ವರದಿಯಾಗಿವೆ. ಮದ್ದೂರು ತಾಲೂಕಿನ ಹಾಗಲಹಳ್ಳಿಯ ಕ್ರಿ.ಶ.೧೪೨೦ರ ಅಸ್ಪಷ್ಟ ಶಾಸನವು ಪ್ರತಾಪ ಅಥವಾ ಇಮ್ಮಡಿ ದೇವರಾಯನ ಕಾಲಕ್ಕೆ ಸೇರಿದ್ದು, ಹಾದಿರವಾಗಿಲ ಗ್ರಾಮದ ಮಾದಿಗೌಡ ಎಂಬ ಅಧಿಕಾರಿಯ ಬಗ್ಗೆ ಮಾತ್ರ ತಿಳಿಸುತ್ತದೆ. ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯದ ಭಂಡಾರದಲ್ಲಿರುವ ಕ್ರಿ.ಶ.೧೪೩೦ರ ತಾಮ್ರ ಶಾಸನವು ಸಂಸ್ಕೃತ ಭಾಷೆಯಲ್ಲಿದ್ದು ಇಮ್ಮಡಿ ದೇವರಾಯನ ಆಳ್ವಿಕೆಯ ಕಾಲಕ್ಕೆ ಸೇರಿದೆ. ದೇವರಾಯನು ತೋರಿನಾಡ ವೇಂಠೆಯ ಮೇಣಾಪುರ ಮಾಗನಿಯ ವ್ಯಾಪ್ತಿಯಲ್ಲಿದ್ದ ಚಂದಿಗಾಲವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ ಪ್ರತಾಪದೇವರಾಯಪುರವೆಂದು ಕರೆದನೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಈ ಕಾರ್ಯವನ್ನು 'ರತ್ನಧೇನು' ಎಂಬ ದಾನ ನೀಡುವ ಸಮಯದಲ್ಲಿ ನೆರವೇರಿಸಿದನೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಇದೇ ಸ್ಥಳದ ಶ್ರೀರಂಗನಾಥ ದೇವಾಲಯದ ಸಮೀಪವಿರುವ ಕ್ರಿ.ಶ.೧೪೩೧ರ ಶಾಸನವು ಇಮ್ಮಡಿ ದೇವರಾಯನ ಕಾಲಕ್ಕೆ ಸೇರಿದ್ದು ಶ್ರೀರಂಗನಾಥನ ವಸಂತೋತ್ಸವ ಸಮಾರಂಭಕ್ಕಾಗಿ ಶ್ರೀರಂಗಪುರದ (ಇದೇ ಸ್ಥಳ) ಶ್ರೀವೈಷ್ಣವರಿಗೆ ವರಮಾನವಾಗಿ ನೀಡಿದ ಹಲವು ದಾನಗಳನ್ನು ದಾಖಲಿಸಲಾಗಿದೆ. ಪಾಂಡವಪುರ ತಾಲೂಕಿನ ಮೇಲುಕೋಟೆಯ ಮುಖ್ಯ ದೇವಾಲಯದ ಮುಂಭಾಗದ ಪಾತಾಳಂಕಣದಲ್ಲಿರುವ ಕ್ರಿ.ಶ.೧೪೩೨ರ ಶಾಸನವು ಸಂಪತ್ಕರನಾರಾಯಣ ದೇವರಿಗೆ ಕೈಂಕರ್ಯಕ್ಕಾಗಿ ಹೊಸಹಳ್ಳಿ ಮತ್ತು ಮಯಿಲನಹಳ್ಳಿಗಳನ್ನು ದತ್ತಿಬಿಟ್ಟ ವಿಚಾರವಿದೆ. ದೇವರ ವಸಂತೋತ್ಸವ ಸಮಾರಂಭದ ಬಗ್ಗೆಯೂ ಉಲ್ಲೇಖವಿದೆ. ಶ್ರೀರಂಗಪಟ್ಟಣದ ರಂಗನಾಥ ದೇವಾಲಯದ ಭಂಡಾರದಲ್ಲಿರುವ ಕ್ರಿ.ಶ. ೧೪೪೭ರ ತಾಮ್ರಶಾಸನವು ವಿಜಯನಗರದ ಇಮ್ಮಡಿ ದೇವರಾಯನ ಆಳ್ವಿಕೆಯ ಕಾಲಕ್ಕೆ ಸೇರಿದ್ದು ನಾಗರಿ ಸಂಸ್ಕೃತ ಭಾಷೆಯಲ್ಲಿದೆ. ಇದರಲ್ಲಿ ಕನ್ನಂಬಾಡಿ ಸ್ಥಳದ ಮೊದುನಾಡು ವ್ಯಾಪ್ತಿಯಲ್ಲಿರುವ ಹೊಸಹಳ್ಳಿ ಗ್ರಾಮವನ್ನು ದತ್ತಿಬಿಟ್ಟ ವಿಚಾರವಿದೆ. ಮೇಲುಕೋಟೆಯ ಜೀಯರ್ ದೇವಾಲಯದಲ್ಲಿರುವ ಕ್ರಿ.ಶ.೧೪೫೮ರ ಶಾಸನವು ಇಮ್ಮಡಿ ಪ್ರೌಢದೇವರಾಯನ ಆಳ್ವಿಕೆಯ ಅವಧಿಯಲ್ಲಿ ತಿಮ್ಮಣ್ಣ ದಣ್ಣಾಯಕನ ಪತ್ನಿ ರಂಗಾಂಬಿಕೆಯು ರಂಗಮಠವನ್ನು ನಿರ್ಮಿಸಿದ ಬಗ್ಗೆ ಉಲ್ಲೇಖವಿದೆ. ಈ ಮಠಕ್ಕಾಗಿ ಹೊಯ್ಸಳರಾಜ್ಯ ಕುರುವಂಕನಾಡ ವೇಂಠೆಯ ವ್ಯಾಪ್ತಿಯಲ್ಲಿದ್ದ ಬಲ್ಲೇನಹಳ್ಳಿ ಮತ್ತು ಯಳವದ ಹಳ್ಳಿಗಳನ್ನು ದತ್ತಿಬಿಟ್ಟ ವಿಚಾರವನ್ನು ಶಾಸನದಲ್ಲಿ ದಾಖಲಿಸಲಾಗಿದೆ. ಈ ಶಾಸನದಲ್ಲಿ ವ್ಯಕ್ತವಾಗುವ ಇನ್ನೊಂದು ಮುಖ್ಯ ಅಂಶದ ಪ್ರಕಾರ ತಿಮ್ಮಣ್ಣ ದಣ್ಣಾಯಕನ ತಂದೆ ಲೋಹಿತ ವಂಶದ ಸಿಂಗಣ್ಣನು ನಾಗಮಂಗಲದ ಮಹಾಪ್ರಭುವಾಗಿದ್ದ ವಿಷಯವಾಗಿದೆ. ಲೋಹಿತ ವಂಶದ ಬಗ್ಗೆ ಹೆಚ್ಚಿನ ವಿವರಗಳು ಸಿಗುವುದಿಲ್ಲ. ಶ್ರೀರಂಗಪಟ್ಟಣ ತಾಲೂಕಿನ ನೆಲಮನೆ ಗ್ರಾಮದ ಕ್ರಿ.ಶ.೧೪೫೮ರ ಶಾಸನವೂ ಇದೇ ಗ್ರಾಮಗಳನ್ನು ಯಾದವನಾರಾಯಣ ದೇವಾಲಯದ ಲಕ್ಷ್ಮಿದೇವಿಗೆ ದಾನವಾಗಿ ನೀಡಿದ ವಿವರಗಳನ್ನು ದಾಖಲಿಸಿದೆ. ನಾಗಮಂಗಲ ತಾಲೂಕಿನ ಕೆಲಗೆರೆ ಗ್ರಾಮದ ಕ್ರಿ.ಶ.೧೫ನೇ ಶತಮಾನದ ಲಕ್ಷಣವುಳ್ಳ ಶಾಸನವೂ ವಿಜಯನಗರದ ಪ್ರೌಢದೇವರಾಯ (ಸ್ಪಷ್ಟವಿಲ್ಲ)ನು ಆಳ್ವಿಕೆ ಮಾಡುತ್ತಿದ್ದಾಗ ಹೊನ್ನೆಯನಾಯಕನ

ಮಗನಾದ ವರದೆಯ ನಾಯಕನು ಕೆಲ್ಲಂಗೆರೆ ಗ್ರಾಮದಲ್ಲಿ ಮಲ್ಲಿಕಾರ್ಜುನ ದೇವಾಲಯುವನ್ನು ಗರ್ಭಗೃಹ, ಸುಕನಾಸಿ (ಸುಖನಿವಾಸ) ಹಾಗೂ ರಂಗಮಂಟಪ (ನವರಂಗ)ಗಳನ್ನು ಹೊಂದಿರುವಂತೆ ನಿರ್ಮಾಣ ಮಾಡಿದ್ದನ್ನು ಹಾಗೂ ಶೂದ್ರವಾಡವಾಗಿದ್ದ ಈ ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತನೆ ಮಾಡಿದ ಅಂಶವನ್ನು ಶಾಸನದಲ್ಲಿ ದಾಖಲಿಸಲಾಗಿದೆ. ಅಲ್ಲದೆ ಈತನು ಈ ಊರಿನ ಕೆರೆಯನ್ನು ಜೀರ್ಣೋದ್ಧಾರ ಮಾಡಿ ಕೆಲ್ಲಂಗೆರೆಯ ವರದರಾಜ ಸಮುದ್ರವನ್ನು ಕಟ್ಟಿಸಿದ ವಿವರಗಳು ಶಾಸನದಲ್ಲಿ ಉಲ್ಲೇಖಗೊಂಡಿವೆ. ಮಳವಳ್ಳಿ ತಾಲೂಕಿನ ಕ್ಯಾತನಹಳ್ಳಿಯ ಕ್ರಿ.ಶ. ೧೪೩೯ರ ಶಾಸನದಲ್ಲಿ ಎರಡನೇ ದೇವರಾಯನು ವಿಜಯನಗರವನ್ನು ಆಳುತ್ತಿದ್ದಾಗ ಮಹಾಪ್ರಧಾನ ಲಖಣ್ಣ ದಂಡನಾಯಕನು ಪವಿತ್ರಾರೋಹಣ ನಂದಾದೀಪಕ್ಕಾಗಿ ತಲಕಾಡಿನ ಕೀರ್ತಿನಾರಾಯಣ ದೇವರಿಗೆ ಕೇತನಹಳ್ಳಿಯನ್ನು ಹಲವು ಸುಂಕಗಳಿಂದ ಮುಕ್ತಗೊಳಿಸಿ ದಾನವಾಗಿ ನೀಡಿದ ಬಗ್ಗೆ ದಾಖಲಿಸಿದೆ. ಇದೇ ತಾಲೂಕಿನ ಹುಸ್ಕೂರು ಗ್ರಾಮದ ದೇವರಾಯನ ಕಾಲಕ್ಕೆ ಸೇರಿದ ಕ್ರಿ.ಶ.೧೪೪೦ರ ಶಾಸನದಲ್ಲಿ ಎರಡನೇ ಹುಸಗೂರಿನ ಕಲಿನಾಗಪ್ಪನ ಮಗನಾದ ವೀರಣ್ಣಗೌಡನೆಂಬ ಅಧಿಕಾರಿಯು ಬಸವರಾಜ ದೇವರನ್ನು ಪ್ರತಿಷ್ಠಾಪಿಸಿ ಹಲವು ತರಿ ಜಮೀನನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಲಾಗಿದೆ. ಮಳವಳ್ಳಿ ತಾಲೂಕಿನ ಕಿರಗಸೂರು ಗ್ರಾಮದ ಕ್ರಿ.ಶ.೧೪೪೦ರ ಶಾಸನವು ಠಾಣ್ಯ (ವಿಭಾಗಸ್ಥಾನ)ದ ಬೆಳಕವಾಡಿಯ ವ್ಯಾಪ್ತಿಯಲ್ಲಿದ್ದ ಕಿರಗುಸೂರಿನ ಗ್ರಾಮದಲ್ಲಿ ವಿಧಿಸಲಾದ ಮಗ್ಗ, ಮುದ್ರೆ, ಗಾಣ, ಕಾವಲಿ, ಅತದೆರೆ ಮೊದಲಾದ ತೆರಿಗೆಗಳನ್ನು ರದ್ದು ಮಾಡಿ, ಸುಮಾರು ಆರು ವರಹಗಳನ್ನು ತಲಕಾಡಿನ ವೈದ್ಯನಾಥ ದೇವರಿಗೆ ಉಂಬಳಿಯಾಗಿ ನೀಡಿದ ಬಗ್ಗೆ ಉಲ್ಲೇಖಿಸುತ್ತದೆ. ತಲಕಾಡನ್ನು ಗಜಾರಣ್ಯಕ್ಷೇತ್ರ ವೆಂದು ಶಾಸನದಲ್ಲಿ ಕರೆಯಲಾಗಿದೆ. ಈ ದಾನಗಳನ್ನು ಪಟ್ಟಣದ ರಾಯಣ್ಣವೊಡೆಯನು ತಲಕಾಡಿನ ಪೆರುಮಾಳದೇವನೆಂಬ ವಿಜಯನಗರದ ಅಧಿಕಾರಿಯ ಆಜ್ಞೆಯ ಮೇರೆಗೆ ಪಡೆದನೆಂದು ಶಾಸನದಿಂದ ವ್ಯಕ್ತವಾಗುತ್ತದೆ.

ಇಮ್ಮಡಿ ದೇವರಾಯನ ಮರಣಾನಂತರದ ನಾಲ್ಕು ದಶಕಗಳು ದೌರ್ಭಾಗ್ಯ ಮತ್ತು ಅನರ್ಥಗಳಿಂದ ಕೂಡಿದಾಗಿದ್ದುವು. ಇಮ್ಮಡಿ ದೇವರಾಯನ ಮಗನಾದ ಮಲ್ಲಿಕಾರ್ಜುನ (೧೪೪೬–೬೫) ಮತ್ತು ದೇವರಾಯನ ಕಿರಿಯ ಸೋದರನಾದ ಪ್ರತಾಪದೇವನ ಮಗ ಮುಮ್ಮಡಿ ವಿರೂಪಾಕ್ಷ (೧೪೬೫–೮೫) ದುರ್ಬಲನಾದ ಅರಸನಾಗಿದ್ದನು. ಮಂಡ್ಯ ಜಿಲ್ಲೆಯಲ್ಲಿ ಮಲ್ಲಿಕಾರ್ಜುನನ ಕಾಲದ ಏಳು ಶಾಸನಗಳು ಲಭ್ಯವಾಗಿವೆ. ಮಳವಳ್ಳಿ ತಾಲೂಕಿನ ಕಂಚಿಗನಹಳ್ಳಿಯ ಕ್ರಿ.ಶ. ೧೪೪೭ರ ಶಾಸನವು ಅಸ್ಪಷ್ಟವಾಗಿದ್ದು, ಮಹಾರಾಜಾಧಿರಾಜ ಮಲ್ಲಿಕಾರ್ಜುನನು ಈ ಪ್ರದೇಶದಲ್ಲಿ ಆಳ್ವಿಕೆ ಮಾಡುತ್ತಿದುದ್ದರ ಬಗ್ಗೆ ಉಲ್ಲೇಖಿಸುತ್ತಿದ್ದು, ಶಾಸನದ ಉಳಿದ ಭಾಗವು ಸವೆದಿದೆ. ಶ್ರೀರಂಗಪಟ್ಟಣದ ದೇವಾಲಯದ ಭಂಡಾರದಲ್ಲಿರುವ ತಾಮ್ರ ಶಾಸನದಲ್ಲಿ (ಕ್ರಿ.ಶ.೧೪೪೭) ಇಮ್ಮಡಿ ದೇವರಾಯನು ನಾಗಯ್ಯಭಟ್ಟನ ಮಗ ದೇವರೋಭಟ್ಟನಿಗೆ ಕನ್ನಂಬಾಡಿ ಸ್ಥಳದ ಮುಡುನಾಡು ವ್ಯಾಪ್ತಿಯಲ್ಲಿದ್ದ ಹಾಗಲಹಳ್ಳಿಯನ್ನು ದತಿಬಿಟ್ಟ ವಿಚಾರವನ್ನು ಉಲ್ಲೇಖಿಸಿದೆ. ನಾಗಮಂಗಲ ತಾಲೂಕಿನ ಮಾದಿಹಳ್ಳಿಯ ಕ್ರಿ.ಶ.೧೪೫೭ರ ಶಾಸನವು ದೇವಲಾಪುರದ ವ್ಯಾಪ್ತಿಯಲ್ಲಿದ್ದ ಮಾದಿಹಳ್ಳಿಯಲ್ಲಿ ಮಾದೆಯನಾಯಕನೆಂಬ ಅಧಿಕಾರಿಯು ಮುಲುನಾಯಕನಹಳ್ಳಿಯ ತಿರುಮಲ ದೇವರ ಅಂಗರಂಗಭೋಗಕ್ಕೆ ಕೊಟ್ಟ ಭೂ ದಾನದ ಬಗ್ಗೆ ಉಲ್ಲೇಖಿಸಿದೆ. ಈ ಅಜ್ಞೆಯನ್ನು ವಿಜಯನಗರದ ವೀರಪ್ರತಾಪ ಮಲ್ಲಿಕಾರ್ಜುನರಾಯನ ಒಪ್ಪಿಗೆಯ ಮೇರೆಗೆ ಹೊರಡಿಸಿರುವುದು ಶಾಸನದಿಂದ ವ್ಯಕ್ತವಾಗುತ್ತದೆ. ಮಂಡ್ಯ ತಾಲೂಕಿನ ದಣ್ಣಾಯಕನಪುರದ ಕ್ರಿ.ಶ.೧೪೫೯ರ ಲಿಂಗಮುದ್ರೆ ಶಾಸನವು ಪೆನುಗೊಂಡೆಯ ಆಡಳಿತವನ್ನು ನಿರ್ವಹಿಸುತ್ತಿದ್ದ ತಿಮ್ಮಣ್ಣ ದಣ್ಣಾಯಕನ ಆದೇಶದನ್ವಯ ಹಾಗೂ ಮಳಲಿಯ ತಿಪ್ಪಯ್ಯನ ಒಪ್ಪಿಗೆಯ ಮೇರೆಗೆ ಬೆಳ್ಳತೂರಿನ ರಾಮನಾಥ ದೇವರಿಗೆ ಅಂಗರಂಗಭೋಗಕ್ಕೆಂದು ಈ ಸ್ಥಳವನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಮೇಲುಕೋಟೆಯ ಪಾತಾಳಾಂಕಣದಲ್ಲಿರುವ ಕ್ರಿ.ಶ.೧೪೬೦–೬೧ರ ಶಾಸನವು ಪ್ರೌಢದೇವರಾಯ ಅಥವಾ ಮಲ್ಲಿಕಾರ್ಜುನನ ಕಾಲಕ್ಕೆ ಸೇರಿದ್ದು, ಒಂದು ಗ್ರಾಮವನ್ನು ತಿರುನಾರಯಾಣಪುರ ಅಗ್ರಹಾರವನ್ನಾಗಿ ಪರಿವರ್ತಿಸಿದ ಬಗ್ಗೆ ಇದರಲ್ಲಿ ಉಲ್ಲೇಖಿಸಲಾಗಿದೆ. ಪಾಂಡವಪುರ ತಾಲೂಕಿನ ಸೀತಾಪುರದ ಕ್ರಿ.ಶ. ೧೪೬೭ರ

ತಾಮ್ರ ಶಾಸನವು ಕುರುವಂಕನಾಡ ವೇಂಠೆಯ ಹೊಸಹಳ್ಳಿ ಗ್ರಾಮವನ್ನು ನಾಗಮಂಗಲದ ಶಿಂಗಣವೊಡೆಯನ ಮಗನಾದ ದೇವರಾಜನು ಶ್ರೀ ರಾಮಚಂದ್ರ ದೇವರ ಕೈಂಕರ್ಯಕ್ಕಾಗಿ ಬಿಟ್ಟ ದಾನವನ್ನು ವಿವರಿಸುತ್ತದೆ. ಇವರು ಕಾವೇರಿ ನದಿಗೆ ಹೊಸದಾಗಿ ನೀರಾವರಿ ಅಣೆಕಟ್ಟನ್ನು ಕಟ್ಟಿಸಿದ ಪ್ರಮುಖ ಅಂಶವನ್ನು ಉಲ್ಲೇಖಿಸುತ್ತದೆ. ಮಳವಳ್ಳಿ ತಾಲೂಕಿನ ದಾಸನದೊಡ್ಡಿಯ ಕ್ರಿ.ಶ.೧೪೬೩ರ ಶಾಸನವು ಬಹಳಷ್ಟು ಶಿಥಿಲವಾಗಿದ್ದು ಮಲ್ಲಿಕಾರ್ಜುನ ಮಹಾರಾಯನು ವಿಜಯನಗರವನ್ನು ಆಳುತ್ತಿದ್ದಾಗ ನೀಡಿದ ಗ್ರಾಮ ದಾನವನ್ನು ದಾಖಲಿಸಿದೆ. ಉಳಿದ ವಿವರಗಳು ಲಭ್ಯವಿಲ್ಲದಿದ್ದರೂ ಗೌಡರುಗಳು, ಪಾಂಚಾಳರು ಮತ್ತು ಭೋವರುಗಳ ಹಾಗೂ ಬಸದಿಯ (ಹಿರೇವೂರು ಮಳವೆ ಎಂಬ ಹೆಸರಿದೆ) ಉಲ್ಲೆಖವಿರುವುದು ಕಂಡುಬರುತ್ತದೆ. ಮಲ್ಲಿಕಾರ್ಜುನನು ದುರ್ಬಲನಾಗಿದ್ದ ಕಾರಣ ಬಹಮನಿ ಮತ್ತು ಗಜಪತಿ ಸೇನೆಗಳು ವಿಜಯನಗರದ ಮೇಲೆ ಏಕಕಾಲದಲ್ಲಿ ಧಾಳಿಗಳನ್ನು ಮಾಡಲು ಪ್ರಯತ್ನಿಸಿದಾಗ ಬಹಳ ಪ್ರಯಾಸದಿಂದ ಹಿಮ್ಮೆಟ್ಟಿಸಲಾಯಿತು, (ಕ್ರಿ.ಶ.೧೪೫೦). ಅರಮನೆಯ ಪಿತೂರಿಯೊಂದರ ಪರಿಣಾಮವಾಗಿ ಮುಮ್ಮಡಿ ವಿರೂಪಾಕ್ಷನು ಸಿಂಹಾಸನವನ್ನು ಅತಿಕ್ರಮಿಸಿದನು (೧೪೬೫). ಮಲ್ಲಿಕಾರ್ಜುನನು ೧೪೮೦ರಲ್ಲಿ ಮರಣ ಹೊಂದುವವರೆಗೂ ದೇಶಭ್ರಷ್ಟನಾಗಿಯೇ ಉಳಿಯಬೇಕಾಯಿತು. ಈತನು ಮಾನಸಿಕ ನೆಮ್ಮದಿಯಿಂದ ಆಳ್ವಿಕೆ ನಡೆಸಲಿಲ್ಲ. ಈತನ ರಾಜ್ಯಾಳ್ವಿಕೆಯ ಕಾಲದಲ್ಲಿ ಸಾಮ್ರಾಜ್ಯದ ಉತ್ತರ ಭಾಗಗಳನ್ನು ಮಹಮ್ಮದ್ ಗವಾನನ ನೇತೃತ್ವದಲ್ಲಿ ಬಹಮನಿ ಸೈನ್ಯವು ಮುತ್ತಿ ದಾಳಿಗೊಳಪಡಿಸಿ, ಸಾಕಷ್ಟು ಭಾಗಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು.

## ಸಾಳುವರು, ತುಳುವರು ಮತ್ತು ಅರವೀಡು ಮನೆತನಗಳು

ವಿಜಯನಗರದ ಇತಿಹಾಸದಲ್ಲಿ ಕ್ರಿ.ಶ. ೧೪೮೬ರಿಂದ ಎರಡು ದಶಕಗಳನ್ನು ರಾಜಕೀಯವಾಗಿ ಹೆಚ್ಚು ಮಹತ್ವ ಪಡೆದ ನೂತನ ಹಂತವೆಂದು ಪರಿಗಣಿಸಲಾಗಿದೆ. ಈ ಅವಧಿಗೆ ಸಂಬಂಧಿಸಿದಂತೆ ನಮಗೆ ಮುಖ್ಯವಾಗಿ ಮಾಹಿತಿ ಕೊಡುವವನು ನ್ಯೂನಿಜ್. ಫೆರ್ನಾವೋ ನ್ಯೂನಿಜ್ ಈ ಸಾಮ್ರಾಜ್ಯಕ್ಕೆ ಭೇಟಿ ನೀಡಿದ್ದ ಒಬ್ಬ ಕುದುರೆ ವ್ಯಾಪಾರಿ ಹಾಗೂ ಅವನು ಸುಮಾರು ಎರಡು ವರ್ಷಗಳಷ್ಟು ಕಾಲವನ್ನು ವಿಜಯನಗರದಲ್ಲಿ ಕಳೆದನೆಂಬ ನಂಬಿಕೆ ಇದೆ. ಸಾಳುವ ವಂಶದ ದೊರೆಯಾದ ನರಸಿಂಹನು ಮೂಲತ: ಸುಮಾರು ಕ್ರಿ.ಶ. ೧೪೫೨ರಲ್ಲಿ ಮಲ್ಲಿಕಾರ್ಜುನನ ಅಧೀನದಲ್ಲಿ ಆಳುತ್ತಿದ್ದನು. ವಿಜಯನಗರವನ್ನು ಆತನು ಪುನರುಜ್ಜೀವನಗೊಳಿಸಿ ಅದರ ರಾಜಕೀಯ ಅಸ್ತಿತ್ವವನ್ನು ವಿಸ್ತರಿಸುವಲ್ಲಿ ಶ್ರಮವಹಿಸಿದನು. ನ್ಯೂನಿಜ್‌ನ ಪ್ರಕಾರ ನರಸಿಂಹನು ಅಧಿಕಾರವನ್ನು ವಶಪಡಿಸಿಕೊಳ್ಳುವುದಕ್ಕಾಗಿ ದಂಗೆಯೆದ್ದನು. ಆಗ ಆಡಳಿತ ಮಾಡುತ್ತಿದ್ದ ರಾಜನು ದುರ್ಬಲಗೊಂಡು ಓಡಿಹೋದಾಗ ನರಸಿಂಹನು ಅಧಿಕಾರ ವಹಿಸಿಕೊಂಡು ರಾಜಕೀಯ ಸ್ಥಿರತೆಯನ್ನು ಸ್ಥಾಪಿಸಿದನು. ಯಾವುದೇ ಬಗೆಯ ಹಿಂಸಾಚಾರವಾಗಲೀ, ರಕ್ತದಿಂದ ಕಳಂಕಿತವಾದ ಹೋರಾಟವಾಗಲಿ ಇಲ್ಲದೆ ರಾಜವಂಶಗಳ ಬದಲಾವಣೆ ನಡೆದುಹೋಯಿತು. ಅವನ ದಂಡನಾಯಕನಾದ ತುಳುವ ನರಸನಾಯಕನು ದಕ್ಷಿಣದತ್ತ ದಂಡೆತ್ತಿ ಹೋಗಿ, ತುಂಬಿ ಹರಿಯುತ್ತಿದ್ದ ಕಾವೇರಿಯನ್ನು ತಾತ್ಕಾಲಿಕವಾಗಿ ನಿರ್ಮಿಸಲ್ಪಟ್ಟ ಸೇತುವೆಯ ನೆರವಿನೊಂದಿಗೆ ಕ್ರಿ.ಶ.೧೪೯೫ರಲ್ಲಿ ದಾಟಿ, ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ಅಂಶವನ್ನು ಶ್ರೀರಂಗಪಟ್ಟಣದ ಕ್ರಿ.ಶ.೧೫೦೯ರ ತಾಮ್ರಪಟವೂ ಸೇರಿದಂತೆ ಹಲವಾರು ಶಾಸನಗಳು ದಾಖಲಿಸಿವೆ. ಈತನು ಸಾಹಿತ್ಯ ರಚನೆಗೆ ಉತ್ತೇಜನ ನೀಡಿದ ಕಾರಣ 'ಸಾಲುವಾಭ್ಯುದಯಂ', 'ರಾಮಾಭ್ಯುದಯಂ', 'ವರಾಹಪುರಾಣಂ' ಮತ್ತು 'ಪಾರಿಜಾತಾಪಹರಣಂ' ಕೃತಿಗಳು ರಚನೆಗೊಂಡವು. ಇವುಗಳಲ್ಲಿ ಸಾಳುವನ ದಿಗ್ವಿಜಯಗಳ ಬಗ್ಗೆ ವರ್ಣನೆಯಿದೆ. ಸಾಳುವ ನರಸಿಂಹನ ಇಬ್ಬರು ಮಕ್ಕಳು ಇನ್ನೂ ಕಿರಿಯರಾಗಿದ್ದ ಕಾರಣ ತನ್ನ ನಂಬುಗೆಯ ಸೇನಾಧಿಕಾರಿಯಾದ ನರಸನಾಯಕನನ್ನು ರಾಜಪ್ರತಿನಿಧಿಯನ್ನಾಗಿ ನೇಮಿಸಿಕೊಂಡನು. ನರಸಿಂಹನು ಮರಣ ಹೊಂದಿದಾಗ ನರಸನಾಯಕನು ಆತನ ಹಿರಿಯ ಮಗನಾದ ತಿಮ್ಮನನ್ನು ರಾಜನೆಂದು ಘೋಷಿಸಿದನು. ಆದರೆ, ತಿಮ್ಮನು ಮೋಸದಿಂದ ಕೊಲ್ಲಲ್ಪಟ್ಟ ಬಳಿಕ ಎರಡನೇ ಮಗನಾದ ಇಮ್ಮಡಿ ನರಸಿಂಹನು ಸಿಂಹಾಸನದಲ್ಲಿ ಈತನಿಂದ ಪ್ರತಿಷ್ಠಾಪಿಸಲ್ಪಟ್ಟನು. ಈತನ ಆಳ್ವಿಕೆಯಾವಧಿಯಲ್ಲಿ ನರಸಿಂಹನಿಗೂ ನರಸನಾಯಕನಿಗೂ ಭಿನ್ನಾಭಿಪ್ರಾಯ

ಏರ್ಪಟ್ಟು ಇಮ್ಮಡಿ ನರಸಿಂಹನು ಪೆನುಗೊಂಡೆಯ ಸೆರೆಮನೆಯಲ್ಲಿ ಬಂಧಿಸಲ್ಪಟ್ಟನು. ನರಸನಾಯಕನು ತುಳುವಂಶದ ಪ್ರಥಮ ದೊರೆಯಾದನು. ನರಸನಾಯಕನು ಕ್ರಿ.ಶ. ೧೫೦೩ರಲ್ಲಿ ನಿಧನನಾದ ಬಳಿಕ ಆತನ ಮಗನಾದ ವೀರನರಸಿಂಹನು ಅಧಿಕಾರ ಗ್ರಹಣ ಮಾಡಿದನು. ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಕೈಗೋನಹಳ್ಳಿಯಲ್ಲಿದ್ದ ಕ್ರಿ.ಶ. ೧೪೯೨ರ ತಾಮ್ರಪಟವು ಹೊಯ್ಸಳ ದೇಶದ ಸಿಂಧಘಟ್ಟ ಸೀಮೆಯ ವ್ಯಾಪ್ತಿಯಲ್ಲಿದ್ದ ಕೈಗೊಂಡನಹಳ್ಳಿ ಅಥವಾ ವೀರನರಸಿಂಹಪುರವನ್ನು ಸಪ್ತಸಾಗರದಾನದ ಸಮಯದಲ್ಲಿ ವಿಜಯನಗರದ ವೀರನರಸಿಂಹನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ.

ತುಳುವ ವಂಶದ ನರಸನಾಯಕನ ಮಗ ವೀರನರಸಿಂಹನು ಕ್ರಿ.ಶ. ೧೫೦೩ರಿಂದ ೧೫೦೯ರವರೆಗೆ ಆಳ್ವಿಕೆ ಮಾಡಿದನು. ಈತನು ವಿಜಯನಗರದ ಸೇನೆಯ ಪ್ರಾಬಲ್ಯತೆಗೆ ಹೆಚ್ಚಿನ ಗಮನವನ್ನು ನೀಡಿ ಪೋರ್ಚುಗೀಸರೊಡನೆ ಮೈತ್ರಿಬೆಳೆಸಿ, ಅಶ್ವಗಳನ್ನು ಖರೀದಿಸಿದನೆಂದು ಪ್ರತೀತಿಯಿದೆ. ವೀರನರಸಿಂಹನ ಮಲತಾಯಿ ನಾಗಲಾದೇವಿಯ ಮಗನಾಗಿ ಜನಿಸಿದ ಕೃಷ್ಣದೇವರಾಯನು ಮಹಾಮಂತ್ರಿ ತಿಮ್ಮರಸುವಿನ ನೆರವಿನೊಂದಿಗೆ ಕ್ರಿ.ಶ. ೧೫೦೯ರ ಕೃಷ್ಣಜನ್ಮಾಷ್ಟಮಿಯಂದು ಸಿಂಹಾಸನವನ್ನೇರಿದನು. ರಾಜ್ಯತಂತ್ರದ ಪ್ರತಿಭೆ, ಆಡಳಿತ ದಕ್ಷತೆ ಹಾಗೂ ಸಮರ್ಥ ಸೇನೆಯ ಬೆಳವಣಿಗೆಗೆ ಕಾರಣನಾದ ಕೃಷ್ಣದೇವರಾಯನು ಭಾರತದ ಶ್ರೇಷ್ಠ ರಾಜರುಗಳ ಪೈಕಿ ಒಬ್ಬನೆಂದು ಪರಿಗಣಿಸಲ್ಪಟ್ಟಿರುವನು. ಈತನು ತನ್ನ ರಾಜತಂತ್ರ ಪ್ರತಿಭೆಯನ್ನು ತಾನೇ ರಚಿಸಿದ ಆಮುಕ್ತಮಾಲ್ಯದ ಕೃತಿಯಲ್ಲಿ ಉತ್ತಮವಾಗಿ ವಿವರಿಸಿರುವನು. ನಗರಗಳು, ಕಾಲುವೆಗಳು, ಕೆರೆಗಳು, ಅಣೆಕಟ್ಟುಗಳು, ದೇವಾಲಯಗಳು ಮತ್ತು ಜನೋಪಯುಕ್ತ ಲೌಕಿಕ ಮತ್ತು ಧಾರ್ಮಿಕ ಕಟ್ಟಡಗಳ ರಚನೆಗೆ ಸಂಬಂಧಿಸಿದ ಚಟುವಟಿಕೆಗಳು ಈತನ ಆಳ್ವಿಕೆಯಲ್ಲಿ ಪರಾಕಾಷ್ಟೆಯನ್ನು ಕಂಡವು. ತನ್ನ ತಾಯಿಯಾದ ನಾಗಲಾದೇವಿಯ ನೆನಪಿನಲ್ಲಿ ನಾಗಲಾಪುರ ಹಾಗೂ ತನ್ನ ದ್ವಿತೀಯ ಪತ್ನಿ ತಿರುಮಲಾದೇವಿಯ ಹೆಸರಿನಲ್ಲಿ ತಿರುಮಲಾ ಪಟ್ಟಣವನ್ನು ರಾಜಧಾನಿಯ ಸಮಿಪ ಉಪನಗರಗಳಾಗಿ ನಿರ್ಮಿಸಿದನು. ಕೃಷ್ಣದೇವರಾಯನ ಪಟ್ಟಾಭಿಷೇಕೋತ್ಸವ ಸಮಯದಲ್ಲಿ ವಿರೂಪಾಕ್ಷ ದೇವಾಲಯದ ಸಭಾ ಮಂಟಪ ಹಾಗೂ ಗೋಪುರಗಳು ಪುನರ್‌ರಚಿಸಲ್ಪಟ್ಟವು. ಉದಯಗಿರಿ ಕೋಟೆಯನ್ನು ಗೆದ್ದುಕೊಂಡ ನಂತರ ರಾಜಧಾನಿಯಲ್ಲಿ ಕೃಷ್ಣಸ್ವಾಮಿ ದೇವಾಲಯವನ್ನು ಕಟ್ಟಿಸಿ ಆ ಕೋಟೆಯಿಂದ ವಿಜಯದ ಸಂಕೇತವಾಗಿ ತಂದ ಕೃಷ್ಣ ವಿಗ್ರಹವನ್ನು ಅದರಲ್ಲಿ ಪ್ರತಿಷ್ಠಾಪಿಸಲಾಯಿತು. ಹಜಾರರಾಮ ಮತ್ತು ವಿಠಲಸ್ವಾಮಿ ದೇವಾಲಯಗಳೂ ಕೃಷ್ಣದೇವರಾಯನ ಕಾಲದ ರಚನೆಯಾಗಿವೆ. ವಿಜಯ ವಿಠಲಸ್ವಾಮಿ ದೇವಾಲಯವು ತಾಂತ್ರಿಕ ನೈಪುಣ್ಯತೆಯ ಉತ್ತಮ ಪ್ರತೀಕವಾಗಿ ಕರ್ನಾಟಕ ಸಂಗೀತಕ್ಕೆ ಸಮರ್ಪಿಸಲ್ಪಟ್ಟಿರುವ ವಾಸ್ತುರಚನೆಯನ್ನು ಹೊಂದಿದ್ದು, ಭಾರತದಲ್ಲಿ ಸಂಗೀತವನ್ನು ಅಳವಡಿಸಿಕೊಂಡು ನಿರ್ಮಿತವಾಗಿರುವ ಇಂತಹ ವಾಸ್ತುರಚನೆಗೆ ಸರಿಸಾಟಿಯಾಗಬಹುದಾದ ಮತ್ತೊಂದು ದೇವಾಲಯ ಬೇರೆ ಎಲ್ಲೂ ಇಲ್ಲವೆಂಬುದು ವಾಸ್ತುತಜ್ಞರ ಅಭಿಪ್ರಾಯವಾಗಿದೆ. ಇದರ ತಳವಿನ್ಯಾಸ ಹಾಗೂ ಎತ್ತರವಾದ ಕಂಬದೊಳಗಿನ ಕಿರುಕಂಬಗಳು ಕುತೂಹಲಕರ ರಚನೆಯಾಗಿದ್ದು ಸಂಗೀತದ ಸಪ್ತ ಹಾಗೂ ಸಮ್ಮಿಳಿತ ಸ್ವರಗಳನ್ನು ಪ್ರತಿಧ್ವನಿಸುತ್ತವೆ. ಇಂಥಹ ಕಗ್ಗಲ್ಲಿನಲ್ಲಿ ಹೊರಹೊಮ್ಮುವ ಸಂಗೀತದ ವಿವಿಧ ವಾದ್ಯಗಳ ಮಧುರ ನಾದಗಳು ಯಾತ್ರಿಕರನ್ನು ವಿಸ್ಮಯಗೊಳಿಸುವುದೇ ಅಲ್ಲದೇ ಅವರನ್ನು ಗಂಧರ್ವ ಲೋಕಕ್ಕೇ ಕರೆದೊಯ್ಯುತ್ತವೆ.

ಮಂಡ್ಯ ಜಿಲ್ಲೆಯಲ್ಲಿ ಕೃಷ್ಣದೇವರಾಯನ ಕಾಲದ ಸುಮಾರು ಹನ್ನೊಂದು ಶಾಸನಗಳು ಲಭ್ಯವಾಗಿವೆ. ನಾಗಮಂಗಲದಲ್ಲಿ ದೊರೆತಿರುವ ಕ್ರಿ.ಶ.೧೫೧೧ರ ಶಾಸನವು ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ನಾಗಮಂಗಲ ಅಥವಾ ವೀರಬಲ್ಲಾಳ ಚತುರ್ವೇದಿ ಭಟ್ಟರತ್ನಾಕರ ಅಗ್ರಹಾರದಲ್ಲಿದ್ದ ವೀರಭದ್ರ ದೇವಾಲಯದ ರಂಗಮಂಟಪದ ದುರಸ್ತಿಯನ್ನು ಮಾಡಿ, ಮುಂಭಾಗದ ಗಂಧಗೋಡಿ ಮಂಟಪವನ್ನು ಗುಮ್ಮಲಾಪುರದ ಅಕ್ಕಣ್ಣ ಚೆನ್ನಿಸೆಟ್ಟಿಯ ಮಗನಾದ ಹೊನ್ನಿಸೆಟ್ಟಿಯು ನಿರ್ಮಿಸಿದನೆಂದು ಹಾಗೂ ಅರಮನೆಯ ಬೇಹಾರಿ (ವ್ಯವಸ್ಥಾಪಕ)ಯು

ಈ ಕೈಂಕರ್ಯಕ್ಕೆ ಅವಶ್ಯಕವಾದ ಮಾರ್ಗದರ್ಶನ ಮಾಡಿದನೆಂದು ಶಾಸನದಲ್ಲಿ ದಾಖಲಿಸಲಾಗಿದೆ. ನಾಗಮಂಗಲ ತಾಲೂಕಿನ ದೊಡ್ಡ ಜಟಕ ಗ್ರಾಮದಲ್ಲಿ ದೊರೆತ ತಾಮ್ರಪಟವು ನಾಗರಿಭಾಷೆಯಲ್ಲಿದ್ದು, ಕ್ರಿ.ಶ.೧೫೧೨ಕ್ಕೆ ಸೇರಿದ್ದು, ವಿಜಯನಗರದ ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ಹೊಯ್ಸಳ ದೇಶದ ವೇಲೂರ ಸೀಮೆಯಲ್ಲಿಯ ಹಿರೆಜಟ್ಟಿಗ ಗ್ರಾಮವನ್ನು ಶಾಸ್ತ್ರ, ಕಾವ್ಯ ಹಾಗೂ ಪುರಾಣಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದ ಶ್ರೀನಿವಾಸಾಧ್ವರೀ ಎಂಬ ವಿದ್ವಾಂಸರಿಗೆ ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ. ಈ ಸಂದರ್ಭದಲ್ಲಿ ಸರ್ವಕ್ರತು ಮಹಾಯಾಗವಾದ ವಾಜಪೇಯ ಯಾಗವನ್ನು ಈ ಸ್ಥಳದ ವಾಜಪೇಯಾಧ್ವರೀ, ರಂಗನಾಥಾಧ್ವರೀ ನಂಜಿನಾಥ ಮತ್ತು ಶಿವಾಧೀಕ್ಷಿತ್ ಮುಂತಾದ ಪ್ರಕಾಂಡ ಪಂಡಿತರುಗಳು ನೆರವೇರಿಸಿದ ಬಗ್ಗೆ ದಾಖಲಿಸಿದೆ. ಇದೇ ತಾಲೂಕಿನ ದೇವಲಾಪುರದ ತಾಮ್ರಪಟವು ಕ್ರಿ.ಶ.೧೫೧೩ರಲ್ಲಿ ಕೃಷ್ಣದೇವರಾಯನು ಆಳ್ವಿಕೆ ಮಾಡುತ್ತಿದ್ದಾಗ ಮದನಪುರ ಮತ್ತು ಮಲ್ಲಿಗೆರೆ ಗ್ರಾಮಗಳನ್ನು ಕೃಷ್ಣರಾಯಪುರ ಎಂದು ನಾಮಕರಣ ಮಾಡಿದ ಬಗ್ಗೆ ಉಲ್ಲೇಖಿಸುತ್ತದೆ. ಈ ಶಾಸನವು ೧೬ ಮಹಾದಾನಗಳಲ್ಲಿ ಪ್ರಮುಖವೆಂದು ಪರಿಗಣಿಸಲ್ಪಟ್ಟ ಹೇಮಾಶ್ವದಾನವನ್ನು ಈ ಸ್ಥಳದಲ್ಲಿ ನೆರವೇರಿಸಿದ ಬಗ್ಗೆ ಉಲ್ಲೇಖಿಸುತ್ತದೆ. ಮಂಡ್ಯ ತಾಲೂಕಿನ ಮೊತ್ತಹಳ್ಳಿಯಲ್ಲಿರುವ ಶಾಸನವು ಕೃಷ್ಣದೇವರಾಯನ ಕಾಲಕ್ಕೆ ಸೇರಿದ್ದು, (ಕ್ರಿ.ಶ. ೧೫೧೫) ಉಳಿದ ಭಾಗ ಶಿಥಿಲವಾಗಿದೆ. ಶ್ರೀರಂಗಪಟ್ಟಣದ ಖಜಾನೆಯಲ್ಲಿರುವ ತಾಮ್ರಪಟದಲ್ಲಿ ಕ್ರಿ.ಶ.೧೫೧೬ರಲ್ಲಿ ಕೃಷ್ಣದೇವರಾಯನು ತನ್ನ ಆಳ್ವಿಕೆಯಲ್ಲಿ ಬ್ರಹ್ಮಣ್ಯತೀರ್ಥರ ಶಿಷ್ಯರಾದ ವ್ಯಾಸತೀರ್ಥರಿಗೆ ನಾಗಮಂಗಲ ರಾಜ್ಯದ ವ್ಯಾಪ್ತಿಯಲ್ಲಿದ್ದ ಮೂರು ಹಳ್ಳಿಗಳನ್ನು (ಹೆಸರು ಸ್ಪಷ್ಟವಾಗಿಲ್ಲ) ಮತ್ತು ಚನ್ನಪಟ್ಟಣ ರಾಜ್ಯದಲ್ಲಿದ್ದ ಹೊಸಹಳ್ಳಿಗಳನ್ನು ದಾನ ನೀಡಿದ ವಿಚಾರವನ್ನು ದಾಖಲಿಸಿದೆ. ಮಂಡ್ಯದ ಕ್ರಿ.ಶ.೧೫೧೬ರ ತಾಮ್ರಪಟ ಶಾಸನವು ವಿಜಯನಗರದ ಕೃಷ್ಣದೇವರಾಯನ ಆಳ್ವಿಕೆಗೆ ಸೇರಿದ್ದು, ಮಂತೆಯ ಗ್ರಾಮವನ್ನು ಕೃಷ್ಣರಾಯಪುರವೆಂದು ಕರೆದು ಇದರ ಜೊತೆಗೆ ಶ್ರೀರಂಗಪಟ್ಟಣ ಸೀಮೆಯ ಸಣ್ಣ ಹಳ್ಳಿಗಳಾದ ಚಿಕ್ಕಮಂತೆಯ, ಕಲ್ಲಹಳ್ಳಿ, ಹೊಸಹಳ್ಳಿ, ತೊಂಡಸೇಹಳ್ಳಿ ಮತ್ತು ಕೊನೇಹಳ್ಳಿಗಳನ್ನು ಗೃಹಪರ್ವತ ದಾನವನ್ನಾಗಿ ತನ್ನ ಗುರುವಾದ ವರದಾಚಾರ್ಯರ ಮಗ ಗೋವಿಂದರಾಜನಿಗೆ ನೀಡಿದ ಬಗ್ಗೆ ಈ ಶಾಸನದಲ್ಲಿ ದಾಖಲಿಸಲಾಗಿದೆ.

ಪಾಂಡವಪುರ ತಾಲೂಕಿನ ಮೇಲುಕೋಟೆಯ ನಾರಾಯಣ ದೇವಾಲಯದಲ್ಲಿರುವ ಕ್ರಿ.ಶ.೧೫೨೮ರ ಶಾಸನವು ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ದಂಡು ಅವುಭಲದೇವನ ಮಗ ಕೃಷ್ಣರಾಯ ನಾಯಕನೆಂಬ ಅಧಿಕಾರಿಯು ಈ ಭಾಗವನ್ನು ಆಡಳಿತ ಮಾಡುತ್ತಿದ್ದ ಬಗ್ಗೆ ತಿಳಿಸುತ್ತಾ, ಕಾಮೆನಾಯಕನಹಳ್ಳಿ ಮತ್ತು ಗೊಲ್ಲರ ಚಟ್ಟನಹಳ್ಳಿಗಳನ್ನು ಈ ದೇವಾಲಯಕ್ಕೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ನಾಗಮಂಗಲ ತಾಲೂಕಿನ ತಿಬ್ಬನಹಳ್ಳಿಯ ಕ್ರಿ.ಶ. ೧೫೨೪ರ ಶಾಸನವು ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ನಾಗಮಂಗಲಕ್ಕೆ ಸಲ್ಲುವ ದೇವಲಾಪುರ ಸ್ಥಾನದ ತಿಬ್ಬನಹಳ್ಳಿಯನ್ನು ಕೃಷ್ಣದೇವರಾಯ ಸಮುದ್ರವೆಂದು ಕರೆದು ಚನ್ನಪಟ್ಟಣದ ವೀರಪ್ಪದೇವರಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ನಾಗಮಂಗಲ ತಾಲೂಕಿನ ಕಾಳಿಂಗನಹಳ್ಳಿಯಲ್ಲಿರುವ ಎರಡು ಶಾಸನಗಳು ಕೃಷ್ಣದೇವರಾಯನ ಕಾಲಕ್ಕೆ ಸೇರಿದ್ದು, ಮೊದಲನೆಯದು ಮೇಲುಕೋಟೆಯ ಚೋಳಪ್ಪಯ್ಯನೆಂಬ ಸಾಮಂತನು ಕಾಳಿಂಗರಾಮನ ಹಳ್ಳಿಯನ್ನು ಶೆಲ್ವಪಿಳ್ಳೆ (ಚೆಲುವರಾಯ) ದೇವರಿಗೆ ದಾನಬಿಟ್ಟ ವಿಚಾರವನ್ನೂ ಹಾಗೂ ಈ ಭಾಗವನ್ನು ಆಳುತ್ತಿದ್ದ ತಿಮ್ಮಯ್ಯನ ಮಗ ಮಲೇಪನಾಯ್ಕನೆಂಬ ಅಧಿಕಾರಿಯ ಹೆಸರನ್ನು ಉಲ್ಲೇಖಿಸಿದೆ. ಎರಡನೆಯ ಶಾಸನವು ಶಿಥಿಲವಾಗಿದ್ದು, ಕೇವಲ ಕೃಷ್ಣದೇವರಾಯ ಮತ್ತು ದಾನ ಪಡೆದ ಹಿರಿಯ ತಿರುಮಲದೇವ ಎಂಬ ಹೆಸರುಗಳು ಮಾತ್ರ ತಿಳಿದುಬರುತ್ತದೆ.

ಕೃಷ್ಣದೇವರಾಯನು ಸ್ವತ: ಒಬ್ಬ ಘನವಿದ್ವಾಂಸನಾಗಿದ್ದನು. ಆತನು ತೆಲುಗು ಭಾಷೆಯಲ್ಲಿ ರಚಿಸಿದ ಆಮುಕ್ತಮಾಲ್ಯದ ಗ್ರಂಥವು ಆತನ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ಭುವನ ವಿಜಯವೆಂಬ ವಿಜಯಗೃಹದಲ್ಲಿ ಅಷ್ಟದಿಗ್ಗಜಗಳೆನಿಸಿದ್ದ ಎಂಟು ಜನ ಪ್ರಸಿದ್ಧ ತೆಲುಗು ಕವಿಗಳು ಈತನ ಆಸ್ಥಾನದಲ್ಲಿ ವಿಜೃಂಭಿಸಿದ್ದರು. ಆ

ಕವಿಗಳಲ್ಲಿ ಅಲ್ಲಸಾನಿಪೆದ್ದನ ಮತ್ತು ನಂದಿತಿಮ್ಮಣ್ಣ ಎಂಬುವವರು ಗಮನಾರ್ಹರು. ಕನ್ನಡದ ಕುಮಾರವ್ಯಾಸನು ಮುಗಿಸದೆ ಬಿಟ್ಟಿದ್ದ ಭಾರತದ ಭಾಗವನ್ನು ತಿಮ್ಮಣ್ಣ ಕವಿಯು ಮುಗಿಸಿ ಅದನ್ನು ಕರ್ನಾಟದ ಕೃಷ್ಣದೇವರಾಯ ಭಾರತ ಕಥಾಮಂಜರಿ ಎಂಬ ಹೆಸರಿನಲ್ಲಿ ಅರಸನಿಗೆ ಅರ್ಪಣೆ ಮಾಡಿದನೆಂದು ಪ್ರತೀತಿಯಿದೆ. ಹರಿದಾಸ ಸಾಹಿತ್ಯದಲ್ಲಿ ಚಿರಸ್ಮರಣೀಯ ವ್ಯಕ್ತಿಗಳಾದ ಪುರಂದರದಾಸರು, ಕನಕದಾಸರು ಮತ್ತು ವ್ಯಾಸತೀರ್ಥರು ಈತನ ಕಾಲಕ್ಕೆ ಸೇರಿದವರು. ಈತನ ಕಾಲದಲ್ಲಿ ಅಣೆಕಟ್ಟುಗಳು, ಕಾಲುವೆಗಳು, ಕೆರೆಗಳು, ದೇವಾಲಯಗಳು ಮತ್ತು ಜನೋಪಯುಕ್ತ ಲೌಕಿಕ ಹಾಗೂ ಧಾರ್ಮಿಕ ಕಟ್ಟಡಗಳ ರಚನೆಗೆ ಸಂಬಂಧಿಸಿದ ಚಟುವಟಿಕೆಗಳು ಪರಾಕಾಷ್ಠೆಯನ್ನು ತಲುಪಿದ್ದವು. ಈತನ ಇಬ್ಬರು ಗಂಡು ಮಕ್ಕಳಲ್ಲಿ ತಿರುಮಲನು ವಿಷಪ್ರಾಶನದಿಂದ ಮಡಿದರೆ ಕಿರಿಯ ಮಗನು ಸಾಯುವಾಗ ಕೇವಲ ೧೮ ತಿಂಗಳುಗಳ ಮಗುವಾಗಿದ್ದನು. ಕೃಷ್ಣದೇವರಾಯನ ಇಬ್ಬರ ಹೆಣ್ಣುಮಕ್ಕಳಾದ ತಿರುಮಲಾಂಬ ಮತ್ತು ವೆಂಗಳಾಂಬರನ್ನು ಕ್ರಮವಾಗಿ ಅರವೀಡು ಮನೆತನದ ಸೋದರರಾದ ರಾಮರಾಯ ಮತ್ತು ತಿರುಮಲರಾಯನಿಗೆ ವಿವಾಹ ಮಾಡಿಕೊಡಲಾಗಿತ್ತು.

ಕೃಷ್ಣದೇವರಾಯನ ಬಳಿಕ ಪಟ್ಟಕ್ಕೆ ಬಂದವನು ನರಸನಾಯಕನ ಮೂವರು ಪತ್ನಿಯಲ್ಲಿ ಕೊನೆಯವಳಾದ ಓಬಲಾಂಬೆಯ ಮಗನಾದ ಹಾಗೂ ಕೃಷ್ಣದೇವರಾಯನ ಮಲಸೋದರನಾದ ಅಚ್ಯುತರಾಯನು (ಕ್ರಿ.ಶ. ೧೫೨೯–೧೫೪೨) ಪ್ರಬಲನಾಗಿ ಆಡಳಿತ ನಡೆಸಿ ಗಜಪತಿಯನ್ನು ಕಾಲ್ತೆಗೆಯುವಂತೆ ಮಾಡಿದುದೇ ಅಲ್ಲದೇ, ಇಸ್ಮಾಯಿಲ್ ಹಿಡಿದಿದ್ದ ರಾಯಚೂರು ಮತ್ತು ಮುದಗಲ್‌ನ ಕೋಟೆಗಳನ್ನು ಸ್ವತಂತ್ರಗೊಳಿಸಿದನು. ಈತನು ತನ್ನ ಆಳ್ವಿಕೆಯ ದ್ವಿತೀಯಾರ್ಧದ ವರ್ಷಗಳಲ್ಲಿ ಭೋಗಜೀವನದೆಡೆಗೆ ಜಾರಿದ್ದನು. ಮಂಡ್ಯ ಜಿಲ್ಲೆಯಲ್ಲಿ ಅಚ್ಯುತರಾಯನ ಕಾಲದ ೧೩ ಶಾಸನಗಳು ಲಭ್ಯವಿದ್ದು, ಇವುಗಳಲ್ಲಿ ಈ ಪ್ರದೇಶದ ಮೇಲೆ ತನ್ನ ಆಡಳಿತ ಹತೋಟಿಯನ್ನು ಚಲಾಯಿಸಿದ ಬಗ್ಗೆ ಮಾಹಿತಿ ದೊರೆಯುತ್ತದೆ. ಮಳವಳ್ಳಿ ತಾಲೂಕಿನ ಮಾರೇಹಳ್ಳಿಯಲ್ಲಿ ದೊರೆತಿರುವ ಕ್ರಿ.ಶ.೧೫೩೦ರ ಶಾಸನವು ವಿಜಯನಗರದ ಅಚ್ಯುತರಾಯನ ಆಳ್ವಿಕೆಯಲ್ಲಿ ಮೂಲಸ್ಥಾನ ದೇವರಿಗೆ (ಅಮೃತೇಶ್ವರ) ಈ ಪ್ರದೇಶವನ್ನು ಆಳುತ್ತಿದ್ದ ತಿಪ್ಪಣ್ಣನಾಯಕನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಈ ದಾನವನ್ನು ಉತ್ತರ ಕರ್ನಾಟಕದ ಕೃಷ್ಣವೇಣಿ ನದಿಯ ತೀರದಲ್ಲಿ ಚಂದ್ರಗ್ರಹಣದ ಪರ್ವಕಾಲದಲ್ಲಿ ನೆರವೇರಿಸಿದನೆಂದೂ ಶಾಸನವು ವಿವರಿಸುತ್ತದೆ. ಇದೇ ತಾಲೂಕಿನ ಕೊಡಗೆಹಳ್ಳಿಯ ಕ್ರಿ.ಶ.೧೫೩೦ರ ಶಾಸನವು ಅಚ್ಯುತರಾಯನ ಆಳ್ವಿಕೆಯಲ್ಲಿ ಈ ಪ್ರದೇಶವನ್ನು ಆಳುತ್ತಿದ್ದ ರಾಯಣ್ಣನಾಯಕನೆಂಬ ಅಧಿಕಾರಿಯು ಮಾಯಣಪುರವೆಂಬ ಗ್ರಾಮವನ್ನು ತಲಕಾಡಿನ ಕೀರ್ತಿನಾರಾಯಣ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಮೇಲುಕೋಟೆಯ ಕ್ರಿ.ಶ. ೧೫೩೪ರ ಶಾಸನವು ಅಚ್ಯುತರಾಯನ ಆಳ್ವಿಕೆಯಲ್ಲಿ ಹರಿಗಾಲದ ಅಬ್ಬರಾಜನ ಮಗ ತಿರುಮಲರಾಯನೆಂಬ ಅಧಿಕಾರಿಯು ರಾಮಾನುಜಾಚಾರ್ಯರ ೫೨ ಶಿಷ್ಯರಿಗೆ (ಅಯ್ಯಗಳಿಗೆ) ಹಾಗೂ ತಿರುನಾರಾಯಣಪುರದ (ಯಾದವಗಿರಿ) ಸಂಪತ್ಕರನಾರಾಯಣ ದೇವರ ಭಕ್ತಾದಿಗಳಿಗೆ ನೀಡಿದ ದಾನವನ್ನು ಉಲ್ಲೇಖಿಸಿದೆ. ತಿರುನಾರಾಯಣಪುರವನ್ನು (ಮೇಲುಕೋಟೆ) ದಕ್ಷಿಣ ಬದರಿಕಾಶ್ರಮ, ಭೂವೈಕುಂಠವೆಂದು ಕರೆಯಲಾಗಿದೆ. ಇದೇ ಸ್ಥಳದ ಇನ್ನೊಂದು ಶಾಸನವು (ಕ್ರಿ.ಶ. ೧೫೩೪) ಅಚ್ಯುತರಾಯನ ಆಳ್ವಿಕೆಯ ಕಾಲದಲ್ಲಿ ಹರಿಗಾಲದ ಅಬ್ಬರಾಜನ ಮಗನಾದ ಪಿರಿಯರಾಜನು ಹೊಸಕೆರೆ ಮತ್ತು ಕೃಷ್ಣದೇವರಾಯರಕೆರೆ ಎಂಬ ಎರಡು ಕೆರೆಗಳನ್ನು ದುರಸ್ತಿಗೊಳಿಸಿದ ಹಾಗೂ ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ. ಮದ್ದೂರು ತಾಲೂಕಿನ ಯರಗನಹಳ್ಳಿಯ ಕ್ರಿ.ಶ. ೧೫೩೫ರ ಶಾಸನವು ಅಚ್ಯುತರಾಯನ ಕಾಲದಲ್ಲಿ ಬೆನ್ನೂರಿನ ತಿಮ್ಮರಸಯ್ಯನೆಂಬ ಅಧಿಕಾರಿಯು ಯರಗನಹಳ್ಳಿ ಮತ್ತು ನಾಯಕನಹಳ್ಳಿಗಳನ್ನು ನಾಗಪ್ಪಗೌಡನ ಮಗನಾದ ಲಿಂಗಪ್ಪಗೌಡನಿಗೆ ದಂಡಿಗೆಯ ಉಂಬಳಿಯಾಗಿ ನೀಡಿದ ವಿಷಯವನ್ನು ದಾಖಲಿಸಿದೆ. ಶಾಸನದಲ್ಲಿ ಹೆಸರಿಸಲಾದ ತಿಮ್ಮರಸಯ್ಯನನ್ನು ಅಚ್ಯುತರಾಯನ ಮಂತ್ರಿ ರಾಮಭಟ್ಟಯ್ಯನ ಪ್ರತಿನಿಧಿಯೆಂದು ಉಲ್ಲೇಖಿಸಲಾಗಿದೆ. ಮೇಲುಕೋಟೆಯ ಕ್ರಿ.ಶ. ೧೫೩೫ರ ಶಾಸನವು ಅಚ್ಯುತರಾಯನ ಆಳ್ವಿಕೆಯಲ್ಲಿ ಹರಿನೀಲ ಅಬ್ಬರಾಜನ ಮಗನಾದ ತಿರುಮಲರಾಯನು

ನಾಗಮಂಗಲದಲ್ಲಿ (ತಾಮ್ರಶಾಸನದ ಉಲ್ಲೇಖ) ಸೆಟಿಪುರ, ಮಾಲನಹಳ್ಳಿಗಳಿಗೆ ಸಲ್ಲುವ ಕಾಲುವಳಿಗಳೂ, ನೀಲಮಂಗಲ, ಹೊಸವಳ್ಳಿ, ಕರನಾರಹಳ್ಳಿ ಮೊದಲಾದ ಗ್ರಾಮಗಳನ್ನು ಇಲ್ಲಿಯ ಶೆಲ್ವಪಿಳ್ಳೆ ದೇವರಿಗೆ ದಾನಬಿಟ್ಟ ವಿಚಾರವನ್ನು ತಿಳಿಸುತ್ತದೆ. ಶ್ರೀರಂಗಪಟ್ಟಣದ ಶಾಸನವು ಅಚ್ಯುತರಾಯನ ಆಳ್ವಿಕೆಯಲ್ಲಿ ಈ ಪ್ರದೇಶದ ಪಾರುಪತ್ಯವನ್ನು (ಆಡಳಿತ) ನೋಡಿಕೊಳ್ಳುತ್ತಿದ್ದ ಕಾಮಯನಾಯಕನೆಂಬ ಅಧಿಕಾರಿಯು ಪ್ರಥಮ ಬಾರಿಗೆ ೩೦೦ ಗದ್ಯಾಣದಷ್ಟು ಅಧಿಕವಾದ ಸುಂಕವನ್ನು ವಸೂಲು ಮಾಡಿದ ವಿವರಗಳನ್ನು ದಾಖಲಿಸುತ್ತದೆ. ನಂತರ ಪೆದ್ದಿರಾಜ ಮತ್ತು ಆತನ ಮಗ ಅಪ್ಪಾಜಿ ಎಂಬ ಅಧಿಕಾರಿಗಳು ಜಾರವಹಳ್ಳಿ ಮತ್ತು ಒಗೆಯಾ ಸಮುದ್ರ ಗ್ರಾಮಗಳನ್ನು ಪ್ರತಿನಿಧಿಸಿದ್ದ ಪೆರಂಗುರಾಯನನ್ನು ಈ ಸುಂಕದಿಂದ ವಿಮುಕ್ತಗೊಳಿಸಿದ ವಿವರಗಳು ಶಾಸನದಲ್ಲಿ ಕಂಡುಬರುತ್ತದೆ. ಮಂಡ್ಯ ತಾಲೂಕಿನ ಹೆಬ್ಬಕವಾಡಿಯ ಕ್ರಿ.ಶ.೧೫೩೭ರ ಶಾಸನವು ವಿಜಯನಗರದ ಅಚ್ಯುತರಾಯನ ಆಳ್ವಿಕೆಯ ಅವಧಿಯಲ್ಲಿ ಹೆಬ್ಬಕವಾಡಿಯ ದಾನವೊಂದನ್ನು ನವೀಕರಿಸಿ ಸೋಮನಾಥಪುರದ ಚೆನ್ನಕೇಶವ ದೇವಾಲಯದ ಜೀರ್ಣೋದ್ಧಾರಕ್ಕಾಗಿ ವಾರಣಾಸಿಯ ವರದೈಅಣ್ಣಯ್ಯನೆಂಬ ಅಧಿಕಾರಿಯು ಹೆಬ್ಬಕವಾಡಿಯ ಗ್ರಾಮವನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಮತ್ತು ಅಚ್ಯುತರಾಯನನ್ನು ಮಹಾಮಂಡಳೇಶ್ವರ ಎಂದು ಈ ಶಾಸನದಲ್ಲಿ ಕರೆಯಲಾಗಿದೆ. ಮದ್ದೂರು ತಾಲೂಕಿನ ಬೊಪ್ಪಸಂದ್ರದ ಕ್ರಿ.ಶ.೧೫೩೭ರ ಶಾಸನವು ಅಚ್ಯುತರಾಯನ ಆಳ್ವಿಕೆಯಲ್ಲಿ ಮಳವಳ್ಳಿ ಸ್ಥಳದ ವ್ಯಾಪ್ತಿಯಲ್ಲಿದ್ದ ಬೊಪ್ಪಸಮುದ್ರವನ್ನು ನರಸಿಂಹ ಹೆಬ್ಬಾರುವರನ ಮಗ ನಂಜಯ್ಯ ಹೆಬ್ಬಾರನು ದತ್ತಿಯ ರೂಪದಲ್ಲಿ ಅಚ್ಯುತರಾಯನ ಪ್ರತಿನಿಧಿ ವಾರಾಣಾಸಿಯ ವೀರಪಣ್ಣನಿಗೆ ನೀಡಿದ ವಿಚಾರವನ್ನು ತಿಳಿಸುತ್ತದೆ. ಮಳವಳ್ಳಿ ತಾಲೂಕಿನ ಹಲಸಳ್ಳಿ ಗ್ರಾಮದ ಕ್ರಿ.ಶ. ೧೫೩೭ರ ಶಾಸನವು ಅಚ್ಯುತರಾಯನ ಆಳ್ವಿಕೆಯ ಅವಧಿಯಲ್ಲಿ ತಲಕಾಡು ನಾಡಿನ ಪ್ರಭು ಸಾಧಿಯಪ್ಪನ ಮಗ ಚಿಕ್ಕ ಸಾಧಿಯಪ್ಪನಿಗೆ, ತಲಕಾಡು ಸೀಮೆಯ ಧನಗೂರು ಸ್ಥಳದ ವ್ಯಾಪಿಯಲ್ಲಿದ್ದ ಹಲಸನಹಳ್ಳಿಯನ್ನು ದಾನ ರೂಪವಾಗಿ ನೀಡಿದ ಬಗ್ಗೆ ಉಲ್ಲೇಖಿಸಿದೆ. ಈ ದಾನವನ್ನು ಅಲಗೋಡು ರಾಜ್ಯದ ಮುಖ್ಯಸ್ಥನಾದ ಕೋಮಾರ ವೀರಪ್ಪ ಒಡೆಯನ ಮಗ ಅಚ್ಯುತರಾಯ ವೀರಣ್ಣ ಒಡೆಯನು ವಿಜಯನಗರದ ರಾಜನ ಆದೇಶದ ಮೇಲೆ ನೀಡಿದನೆಂದು ಶಾಸನದಲ್ಲಿ ಉಲ್ಲೇಖವಿದೆ. ಇದೇ ತಾಲೂಕಿನ ಕೋರೆಗಾಲದ ಕ್ರಿ.ಶ.೧೫೪೦ರ ನಾಗರಿ ಶಾಸನ ಅಚ್ಯುತರಾಯನ ಆಳ್ವಿಕೆಯಲ್ಲಿ ಪ್ರಧಾಸಿದ್ಧಾರ್ದಪ್ಪಣ್ಣ ಭೂಪತಿ ಎಂಬ ಮಂತ್ರಿಯು ಕೋರೆಗಾಲ ಗ್ರಾಮವನ್ನು ನರಸಿಂಹನ ಮಗ ನಂಜಿನಾಥನಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಇದೇ ತಾಲೂಕಿನ ಬೊಮ್ಮನಹಳ್ಳಿ (ಬೇಚಿರಾಕ್)ಯ ಹೊರವಲಯದಲ್ಲಿ ಕಂಡು ಬಂದ ಕ್ರಿ.ಶ.೧೫೪೨ರ ಶಾಸನವು ಇದೇ ಕಾಲಕ್ಕೆ ಸೇರಿದ್ದು, ತಲಕಾಡು ಸೀಮೆಯ ಧನಗೂರು ಸ್ಥಳದ ಬೊಮ್ಮನಹಳ್ಳಿಯನ್ನು ಮೇಲೆ ಹೇಳಿರುವ ಸಾಧಿಯಪ್ಪನ ಮಗ ಚಿಕ್ಕ ಸಾಧಿಯಪ್ಪನಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ.

ಅಚ್ಯುತರಾಯನ ಆಳ್ವಿಕೆಯ ಉತ್ತರಾರ್ಧದಲ್ಲಿ ಅಧಿಕಾರ ಕಲಹಗಳು ತಲೆದೋರಿದವು. ಶ್ರೀಮಂತರಿಂದ ಧನವನ್ನು ವಸೂಲು ಮಾಡಿ ಅದನ್ನು ಯಜ್ಞಾಚರಣೆಗಳಿಗೆ ಉಪಯೋಗಿಸಲು ಆನಂದ ನಿಧಿ ಎಂಬ ದತ್ತಿಯನ್ನು ಸ್ಥಾಪಿಸಿದನು. ಆದರೆ ಈತನ ದುರ್ಬಲತೆಯಿಂದಾಗಿ ರಾಜ್ಯದ ಸಾಮಾನ್ಯ ಆಡಳಿತವೂ ಕುಸಿಯಿತು. ಕೊನೆಗೆ ಕ್ರಿ.ಶ. ೧೫೪೨ರಲ್ಲಿ ಈತನು ಸಾವನ್ನಪ್ಪಿದಾಗ ರಾಜಪ್ರತಿನಿಧಿಯಾದ ಸೋದರಮಾವ ಸಲಕತಿರುಮಲನು, ರಾಣಿ ವರದಾಂಬಳ ಮಗನಾದ ವೆಂಕಟನಿಗೆ ಅವಸರವಸರವಾಗಿ ಕಿರೀಟಧಾರಣೆ ಮಾಡಿದನು. ಆದರೆ ಅಂದಿನ ರಾಜಮಾತೆಯೇ ತನ್ನ ಸೋದರನ ಉದ್ದೇಶಗಳನ್ನು ಸಂಶಯಿಸಿ ವಿಜಾಪುರದ ಆದಿಲ್‌ಷಾನನ್ನು ಮಧ್ಯ ಪ್ರವೇಶಿಸುವಂತೆ ಯಾಚಿಸಿದಳು. ಅಳಿಯ ರಾಮರಾಯನು ಸದಾಶಿವನ ಪಕ್ಷವನ್ನು ಎತ್ತಿಹಿಡಿದು ಆತನನ್ನು ಗುತ್ತಿಯ ಸೆರೆಮನೆಯಿಂದ ಮುಕ್ತಗೊಳಿಸಿ ತಾನೂ ಆದಿಲ್‌ಷಾನ ನೆರವನ್ನು ಕೋರಿದನು. ಏತನ್ಮಧ್ಯೆ ತಿರುಮಲನು ಮುಂದಾಲೋಚನೆಯಿಲ್ಲದೆ ಯುವರಾಜನಾಗಿದ್ದ ವೆಂಕಟನನ್ನು ಕೊಂದನು. ಇದರ ಪರಿಣಾಮವಾಗಿ ಸಂಭವಿಸಿದ

ಕದನಗಳ ಸರಣಿಯಲ್ಲಿ ತಿರುಮಲನು ಯುದ್ಧಭೂಮಿಯಲ್ಲಿ ಕೊಲ್ಲಲ್ಪಟ್ಟನು. ಹೀಗೆ, ಸದಾಶಿವರಾಯನ ಹಾದಿಯು ಸುಗಮವಾಗಿ ಕ್ರಿ.ಶ. ೧೫೪೩ರಲ್ಲಿ ಪಟ್ಟಕ್ಕೆ ಬಂದನು. ಈತನು ಅಪ್ರಾಪ್ತವಯಸ್ಕನಾಗಿದ್ದ ಕಾರಣ ಅಳಿಯ ರಾಮರಾಯನೇ ಆಡಳಿತದ ಸರ್ವಾಧಿಕಾರವನ್ನು ಪಡೆದುಕೊಂಡನು. ಸದಾಶಿವನು ಕ್ರಿ.ಶ. ೧೫೪೩ ರಿಂದ ಕ್ರಿ.ಶ. ೧೫೭೨ರವರೆಗೆ ನಾಮಕಾವಸ್ತೆ ಗದ್ದುಗೆಯಲ್ಲಿದ್ದನು. ಆದರೆ, ಸದಾಶಿವನನ್ನು ಸಂಪೂರ್ಣವಾಗಿ ಬಂಧನದಲ್ಲಿರಿಸಿ ಅಳಿಯ ರಾಮರಾಯನೇ ರಾಜ್ಯಭಾರವನ್ನು ನಡೆಸಿದನು. ಈ ಅವಧಿಯಲ್ಲಿ ರಾಮರಾಯನು ಅನೇಕ ನಿಷ್ಠಾವಂತ ಅಧಿಕಾರಿಗಳನ್ನು ತೆಗೆದುಹಾಕಿ ತನ್ನ ಸಂಬಂಧಿಕರನ್ನೇ ನೇಮಿಸುವುದರ ಮೂಲಕ ತನ್ನ ಬಲವನ್ನು ವರ್ಧಿಸಿಕೊಂಡನು.

ಮಂಡ್ಯ ಜಿಲ್ಲೆಯಲ್ಲಿ ಸದಾಶಿವರಾಯನ ಕಾಲದ ಒಟ್ಟು ಏಳು ಶಾಸನಗಳು ಲಭ್ಯವಿದ್ದು, ಈ ಪ್ರದೇಶದ ಮೇಲೆ ಆತನ ಹತೋಟಿಯ ಬಗ್ಗೆ ಇವು ಉತ್ತಮ ಆಕರಗಳಾಗಿವೆ. ಪಾಂಡವಪುರ ತಾಲೂಕಿನ ಅರಕನಕೆರೆಯಲ್ಲಿ ದೊರೆತಿರುವ ಭಗ್ನ ಶಾಸನವು ಕ್ರಿ.ಶ. ೧೫೪೨ರಲ್ಲಿ ನೀಡಿದ ದಾನದ ಬಗ್ಗೆ ಉಲ್ಲೇಖಿಸುತ್ತದೆ. ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದ ಕ್ರಿ.ಶ.೧೫೪೪ರ ಶಾಸನವು ಸದಾಶಿವರಾಯನ ಆಳ್ವಿಕೆಯ ಅವಧಿಯಲ್ಲಿ ನಂದ್ಯಾಲದ ನರಸಿಂಗದೇವನ ಮಗ ನಾರಾಯಣದೇವನೆಂಬ ಅಧಿಕಾರಿಯು ಈ ಭಾಗವನ್ನು ಆಳ್ವಿಕೆ ಮಾಡುತ್ತಿದ್ದಾಗ ದೇವಾಲಯದ ಹಿಂದಿನ ದಾನ ಶಾಸನಗಳನ್ನು ನವೀಕರಿಸಿದ ವಿವರಗಳನ್ನು ದಾಖಲಿಸಿದೆ. ಈ ಶಾಸನದಲ್ಲಿ ಭಾಷ್ಯಾಕಾರ ರಾಮಾನುಜಾಚಾರ್ಯರ ಬಗ್ಗೆ ಉಲ್ಲೇಖವಿದ್ದು ರಾಜ್ಯದ ಕೆಲವು ರಾಜಮುದ್ರೆಗಳಾದ ದೇಶಾಂತ್ರಿ ಮುದ್ರೆ, ಹನುಮಂತ ಮುದ್ರೆ, ರಾಮಾನುಜ ಮುದ್ರೆ ಮೊದಲಾದವುಗಳನ್ನು ವಿವರಿಸುತ್ತದೆ. ನಾಗಮಂಗಲದ ಕ್ರಿ.ಶ. ೧೫೪೪ರ ಇನ್ನೊಂದು ಶಾಸನವು ಸದಾಶಿವರಾಯನ ಆಳ್ವಿಕೆಯಲ್ಲಿ ಈ ಪ್ರದೇಶವನ್ನು ಆಳುತ್ತಿದ್ದ ಸಾಮಂತ ಚನ್ನರಾಜ ಮತ್ತು ತಿಮ್ಮಪ್ಪನಾಯಕರುಗಳು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಹಾಗೂ ಅಗ್ರಹಾರ ಬಾಗೂರು ಗ್ರಾಮದ ಉಲ್ಲೇಖವಿದೆ. ಇದೇ ಸ್ಥಳದಲ್ಲಿರುವ ಇನ್ನೊಂದು ಶಾಸನವು (೧೫೪೫), ವಿಜಯನಗರದ ಸದಾಶಿವರಾಯನ ಕಾಲದಲ್ಲಿ ಶ್ರೀರಂಗಪಟ್ಟಣ ಸೀಮೆಯ ಕಾವೇರಿ ಕಟ್ಟು ಕಾಲುವೆಯೊಳಗಿರುವ ಬಲ್ಲಾಳಪುರದ ಸ್ಥಳವನ್ನು ಹಾಗೂ ಕನ್ನಂಬಾಡಿ ಸೀಮೆಯ ವರಾಹನಾಥ ಕಲ್ಲಹಳ್ಳಿಗಳನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ನಾಗಮಂಗಲ ತಾಲೂಕಿನ ಹೊನ್ನೇನಹಳ್ಳಿಯಲ್ಲಿ ಕ್ರಿ. ಶ. ೧೫೪೫ರ ನಾಗರಿ ಭಾಷೆಯಲ್ಲಿರುವ ವಿಜಯನಗರ ಸದಾಶಿವರಾಯನ ಕಾಲಕ್ಕೆ ಸೇರಿದ ತಾಮ್ರಶಾಸನವು ವಿಜಯನಗರದ ಅರಸರ ವಂಶಾವಳಿಯನ್ನು ವಿವರವಾಗಿ ನೀಡುತ್ತದೆ. ವೆಂಕಟಾದ್ರಿಸಮುದ್ರ ಅಥವಾ ಹೊನ್ನಯ್ಯನಹಳ್ಳಿ ಮತ್ತು ಇತರೆ ಗ್ರಾಮಗಳನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಈ ಪ್ರದೇಶವು (ಬೆಳ್ಳೂರು ಸೀಮೆಯು) ಹೊಯ್ಸಳ ನಾಡಿನ ವ್ಯಾಪ್ತಿಯಲ್ಲಿದ್ದ ಪೆನುಗೊಂಡೆ ರಾಜ್ಯದ ಭಾಗವಾಗಿದ್ದು ಸದಾಶಿವರಾಯನ ಆಡಳಿತ ನಿಯಂತ್ರಣದಲ್ಲಿದ್ದ ವಿಚಾರವನ್ನು ದೃಢಪಡಿಸುತ್ತದೆ. ಮೇಲುಕೋಟೆಯ ಕ್ರಿ.ಶ.೧೫೫೦ರ ಶಾಸನವು ಪಿಳ್ಳೇರಾಜ ಅಥವಾ ಸಂಪತ್ಕರನಾರಾಯಣನು ಸಿಂದಘಟ್ಟದ ತಳವಾರರನ್ನು ನೇಮಿಸಿದ ಬಗ್ಗೆ ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ದಾನಿಯಾದ ಮಹಾಮಂಡಳೇಶ್ವರ ಅಪ್ರತಿಮಮಲ್ಲ ಮನಬ್ರೋಲು ಚೆನ್ನದೇವಚೋಡ(ಳ) ಮಹಾಅರಸು ಬಗ್ಗೆ ತಿಳಿಸಲಾಗಿದೆ. ಇದೇ ಸ್ಥಳದಲ್ಲಿರುವ ಕ್ರಿ.ಶ. ೧೫೫೧ರ ಶಾಸನವು ಸದಾಶಿವರಾಯನ ಆಳ್ವಿಕೆಯಲ್ಲಿ ಮಹಾಮಂಡಲೇಶ್ವರ ನಂದ್ಯಾಲದ ನರಸಿಂಹದೇವ ಮಹಾಅರಸನ ಮಗ ತಿಮ್ಮಯದೇವ ಮಹಾರಸು, ವರಾಹಸ್ವಾಮಿಗೆ ನಗುವನಹಳ್ಳಿಯನ್ನು ದಾನಕೊಟ್ಟ ವಿವರಗಳನ್ನು ತಿಳಿಸುತ್ತದೆ. ದೇವಾಲಯಕ್ಕೆ ಪೂಜಾ ಕೈಂಕರ್ಯಕ್ಕಾಗಿ ವೃಂದಾವನ (ಹೂವಿನ ತೋಟ) ವನ್ನು ಪಾಲಿಸುವ ಬಗ್ಗೆ ಈ ಶಾಸನದಲ್ಲಿ ವಿಶೇಷವಾಗಿ ವಿವರಿಸಲಾಗಿದೆ. ಕೃಷ್ಣರಾಜಪೇಟೆ ತಾಲೂಕಿನ ಮಹಾಮಂಡಲೇಶ್ವರ ಅಹಬಲದೇವ ರಾಜಯ್ಯದೇವ ಚೋಳ ಮಹಾಅರಸುವಿನ ಪ್ರತಿನಿಧಿ ರಂಗಪ್ಪಯ್ಯನು ಹೊನ್ನಹಲಗೆ ಲಿಂಗಣ್ಣನೆಂಬ ಬಾಚಿಯಹಳ್ಳಿಯ ವೀರಭದ್ರ ದೇವಾಲಯದ ಅಧಿಕಾರಿಗೆ, ನಿರ್ಲಕ್ಷಿಸಲ್ಪಟ್ಟ ಎರಡು ಗ್ರಾಮಗಳನ್ನು ದತ್ತಿಬಿಟ್ಟು ಅಲ್ಲಿ ಭೂ ಸಾಗುವಳಿ ಮತ್ತು ತೋಟಗಳ ಬೆಳವಣಿಗೆಗೆ ಸಂಬಂಧಿಸಿದಂತೆ ಈ ಶಾಸನದಲ್ಲಿ ದಾಖಲಿಸಿದೆ. ಮೇಲುಕೋಟೆಯ ೧೫೬೪ರ

ಶಾಸನವು ಸದಾಶಿವರಾಯನ ಆಳ್ವಿಕೆಯ ಅವಧಿಯಲ್ಲಿ ಕೋನೇಟಿರಾಜು ದೇವರಸನ ಮಗ ಕೊಂಡರಾಜಯ್ಯ ದೇವರಸನು ಚನ್ನಪಟ್ಟಣ ಸ್ಥಳದ ಹೊಂಗನೂರು ಮತ್ತು ಗೂಳೂರು ಸ್ಥಳದ ಹೊನ್ನುಡುಗಿ ಗ್ರಾಮಗಳನ್ನು ಕಾಲುವೆಗಳನ್ನೊಳಗೊಂಡಂತೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಶ್ರೀರಂಗಪಟ್ಟಣ ತಾಲೂಕಿನ ಮೇಳಾಪುರದ ಕ್ರಿ.ಶ.೧೫೬೫ರ ಶಾಸನವು ಸದಾಶಿವರಾಯನ ಆಳ್ವಿಕೆಯಲ್ಲಿ ಮೇಳಾಪುರ ಗ್ರಾಮದ ವ್ಯಾಪ್ತಿಯಲ್ಲಿದ್ದ ಮತ್ತು ಶ್ರೀರಂಗಪಟ್ಟಣ ಸೀಮೆಯಲ್ಲಿದ್ದ ಹೆಬ್ಬಾಡಿ, ದಂಡಗನಹಳ್ಳಿ ಮತ್ತು ಬೇಡರಹಳ್ಳಿಗಳನ್ನು ಕಂದಾಚಾರದ (ಅಧಿಕಾರಿ) ನಂಜಯ್ಯನ ತಿಮ್ಮಪ್ಪನು, ತಿರುಮಲೆಯ ತಿರುವೆಂಗಳನಾಥ ದೇವರ ಭಂಡಾರಕ್ಕೆ ದತ್ತಿಬಿಟ್ಟ ವಿಚಾರವನ್ನು ವಿವರಿಸುತ್ತದೆ. ಮೇಲುಕೋಟೆಯಲ್ಲಿರುವ ಕ್ರಿ.ಶ.೧೫೭೦ರ ಶಾಸನದಲ್ಲಿ ಸದಾಶಿವರಾಯನು ಆಳುತ್ತಿರುವಾಗ ವೇಲುಗೋಡದ (ಮೇಲುಕೋಟೆ) ವಸಂತರಾಯನೆಂಬ ಅಧಿಕಾರಿಯು ಮೇಲುಕೋಟೆ ಬಳಿ ಕಾಲುವಳಿ ಮೈಲಹಳ್ಳಿ ಮತ್ತು ಪುರದ ಗ್ರಾಮಗಳನ್ನು ಧರ್ಮಕರ್ತ (ಧಾರ್ಮಿಕ ಅಧಿಕಾರಿ) ಅನಂತಯ್ಯನಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸಲಾಗಿದೆ.

ಮೇಲೆ ಈಗಾಗಲೇ ಪ್ರಸ್ತಾಪಿಸಿರುವಂತೆ ವಿಜಯನಗರ ಸಿಂಹಾಸನದಲ್ಲಿ ಸದಾಶಿವರಾಯನು ಆಸೀನನಾಗಿದ್ದರೂ ಆತನು ಇನ್ನೂ ಅಪ್ರಾಪ್ತವಯಸ್ಕನೆಂಬ ಕಾರಣದಿಂದ ಅದನ್ನೇ ನೆಪಮಾಡಿಕೊಂಡು ಅಳಿಯ ರಾಮರಾಯನೇ ಆಡಳಿತದ ಅಧಿಕಾರವನ್ನು ಹಿಡಿದುಕೊಂಡು ರಾಜನ ಹೆಸರಿನಲ್ಲಿ ಆಳ್ವಿಕೆ ಮಾಡಿದನೆಂಬುದು ವಾಸ್ತವಾಂಶವಾಗಿತ್ತು. ಅಚ್ಯುತರಾಯ ಮತ್ತು ಸದಾಶಿವರಾಯ ಪಟ್ಟಕ್ಕೆ ಬಂದ ಮೇಲೆ ಹಾಗೂ ಅನಂತರ ರಾಜ್ಯದಲ್ಲಿ ಉಂಟಾದ ಗೊಂದಲಮಯ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ೧೫೪೩ರಲ್ಲಿ ಪೋರ್ಚುಗೀಸರ ಪ್ರಾಂತಾಧಿಕಾರಿಯಾಗಿದ್ದ ಮಾರ್ಟಿನ್ ಆಲ್‌ಫನ್ಸೊ ಡಿಸೌಜನು ಹಿಂದೂ ದೇವಾಲಯಗಳನ್ನು ಅಪವಿತ್ರಗೊಳಿಸಿ ಸೂರೆಗೊಳ್ಳುವುದರಲ್ಲಿ ಆಸಕ್ತಿಯನ್ನು ತೋರಿಸಿ ಕಾಂಚಿ ದೇವಾಲಯವನ್ನು ಕೊಳ್ಳೆಹೊಡೆಯಲು ಪ್ರಯತ್ನಿಸಿದನು. ಆದರೆ ಸಮಯಕ್ಕೆ ಸರಿಯಾಗಿ ಎಚ್ಚೆತ್ತು ಕಾರ್ಯೋನ್ಮುಖನಾದ ರಾಮರಾಯನು ಆತನ ಯತ್ನವನ್ನು ವ್ಯರ್ಥಗೊಳಿಸಿದನು. ಅಲ್ಲದೇ ಸಾಮ್ರಾಜ್ಯಕ್ಕೆ ಅಪಾಯ ಒಡ್ಡಿದ್ದ ಚಂದ್ರಗಿರಿ ಪ್ರದೇಶ ಮತ್ತು ಕೇರಳದಲ್ಲಿ ತಲೆದೋರಿದ್ದ ದಂಗೆಕೋರರನ್ನು ಯಶಸ್ವಿಯಾಗಿ ದಮನ ಮಾಡಿದನು. ಅಳಿಯ ರಾಮರಾಯನು ಬಹಮನಿ ಸುಲ್ತಾನರು ಹಾಗೂ ಇತರೆ ಮಹಮ್ಮದೀಯರ ಬಗ್ಗೆ ಅನುಸರಿಸಿದ ಧೋರಣೆ ಹೆಚ್ಚು ಗಮನ ಸೆಳೆಯುವಂತಹದಾಗಿತ್ತು. ರಾಮರಾಯನು ಅವರ ಒಳ ರಾಜಕೀಯದಲ್ಲಿ ಸ್ವತಃ ಸಿಲುಕಿಕೊಂಡನೆಂಬುದು ಹಲವು ಇತಿಹಾಸಕಾರರ ಅಭಿಪ್ರಾಯವಾಗಿದೆ. ಅಹಮದ್ ನಗರದ ನಿಜಾಮ್‌ಷಾನೂ ವಿಜಾಪುರದ ಆದಿಲ್‌ಷಾಹನೂ ಈ ಘರ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಿದುದೇ ಅಲ್ಲದೇ ಬಿದರೆಯ ಬರೀದ್ ಷಾ ಮತ್ತು ಗೋಲ್ಕಂಡಾದ ಕುತುಬ್ ಷಾ ನೆರವು ನೀಡಿದರು. ಪ್ರಥಮ ಹಂತದಲ್ಲಿ ವಿಜಯನಗರವು ವಿಜಾಪುರದ ವಿರುದ್ಧವಾಗಿ ಅಹಮದ್ ನಗರದ ಪಕ್ಷವನ್ನು ವಹಿಸಿದುದರ ಪರಿಣಾಮವಾಗಿ ರಾಯಚೂರು ಮತ್ತು ದೋಬ್ ಪ್ರದೇಶವನ್ನೂ ರಾಮರಾಯನು ಗೆದ್ದುಕೊಂಡನು. ಅಹಮದ್ ನಗರವು ವಿಜಾಪುರದಿಂದ ಕೊಲ್ಲಾಪುರವನ್ನು ಪಡೆದುಕೊಂಡಿತು (ಕ್ರಿ.ಶ. ೧೫೪೩). ಆ ಬಳಿಕ ವಿಜಾಪುರವು ಬಿದರೆಯ ಜೊತೆಗೂಡಿ ಅಹಮದ್ ನಗರದ ವಿರುದ್ಧ ದಂಡೆತ್ತಿತು. ಹೀಗೆ ವಿಜಾಪುರ ಮತ್ತು ಇತರೆ ಮಹಮ್ಮದೀಯ ಪ್ರಾಂತ್ಯಗಳೊಂದಿಗೆ ರಾಮರಾಯನು ಬೆಳೆಸಿಕೊಂಡ ವೈಷಮ್ಯವೇ ವಿಜಯನಗರದ ಅವನತಿಗೆ ಕಾರಣವಾಯಿತು. ಅಂತಿಮವಾಗಿ ಈ ಐದೂ ಸುಲ್ತಾನರು ರಾಮರಾಯನ ವಿರುದ್ಧ ಗೋಪ್ಯವಾಗಿ ಒಂದು ಸೈನಿಕ ಒಕ್ಕೂಟವನ್ನು ರಚಿಸಿಕೊಂಡು, ಅತಿ ಹೆಚ್ಚು ಸಂಖ್ಯೆಯ ಸೈನ್ಯವನ್ನು ಕೂಡಿಸಿಕೊಂಡು ವಿಜಯನಗರದ ವಿರುದ್ಧ ಕ್ರಿ.ಶ. ೧೫೬೪ರ ಡಿಸೆಂಬರ್ ೨೫ರಂದು ವಿಜಾಪುರದಿಂದ ದಂಡೆತ್ತಿ ಬಂದರು. ರಾಮರಾಯನು ರಾಯಚೂರು ಮತ್ತು ಮುದ್ಗಲ್ಲುಗಳನ್ನು ಹಿಂದಿರುಗಿಸಲು ನಿರಾಕರಿಸಿದ್ದುದು ಯುದ್ಧಕ್ಕೆ ತತ್‌ಕ್ಷಣದ ಕಾರಣವಾಗಿ ಪರಿಣಮಿಸಲ್ಪಟ್ಟಿತು. ಸೂಕ್ಷ್ಮಮತಿಯಾಗಿದ್ದ ರಾಮರಾಯನು ಇಂತಹ ಒಂದು ಚಾಲನೆಯನ್ನು ನಿರೀಕ್ಷಿಸಿದ್ದು, ಯುದ್ಧಕ್ಕೆ ತಾನು

ಹತೋಟಿಯಲ್ಲಿಟ್ಟುಕೊಳ್ಳಬಹುದಾದ ಪರಮಾವಧಿ ಸಂಖ್ಯೆಯ ಸೈನ್ಯವನ್ನು ಜಮಾಯಿಸಿದ್ದನು. ವಿದೇಶಿ ಇತಿಹಾಸಕಾರ ಫರಿಷ್ತಾನ ಪ್ರಕಾರ ವಿಜಯನಗರದ ಸೈನ್ಯ ೭೦,೦೦೦ ಅಶ್ವಗಳು, ೯೦,೦೦೦ ಕಾಲಾಳುಗಳು ಮತ್ತು ೨,೦೦೦ ಆನೆಗಳ ಬಲವನ್ನು ಹೊಂದಿದ್ದರೆ, ಹುಸೇನ್ ನಿಜಾಮ್ ಷಾ ೬೦೦ ಫಿರಂಗಿ ಗಾಡಿಗಳನ್ನು ಒಟ್ಟುಗೂಡಿಸಿದ್ದನು. ಒಕ್ಕೂಟದ ಸೈನ್ಯವು ೫೦,೦೦೦ ಕುದುರೆಗಳ ಮತ್ತು ೩೦,೦೦೦ ಕಾಲಾಳುಗಳ ಬಲವುಳ್ಳದ್ದಾಗಿತ್ತೆಂದು ಪೋರ್ಚುಗೀಸರ ಆಧಾರಗಳು ಸೂಚಿಸುತ್ತವೆ. ಈ ಕದನವು ಇಂದು ರಕ್ಕಸಗಿ ಮತ್ತು ತಂಗಡಗಿ ಗ್ರಾಮಗಳಿರುವ ಪ್ರದೇಶದಲ್ಲಿ ನಡೆಯಿತೆಂದು ಸಾಮಾನ್ಯವಾಗಿ ತಿಳಿದಿದ್ದು, ಇತ್ತೀಚಿನ ಹಿಂದೂ ಕೃತಿಯಾದ ರಾಮರಾಯನ ಬಖೈರಿನಲ್ಲಿ ಇದನ್ನು ರಕ್ಕಸ–ತಂಗಡಗಿ ಕದನವೆಂದು ವರ್ಣಿಸಲಾಗಿದೆ. ಮೂಲತಃ ಇದನ್ನು ತಾಳಿಕೋಟೆಯ ಕದನವೆಂದು ಕರೆಯಲಾಗಿತ್ತು. ಕ್ರಿ.ಶ. ೧೫೬೫ರ ಜನವರಿ ೨೩ರಂದು ಅಲ್ಪ ಕಾಲದ (ಒಂದು ದಿನದ)ಲ್ಲಿ ನಡೆದ ಕೋಲಾಹಲದ ಕಾಳಗದೊಂದಿಗೆ ಈ ಭೀಕರ ನಿರ್ಣಾಯಕ ಕದನವು ಸಮಾಪ್ತಿಗೊಂಡಿತು. ಮಹಮ್ಮದೀಯ ಮಿತ್ರಕೂಟದ ಅಶ್ವಸೈನ್ಯದ ಆಘಾತ ಮತ್ತು ಫಿರಂಗಿಗಳ ಜ್ವಾಲೆ ಅಪಾರ ಧ್ವಂಸವನ್ನೆಸಗಿ ವಿಜಯನಗರದ ಪಾಳೆಯದಲ್ಲಿ ಗೊಂದಲವನ್ನುಂಟುಮಾಡಿತು. ಯುದ್ಧದಲ್ಲಿ ಪರಾಭವಗೊಂಡ ಅಳಿಯ ರಾಮರಾಯನು ಸೆರೆಹಿಡಿಯಲ್ಪಟ್ಟನು. ಹುಸೇನ್ ನಿಜಾಮ್‌ಷಹನು ಅವನ ತಲೆಯನ್ನು ಕಡಿದು ಅದನ್ನು ವಿಜಯ ಸ್ಮಾರಕವನ್ನಾಗಿ ಕೊಂಡೊಯ್ದನೆಂದು ಪ್ರತೀತಿಯಿದೆ. ಭಾರತದ ಇತಿಹಾಸದ ಕಥನಗಳಲ್ಲಿನ ಅತಿ ಘೋರವಾದ ಹಾಗೂ ನಿರ್ಣಾಯಕವಾದ ಇತಿಹಾಸದ ಗತಿಯನ್ನೇ ಬದಲಾಯಿಸಿದ ಕದನಗಳಲ್ಲಿ ಈ ಯುದ್ಧವು ಒಂದಾಗಿ ಪರಿಣಮಿಸಿತು. ತಾಳಿಕೋಟೆಯ ಯುದ್ಧದ ತರುವಾಯ ರಾಮರಾಯನ ಸೊದರನಾದ ತಿರುಮಲನು ರಾಜಧಾನಿಗೆ ಹಿಂದಿರುಗಿ ಅರಮನೆಯ ಬಂಗಾರ, ರತ್ನಾಭರಣಗಳನ್ನೂ, ರತ್ನಖಚಿತ ಸಿಂಹಾಸನವನ್ನೊಳಗೊಂಡಂತೆ ಎಲ್ಲಾ ಭಂಡಾರವನ್ನೂ ನೂರಾರು ಆನೆಗಳ ಮೇಲೆ ಹೇರಿಕೊಂಡು ಚಂದ್ರಗಿರಿಗೆ ಧಾವಿಸಿದನು. ವಿಜಯನಗರದ ೨೩೦ ವರ್ಷಗಳ ಆಳ್ವಿಕೆಯು ದಕ್ಷಿಣಭಾರತದ ಇತಿಹಾಸದಲ್ಲಿಯೇ ಒಂದು ಪರ್ವಕಾಲವೆನಿಸಿದೆ. ಪ್ರೊ.ಸಾಲೆತ್ತೊರೆಯವರು ಅಭಿಪ್ರಾಯಪಡುವಂತೆ "ಮುಸಲ್ಮಾನ ರಾಜರುಗಳು ಹಿಂದೂ ಸಾಮ್ರಾಜ್ಯದ ಸಾಂಸ್ಕೃತಿಕ ಸಂಪತ್ತನ್ನು ಶವದ ಪೆಟ್ಟಿಗೆಯಲ್ಲಿ ತುಂಬಿ ಕೊನೆಯ ಆಣಿಯನ್ನು ಬಡಿಯಬೇಕೆಂದಿದ್ದಾಗ ತಲೆಯತ್ತಿದ ವಿಜಯನಗರ ಸಾಮ್ರಾಜ್ಯವು ಅವರ ಆಸೆ ಆಕಾಂಕ್ಷೆಗಳನ್ನು ವಿಫಲಗೊಳಿಸಿ ಹಿಂದೂ ಧರ್ಮ ಹಾಗೂ ಸಂಪ್ರದಾಯಗಳ ಸಂರಕ್ಷಣೆ ಮಾಡುವಲ್ಲಿ ಯಶಸ್ವಿಯಾಯಿತು" ಎಂಬುದು ಈ ಸಾಮ್ರಾಜ್ಯದ ರಾಜಕೀಯ ಅವಶ್ಯಕತೆಯ ಬಗ್ಗೆ ಮೂಡಿಬಂದ ಸ್ಪಷ್ಟ ಚಿತ್ರಣವಾಗಿದೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪಿಯನ್ನು ಮಹಮ್ಮದೀಯ ಸೈನ್ಯಗಳು ಸುಮಾರು ಆರು ತಿಂಗಳು ಪರ್ಯಂತ ಧಾಳಿಮಾಡಿ ನಾಶಮಾಡಿದವು. ವಿಜಯನಗರ ಸಾಮ್ರಾಜ್ಯದ ಕೊನೆಯ ಆಡಳಿತ ವಂಶವಾದ ಅರವೀಡು ವಂಶವು ಕ್ರಿ.ಶ. ೧೫೬೫ರ ತರುವಾಯ ಪೆನುಗೊಂಡೆ ಪ್ರದೇಶಕ್ಕೆ ಸೀಮಿತವಾಗಿ ದುರ್ಬಲತೆಯಿಂದ ಮುಂದುವರಿಯಿತು. ಕೊನೆಯ ಹಂತದ ರಾಜರುಗಳ ಕೆಲವು ಶಾಸನಗಳು ಮಂಡ್ಯ ಜಿಲ್ಲೆಯಲ್ಲಿ ಲಭ್ಯವಿದ್ದು, ಅವುಗಳು ಕೇವಲ ಹಿಂದಿನ ದತ್ತಿದಾನಗಳ ನವೀಕರಣ ಅಥವಾ ಮುಂದುವರಿಸುವ ದಾಖಲೆಗಳಾಗಿವೆ. ಶ್ರೀರಂಗಪಟ್ಟಣದ ರಂಗನಾಥ ದೇವಾಲಯದಲ್ಲಿಯ ಕ್ರಿ.ಶ. ೧೫೭೧ರ ಶಾಸನವು ಅಳಿಯ ರಾಮರಾಯನ ಮಗ ಒಂದನೇ ತಿರುಮಲರಾಯನ ಆಳ್ವಿಕೆಗೆ ಸೇರಿದ್ದು, ಈ ಪ್ರದೇಶವನ್ನು ಆಳುತ್ತಿದ್ದ ಉತ್ತಮ ಒಡೆಯ (ಹೆಸರು ಸ್ಪಷ್ಟವಾಗಿಲ್ಲ)ನಿಗೆ ರಂಗನಾಥ ದೇವರ ದೈನಂದಿನ ಕೈಂಕರ್ಯಕ್ಕಾಗಿ ಬಣಂಗಟ್ಟಿ ಗ್ರಾಮವನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಅರವೀಡು ವಂಶದ ಒಂದನೇ ರಂಗರಾಯನ ಕಾಲದ ನಾಲ್ಕು ಶಾಸನಗಳು ಲಭ್ಯವಿದ್ದು, ಅವುಗಳು ಶ್ರೀರಂಗಪಟ್ಟಣದ ರಂಗನಾಥ ದೇವಾಲಯಕ್ಕೆ ನೀಡಿದ ದಾನ ಶಾಸನಗಳಾಗಿವೆ. ಶ್ರೀರಂಗಪಟ್ಟಣದ ರಂಗನಾಥ ದೇವಾಲಯದ ಭಂಡಾರದಲ್ಲಿರುವ ಕ್ರಿ.ಶ. ೧೬೬೨ರ ತಾಮ್ರಪಟವು ಅರವೀಡು ವಂಶದ ಮೂರನೇ ರಂಗರಾಯನ ಆಳ್ವಿಕೆಯ ಅವಧಿಗೆ ಸೇರಿದ್ದು ಆತನ ವಂಶಾವಳಿಯನ್ನು ದಾಖಲಿಸಿದೆ. ವಿಜಯನಗರದ ಅವಸಾನದೊಂದಿಗೆ ಮೈಸೂರು ಒಡೆಯರ ಆಳ್ವಿಕೆಯು ಹಂತಹಂತವಾಗಿ ಪ್ರಬಲಗೊಂಡಿತು.

## ನಾಗಮಂಗಲ ಪ್ರಭುಗಳು

ತಾಲೂಕು ಕೇಂದ್ರವಾದ ನಾಗಮಂಗಲವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ೧೫-೧೬ನೇ ಶತಮಾನದಲ್ಲಿ ರಾಜ್ಯಭಾರ ನಡೆಸಿದ ಈ ರಾಜಮನೆತನವನ್ನು ಶಾಸನಗಳಲ್ಲಿ ಲೋಹಿತಕುಲವೆಂದೂ, ನಾಗಮಂಗಲ ಪ್ರಭುಗಳೆಂದೂ ಕರೆಯಲಾಗಿದೆ. ನಾಗಮಂಗಲದ ಕೋಟೆಯನ್ನು ಚೈಮಿ ದಂಡನಾಯಕನು ಸುಮಾರು ಕ್ರಿ.ಶ. ೧೨೭೦ರಲ್ಲಿ ಸ್ಥಾಪಿಸಿದ್ದು, ವಿಜಯನಗರದ ಅರಸರ ನೆಚ್ಚಿನ ಭಂಟನಾಗಿದ್ದ ಸಿಂಗಣ್ಣವೊಡೆಯನೊಂದಿಗೆ ಈ ವಂಶದ ಆಡಳಿತ ಆರಂಭಗೊಂಡಂತೆ ತೋರುತ್ತದೆ. ಇವನಿಗೆ ತಿಮ್ಮಣ್ಣ ಹಾಗೂ ದೇವರಾಜ ಎಂಬ ಇಬ್ಬರು ಮಕ್ಕಳಿದ್ದು, ತಿಮ್ಮಣ್ಣ ದಂಡನಾಯಕನು ವಿಜಯನಗರದ ಅರಸ ಮಲ್ಲಿಕಾರ್ಜುನನ (ಕ್ರಿ.ಶ. ೧೪೪೬-೬೭) ಮಂತ್ರಿಯಾಗಿದ್ದು, ಮಡದಿ ರಂಗಾಂಬಿಕೆಯೊಂದಿಗೆ, ಮೇಲುಕೋಟೆಯ ಜೀರ್ಣೋದ್ಧಾರ (ಯಾದವಗಿರಿ ಜೀರ್ಣೋದ್ಧಾರಕ) ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿರುವ ಅಂಶವನ್ನು ಮೇಲುಕೋಟೆಯ (ಕ್ರಿ.ಶ. ೧೪೫೮) ಶಾಸನ ತಿಳಿಸುತ್ತದೆ. ಅಲ್ಲದೆ ಶ್ರೀರಂಗಪಟ್ಟಣದ ಪಶ್ಚಿಮ ಭಾಗದಲ್ಲಿ ಕೋಟೆ-ಕಂದಕಗಳನ್ನು ಕಟ್ಟಿಸಿದವನೇ ಇವನೆಂದು ಹೇಳಲಾಗುತ್ತದೆ. ಮೇಲುಕೋಟೆಯ ಇನ್ನೂ ನಾಲ್ಕಾರು ಶಾಸನಗಳಲ್ಲಿ ಮಂತ್ರಿ ತಿಮ್ಮಣ್ಣನ ಉಲ್ಲೇಖ ಕಂಡುಬರುತ್ತದೆ. ಇದೇ ದಂಡನಾಯಕನಿಗೆ ಸಂಬಂಧಿಸಿದ ನೆಲಮನೆಯ ಕ್ರಿ.ಶ. ೧೪೫೮ರ ಶಾಸನದಿಂದ ಅವನ ಮಡದಿ ರಂಗಾಂಬಿಕೆಯ ಕೋರಿಕೆಯಂತೆ, ಅರಸನು ಮೇಲುಕೋಟೆಯ ಲಕ್ಷ್ಮೀದೇವಿಗೆ ಬಲ್ಲೇನಹಳ್ಳಿ ಹಾಗೂ ಯಲವದ ಹಳ್ಳಿಗಳನ್ನು ದತ್ತಿಬಿಟ್ಟ ಅಂಶವನ್ನು ದಾಖಲಿಸಿದೆ. ಈ ಅವಧಿಯಲ್ಲಿ ಗುಂಡ್ಲುಪೇಟೆಯವರೆವಿಗೂ ನಾಗಮಂಗಲ ರಾಜ್ಯದ ಆಡಳಿತ ಹಬ್ಬಿತ್ತು. ಇವನ ಸೋದರನಾದ ದೇವರಾಜನು ಕಾವೇರಿ ನದಿಗೆ ಅಣೆ ಕಟ್ಟಿ, ಕಾಲುವೆಯ ಮೂಲಕ ಹರವು ಗ್ರಾಮಕ್ಕೆ ನೀರನ್ನು ಕೊಂಡೊಯ್ಯುವುದರ ಜೊತೆಗೆ ತಾಯಿ ಸೀತಾಂಬಿಕಾ ಹೆಸರಲ್ಲಿ ಸೀತಾಪುರ ಎಂಬ ಅಗ್ರಹಾರವನ್ನು ನಿರ್ಮಿಸಿದ ಅಂಶವನ್ನೂ ಸೀತಾಪುರದ ಕ್ರಿ.ಶ. ೧೪೬೭ರ ಶಾಸನ ತಿಳಿಸುತ್ತದೆ. ಮಿಗಿಲಾಗಿ ಇವನು ವಿಜಯನಗರ ಸಾಮ್ರಾಜ್ಯದ ರಾಜ ಪ್ರತಿನಿಧಿಯಾಗಿ ಮಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದನೆಂದು ಬೇರೆ ಮೂಲಗಳಿಂದ ತಿಳಿದುಬರುತ್ತದೆ.

## ಹದಿನಾಡು ಪಾಳೆಯಗಾರರು

ಹದಿನಾಡು ಪಾಳೆಯಗಾರರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಪ್ರಾಂತೀಯ ಅರಸರ (ಮಾಂಡಲಿಕ ಮನೆತನ) ಸ್ಥಾನವನ್ನು ಪಡೆದಿದ್ದು ಯಳಂದೂರು, ನಂಜನಗೂಡು ಮತ್ತು ಕೊಳ್ಳೇಗಾಲಗಳ ಸುತ್ತಮುತ್ತಲ ಪ್ರದೇಶವನ್ನು ಆಳುತ್ತಿದ್ದರು. ಇವರಲ್ಲಿ ಮುಖ್ಯರಾದವರು ಹದಿನಾಡಿನ ಅರಸರು ಎಂಬುದು ಶಾಸನಗಳಿಂದಲೂ ಹಾಗೂ ಇತರೆ ದಾಖಲೆಗಳಿಂದಲೂ ತಿಳಿದು ಬರುತ್ತದೆ. ಗಂಗ ಮತ್ತು ಚೋಳರ ಶಾಸನಗಳಲ್ಲಿ ಇವರನ್ನು 'ಅದಿನಾರು' ಎಂದು ಹೆಸರಿಸಿದೆ. ಹೊಯ್ಸಳ ಮತ್ತು ವಿಜಯನಗರ ಶಾಸನಗಳಲ್ಲಿ 'ಹದಿನಾಡು' ಎಂಬ ಉಲ್ಲೇಖವಿದೆ. ವಿಜಯನಗರ ಕಾಲದಲ್ಲಿ ಪ್ರಾಮುಖ್ಯತೆ ಪಡೆದಿದ್ದ ಹದಿನಾಡಿನ ರಾಜರು ವಿಜಯನಗರ ಅರಸರ ಪ್ರಭುತ್ವವನ್ನು ಒಪ್ಪಿಕೊಂಡಿದ್ದರು. ಯಳಂದೂರು ಹದಿನಾಡಿನ ರಾಜಧಾನಿಯಾಗಿತ್ತು. ಈ ಅರಸರು ಕ್ರಿ.ಶ.೧೫೪೯ ರಿಂದ ಕ್ರಿ.ಶ. ೧೬೬೭ರವರೆಗೆ ಒಟ್ಟು ೧೧೮ ವರ್ಷಗಳು ರಾಜ್ಯಭಾರ ಮಾಡಿದರು. ಇವರು ರಾಜ್ಯಾಡಳಿತ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ತಮ್ಮದೇ ಆದ ವಿಶೇಷ ಕೊಡುಗೆಯನ್ನು ನೀಡಿದರು. ಮೂಲತ: ಗೌಡ ಜನಾಂಗಕ್ಕೆ ಸೇರಿದ ಹದಿನಾಡು ರಾಜರು ಕಾಲಕ್ರಮದಲ್ಲಿ ಸ್ವಾತಂತ್ರ್ಯ ರಾಜರಾಗಿ ಆಳ್ವಿಕೆ ನಡೆಸಿದರು. ಈ ವಂಶದಲ್ಲಿ ಕಂಡು ಬರುವ ಸಿಂಘದೇವಭೂಪ ಅಥವಾ ದೇವಪ್ಪಗೌಡನೇ ಮೂಲ ದೊರೆಯೆಂದು ತಿಳಿದುಬರುತ್ತದೆ. ಇವನ ತರುವಾಯ ಪ್ರಬಲನಾಗಿದ್ದ ಮಹಾಮಂಡಳೇಶ್ವರ ನರಪರಾಜನು ಹದಿನಾಡು ಪ್ರಾಂತವನ್ನು ಆಳುತ್ತಿದ್ದಾಗ ಕ್ರಿ.ಶ. ೧೫೪೬ರಲ್ಲಿ ಚಾಮರಸಗೌಡನು (ದೇವಪ್ಪಗೌಡನ ಮಗ) ಒಬ್ಬ ಅಧೀನ ಅಧಿಕಾರಿಯಾಗಿದ್ದನು. ಅನಂತರ

ಸದಾಶಿವರಾಯನು ವಿಜಯನಗರವನ್ನು ಆಳುತ್ತಿದ್ದಾಗ ಕ್ರಿ.ಶ. ೧೫೬೩ರಲ್ಲಿ ಅವನು ಪ್ರಾಂತೀಯ ರಾಜ್ಯಪಾಲನಾಗಿದ್ದ ಜಗದೇವರಾಯನ ಅಧಿಕಾರಿಯೂ ಆಗಿದ್ದನು. ಇದೇ ಸಂದರ್ಭದಲ್ಲಿ ಚಾಮರಸ ಒಡೆಯನ ತಂದೆ ದೇವಪ್ಪಗೌಡನು ಸಂಜಾರಖಾನ್ ಎಂಬ ಮುಸಲ್ಮಾನನಿಂದ ಅನ್ಯಾಯವಾಗಿ ಕೊಲೆಯಾದನು. ಆಗ ಸದಾಶಿವರಾಯನು ಹದಿನಾಡು ಪ್ರಾಂತದಲ್ಲಿ ಆರು ಹಳ್ಳಿಗಳನ್ನು ನೆತ್ತರ ಕೊಡುಗೆಯಾಗಿ ಚಾಮರಸ ಒಡೆಯನಿಗೆ ನೀಡಿದನು. ಕ್ರಿ.ಶ. ೧೫೬೬ರ ಶಾಸನದಲ್ಲಿ ಉಲ್ಲೇಖಿಸಿರುವಂತೆ ದೇವಪ್ಪಗೌಡನ ಮಗ ಚಾಮರಸನು ಹದಿನಾಡು ಪ್ರಾಂತ್ಯದ ರಾಜನಾಗಿದ್ದನು. ಒಟ್ಟಿನಲ್ಲಿ ದೇವಪ್ಪಗೌಡ ಮತ್ತು ಚಾಮರಸ ಒಡೆಯರುಗಳು ವಿಜಯನಗರ ಅರಸರ ಪ್ರಾಂತೀಯ ರಾಜ್ಯಪಾಲರಾಗಿದ್ದ ನರಪರಾಜ ಮತ್ತು ಜಗದೇವರಾಜರ ಅಧೀನ ಅಧಿಕಾರಿಗಳಾಗಿದ್ದರು. ನಂತರ ಚಾಮರಸ ಒಡೆಯನ ಕಾಲದಲ್ಲಿ ಅವರು ಸ್ವತಂತ್ರ ರಾಜರಾದರು. ಈ ಹಿನ್ನೆಲೆಯಲ್ಲಿ ಚಾಮರಸ ಒಡೆಯನನ್ನು ಹದಿನಾಡಿನ ಮೊದಲನೆಯ ರಾಜನೆಂದು ಗುರುತಿಸಬಹುದು. ಈತನ ತರುವಾಯ ರಾಮರಾಜನಾಯಕನು ಪಟ್ಟಕ್ಕೆ ಬಂದನು. ರಾಮರಾಜನಾಯಕನನ್ನು 'ರಾಮನೃಪಾಲ' ಎಂದೂ ಕರೆಯಲಾಗುತ್ತಿತ್ತು. ಈತನು ದೇವಪ್ಪಗೌಡನ ಮಗನೆಂದು ಕ್ರಿ.ಶ. ೧೫೫೬ ಮತ್ತು ಕ್ರಿ.ಶ. ೧೫೯೩ರ ಶಾಸನಗಳಿಂದ ತಿಳಿದುಬರುತ್ತದೆ. ಸದಾಶಿವರಾಯನ ಅಧೀನದಲ್ಲಿ ಮಹಾಮಂಡಳೇಶ್ವರನಾಗಿದ್ದ ತಿರುಮಲರಾಜನು ಹಿರಿಯೂರನ್ನು ಹದಿನಾಡು ಪ್ರಾಂತದ ರಾಜ ರಾಮರಾಜನಾಯಕನಿಗೆ ಪಲ್ಲಕ್ಕಿ ಉಂಬಳಿಯಾಗಿ ನೀಡಿದನು. ಹೀಗೆ ರಾಮರಾಜನಾಯಕನ ಕಾಲದಲ್ಲಿ ಹದಿನಾಡಿನ ರಾಜರು ವಿಜಯನಗರದ ಚಕ್ರವರ್ತಿಗಳ ವಿಶ್ವಾಸವನ್ನೂ, ಮನ್ನಣೆಯನ್ನೂ ಗಳಿಸಿದ್ದರಲ್ಲದೆ ಅವರಿಂದ ಸಾಕಷ್ಟು ದತ್ತಿ ದಾನಗಳನ್ನೂ ಪಡೆದರು. ರಾಮರಾಜನಾಯಕನ ತರುವಾಯ ಅವನ ಮಗ ತಿರುಮಲರಾಜನಾಯಕನು ಪಟ್ಟಕ್ಕೆ ಬಂದನು. ತಿರುಮಲರಾಜನಾಯಕನು ಕಳಲೆಯ ದೊರೆ ಮಲ್ಲರಾಜನ ಮಗಳು ಮಲ್ಲಾಜಮ್ಮಳೊಂದಿಗೆ ವಿವಾಹವಾಗಿದ್ದ ಕಾರಣ ಈ ಬೆಳವಣಿಗೆಯು ಹದಿನಾಡು ರಾಜರು ರಾಜಕೀಯವಾಗಿ ಬೆಳೆಯಲು ಅನುಕೂಲವಾಯಿತು. ತಿರುಮಲರಾಜನಾಯಕನು ಮಂಡ್ಯ ಜಿಲ್ಲೆಯ ಶಿವನಸಮುದ್ರದ ವೀರೇಶ್ವರ ದೇವಾಲಯದಲ್ಲಿ ಮಹತ್ತಿನ ಮಠವನ್ನು ಸ್ಥಾಪಿಸಿ ಹಲವು ದಾನಗಳನ್ನು ನೀಡಿದನೆಂದು ಕ್ರಿ.ಶ. ೧೬೦೫ರ ಶಾಸನದಿಂದ ತಿಳಿದುಬರುತ್ತದೆ. ಹದಿನಾಡು ಪ್ರಾಂತವನ್ನು ತಿರುಮಲನಾಯಕನು ಕಳೆದುಕೊಂಡ ಮೇಲೆ ಆ ಪ್ರಾಂತ್ಯವನ್ನು ಚೊನ್ನೊಡೆಯನ ಮಗ ನಂಜರಾಜನಿಗೆ ವರ್ಗಾಯಿಸಲಾಯಿತು. ತರುವಾಯ ಕ್ರಿ.ಶ. ೧೬೦೫ ರಿಂದ ೧೬೨೭ರವರೆಗೆ ನಂಜರಾಜ ಒಡೆಯನು ಆಳ್ವಿಕೆ ಮಾಡಿದನು. ಹದಿನಾಡನ್ನು ಆಳುತ್ತಿದ್ದ ವಿಜಯನಗರದ ಮಹಾಮಂಡಳೇಶ್ವರ ಯತಿತಿಮ್ಮರಾಜಯ್ಯನ ಮಗ ವೆಂಕಟಪತಿಯ ಕಾಲದಲ್ಲಿ ಹದಿನಾಡನ್ನು ಈತನು ನೋಡಿಕೊಳ್ಳುತ್ತಿದ್ದನು. ವೆಂಕಟಪತಿಯೊಂದಿಗೆ ಸೌಹಾರ್ದ ಸಂಬಂಧವನ್ನು ಬೆಳೆಸಿಕೊಂಡಿದ್ದಲ್ಲದೇ ನಂಜರಾಜನು ನೆರೆಯ ಉಮ್ಮತ್ತೂರು ರಾಜನ ಮಿತ್ರನೂ ಆಗಿದ್ದನು. ತನ್ನ ಮನೆದೇವರಾದ ಸಿದ್ಧ ಮಲ್ಲಿಕಾರ್ಜುನ ದೇವರಿಗೆ ಹರದನಹಳ್ಳಿ ಮಠವನ್ನೂ ಹಾಗೂ ಮಲ್ಲಾಪುರ ಗ್ರಾಮವನ್ನೂ ದಾನ ಮಾಡಿದನು. ಅಲ್ಲದೆ ಕ್ರಿ.ಶ.೧೬೧೩ರಲ್ಲಿ ಅಮಚವಾಡಿಯ ಕುಂಭೇಶ್ವರ, ವೀರಭದ್ರ ಮತ್ತು ಬಸವೇಶ್ವರರಿಗೆ ಚನ್ನಪ್ಪನಪುರ ಗ್ರಾಮವನ್ನು ದತ್ತಿಯಾಗಿ ನೀಡಿದನು. ನಂತರ ಮೈಸೂರಿನ ರಾಜ ಒಡೆಯರ ವಿರುದ್ಧ ಸಂಭವಿಸಿದ ಕಾಳಗದಲ್ಲಿ ನಂಜರಾಜನು ಮಡಿದನು. ಸ್ವಲ್ಪ ಕಾಲದ ತರುವಾಯ ದೊಡ್ಡ ದೇವರಾಜ ಒಡೆಯನು ನಂಜರಾಜನ ಮಗಳಾದ ಅಮೃತಾಂಬೆಯನ್ನು ವಿವಾಹವಾದ ಕಾರಣ ಎರಡೂ ಮನೆತನಗಳ ನಡುವೆ ಆತ್ಮೀಯವಾದ ಸಂಬಂಧಗಳು ಬೆಳೆದವು. ತಿರುಮಲರಾಜನಾಯಕನ ಮಗನಾದ ಲಿಂಗರಾಜಯ್ಯ ಒಡೆಯನು ಕ್ರಿ.ಶ.೧೬೨೮ ರಿಂದ ಕ್ರಿ.ಶ. ೧೬೫೪ರವರೆಗೆ ಹದಿನಾಡಿನಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ವಿಜಯನಗರದಲ್ಲಿ ಶ್ರೀರಂಗರಾಯನು ಪ್ರಭುತ್ವದಲ್ಲಿದ್ದನು. ರಾಜ ಒಡೆಯರಿಗೂ ಹದಿನಾಡಿನ ನಂಜರಾಜ ಒಡೆಯನಿಗೂ ಇದ್ದ ವೈರತ್ವವು ಕೊನೆಗೊಂಡು, ಲಿಂಗರಾಜಯ್ಯನು ಕಂಠೀರವ ನರಸರಾಜರ ಆಳ್ವಿಕೆಯ ಕಾಲದಲ್ಲಿ ಮೈಸೂರು ಒಡೆಯರಿಗೆ ಸಮೀಪವರ್ತಿಯಾದನು. ಈತನ ತರುವಾಯ ಮದ್ದುರಾಜಯ್ಯನು ಕ್ರಿ.ಶ.೧೬೫೪ರಿಂದ ಕ್ರಿ.ಶ. ೧೬೬೭ರವರೆಗೆ ಈ ಪ್ರಾಂತ್ಯವನ್ನು ಆಳ್ವಿಕೆ ಮಾಡಿದನು.

ಚಿತ್ರದುರ್ಗದ ಬೃಹನ್ಮಠದಲ್ಲಿ ದೊರೆತ ಹಸ್ತಪ್ರತಿಯೊಂದರಲ್ಲಿ ಪದಿನಾಡು ಬಗ್ಗೆ ಹಲವು ಉಲ್ಲೇಖಗಳಿವೆ. ಕೊಳ್ಳೇಗಾಲದ ಶಾಸನದ ಪ್ರಕಾರ ಇವನ ಮಗ ಚಾಮರಾಜ ಒಡೆಯನು ಅವನ ನಂತರ ಯಳಂದೂರನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ. ಈತನೇ ಹದಿನಾಡಿನ ಕೊನೆಯ ಅರಸು. ಮೈಸೂರಿನ ಚಿಕ್ಕದೇವರಾಜ ಒಡೆಯರು ಮುಂದೆ ಹದಿನಾಡನ್ನು ತಮ್ಮ ರಾಜ್ಯದಲ್ಲಿ ವಿಲೀನಗೊಳಿಸಿದಂತೆ ಕಂಡುಬರುತ್ತದೆ. ನಂತರ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಳಂದೂರು ಮತ್ತು ಸುತ್ತಮುತ್ತಲ ಪ್ರದೇಶವನ್ನು ದಿವಾನ್ ಪೂರ್ಣಯ್ಯನವರಿಗೆ ಜಹಗೀರಾಗಿ ಮಂಜೂರು ಮಾಡಲಾಯಿತು. ಹದಿನಾಡು ಪಾಳೆಯಗಾರರು ಉತ್ತಮ ಆಡಳಿತವನ್ನು ನೀಡಿದುದಲ್ಲದೇ ಸಾಮಾನ್ಯ ಜನರಿಗೆ ಉಪಯುಕ್ತವಾಗುವ ಕಾರ್ಯಗಳಾದ ನೀರಾವರಿ, ಕೃಷಿ ಮತ್ತಿತರ ಕ್ಷೇತ್ರಗಳನ್ನು ಉತ್ತಮಪಡಿಸಿ ಈ ಪ್ರದೇಶದ ಅಭಿವೃದ್ಧಿಗೆ ಶ್ರಮಿಸಿದರು. ಶಿಕ್ಷಣ ಹಾಗೂ ಕಲಾಕ್ಷೇತ್ರಕ್ಕೂ ಉತ್ತಮ ಉತ್ತೇಜನ ನೀಡಿದ್ದರು. ಯಳಂದೂರಿನ ಅನೇಕ ಕಟ್ಟಡಗಳು ಹಾಗೂ ಇತರೆ ಸ್ಥಳಗಳಲ್ಲಿ ಇವರು ದುರಸ್ತಿಗೊಳಿಸಿರುವ ದೇವಾಲಯಗಳು ಹಾಗೂ ಧಾರ್ಮಿಕ ಮಠಗಳು ಹದಿನಾಡು ಪಾಳೆಯಗಾರರ ಸಾಧನೆಗಳಿಗೆ ಉತ್ತಮ ನಿದರ್ಶನಗಳಾಗಿವೆ. ಮಂಡ್ಯ ಜಿಲ್ಲೆಯಲ್ಲಿ ಈ ಅರಸರ ಮೂರು ಶಾಸನಗಳು ಲಭ್ಯವಿದೆ. ಮದ್ದೂರು ತಾಲೂಕಿನ ಕುದುರೆಗೊಂಡಿಯ ಕ್ರಿ.ಶ.೧೫೭೬ರ ಶಾಸನವು ಮಹಾಮಂಡಳೇಶ್ವರ ರಾಮರಾಜಯ್ಯನು ಅರಸನಕೆರೆ ಸ್ಥಳದ ಕುದುರೆಗುಂಡಿ ಗ್ರಾಮವನ್ನು ಪಲ್ಲಕ್ಕಿ ಉಂಬಳಿಯಾಗಿ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಇದೇ ತಾಲೂಕಿನ ಕಬ್ಬಾರೆಯ ೧೫೮೯ರ ಶಾಸನವು ತಿರುಮಲರಾಯನ ಮಕ್ಕಳಾದ ಮಹಾಮಂಡಳೇಶ್ವರ ರಾಮರಾಜಯ್ಯ ಮತ್ತು ತಿರುಮಲರಾಜಯ್ಯ ಇಬ್ಬರೂ ಅಪ್ಪಾಜಿ ಪಂಡಿತನ ಮಗ ಶಣ್ಮುಖ ಪಂಡಿತನಿಗೆ ಮದ್ದೂರು ಸೀಮೆಯಲ್ಲಿದ್ದ ಕಬ್ಬಾರೆ ಗ್ರಾಮವನ್ನು ಈ ಪ್ರದೇಶದ ಔನ್ನತ್ಯಕ್ಕಾಗಿ ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ. ಮಂಡ್ಯ ತಾಲೂಕಿನ ದುದ್ದ ಗ್ರಾಮದಲ್ಲಿರುವ ಭಗ್ನ ಶಾಸನವು ಕ್ರಿ.ಶ. ೧೫೯೬ರಲ್ಲಿ ನಗರೂರಿನ ಗುತ್ತಿನಾಯಕನ ಮಗ ಜಕಣ್ಣ ನಾಯಕನು ಈ ಪ್ರದೇಶವನ್ನು ಆಳುತ್ತಿದ್ದ ಸಮಯದಲ್ಲಿ ಮಹಾಮಂಡಳೇಶ್ವರ ರಾಮರಾಯ ತಿರುಮಲ ರಾಜಯ್ಯದೇವನು ಹದಿನಾಡಿನ ಮಹಾಅರಸು ಆಗಿದ್ದ ವಿಚಾರವನ್ನು ತಿಳಿಸುತ್ತದೆ. ಶಾಸನದ ಉಳಿದ ಭಾಗ ಭಗ್ನವಾಗಿದೆ. ಇದೇ ರಾಜನು ಶಿವನಸಮುದ್ರದ ವೀರೇಶ್ವರ ದೇವಾಲಯದಲ್ಲಿ ಮಹತ್ತಿನ ಮಠವನ್ನು ಸ್ಥಾಪಿಸಿ ಹಲವು ದಾನಗಳನ್ನು ಅದಕ್ಕೆ ನೀಡಿದನೆಂದು ಮಠದ ವಶದಲ್ಲಿದ್ದ ಕ್ರಿ.ಶ. ೧೬೦೫ರ ಶಾಸನದಿಂದ ತಿಳಿದು ಬರುತ್ತದೆ.

## ಉಮ್ಮತ್ತೂರು ಪಾಳೆಯಗಾರರು

ಮಂಡ್ಯ ಜಿಲ್ಲೆಯು ವಿಜಯನಗರದ ಅರಸರ ಕಾಲದಲ್ಲಿ ಹೊಯ್ಸಳ ನಾಡೆಂದೇ ಪ್ರಸಿದ್ಧವಾಗಿತ್ತು. ವಿಜಯನಗರದ ಸ್ಥಾಪನೆಯೊಂದಿಗೆ ಈ ಪ್ರದೇಶದಲ್ಲಿ ದುರ್ಬಲವಾಗಿದ್ದ ಹಲವು ಪ್ರಾದೇಶಿಕ ರಾಜಕೀಯ ಶಕ್ತಿಗಳು ಅಸ್ತಿತ್ವಕ್ಕೆ ಬಂದವು. ಇಂತಹ ಉಮ್ಮತ್ತೂರಿನ ಪಾಳೆಗಾರರದು ಪುನಃಶ್ಚೇತನಗೊಂಡ ಇಂತಹ ಒಂದು ಮುಖ್ಯವಾದ ರಾಜಕೀಯ ಶಕ್ತಿಯಾಗಿತ್ತು. ಈ ಪಾಳೆಯಗಾರರು ಮೈಸೂರು ಜಿಲ್ಲೆಯ ದಕ್ಷಿಣ ಭಾಗಗಳಾದ ನಂಜನಗೂಡಿನ ಸ್ವಲ್ಪ ಭಾಗ, ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ಮತ್ತು ಮಳವಳ್ಳಿ ಹಾಗೂ ಕೊಯಮತ್ತೂರು ಜಿಲ್ಲೆಯ ಸ್ವಲ್ಪ ಭಾಗಗಳ ಮೇಲೆ ತಮ್ಮ ಹತೋಟಿಯನ್ನು ಸ್ಥಾಪಿಸಿಕೊಂಡಿದ್ದರು. ಇವರು ಮೈಸೂರಿನ ದಕ್ಷಿಣಭಾಗದ ಪ್ರಮುಖ ಅರಸರಾಗಿದ್ದು, ಮೈಸೂರಿನ ಒಡೆಯರಿಗೆ ಈ ಭಾಗದ ಮುಖ್ಯ ವೈರಿಗಳಾಗಿದ್ದರು. ಆದರೆ ಇವರು ವಿಜಯನಗರದ ಸಾಮಂತರಾಗಿದ್ದುದರಿಂದ ರಾಜಕೀಯವಾಗಿ ಪ್ರಭಾವಶಾಲಿಗಳಾಗಿದ್ದರು. ಉಮ್ಮತ್ತೂರು ಚಾಮರಾಜನಗರ ತಾಲೂಕಿನಲ್ಲಿರುವ ಚಿಕ್ಕಗ್ರಾಮವಾಗಿದೆ. ಈ ಅರಸರ ಮುಖ್ಯ ಕೋಟೆಯು ಮಳವಳ್ಳಿ ತಾಲೂಕಿನ ಶಿವಸಮುದ್ರದ ದ್ವೀಪದಲ್ಲಿದೆ. ಶಿಂಷಾ ಜಲಪಾತದ ಸಮೀಪವಿದ್ದು ಅದರ ಸಮೀಪವೇ ಅವರ ಕುಲದೈವ ಸೋಮೇಶ್ವರನ ದೇವಾಲಯವೂ ಇದೆ. ಕಾವೇರಿ ಮತ್ತು ಕಪಿಲೆಗಳಿಂದ

ಸುತ್ತುವರಿಯಲ್ಪಟ್ಟ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಈ ಮನೆತನದವರು ಆಳುತ್ತಿದ್ದರು. ಇವರ ಸಾಮ್ರಾಜ್ಯದ ಸ್ಥಾಪನೆಯ ಕಾಲ, ಈ ಪ್ರಭುಗಳು ಉಮ್ಮತ್ತೂರಿಗೆ ಸೇರಿದವರೋ ಇಲ್ಲವೋ? ಅಥವಾ ಇವರ ಮೂಲ ಸ್ಥಳ ಯಾವುದು ಎಂಬ ಹಲವಾರು ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳು ದೊರೆಯುವುದಿಲ್ಲ. ಆದರೆ, ಲಭ್ಯವಿರುವ ಅವರ ಹಲವಾರು ಶಾಸನಗಳ ಆಧಾರದ ಮೇಲೆ ಅವರ ಇತಿಹಾಸವು ಬೆಳಕಿಗೆ ಬಂದಿದೆ.

ಉಮ್ಮತ್ತೂರು ಪಾಳೇಗಾರರ ವಂಶದ ಮೂಲಪುರುಷ ಹನುಮಂತಪ್ಪ ಒಡೆಯನೆಂದು ಕ್ರಿ.ಶ.೧೪೮೨ರ ಶಾಸನಾಧಾರದಿಂದ ಒಪ್ಪಿಕೊಳ್ಳಲಾಗಿದೆ. ಮಳವಳ್ಳಿ ತಾಲೂಕಿನ ಮುಟ್ಟನಹಳ್ಳಿಯ ಕ್ರಿ.ಶ.೧೫೦೪ರ ಶಾಸನವು ಉಮ್ಮತ್ತೂರು ರಾಜದೇವಣ್ಣ ಒಡೆಯನ ಮಗ ಚಿಕ್ಕರಾಯನ ಬಗ್ಗೆ ಉಲ್ಲೇಖ ನೀಡುತ್ತದೆ. ಈ ಶಾಸನದಲ್ಲಿ ಚಿಕ್ಕರಾಯನನ್ನು ಮಲ್ಲರಾಯನೆಂದೂ ಕರೆಯಲಾಗಿದೆ. ಆಗ ಅವನು ತೆರಕಣಾಂಬಿಯನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದನು. ಆ ಸಂದರ್ಭದಲ್ಲಿ ವಿಜಯನಗರದಲ್ಲಿ ತುಳುವ ವಂಶದ ನರಸಿಂಹನು ಈ ಪ್ರದೇಶವನ್ನು ಆಳುತ್ತಿದ್ದನು. ಶಾಸನದಲ್ಲಿ ಈ ಸ್ಥಳವನ್ನು ಧನಗೂರು ಸ್ಥಳದ ವ್ಯಾಪ್ತಿಯಲ್ಲಿದ್ದ ಮೊನೆ ಮುಟ್ಟರ ಹಳ್ಳಿ ಎಂದು ಕರೆದು, ಅದಕ್ಕೆ ಚಿಕ್ಕರಾಯಸಾಗರ ಅಗ್ರಹಾರವೆಂದು ಪುನರ್‌ನಾಮಕರಣ ಮಾಡಿರುವುದನ್ನು ದಾಖಲಿಸಲಾಗಿದೆ. ಜ್ಞಾನಂಕಚಕ್ರೇಶ್ವರ, ಪೆಸಳಿಹನುಮ, ಅರಸಾಂಕ ಸೇನೆಗಾರ ಮೊದಲಾದ ವಿಶೇಷಣಗಳೊಂದಿಗೆ ದೇಪಣ್ಣ ಒಡೆಯನನ್ನು ವರ್ಣಿಸಿದ್ದು, ಆತನನ್ನು ಪೆಸಳಿ, ಪೆಸಣಿ, ಪರ್ಸನಿ ಅಂದರೆ, ಸೇನೆಯ ದಂಡನಾಯಕನೆಂದು ಅರ್ಥೈಸಲಾಗಿದೆ. ಪೆಸಳಿ ಹನುಮಂತನ ವಂಶಸ್ಥರು ಉಮ್ಮತ್ತೂರು ಹಾಗೂ ಅದರ ಸುತ್ತಮುತ್ತಲ ಪ್ರದೇಶಗಳನ್ನು ಮಹಾಮಂಡಳೇಶ್ವರರಾಗಿ ಆಳುತ್ತಿದ್ದರೆಂಬ ಅಂಶವು ಖಚಿತವಾಗುತ್ತದೆ. ಉಮ್ಮತ್ತೂರಿನ ಪ್ರಭುಗಳು ರಾಜತ್ವದ ಬಿರುದುಗಳನ್ನು ಗಳಿಸಿ ಕ್ರಿ.ಶ. ೧೪೯೧ರಲ್ಲಿ ಸ್ವತಂತ್ರರಾದರು. ನಂತರ ೧೫೦೫ರ ವೇಳೆಗೆ ಅವರಿಗೆ ಚಿಕ್ಕರಾಯ, ಪೆನುಗೊಂಡೆ ಚಕ್ರೇಶ್ವರ ಎಂಬ ಬಿರುದುಗಳಿದ್ದುದರಿಂದ ಅವರು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿರುವ ಪೆನುಗೊಂಡದವರೆಂಬ ಸಂಶಯವುಂಟಾಗುತ್ತದೆ. ಹನುಮಪ್ಪ ಒಡೆಯನ ನಂತರ ಮೊದಲನೇ ಚಿಕ್ಕರಾಯ ಹಾಗೂ ಅನಂತರ ಚೆನ್ನರಾಯಮಹಾರಾಜನು ಕ್ರಿ.ಶ.೧೪೧೮ ರವರೆಗೂ ಆಳಿದನು. ಚೆನ್ನರಾಮರಾಜನ ತರುವಾಯ ವೀರಸೋಮಣ್ಣನು ಉಮ್ಮತ್ತೂರಿನ ರಾಜನಾದನು. ಗುಂಡ್ಲುಪೇಟೆಯ ಶಾಸನದ ಅನುಸಾರ ವೀರಸೋಮಣ್ಣನ ಒಡೆಯನ ಮಗ ಮಹಾಮಂಡಳೇಶ್ವರ ಚಿಕ್ಕೊಡೆಯನು (ಕುಮಾರ ಚಿಕ್ಕಣ್ಣ) ತೆರಕಣಾಂಬಿಯನ್ನು ಆಳುತ್ತಿದ್ದನು. ವೀರಸೋಮಣ್ಣ ಒಡೆಯನ ನಂತರ ಆಳ್ವಿಕೆ ಮಾಡಿದ. ಈ ವಂಶದ ಇಬ್ಬರು ಮುಖ್ಯರಾದ ಅರಸರೆಂದರೆ, ವೀರಹನುಮಪ್ಪ ಒಡೆಯ ಮತ್ತು ಇಮ್ಮಡಿರಾಯ ಒಡೆಯ ಅಥವಾ ಸೋಮರಾಯ. ಸೋಮಯ್ಯ ಅಥವಾ ಸೋಮೇಶ್ವರನ ಕರಣಿಕ ದೇವರಸನು ಹರವೆಯ ಜೈನ ಬಸದಿಯನ್ನು ಕಟ್ಟಿಸಿ ಅದಕ್ಕೆ ಅಗತ್ಯವಾದ ದತ್ತಿಗಳನ್ನು ನೀಡಿದನು. ಸೋಮಯ್ಯನ ಹಿರಿಯ ಮಗ ದೇವರಾಜ ಅಥವಾ ದೇಪಣ್ಣನು ಕ್ರಿ.ಶ. ೧೪೮೫ರಲ್ಲಿ ಈ ಸ್ಥಳದ ಸುಪ್ರಸಿದ್ಧ ದಿವ್ಯಲಿಂಗ ಅನಿಲೇಶ್ವರ ದೇವಾಲಯಕ್ಕೆ ಹರದನಹಳ್ಳಿ ಗ್ರಾಮವನ್ನೂ ಹಾಗೂ ಇತರೆ ಕೆಲವು ಗ್ರಾಮಗಳ ಆದಾಯವನ್ನು ದಾನವಾಗಿ ನೀಡಿದನು. ಈತನ ಕಿರಿಯ ಮಗ ನಂಜರಾಜ ಒಡೆಯನು ನಂತರ ಅಧಿಕಾರಕ್ಕೆ ಬಂದನು. ನಂಜರಾಜನ ತರುವಾಯ ಆತನ ಇಬ್ಬರು ಮಕ್ಕಳಾದ ಚನ್ನರಾಜ ಮತ್ತು ಚಿಕ್ಕರಾಯ ಇವರುಗಳು ಒಬ್ಬರ ತರುವಾಯ ಒಬ್ಬರು ಆಡಳಿತ ನಿರ್ವಹಿಸಿದರೆಂದು ಶಾಸನಗಳಿಂದ ತಿಳಿದು ಬರುತ್ತದೆ. ನಂಜರಾಜನನ್ನು ದುಗ್ಗಹಟ್ಟಿ (ಮೈಸೂರು ಜಿಲ್ಲೆ)ಯ ಶಾಸನದಲ್ಲಿ ಗಂಗರಾಜನೆಂದು ಉಲ್ಲೇಖಿಸಲಾಗಿದ್ದು, ಈತನನ್ನು ಉಮ್ಮತ್ತೂರಿನ ಕೊನೆಯ ಆಡಳಿತ ಪ್ರತಿನಿಧಿ ಎಂದು ಪರಿಗಣಿಸಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಉಮ್ಮತ್ತೂರು ಪಾಳೆಯಗಾರರ ಕಾಲದ ಐದು ಶಾಸನಗಳು ಲಭ್ಯವಿದ್ದು, ಮಳವಳ್ಳಿ ತಾಲೂಕಿನ ಹೊನಗನಹಳ್ಳಿಯ ಶಾಸನವು ಕ್ರಿ.ಶ.೧೫–೧೬ನೇ ಶತಮಾನದ ಲಕ್ಷಣವನ್ನು ವ್ಯಕ್ತಪಡಿಸುತ್ತದೆ. ಮಹಾಮಂಡಳೇಶ್ವರ ವೀರ ಇಮ್ಮಡಿರಾಯ ಒಡೆಯನು ಬನ್ನಿಯೂರು ಗ್ರಾಮದ ಬಳಿಯ ಹೊನಗನಹಳ್ಳಿ (ಇಂದಿನ

ಮಳವಳ್ಳಿ ತಾಲೂಕು)ಯನ್ನು ಬನ್ನಿಯೂರ ಮಾಯಪ್ಪನೆಂಬ ಅಧಿಕಾರಿಗೆ ದತ್ತಿಬಿಟ್ಟ ವಿಚಾರವನ್ನು ಈ ಶಾಸನದಲ್ಲಿ ದಾಖಲಿಸಿದೆ. ಇದೇ ತಾಲೂಕಿನ ಮುಟ್ಟನಹಳ್ಳಿಯ ೧೫೦೬ರ ಶಾಸನವು ವಿಜಯನಗರದ ತುಳುವ ವಂಶದ ನರಸಿಂಹನ ಕಾಲಕ್ಕೆ ಸೇರಿದ್ದು, ತಲಕಾಡು ನಾಡಿನ ದನಗೂರು ಸ್ಥಳದ ಮೊನೆ ಮುಟ್ಟರಹಳ್ಳಿಯನ್ನು ಚಿಕ್ಕರಾಯಸಾಗರವೆಂದು ಕರೆದು ಅಗ್ರಹಾರವನ್ನಾಗಿ ಪರಿವರ್ತಿಸಿ ಆಲಿಕೊಂಡದ ತಿರುಮಲ ಭಟ್ಟ (ಮಲ್ಲರಾಜರೆಂದೂ ಹೆಸರಿಸಲಾಗಿದೆ)ನ ಮಗ ಉತ್ತಮ ವ್ಯಾಕರಣ ಪಂಡಿತರಾಗಿದ್ದ ನಾಗಭಟ್ಟನಿಗೆ ಏಕಸೌಮ್ಯದ ಗ್ರಾಮವನ್ನಾಗಿ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಇದೇ ತಾಲೂಕಿನ ಕುಂದೂರು ಗ್ರಾಮದ ಕ್ರಿ.ಶ.೧೫೧೧ರ ಶಾಸನದಲ್ಲಿ ಮಹಾಮಂಡಳೇಶ್ವರ ವೀರಚಿಕ್ಕಯ ಒಡೆಯನ ಆದೇಶದ ಮೇರೆಗೆ ಸಾಧಿಯಪ್ಪ ಒಡೆಯನೆಂಬ ಅಧಿಕಾರಿಯು ಕುಂದೂರು ಗ್ರಾಮದ ಮೂಲಸ್ಥಾನ ದೇವರಿಗೆ ಬಿಟ್ಟ ದತ್ತಿಯನ್ನು ವಿವರಿಸಲಾಗಿದೆ. ಮಳವಳ್ಳಿ ತಾಲೂಕಿನ ಕ್ರಿ.ಶ. ೧೬೧೧ರ ಕಲ್ಕುಣಿ ಶಾಸನ, ಉಮ್ಮತ್ತೂರಿನ ವೀರ ನಂಜರಾಜ ಒಡೆಯನ ಮಗನಾದ ಮಹಾಮಂಡಳೇಶ್ವರ ಪಿರಿಯ ಒಡೆಯನು ಕಿರುಗಾವರ ಸ್ಥಳದ ಕಲ್ಕುಣಿ ಗ್ರಾಮವನ್ನು ಸಂಗಮ ಕ್ಷೇತ್ರದಲ್ಲಿರುವ ನಂಜುಂಡೇಶ್ವರ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ಉಲ್ಲೇಖಿಸಿದೆ. ಇದೇ ತಾಲೂಕಿನ ನೆಟ್ಟಕಲ್ಲು ಗ್ರಾಮದ ಕ್ರಿ.ಶ.೧೫೩೨ರ ಶಾಸನದಲ್ಲಿ ಉಮ್ಮತ್ತೂರಿನ ವೀರ ಮಂಗಪ್ಪ ಒಡೆಯನ ಮಗನಾದ ಮಹಾಮಂಡಳೇಶ್ವರ ಮಲ್ಲರಾಜ ಒಡೆಯನು ತಲಕಾಡು ಸೀಮೆಯ ವ್ಯಾಪ್ತಿಯಲ್ಲಿದ್ದ ಹಾಗೂ ಧನಗೂರು ಸೀಮೆಯೊಳಗಣ ನೆಟಕಲ್ಲ ಗ್ರಾಮವನ್ನು ದತ್ತಿಬಿಟ್ಟ ವಿಷಯವನ್ನು ದಾಖಲಿಸಲಾಗಿದೆ. ಇದರಿಂದಾಗಿ, ಕಾವೇರಿ ಜಲಪಾತವಿರುವ ಶಿವಸಮುದ್ರದ ದ್ವೀಪದಲ್ಲಿ ಕೋಟೆಯನ್ನು ಕಟ್ಟಿಕೊಂಡು ಕ್ರಿ.ಶ.೧೬ನೇ ಶತಮಾನದ ಆರಂಭದಲ್ಲಿ ಸ್ವತಂತ್ರನಾದವನು ಈತನೆಂಬುದು ಸ್ಪಷ್ಟವಾಗುತ್ತದೆ. ಮೈಸೂರು ರಾಜ್ಯವು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವಿಜಯನಗರದ ಅಧೀನವಾಗಿತ್ತು. ಆಗ ಆತನು ಉಮ್ಮತ್ತೂರಿನ ಗಂಗರಾಜನನ್ನು ಸೋಲಿಸಿ ಶಿವಸಮುದ್ರ ಕೋಟೆಯನ್ನು ಹಾಗೂ ಶ್ರೀರಂಗಪಟ್ಟಣವನ್ನೂ ವಶಪಡಿಸಿಕೊಂಡನು. ನಂಜನಗೂಡಿನ ಕ್ರಿ.ಶ.೧೫೧೨ರ ಶಾಸನದ ಪ್ರಕಾರ ಕೃಷ್ಣದೇವರಾಯನು ತಲಕಾಡು ಉಮ್ಮತ್ತೂರುಗಳೆರಡನ್ನೂ ಗೆದ್ದು ಸಾಳುವ ಗೋವಿಂದರಾಜನನ್ನು ಉಮ್ಮತ್ತೂರಿನ ರಾಜ್ಯಪಾಲನಾಗಿ ನೇಮಕ ಮಾಡಿದನು. ಅನಂತರ, ಈ ಎಲ್ಲಾ ಪ್ರದೇಶಗಳೂ ವಿಜಯನಗರದ ಸಾಮ್ರಾಜ್ಯದಲ್ಲಿ ಲೀನವಾದವು. ಮುಂದೆ ಮೈಸೂರಿನ ರಾಜ ಒಡೆಯರು ಉಮ್ಮತ್ತೂರು ಪಾಳೆಯಪಟ್ಟನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡರು.

### ಮೈಸೂರು ಒಡೆಯರುಗಳು

ವಿಜಯನಗರ ಸಾಮ್ರಾಜ್ಯವು ಅವನತಿಗೊಂಡು ಪೆನುಗೊಂಡೆಯಲ್ಲಿ ಸಣ್ಣ ಪ್ರಮಾಣದಲ್ಲಿ ಅರವೀಡು ವಂಶದ ಆಳ್ವಿಕೆಯು ಪ್ರಾರಂಭವಾಗಿದ್ದ ಕೊನೆಯ ಹಂತದಲ್ಲಿ ಮೈಸೂರು ಒಡೆಯರ ವಂಶದ ಆಳ್ವಿಕೆಯು ಉಗಮಗೊಂಡಿತು. ವಿಜಯ ಮತ್ತು ಕೃಷ್ಣ ಎಂಬ ಯಾದವ ಕುಲದ ಇಬ್ಬರು ಸಹೋದರರು ಉತ್ತರ ಭಾರತದ ಗುಜರಾತ್‌ನ ದ್ವಾರಕೆಯಿಂದ ಹೊರಟು ಹದಿನಾಡಿಗೆ ಬಂದು ನೆಲಸಿದರೆಂಬ ಪ್ರತೀತಿಯಿದೆ. ಸಾಂಪ್ರದಾಯಿಕ ನಂಬಿಕೆಯ ಪ್ರಕಾರ ಕ್ರಿ.ಶ. ೧೩೯೯ರಲ್ಲಿ ಮೈಸೂರು ಅರಸು ಮನೆತನವು ಅಸ್ತಿತ್ವಕ್ಕೆ ಬಂದು ಯದುವಂಶದ ವಿಜಯ ಮತ್ತು ಕೃಷ್ಣರೆಂಬ ಸಹೋದರರು ಕಾರುಗಹಳ್ಳಿ ನಾಯಕನಿಗೆ ಬಲವಂತವಾಗಿ ವಿವಾಹ ಮಾಡಬೇಕಾಗಿದ್ದ ಸಂದರ್ಭ ಒದಗಿದಾಗ, ಹದಿನಾಡು ಪ್ರಭುವಿನ ಕನ್ಯೆಗೆ ರಕ್ಷಣೆ ನೀಡಿದರು. ನಂತರ ಇವರು ಅಧಿಕಾರಕ್ಕೆ ಬಂದು ಹದಿನಾಡು ಮತ್ತು ಕಾರುಗಹಳ್ಳಿಗಳನ್ನೊಳಗೊಂಡಂತೆ ರಾಜ್ಯವನ್ನು ರೂಪಿಸಿಕೊಂಡರು. ವಿಜಯ ಮತ್ತು ಕೃಷ್ಣರ ರಕ್ಷಣೆ ಪಡೆದ ಆ ಕನ್ಯೆಯು ಸ್ವಾಭಾವಿಕವಾಗಿ ವಿಜಯನಿಗೇ ಒಲಿದು ಆತನನ್ನು ವಿವಾಹವಾದಳೆಂದು ಸಾಂಪ್ರದಾಯಿಕ ವರದಿಗಳು ತಿಳಿಸುತ್ತವೆ. ಯದುರಾಯ ಮತ್ತು ವಿಜಯರು ಕ್ರಿ.ಶ.೧೩೯೯–೧೪೨೩ರವರೆಗೆ ಆಳುತ್ತಿದ್ದರೆಂದೂ ಮತ್ತು ಆಗ ಮೈಸೂರಿನಲ್ಲಿ ಸಣ್ಣ ಪ್ರಮಾಣದ ಪಾಳೆಯಗಾರನಾಗಿದ್ದ ಚಾಮರಾಜನು ಆ ಪ್ರದೇಶದಲ್ಲಿ ಆಳ್ವಿಕೆ ಮಾಡುತ್ತಿದ್ದನೆಂದೂ

ಹೇಳಲಾಗುತ್ತದೆ. ಇನ್ನೊಂದು ನಂಬಿಕೆಯ ಪ್ರಕಾರ ಯದುರಾಯ ಮತ್ತು ವಿಜಯರು ತೀರ್ಥಯಾತ್ರೆಯ ಅಂಗವಾಗಿ ಚಾಮುಂಡಿ ದೇವಾಲಯಕ್ಕೆ ಭೇಟಿಯಿತ್ತಿದ್ದು, ಅದೇ ಸಂದರ್ಭದಲ್ಲಿ ಚಾಮರಾಜನು ನಿಧನನಾಗಿದ್ದ ಕಾರಣ ಸ್ಥಳೀಯ ಒತ್ತಾಯದ ಮೇಲೆ ಮೈಸೂರಿನ ರಾಜಕೀಯದಲ್ಲೂ ಪ್ರವೇಶಿಸಿದರು. ಚಾಮರಾಜನು ನಿಧನನಾದ ಕಾರಣ ಅವನ ರಾಣಿಗೆ ಮಾರನಾಯಕನೆಂಬ ಸೇನಾಧಿಪತಿಯು ತೊಂದರೆ ಕೊಡಲು ಪ್ರಾರಂಭಿಸಿದ್ದನು. ವಿಜಯನು ಒಬ್ಬ ಜಂಗಮನ ಸಹಾಯದಿಂದ ಮಾರನಾಯಕನನ್ನು ಕೊಂದು ಚಾಮರಾಜನ ಮಗಳನ್ನು ವಿವಾಹವಾದನು. ಅನಂತರ ಆತನೇ ಮೈಸೂರು ಸಂಸ್ಥಾನದ ಒಡೆಯನಾದನು. ಈ ಕಾರಣದಿಂದಾಗಿ ಮೈಸೂರಿನ ರಾಜವಂಶಕ್ಕೆ ಒಡೆಯರ್ ಎಂಬ ಹೆಸರು ಬಂದಿದೆ ಎಂಬ ಪ್ರತೀತಿಯಿದೆ. ಸಾಂಪ್ರದಾಯಿಕ ದಾಖಲೆಗಳಲ್ಲಿ ವ್ಯಕ್ತವಾಗಿರುವಂತೆ ಒಂದನೇ ಚಾಮರಾಜ (ಕ್ರಿ.ಶ. ೧೪೨೩–೫೯) ಒಂದನೇ ತಿಮ್ಮರಾಜ (ಕ್ರಿ.ಶ. ೧೪೫೯–೧೪೭೮), ಇಮ್ಮಡಿ ಚಾಮರಾಜ (ಕ್ರಿ.ಶ. ೧೪೭೮ ರಿಂದ ೧೫೧೩) ಮತ್ತು (ಬೆಟ್ಟದ) ಮುಮ್ಮಡಿ ಚಾಮರಾಜ (ಕ್ರಿ.ಶ. ೧೫೧೩–೧೫೫೩) ರುಗಳು ರಾಜ್ಯವಾಳಿದರು. “ವಿಜಯನಗರ ಸಾಮ್ರಾಜ್ಯದ ಶ್ರೀರಂಗಪಟ್ಟಣ ಪ್ರಾಂತ್ಯದ ತೆರಕಣಾಂಬಿಗೆ ಸೀಮಿತವಾದಂತೆ ಈ ಒಡೆಯರ್ ವಂಶವು ಆಳ್ವಿಕೆ ಮಾಡುತಲಿದ್ದು, ಕ್ರಿ.ಶ. ೧೫೫೦ ರವರೆಗೂ ನಮಗೆ ಸಿಗುವ ಇವರ ವಂಶದ ಮಾಹಿತಿಯ ಬಗ್ಗೆ ಬಲವಾದ ದಾಖಲೆಗಳು ಅಥವಾ ಆಧಾರಗಳು ಲಭ್ಯವಿಲ್ಲದ ಕಾರಣ ಇವರ ಆರಂಭದ ಇತಿಹಾಸವು ನಂಬಲು ಅಸಾಧ್ಯವಾಗಿಯೇ ಉಳಿದಿದೆ” ಎಂದು ಸಿ. ಹಯವದನರಾವ್ ಅಭಿಪ್ರಾಯಪಡುತ್ತಾರೆ. ವಿಜಯನಗರದ ಇತರೆ ಸಾಮಂತರುಗಳಾದ ಉಮ್ಮತ್ತೂರು, ಕಳಲೆ, ಹುರ(ಪುರ), ಮೂಗೂರು, ತಗಡೂರು ಮೊದಲಾದ ಪಾಳೆಯಗಾರರುಗಳು ತಕ್ಕಮಟ್ಟಿಗೆ ಪ್ರಬಲರಾಗಿಯೇ ಮುಂದುವರಿದರು. ಮುಮ್ಮಡಿ ಚಾಮರಾಜನಿಗೆ ಮೂವರು ಗಂಡು ಮಕ್ಕಳಿದ್ದರು. ಅವರುಗಳ ಪೈಕಿ ಕೃಷ್ಣರಾಜನ ಮಗನಾದ ಚಾಮರಾಜನು (ಕ್ರಿ.ಶ. ೧೫೭೨–೭೬) ಚಾಮುಂಡಿ ಬೆಟ್ಟಕ್ಕೆ ಭೇಟಿಕೊಟ್ಟಾಗ ಸಿಡಿಲು ಬಡಿದು ತಲೆಯು ಸಂಪೂರ್ಣವಾಗಿ ಬೋಳಾದ ಕಾರಣ ಈತನಿಗೆ ಬೋಳ ಚಾಮರಾಜನೆಂಬ ಹೆಸರು ಬಂದಿತೆಂದು ತಿಳಿದುಬರುತ್ತದೆ. ಈತನನ್ನು ವಿಜಯನಗರದ ಮೊದಲನೇ ಶ್ರೀರಂಗರಾಯನ ಸಮಕಾಲೀನ ರಾಜನಾಗಿದ್ದನೆಂದು ಪರಿಗಣಿಸಲಾಗಿದೆ. ಈತನ ತರುವಾಯ ಅಧಿಕಾರಕ್ಕೆ ಬಂದ ನಾಲ್ಕನೇ ಚಾಮರಾಜನು ಹಲವಾರು ಹಳ್ಳಿಗಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡನು. ಬೋಳ ಚಾಮರಾಜನ ನಂತರ ಅವನ ಅಣ್ಣನ ಮಗನಾದ ಬೆಟ್ಟದ ಒಡೆಯನು (ಕ್ರಿ.ಶ. ೧೫೭೬–೭೮) ಅಧಿಕಾರಕ್ಕೆ ಬಂದು ಕೆಲಕಾಲ ಆಳ್ವಿಕೆ ನಡೆಸಿದರೂ ದುರ್ಬಲನಾದ ಅರಸನೆಂದು ಪರಿಗಣಿಸಲ್ಪಟ್ಟಿದ್ದನು. ಆದರೆ, ಈತನ ತರುವಾಯ ಪಟ್ಟಕ್ಕೆ ಬಂದ ರಾಜ ಒಡೆಯ (ಕ್ರಿ.ಶ. ೧೫೭೮–೧೬೧೭)ರನ್ನು ಐತಿಹಾಸಿಕ ವ್ಯಕ್ತಿಯೆಂದು ಪರಿಗಣಿಸಲಾಗಿದೆ. ಶಾಸನಗಳ ಆಧಾರದಿಂದ ಹೇಳಲಾಗುವ ಒಡೆಯರ್ ವಂಶದ ಇತಿಹಾಸದ ಪ್ರಕಾರ ಮೇಲುಕೋಟೆಗೆ ಬಂದ ಸಹೋದರರು ಈ ವಂಶದ ಮೂಲಪುರುಷರಾದರು. ರಾಜ ಒಡೆಯನು ಕ್ರಿ.ಶ. ೧೬೧೦ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡಾಗ ವಿಜಯನಗರದ ಅರವೀಡು ಮನೆತನದ ಅರಸು ಈತನನ್ನು ಪ್ರಾಂತಾಧಿಪತಿಯನ್ನಾಗಿ (೧೫೭೮–೧೬೧೭) ಮಾನ್ಯ ಮಾಡಿದನು.

ಮೈಸೂರು ಅರಸರುಗಳು ಪ್ರಾರಂಭದಲ್ಲಿ ಮೈಸೂರನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರೆಂಬ ಸಾಂಪ್ರದಾಯಿಕ ನಂಬಿಕೆ ಇದ್ದು, ಇದಕ್ಕೆ ಯಾವುದೇ ಶಾಸನಾಧಾರಗಳೂ ಸಿಗುವುದಿಲ್ಲ. ಆದರೆ, ಈ ವಂಶದ ಪ್ರಾರಂಭದ ಅರಸು ಎಂದು ಐತಿಹಾಸಿಕವಾಗಿ ಪರಿಗಣಿಸಲ್ಪಟ್ಟಿರುವ ರಾಜ ಒಡೆಯರ್ ಕ್ರಿ.ಶ. ೧೬೧೦ ರಿಂದ ಶ್ರೀರಂಗಪಟ್ಟಣವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ವಿಚಾರವು ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ನಂತರ ಕ್ರಿ.ಶ. ೧೭೯೯ರಲ್ಲಿ ಟಿಪ್ಪುವಿನ ಮರಣಾನಂತರ ಶ್ರೀರಂಗಪಟ್ಟಣದಿಂದ ಮೈಸೂರಿಗೆ ರಾಜಧಾನಿಯು ಸ್ಥಳಾಂತರಿಸಲ್ಪಟ್ಟಿತು. ತರುವಾಯ ಕ್ರಿ.ಶ. ೧೮೩೧ರಲ್ಲಿ ಕಮಿಷನರ್‌ಗಳ ಆಳ್ವಿಕೆಗೆ ಮೈಸೂರು ಪ್ರಾಂತ್ಯವು ಒಳಪಟ್ಟಾಗ ಆಡಳಿತದ ಕೇಂದ್ರಸ್ಥಾನವು ಮೈಸೂರಿನಿಂದ ಬೆಂಗಳೂರಿಗೆ ಸ್ಥಳಾಂತರಿಸಲ್ಪಟ್ಟಿತು. ಆದರೆ,

ಮೈಸೂರು ಒಡೆಯರ್ ವಂಶದ ರಾಜಧಾನಿಯು ಮೈಸೂರಿನಲ್ಲಿಯೇ ಮುಂದುವರಿಯಿತು. ಹಿಂದಿನ ಮೈಸೂರು ಜಿಲ್ಲೆಗೆ ಸೇರಿದ ಎಲ್ಲಾ ಪ್ರದೇಶಗಳನ್ನೂ ಒಳಗೊಂಡಂತೆ ರಾಜ ಒಡೆಯರ್ ರಾಜ್ಯವನ್ನು ವಿಸ್ತರಿಸುದುದಲ್ಲದೇ ಉತ್ತರದಲ್ಲಿ ಚನ್ನಪಟ್ಟಣದ ಜಗದೇವರಾಯನಿಂದ ಹಲವಾರು ಪ್ರದೇಶಗಳನ್ನು ವಶಪಡಿಸಿಕೊಂಡು ಇಂದಿಗೂ ನಾಡಹಬ್ಬವೆಂದು ಪರಿಗಣಿಸಲಾಗಿರುವ ದಸರಾ ಉತ್ಸವವನ್ನು ಆರಂಭಿಸಿ ತಾವು ವಿಜಯನಗರದ ಸಾಮ್ರಾಜ್ಯದ ಮೌಲ್ಯಗಳನ್ನು ಪ್ರತಿನಿಧಿಸುವ ಉತ್ತರಾಧಿಕಾರಿಯೆಂದು ತೋರಿಸಿಕೊಟ್ಟರು. ರಾಜ ಒಡೆಯರ್ ರವರ ನಂತರ ಅಧಿಕಾರಕ್ಕೆ ಬಂದ ಚಾಮರಾಜ ಒಡೆಯರ್‌ರವರು (೧೬೧೭-೧೬೩೭) ಜಗದೇವರಾಯನು ಹೊಂದಿದ್ದ ಉಳಿದ ಪ್ರದೇಶಗಳನ್ನು ಗೆದ್ದುಕೊಂಡರು. ಇವರು ಉತ್ತಮ ಆಡಳಿತಗಾರರಾಗಿದ್ದಂತೆಯೇ ಪ್ರಕಾಂಡ ಪಂಡಿತರೂ ಆಗಿದ್ದರು. ಮೂಲ ವಾಲ್ಮೀಕಿ ರಾಮಾಯಣದ ಕನ್ನಡ ರೂಪವಾದ 'ಚಾಮರಾಜೋಕ್ತಿ ವಿಲಾಸ' ಎಂಬ ಕಾವ್ಯದ ಕರ್ತೃ ಆಗಿದ್ದರು. ಮೊದಲನೇ ರಾಜ ಒಡೆಯರ ನಂತರ ಸ್ವಲ್ಪ ಕಾಲ ಆಳ್ವಿಕೆ ಮಾಡಿದ ಮುಪ್ಪಿನ ದೇವರಾಜ ಒಡೆಯರ ಮೂರನೇ ಮಗ ದೊಡ್ಡದೇವರಾಜ ಒಡೆಯರ್‌ರವರು ಪ್ರಬಲ ಅರಸನಾಗಿದ್ದರೆಂಬ ಪ್ರತೀತಿಯಿದೆ. ಮೈಸೂರಿನಲ್ಲಿ ಉಂಟಾದ ಅರಸರ ಬದಲಾವಣೆಯಿಂದ ಉಂಟಾದ ಪರಿಸ್ಥಿತಿಯ ಪ್ರಯೋಜನವನ್ನು ಪಡೆದು ಇಕ್ಕೇರಿಯ ಶಿವಪ್ಪನಾಯಕನು ಕಂಠೀರವ ನರಸರಾಜರ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಆಗ ದೇವರಾಜ ಒಡೆಯರ್‌ರವರು ರಾಜಧಾನಿಯನ್ನು ರಕ್ಷಿಸಿ ಶಿವಪ್ಪನಾಯಕನನ್ನು ಹಿಮ್ಮೆಟ್ಟಿಸಿದರು. ಮೈಸೂರು ಸೈನ್ಯವು ಚಿಕ್ಕನಾಯಕನ ಹಳ್ಳಿಯ ಕೋಟೆಯನ್ನು ಹಾಗೂ ಅದರ ಅಧೀನದಲ್ಲಿದ್ದ ಪ್ರದೇಶಗಳನ್ನು ಇಕ್ಕೇರಿಯಿಂದ ಗೆದ್ದುಕೊಂಡಿತು. ಈ ವಿಜಯದಿಂದ ಸ್ಫೂರ್ತಿಯನ್ನು ಪಡೆದ ದೊಡ್ಡದೇವರಾಜರು ಬೇಲೂರಿನಲ್ಲಿದ್ದ ಶ್ರೀರಂಗರಾಯನನ್ನು ಹೊರ ಹಾಕಲು ಪ್ರಯತ್ನಿಸಿ, ಶ್ರೀರಂಗರಾಯನ ಪ್ರಬಲ ಕೋಟೆಯಾಗಿದ್ದ ಹಾಸನ ಮತ್ತು ಸಕ್ಕರೆಪಟ್ಟಣಗಳನ್ನು ತನ್ನ ವಶಕ್ಕೆ ತೆಗೆದುಕೊಂಡರು. ಇದರೊಂದಿಗೆ ವಿಜಯನಗರದ ಕೊನೆಯ ಅರಸು ಶ್ರೀರಂಗರಾಯನ ಪತನವಾಯಿತು. ಹಾಗೂ ವಿಜಯನಗರ ಸಾಮ್ರಾಜ್ಯದ ಅವನತಿಯೂ ಪೂರ್ಣಗೊಂಡಿತು. ಈ ಗೆಲವು ದೊಡ್ಡದೇವರಾಜ ಒಡೆಯರ್‌ರವರ ಪ್ರಾಬಲ್ಯತೆಗೆ ಕಾರಣವಾಯಿತು. ಹೊಳೇನರಸೀಪುರದ ಪರಾಭವ ಮತ್ತು ಆ ಪ್ರದೇಶದ ಸೇರ್ಪಡೆಯನ್ನು ಈ ಅರಸರ ಇನ್ನೊಂದು ಪ್ರಮುಖ ಸಾಧನೆಯೆನ್ನಬಹುದು. ನಂತರ ಮಾಗಡಿಯ ಮೇಲೂ ಆನೇಕ ಸಲ ದಂಡೆತ್ತಿ ಹೋಗಿ ಮುಮ್ಮಡಿ ಕೆಂಪೇಗೌಡನ ಅಧೀನದಲ್ಲಿದ್ದ ಕುಣಿಗಲ್, ಹುಲಿಯೂರು ದುರ್ಗ ಮೊದಲಾದವುಗಳನ್ನು ಗೆದ್ದುಕೊಂಡರು.

ಮೊದಲನೇ ರಾಜ ಒಡೆಯರ ನಂತರ ಇಮ್ಮಡಿ ರಾಜಒಡೆಯರು ಪಟ್ಟಕ್ಕೆ ಬಂದ ಕೂಡಲೇ ವಿಷಪ್ರಾಶನದಿಂದ ನಿಧನ ಹೊಂದಿದಾಗ ಬೆಟ್ಟದ ಚಾಮರಾಜರ ಮಗ ಒಂದನೇ ಕಂಠೀರವನರಸರಾಜರಿಗೆ (ಕ್ರಿ.ಶ. ೧೬೩೮-೧೬೬೨) ಸಿಂಹಾಸನವು ದೊರಕುವಂತಾಯಿತು. ಇವರು ದೈಹಿಕ ದಾರ್ಢ್ಯಕ್ಕೆ ಹೆಸರುವಾಸಿಯಾಗಿದ್ದರು. ತಮ್ಮ ಬಲಪ್ರಯೋಗದ ಪರಿಣಾಮವಾಗಿ ಮುಗ್ಧ ದಳವಾಯಿಯಾಗಿದ್ದ ವಿಕ್ರಮರಾಯನನ್ನು ಕ್ರಿ.ಶ. ೧೬೩೮ ರಲ್ಲಿ (ಅಧಿಕಾರಕ್ಕೆ ಬಂದ ಸಮಯದಲ್ಲಿ) ಕೊಂದರು. ಇದರ ಪರಿಣಾಮವಾಗಿ ರಣದೌಲಾಖಾನನು ಈ ಅರಸರ ಮೇಲೆ ಧಾಳಿ ನಡೆಸಿದನೆಂದು ತಿಳಿದು ಬರುತ್ತದೆ. ಶೌರ್ಯ-ಸಾಮರ್ಥ್ಯಗಳ ಈ ಅರಸರು ತಮ್ಮ ರಾಜ್ಯದ ಮೇಲೆ ದಂಡೆತ್ತಿ ಬಂದ ರಣದೌಲಾಖಾನನ ವಿಜಾಪುರ ಸೈನ್ಯವನ್ನು ಹಿಮ್ಮೆಟ್ಟಿಸಿದ ಕಾರಣವಾಗಿ ಇವರಿಗೆ ರಣಧೀರ ಕಂಠೀರವ ನೆಂಬ ಬಿರುದು ಬಂದಿತೆಂದು ಪ್ರತೀತಿಯಿದೆ.

ಮರಾಠ ರಾಜ್ಯಪಾಲನಾಗಿದ್ದ ಷಹಜೀಯು ಬೆಂಗಳೂರು, ಶಿರಾ, ಚಿತ್ರದುರ್ಗ, ಬಸವಾಪಟ್ಟಣ, ಮುಂತಾದ ಪ್ರಾಂತ್ಯಗಳನ್ನು ವಶಪಡಿಸಿಕೊಂಡು ಕಪ್ಪವನ್ನು ಸಂಗ್ರಹಿಸುತ್ತಿದ್ದನು. ಬೆಂಗಳೂರಿನ ಜಹಗೀರನ್ನು ಷಹಜಿ ತಾನೇ ವಹಿಸಿಕೊಂಡನು. ಈತನು ಅಧಿಕಾರ ವಹಿಸಿಕೊಂಡ ಕಾರಣ ಕೆಂಪೇಗೌಡನು ಯಲಹಂಕದಿಂದ ಮಾಗಡಿಗೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಿಕೊಂಡನು. ನಾಗಮಂಗಲದ ಸಾಮಂತನಾಗಿದ್ದ ಚನ್ನಯ್ಯನು ಮೈಸೂರನ್ನು ಆಕ್ರಮಿಸುವಂತೆ

ವಿಜಾಪುರದ ಆದಿಲ್‌ಷಾಹಿಗಳಿಗೆ ಉತ್ತೇಜಿಸುತ್ತಿದ್ದನು. ಈತನ ಆಹ್ವಾನದ ಮೇರೆಗೆ ಆದಿಲ್ ಷಾಹನು ೧೬೩೯ರಲ್ಲಿ ಶ್ರೀರಂಗಪಟ್ಟಣವನ್ನು ಆಕ್ರಮಿಸಿದನು. ಆದರೆ, ಇದನ್ನು ತಾವು ಯಶಸ್ವಿಯಾಗಿ ತಡೆಗಟ್ಟಿದನೆಂದು ಕಂಠೀರವ ನರಸರಾಜರು ಹೇಳಿಕೊಂಡಿರುವರು. ಆದರೆ, ಇವರು ವಿಜಾಪುರದ ಸುಲ್ತಾನರಿಗೆ ಕಪ್ಪವನ್ನು ಗೋಪ್ಯವಾಗಿ ಸಲ್ಲಿಸಿದ್ದರೆಂದು ವ್ಯಾಪಕವಾದ ಪ್ರತೀತಿ ಇದೆ. ದಕ್ಷಿಣದಲ್ಲಿ ಕಂಠೀರವರು ಡಂಕಣಿಕೋಟೆ ಮತ್ತು ಸತ್ಯಮಂಗಲಗಳ ಮೇಲೆ ಧಾಳಿ ಮಾಡಿದರು. ಇವಲ್ಲದೇ ತುರುವೇಕೆರೆ, ಪಿರಿಯಾಪಟ್ಟಣ, ಬೆಟ್ಟದಪುರ, ರುದ್ರಪಟ್ಟಣ, ಕಡಬ ಮತ್ತು ಯಲಹಂಕ ಪ್ರಾಂತಗಳನ್ನೂ ಕಂಠೀರವ ನರಸರಾಜ ಒಡೆಯರು ತಮ್ಮ ವಶಕ್ಕೆ ತೆಗೆದುಕೊಂಡರು. ವಿಜಾಪುರದ ದಂಡನಾಯಕ ಮುಸ್ತಾಫಾಖಾನನು ಕ್ರಿ.ಶ. ೧೬೪೦ ರಲ್ಲಿ ಇವರ ಪರಾಕ್ರಮತೆಯನ್ನು ತಡೆಗಟ್ಟುವ ಪ್ರಯತ್ನವನ್ನು ಮಾಡಿ ಇದಕ್ಕೆ ಪೂರಕವಾಗಿ ಕಂಠೀರವ ಒಡೆಯರ್‌ರವರು ಸಣ್ಣಪ್ರಮಾಣದ ಕಪ್ಪವನ್ನು ಕೊಡುವುದರ ಮೂಲಕ ವಿಜಾಪುರದ ಹತೋಟಿಯಲ್ಲಿದ್ದ ಚನ್ನರಾಯಪಟ್ಟಣವನ್ನು ಎರಡು ವರ್ಷಗಳ ನಂತರ ತಮ್ಮ ವಶಕ್ಕೆ ತೆಗೆದುಕೊಂಡರು. ಮಧುರೆಯ ರಾಜನು ಇವರ ಪರಾಕ್ರಮತೆಯನ್ನು ಪ್ರಶ್ನಿಸಿದಾಗ ಸಿಂಗಾನಲ್ಲೂರು, ಕಾವೇರಿಪುರಮ್ ಮತ್ತು ಚೆಂಗಪುಡಿ ಪ್ರಾಂತಗಳನ್ನು ಕ್ರಿ.ಶ. ೧೬೪೨ರಲ್ಲಿ ತಮಿಳುನಾಡಿನ ಹತೋಟಿಯಿಂದ ಮುಕ್ತಗೊಳಿಸಿದರು. ಹೊಳೆನರಸೀಪುರದ ಆಡಳಿತಗಾರರ ವಶದಲ್ಲಿದ್ದ ಹಂಪಾಪುರವನ್ನು ಹಿಂದೆ ಸಲ್ಲಬೇಕಾಗಿದ್ದ ಕಪ್ಪದ ಸಲುವಾಗಿ ಕ್ರಿ.ಶ. ೧೬೪೪ರಲ್ಲಿ ತಮ್ಮ ಹತೋಟಿಗೆ ತೆಗೆದುಕೊಂಡರು. ರಾಜಕೀಯ ವಿಸ್ತರಣೆ ಮಾಡಿದ್ದು ಮಾತ್ರವಲ್ಲದೆ, ಕಂಠೀರವ ನರಸರಾಜರು ಸಾಹಿತ್ಯ ಮತ್ತು ಸಂಸ್ಕೃತಿಗಳ ವಿಕಾಸಕ್ಕೆ ಅಪೂರ್ವ ಒತ್ತಾಸೆ ನೀಡಿ ಜನಪ್ರಿಯತೆಗೆ ಪಾತ್ರರಾಗಿದ್ದರು. ಶ್ರೀರಂಗಪಟ್ಟಣದ ಕೋಟೆಯನ್ನು ವಿಸ್ತರಿಸಿದ್ದು ಮಾತ್ರವಲ್ಲದೇ ಅಲ್ಲಿನ ನರಸಿಂಹನ ದೇವಾಲಯವನ್ನೂ ಅವರೇ ನಿರ್ಮಿಸಿದರು. ಕಂಠೀರಾಯ ಪಗೋಡಗಳೆಂಬ ಹೊಸ ಸ್ವರೂಪದ ನಾಣ್ಯಗಳನ್ನು ವಿಜಯನಗರ ಸಾಮ್ರಾಜ್ಯದ ಮಾದರಿಯಲ್ಲೇ ತಮ್ಮ ಠಂಕಸಾಲೆಯಲ್ಲಿ ಮುದ್ರಿಸಿದರು. ರಾಜಧಾನಿಯ ಸಮೀಪವಿದ್ದ ಚಂದ್ರವನ ಎಂಬ ಸ್ಥಳದಲ್ಲಿ ಕಾವೇರಿ ನದಿಗೆ ಅಡ್ಡ ಸೇತುವೆಯನ್ನು ನಿರ್ಮಿಸಿದರು. ಇವರ ಕಾಲದಲ್ಲಿದ್ದ ಗೋವಿಂದ ವೈದ್ಯಾ ಎಂಬ ವಿಜ್ಞಾನಿಯು 'ಭಾಸ್ಕರ ಗಣಿತ'ದ ಗ್ರಂಥವನ್ನು ಕನ್ನಡದಲ್ಲಿ ರಚಿಸಿದನು ಮತ್ತು ತಿಮ್ಮರಸನೆಂಬ ವಿದ್ವಾಂಸನು ಮಾರ್ಕಂಡೇಯ ರಾಮಾಯಣವನ್ನು ಕನ್ನಡದಲ್ಲಿ ರಚಿಸಿದನು. ಕಂಠೀರವ ಒಡೆಯರ್‌ರವರು ಸೈನ್ಯದಲ್ಲಿ ಸುಧಾರಣೆಗಳನ್ನು ಕೈಗೊಂಡು ಶತೃಸೇನೆಯ ವಿರುದ್ಧ ಹೋರಾಡುವ ಛಲವನ್ನು ಬೆಳೆಸಿದರು.

ಕಂಠೀರವ ನರಸರಾಜರಿಗೆ ಮಕ್ಕಳಿಲ್ಲದ ಕಾರಣ ಬೋಳಚಾಮರಾಜರ ಮೊಮ್ಮಗನಾದ ದೊಡ್ಡ ದೇವರಾಯನೆಂಬಾತನನ್ನು ಮರಿಮಗನಾದ ಚಿಕ್ಕದೇವರಾಯರಿಗಿಂತಲೂ ಹೆಚ್ಚು ಇಷ್ಟಪಟ್ಟು ತಮ್ಮ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಿದರು. ಆದರೆ ಸ್ವಲ್ಪಕಾಲದಲ್ಲೇ ಸ್ವಸಾಮರ್ಥ್ಯವನ್ನು ಹೊಂದಿದ್ದ ಚಿಕ್ಕದೇವರಾಯರು ಅಧಿಕಾರಕ್ಕೆ ಬಂದರು. ಈ ಘಟನೆ ನಡೆಯುವುದಕ್ಕೆ ಮೊದಲು ದೊಡ್ಡದೇವರಾಯರು ಈತನನ್ನು ಹಂಗಳದಲ್ಲಿ ಬಂಧನದಲ್ಲಿಟ್ಟಿದ್ದರು. ಆಗಿನ ಅರವೀಡು ಮನೆತನದ ಅರಸನಾದ ಮುಮ್ಮಡಿ ಶ್ರೀರಂಗನು ತನ್ನ ವಶದಲ್ಲಿಟ್ಟುಕೊಂಡಿದ್ದ ಹಾಸನ ಸಕ್ಕರೆಪಟ್ಟಣ ಮೊದಲಾದ ಪ್ರದೇಶಗಳ ಮೇಲೆ ಸೇನೆಯನ್ನು ಕಳುಹಿಸಿದನು. ಇದೇ ಸಮಯದಲ್ಲಿ ದೊಡ್ಡದೇವರಾಯರು ಚಿಕ್ಕನಾಯಕನಹಳ್ಳಿಯಲ್ಲಿ ನಿಧನರಾದರು. ಚಿಕ್ಕದೇವರಾಯರು (ಕ್ರಿ.ಶ. ೧೬೭೨–೧೭೦೪) ಇದೇ ಸಂದರ್ಭದಲ್ಲಿ ಬಂಧನದಿಂದ ಮುಕ್ತರಾಗಿ ಅಧಿಕಾರವನ್ನು ವಹಿಸಿಕೊಂಡು ಒಬ್ಬ ಶ್ರೇಷ್ಠ ಆಡಳಿತಗಾರರೆನಿಸಿದರು. ಆಡಳಿತವನ್ನು ಸುಧಾರಿಸಲು ವಿಶಾಲಕ್ಷ ಪಂಡಿತನನನ್ನು ತಮ್ಮ ಪ್ರಧಾನಿಯನ್ನಾಗಿ ನೇಮಿಸಿಕೊಂಡರು. ಮೊಘಲರು, ಮರಾಠರು ಮತ್ತು ವಿಜಾಪುರ ಸಾಮ್ರಾಜ್ಯಗಳೊಳಗೆ ದಕ್ಷಿಣದ ರಾಜ್ಯ ವಿಸ್ತರಣೆಯ ಪರಸ್ಪರ ಪೈಪೋಟಿಯ ಪ್ರಯೋಜನ ಪಡೆದು ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿನ ಬಹುಭಾಗಗಳನ್ನು ಗೆದ್ದುಕೊಳ್ಳುವುದರ ಮೂಲಕ ಉತ್ತರದಲ್ಲಿನ ತಮ್ಮ ರಾಜ್ಯದ ಎಲ್ಲೆಗಳನ್ನು ವಿಸ್ತಿರಿಸಿದರು. ಬೆಂಗಳೂರನ್ನು ಜಹಗೀರಾಗಿ ಪಡೆದಿದ್ದ ಷಾಹಜಿಯ ಮಗನಾದ ವೆಂಕೋಜಿಯು ಅದನ್ನು ಮೈಸೂರು ಮಹಾರಾಜರಿಗೆ ಮೂರು ಲಕ್ಷ ರೂಪಾಯಿಗಳಿಗೆ ಮಾರಲು ಒಪ್ಪಿದ್ದರೂ

ಅದನ್ನು ಮುಘಲರ ದಳಪತಿಯಾದ ಖಾಸಿಂಖಾನನು ವೆಂಕೋಜಿಯಿಂದ ಕಸಿದುಕೊಂಡನು. ಈ ಅರಸರ ಆಡಳಿತದ ಅಂತಿಮ ಘಟ್ಟದ ವೇಳೆಗೆ ಮೈಸೂರು ಸಂಸ್ಥಾನವು ದಕ್ಷಿಣದಲ್ಲಿ ಕೊಯಮತ್ತೂರಿನವರೆಗೆ, ಪೂರ್ವದಲ್ಲಿ ಸೇಲಂವರೆಗೆ, ಮತ್ತು ಉತ್ತರದಲ್ಲಿ ತುಮಕೂರಿನವರೆಗೆ ಪಶ್ಚಿಮದಲ್ಲಿ ಹಾಸನ ಮತ್ತು ಕಡೂರಿನವರೆಗೆ ವ್ಯಾಪಿಸಿತ್ತು. ನಂತರ ಚಿಕ್ಕದೇವರಾಯರು ಪುನ: ಮೊಘಲರಿಂದ ಬೆಂಗಳೂರನ್ನು ವಾಪಸ್ಸು ಪಡೆಯುವಲ್ಲಿ ಯಶಸ್ವಿಯಾದರು. ಕ್ರೈಸ್ತ ದಾಖಲೆಗಳ ಪ್ರಕಾರ ಇವರು ಬೆಂಗಳೂರನ್ನು ಕ್ರಯಕೊಟ್ಟು ಪಡೆದನರೆಂದು ತಿಳಿದುಬರುತ್ತದೆ. ಆದರೆ, ಸ್ವತಃ ಅರಸರೇ ಘೋಷಿಸಿಕೊಂಡಿರುವ ಪ್ರಕಾರ ಶಿವಾಜಿಯನ್ನು ಯುದ್ಧದಲ್ಲಿ ಸೋಲಿಸಿ ಅಪ್ರತಿಮ ವೀರನೆಂಬ ಹೆಸರುಗಳಿಸಿ ಬೆಂಗಳೂರನ್ನು ಪಡೆದರೆಂದು ಹೇಳಿಕೊಂಡಿರುವರು. ಇವರು ರಾಜಕೀಯ ಪ್ರಾಬಲ್ಯಕ್ಕೆ ಜನಪ್ರಿಯರಾಗಿದ್ದು ಮಾತ್ರವಲ್ಲದೇ, ಪ್ರಥಮ ಭಾರಿಗೆ ರಾಜ್ಯದ ಆಡಳಿತ ವ್ಯವಸ್ಥೆಯನ್ನು ಸುಧಾರಣೆಗೊಳಿಸುವಲ್ಲಿ ಚಾಣಾಕ್ಷತೆಯನ್ನು ಮೆರೆದು ನವಕೋಟಿ ನಾರಾಯಣನೆಂಬ ಬಿರುದನ್ನೂ ಗಳಿಸಿದರು. ವಿಶಾಲಕ್ಷಪಂಡಿತನನ್ನು ಪ್ರಧಾನಮಂತ್ರಿಯನ್ನಾಗಿ ನೇಮಿಸಿ, ತಿರುಮಲ್ಲ ಐಯ್ಯಂಗಾರ್, ಷಡಕ್ಷರಯ್ಯ, ಚಿಕ್ಕುಪಾಧ್ಯಾಯ ಮತ್ತು ಕರಣಿಕ ಲಿಂಗಣ್ಣಯ್ಯ ಇವರುಗಳನ್ನು ಒಳಗೊಂಡ ಮಂತ್ರಿಮಂಡಲವನ್ನು ರಚಿಸಿದ್ದರು. ಇಂತಹ ಸಮರ್ಥ ಆಡಳಿತಾನುಭವವುಳ್ಳ ಮಂತ್ರಿಗಳ ಸಹಾಯದಿಂದ ಚಿಕ್ಕದೇವರಾಜ ಒಡೆಯರು ಅನೇಕ ಆಡಳಿತ ಸುಧಾರಣೆಗಳನ್ನು ಜಾರಿಗೊಳಿಸಿದರು. ಅವುಗಳಲ್ಲಿ ಅತಿಮುಖ್ಯವಾದುದೆಂದರೆ ಹದಿನೆಂಟು ಇಲಾಖೆಗಳನ್ನು ಸ್ಥಾಪಿಸಿದ್ದು. ಇವುಗಳನ್ನು ಚಾವಡಿಗಳೆಂದು ಕರೆಯಲಾಯಿತು. ಇದರ ಮೂಲ ಪದ್ಧತಿಯು ಅಠಾರ ಕಛೇರಿ ಎಂಬ ಆಡಳಿತ ವ್ಯವಸ್ಥೆಯಾಗಿತ್ತು. ಆಡಳಿತ ಸುಧಾರಣೆಗಳ ಪೈಕಿ ಉತ್ತಮ ಜಾಲವನ್ನು ಹೊಂದಿದ್ದ ಅಂಚೆ ವ್ಯವಸ್ಥೆಯನ್ನು ರೂಪಿಸಿದುದು ಇವರ ಮತ್ತೊಂದು ಸಾಧನೆಯಾಗಿದೆ. ಇವರ ಆಳ್ವಿಕೆಯ ಕಾಲದಲ್ಲಿ ಶ್ರೀ ವೈಷ್ಣವ ಕವಿಗಳು ಅನೇಕ ಕೃತಿಗಳನ್ನು ರಚಿಸಿದರು. ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಷಡಕ್ಷರಿ, ತಿಮ್ಮಕವಿ, ಸಂಚಿಹೊನ್ನಮ್ಮ ಮುಂತಾದವರು ಅವರಲ್ಲಿ ಗಮನಾರ್ಹರು.

ಮೈಸೂರಿನಲ್ಲೆ ಶ್ವೇತವರಾಹ ದೇವಾಲಯವು ಇವರಿಂದ ನಿರ್ಮಿತವಾಯಿತು. ತಮ್ಮ ತಂದೆಯ ಸ್ಮರಣಾರ್ಥವಾಗಿ ಗುಂಡ್ಲುಪೇಟೆಯಲ್ಲಿ ಪರವಾಸುದೇವ ದೇವಾಲಯವನ್ನು ನಿರ್ಮಿಸಿದರು. ಮೇಲುಕೋಟೆಯ ಚೆಲುವನಾರಾಯಣಸ್ವಾಮಿಯ ಅದಮ್ಯ ಭಕ್ತರಾಗಿದ್ದುದಲ್ಲದೇ, ಇವರು ಶ್ರೀವೈಷ್ಣವ ಪಂಥದ ಅನುಯಾಯಿಯಾಗಿದ್ದರು. ಇವರು ರಚಿಸಿರುವ 'ಚಿಕ್ಕದೇವರಾಯ ಬಿನ್ನಪ' ಎಂಬ ಕನ್ನಡ ಕಾವ್ಯದಲ್ಲಿ ಚೆಲುವರಾಯ ಸ್ವಾಮಿಯ ಕೀರ್ತಿ ವಿಶೇಷಣಗಳ ವರ್ಣನೆ ಕಂಡುಬರುತ್ತದೆ. ಇವರ ಬಾಲ್ಯ ಸ್ನೇಹಿತನೂ ಪಂಡಿತನೂ ಆಗಿದ್ದ ತಿರುಮಲಾರ್ಯನು 'ಚಿಕ್ಕದೇವರಾಜ ವಿಜಯ', 'ಚಿಕ್ಕದೇವರಾಯ ವಂಶಾವಳಿ' ಮತ್ತು 'ಅಪ್ರತಿಮ ವೀರಚರಿತೆ' ಮುಂತಾದ ಕೃತಿಗಳನ್ನು ರಚಿಸಿದನು. ತಿರುಮಲಾರ್ಯನ ಕಿರಿಯತಮ್ಮ ಸಿಂಗರಾರ್ಯನು 'ಮಿತ್ರಾವಿಂದಾ ಗೋವಿಂದಾ' ಎಂಬ ಕನ್ನಡ ನಾಟಕವನ್ನು ಇದೇ ಸಮಯದಲ್ಲಿ ರಚಿಸಿರುವನು. ಕನ್ನಡ ಕೃತಿಗಳ ರಚನೆಗೆ ಅನುಕೂಲವಾದ ಪರಿಸರ ಮತ್ತು ಭದ್ರ ಬುನಾದಿಯನ್ನು ಒದಗಿಸಬಲ್ಲ ಉತ್ತಮ ವಿದ್ವಾಂಸರುಗಳು ಮೈಸೂರು ಒಡೆಯರ್‌ಗಳ ಆಳ್ವಿಕೆಯ ಕಾಲದಲ್ಲಿ ಮೈಸೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿ, ನಾಡನ್ನು ಸಾಹಿತ್ಯ ಮತ್ತು ಸಂಸ್ಕೃತಿಗಳ ಬೀಡನ್ನಾಗಿ ಮಾಡಿದ್ದು, ಚಿಕ್ಕ ರಾಜಒಡೆಯರ್‌ರವರ ಕಾಲದಲ್ಲೇ ಎಂಬ ಅಂಶ ದಾಖಲೆಗಳಿಂದ ರುಜುವಾತಾಗಿದೆ.

ಚಿಕ್ಕದೇವರಾಜ ಒಡೆಯರ್ ಕ್ರಿ.ಶ. ೧೭೦೪ರಲ್ಲಿ ನಿಧನರಾದ ಮೇಲೆ ಇವರ ಉತ್ತರಾಧಿಕಾರಿಯಾದ ಇಮ್ಮಡಿ ಕಂಠೀರವ ನರಸರಾಜ ಒಡೆಯರ್ ಅಧಿಕಾರಕ್ಕೆ ಬಂದರು. ಇವರು ಮೂಕರೂ ಹಾಗೂ ದುರ್ಬಲರೂ ಆಗಿದ್ದ ಕಾರಣ ಆಡಳಿತವು ದಳವಾಯಿಗಳ ಕೈಸೇರಿತು. ಹೀಗಾಗಿ ಮೈಸೂರು ರಾಜ್ಯದ ಅದೃಷ್ಟವು ಹೀನದೆಸೆಗೆ ಇಳಿಯುವಂತಾಯಿತು. ಇವರ ತರುವಾಯ ಕಂಠೀರವರ ಮಗ ಮೊದಲನೇ ಕೃಷ್ಣರಾಜ ಒಡೆಯರು (ಕ್ರಿ.ಶ.೧೭೧೩–೩೨) ಅಧಿಕಾರಕ್ಕೆ ಬಂದು ಸ್ವಲ್ಪ ಕಾಲ ಆಳಿದ ಮೇಲೆ ಅವರ ಮಗ ಏಳನೇ ಚಾಮರಾಜರು (ಕ್ರಿ.ಶ. ೧೭೩೨–೧೭೩೪) ಅಧಿಕಾರಕ್ಕೆ ಬಂದರು. ತರುವಾಯ ಮೊದಲನೇ ಕೃಷ್ಣರಾಜರ ವಿಧವೆಯಾದ ದೇವಾಜಮ್ಮಣಿಯು

ದತ್ತುಪುತ್ರರಾದ ಇಮ್ಮಡಿ ಕೃಷ್ಣರಾಜ ಒಡೆಯ (ಕ್ರಿ.ಶ. ೧೭೩೪-೧೭೬೬)ರು ಅಧಿಕಾರಕ್ಕೆ ಬಂದು ಅನೇಕ ಆಡಳಿತ ತೊಡಕುಗಳನ್ನು ಎದುರಿಸಬೇಕಾಯಿತು. ಅನೇಕ ರಾಜಕೀಯ ದೌರ್ಬಲ್ಯಗಳನ್ನು ಎದುರಿಸುವ ಜೊತೆಗೆ ಮುಘಲರಿಗೆ, ಮರಾಠರಿಗೆ ಮತ್ತು ನಿಜಾಮರಿಗೆ ದೊಡ್ಡ ಮೊತ್ತದ ಕಪ್ಪಕಾಣಿಕೆಗಳನ್ನೂ ನೀಡಬೇಕಾಗಿ ಬಂದಿತು. ಹೀಗಾಗಿ ಮೈಸೂರು ರಾಜ್ಯದ ಆರ್ಥಿಕ ಪರಿಸ್ಥಿತಿಯು ಉಲ್ಬಣಗೊಂಡಿತು. ತುಂಗಭದ್ರೆಯ ದಕ್ಷಿಣದ ಪ್ರದೇಶಗಳ ಮೇಲೆ ಸಂಭವಿಸಿದ ಮರಾಠರ ಧಾಳಿಗಳು ಈ ಪ್ರಾಂತದ ಅರಸರ ಭಂಡಾರಗಳ ಮೇಲಿನ ಒತ್ತಡವನ್ನು ಇಮ್ಮಡಿಗೊಳಿಸಿದ ಕಾರಣ ಈ ಬೆಳವಣಿಗೆಗಳು ಇವರ ಬಲವನ್ನು ಕುಗ್ಗಿಸಿದುವು. ಹೊರ ರಾಜ್ಯಗಳ ಆರ್ಥಿಕ ಶೋಷಣೆಗೆ ಮೈಸೂರು ಮತ್ತು ಕೆಳದಿಯ ಅರಸರು ಪ್ರಮುಖವಾಗಿ ಆಹುತಿಯಾದರು. ಮೈಸೂರಿನ ದಳವಾಯಿ ಸೋದರರಾದ ದೇವರಾಜ ಮತ್ತು ನಂಜರಾಜರು ಸಹ ತಮಿಳುನಾಡಿನಲ್ಲಿ ದುಸ್ಸಾಹಸಗಳಲ್ಲಿ ಸಿಲುಕಿಕೊಂಡರು. ಈ ಹೋರಾಟಕ್ಕೆ ಎರಡನೇ 'ಕರ್ನಾಟಕ ಕದನ' ಎಂದು ಕರೆಯಲಾಗಿದ್ದು, ಅವರು ಮೈಸೂರು ರಾಜ್ಯಕ್ಕೆ ತಿರುಚಿನಾಪಳ್ಳಿಯನ್ನು ಪಡೆದುಕೊಳ್ಳುವ ನಿರೀಕ್ಷಣೆ ಹೊಂದಿದ್ದರು. ಆದರೆ ದೀರ್ಘಕಾಲದ ಈ ಹೋರಾಟವು (ಕ್ರಿ.ಶ. ೧೭೫೨-೧೭೫೫) ಮೈಸೂರನ್ನು ಬಹಳಷ್ಟು ಮಟ್ಟಿಗೆ ದಿವಾಳಿ ಮಾಡಿತ್ತು. ಈ ಎರಡೂ ರಾಜ್ಯಗಳ ಆರ್ಥಿಕ ದೌರ್ಬಲ್ಯವೇ ಅವರ ಅಳಿವಿಗೆ ಹಾಗೂ ಕರ್ನಾಟಕದ ಮತ್ತು ಕರ್ನಾಟಕದ ಗಡಿಯಲ್ಲಿನ ನೆರೆಯ ರಾಜ್ಯ ಪ್ರದೇಶಗಳಿಗೂ ಪ್ರಭುವಾಗಿ ಹೈದರಾಲಿಯು ತಲೆ ಎತ್ತಲು ಕಾರಣವಾಯಿತು.

ಮಂಡ್ಯ ಜಿಲ್ಲೆಯಲ್ಲಿ ಮೈಸೂರು ಅರಸರ ಸುಮಾರು ೧೮ ಶಾಸನಗಳು ಲಭ್ಯವಿದ್ದು, ಈ ಜಿಲ್ಲೆಯಲ್ಲಿ ಅವರ ಆಡಳಿತ ಪ್ರಭಾವದ ಬಗ್ಗೆ ಅನೇಕ ವಿವರಗಳು ಸಿಗುತ್ತವೆ. ಮದ್ದೂರು ತಾಲೂಕಿನ ಹೊನ್ನಲಗೆರೆಯ ಕ್ರಿ.ಶ.೧೬೨೩ರ ತಾಮ್ರ ಶಾಸನವು ಅರವೀಡು ವಂಶದ ಇಮ್ಮಡಿ ರಾಮರಾಯನು ಪೆನುಗೊಂಡೆಯಲ್ಲಿ ಆಳುತ್ತಿದ್ದಾಗ, ಮೈಸೂರಿನ ನರಸರಾಜರ ಮಗ ಚಾಮರಾಜ ಒಡೆಯರು ಮದ್ದೂರು ಸ್ಥಳದ ವ್ಯಾಪ್ತಿಯಲ್ಲಿದ್ದ ಹೊನ್ನಲಗೆರೆ, ಹೊನ್ನೆಯ ಹಾಗಲಹಳ್ಳಿ ಮತ್ತು ಸಣ್ಣಪುಟ್ಟ ಗ್ರಾಮಗಳನ್ನು ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಚಾಮರಾಜರು ವಿಜಯನಗರ ಆಡಳಿತದ ವ್ಯಾಪ್ತಿಯು ತಮ್ಮ ಪ್ರದೇಶದ ಮೇಲಿರುವುದರ ಬಗ್ಗೆ ಹೇಳಿಕೊಂಡಿರುವರು. ಇದೇ ತಾಲೂಕಿನ ಹೊನ್ನಲಗೆರೆಯ ಶಾಸನವು ಇದೇ ಕಾಲಕ್ಕೆ ಸೇರಿದ್ದು(೧೬೨೩) ಶ್ರೀರಂಗಪಟ್ಟಣದಲ್ಲಿದ್ದ ಮದ್ದೂರು ಸ್ಥಳ ಕಳಲೆನಾಡಿಗೆ ವ್ಯಾಪ್ತಿಗೆ ಒಳಪಟ್ಟಿದ್ದ ಹೊಂದಲಗೆರೆ, ತಿಮ್ಮಸಮುದ್ರ, ಹಲಗಲಹಳ್ಳಿ, ಭೀಮನಕೆರೆ ಮತ್ತು ಇತರೆ ಗ್ರಾಮಗಳನ್ನು ಆಕಜಪುರದ ರಾಮಾಜಯ್ಯ, ವಿರೂಪಾಕ್ಷಯ್ಯ ಮತ್ತು ಗೋವಿಂದಯ್ಯ ಎಂಬ ಅಧಿಕಾರಿಗಳಿಗೆ ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ, ಹಾಗೂ ಪ್ರದೇಶದ ಮೇಲೆ ಪೆನುಗೊಂಡೆಯ ಇಮ್ಮಡಿ ರಾಮರಾಯನ ಆಳ್ವಿಕೆಯನ್ನೂ ದಾಖಲಿಸಿದೆ. ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಗ್ರಾಮದ ೧೬೨೫ರ ಶಾಸನವು ಭಗ್ನವಾಗಿದ್ದು, ಕೇವಲ ಮೈಸೂರಿನ ಚಾಮರಾಜಒಡೆಯರ ಮಗ ದೇವರಾಜ ಒಡೆಯರು ಮಂಟಪವೊಂದನ್ನು ಈ ಸ್ಥಳದಲ್ಲಿ ನಿರ್ಮಿಸಿದ ಬಗ್ಗೆ ಮಾಹಿತಿ ನೀಡುತ್ತದೆ. ಇದೇ ತಾಲೂಕಿನ ಕರಿಘಟ್ಟದ ಶ್ರೀನಿವಾಸ ದೇವಾಲಯದಲ್ಲಿರುವ ಕ್ರಿ.ಶ. ೧೭ನೇ ಶತಮಾನದ ಶಾಸನವು ಮೈಸೂರಿನ ರಾಜ ಒಡೆಯರ ಹೆಸರನ್ನು ಉಲ್ಲೇಖಿಸಿದ್ದು, ಶಾಸನದ ಉಳಿದ ಭಾಗ ಅಳಸಿಹೋಗಿದೆ. ಮೇಲುಕೋಟೆಯ ೧೬೪೭ರ ತಾಮ್ರಪಟವು ಮೈಸೂರು ಅರಸು ಕಂಠೀರವ ನರಸರಾಜ ಒಡೆಯರ್ ಮೇಲುಕೋಟೆಯ ಅಥವಾ ಯದುಗಿರಿಯ ಉತ್ತರಕ್ಕಿರುವ ಸುಖದೊರೆ ಗ್ರಾಮವನ್ನು ಹಾಗೂ ಸುತ್ತಲಮುತ್ತಲ ಏಳು ಗ್ರಾಮಗಳನ್ನು ಅಗ್ರಹಾರವನ್ನಾಗಿ ಪರಿವರ್ತನೆ ಮಾಡಿ ಶ್ರೀವೈಷ್ಣವ ಬ್ರಾಹ್ಮಣರಿಗೆ ದತ್ತಿ ನೀಡಿದ ವಿಚಾರವನ್ನು ದಾಖಲಿಸಿದೆ. ಪಾಂಡವಪುರ ತಾಲೂಕಿನ ಅಂತರವಳ್ಳಿಯ ಕ್ರಿ.ಶ. ೧೬೫೭ರ ಅಸ್ಪಷ್ಟ ಶಾಸನವು, ಕಂಠೀರವ ನರಸರಾಜ ಒಡೆಯರ್ ಅವರ ಆಳ್ವಿಕೆಯಲ್ಲಿ ಅಂತರವಳ್ಳಿಯ ಅರ್ಕೇಶ್ವರ ದೇವಾಲಯವು ನಿರ್ಮಾಣಗೊಂಡ ವಿಚಾರವನ್ನು ದಾಖಲಿಸಿದೆ. ಕೃಷ್ಣರಾಜಪೇಟೆ ತಾಲೂಕಿನ ಮಾದಾಪುರದ ಕ್ರಿ.ಶ.೧೭ನೇ ಶತಮಾನದ ಶಾಸನವು ಕಂಠೀರವ ನರಸರಾಜ ಒಡೆಯರ್, ಈ ಸ್ಥಳದ ನರಸಿಂಹ

ದೇವಾಲಯಕ್ಕೆ ಹತ್ತು ಗ್ರಾಮಗಳನ್ನು ದತ್ತಿಬಿಟ್ಟ ವಿಚಾರವನ್ನು ಉಲ್ಲೇಖಿಸಿದೆ. ಶ್ರೀರಂಗಪಟ್ಟಣದ ನರಸಿಂಹ ದೇವಾಲಯದಲ್ಲಿರುವ ಅರಸರ ಮೂರ್ತಿಯ ಪೀಠದಲ್ಲಿರುವ ಶಾಸನವು ಕಂಠೀರವ ಆ ಮೂರ್ತಿಯನ್ನು ನರಸರಾಜರ ಶಿಲಾಮೂರ್ತಿ ಎಂದು ಶೃತಪಡಿಸುತ್ತದೆ. ಮದ್ದೂರು ತಾಲೂಕಿನ ಕೌಡ್ಲೆ ಗ್ರಾಮದ ಕ್ರಿ.ಶ. ೧೬೬೩ರ ಶಾಸನವು ದೊಡ್ಡ ದೇವರಾಜ ಒಡೆಯರ ಮಗ ದೇವರಾಜರು ಕೌಡಲಿ ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ 'ದೇವರಾಜಪುರ'ವೆಂದು ಕರೆದು, ನಾಗನಹಳ್ಳಿ, ಕರಡಿಕೊಪ್ಪಲು, ಕೋಡಿನಕೊಪ್ಪ, ಕಿಲಾರ ಮತ್ತು ಉಮ್ಮರ ಹಳ್ಳಿಗಳೆಂಬ ಗ್ರಾಮಗಳನ್ನು ಸ್ಥಾಪಿಸಲಾಯಿತೆಂದು ಉಲ್ಲೇಖಿಸುತ್ತದೆ. ಇದೇ ತಾಲೂಕಿನ ಗೂಳೂರಿನ ಕ್ರಿ.ಶ. ೧೬೬೪ರ ಶಾಸನದಲ್ಲಿ ದೇವರಾಜ ಒಡೆಯರ ಮಗ ದೇವರಾಜ ಮಹಿಪಾಲರು ನೀಡಿದ ಆದೇಶದಂತೆ ಕೃಷ್ಣದೇವರಾಯ ಪಟ್ಟಣ ಸ್ಥಳದ ವ್ಯಾಪ್ತಿಯಲ್ಲಿದ್ದ ಗೂಳೂರು ಗ್ರಾಮ, ವಡ್ಡರ ಬಿಳಿಕೆರೆ ಮತ್ತು ನಂಬಿನಾಯಕನ ಹಳ್ಳಿಗಳನ್ನು ಒಟ್ಟುಗೂಡಿಸಿ ಅಮೃತೂರು ಅಗ್ರಹಾರವೆಂದು ಪರಿವರ್ತಿಸಿದ ಬಗ್ಗೆ ದಾಖಲಿಸಿದೆ. ಶ್ರೀರಂಗಪಟ್ಟಣದ ಭಂಡಾರದಲ್ಲಿರುವ ಕ್ರಿ.ಶ. ೧೬೬೪ರ ತಾಮ್ರಪಟವು ಮೈಸೂರಿನ ಮುಪ್ಪಿನ ದೇವರಾಜ ಒಡೆಯರ ಮಗ ಮರಿದೇವರಾಜರ ಆಳ್ವಿಕೆಯಲ್ಲಿ ಶ್ರೀರಂಗಪಟ್ಟಣದ ರಂಗನಾಯಕಿ (ದೇವದಾಸಿ?) ಎಂಬ ಭಕ್ತಳು ದೇವಿಗೆ ಹೂವಿನ ಅಲಂಕಾರಕ್ಕಾಗಿ ಅಲ್ಲಪ್ಪನಹಳ್ಳಿಯನ್ನು ಶೃಂಗಾರ ತೋಟಕ್ಕಾಗಿ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಊರಿನ ಮಧ್ಯದಲ್ಲಿ ಇದೇ ರಾಜರಿಂದ ಪ್ರತಿಷ್ಠಾಪಿಸಲ್ಪಟ್ಟ ಹನುಮಂತ ದೇವರ ಬಗ್ಗೆಯೂ ಶಾಸನವು ಉಲ್ಲೇಖಿಸುತ್ತದೆ. ಮಳವಳ್ಳಿ ತಾಲೂಕಿನ ಬೆಳಕವಾಡಿಯ ಭಗ್ನ ಶಾಸನವು, ಕ್ರಿ.ಶ. ೧೬೬೯ರಲ್ಲಿ ಮೈಸೂರಿನ ದೇವರಾಜ ಒಡೆಯರ ಆಳ್ವಿಕೆಯಲ್ಲಿ ತಲಕಾಡಿನ ಕೋಮಾರ ಜಂಗಮ ದೇವರಾಜ ಒಡೆಯನಿಗೆ ನೀಡಲಾದ ಗೃಹ ಮತ್ತು ಭೂದಾನಗಳನ್ನು ಉಲ್ಲೇಖಿಸಿದೆ. ಶಾಸನದ ಉಳಿದ ವಿವರಗಳು ಅಳಿಸಿಹೋಗಿವೆ. ಮಳವಳ್ಳಿಯ ಕೋಟೆಯಲ್ಲಿರುವ ಕ್ರಿ.ಶ. ೧೬೭೨ರ ಶಾಸನವು ದೇವರಾಜ ಭೂಪಾಲನು ಸಸಿಯಾಲಪುರವನ್ನು ಗಂಗಾಧರಪುರವೆಂದು ಕರೆದು, ಇಲ್ಲಿಯ ಗಂಗಾಧರೇಶ್ವರನಿಗ ದಾನಕೊಟ್ಟ ವಿಚಾರ ಹಾಗೂ ಇದೇ ಸಮಯದಲ್ಲಿ ಈ ದೇವಾಲಯದ ನಿರ್ಮಾಣವಾಯಿತೆಂಬ ಅಂಶವನ್ನು ತಿಳಿಸುತ್ತದೆ. ಮಳವಳ್ಳಿ ತಾಲೂಕಿನ ಹುಲ್ಲಂಬಳ್ಳಿಯಲ್ಲಿ ದೊರೆತ ತಾಮ್ರಪಟವು ಕ್ರಿ.ಶ. ೧೬೭೩ರಲ್ಲಿ ಚಿಕ್ಕದೇವರಾಜ ಒಡೆಯರು ಇದೇ ಸ್ಥಳದ ರೇವಣಾರಾಧ್ಯ ಮಠದ ರುದ್ರಮುನಿ ದೇವಾರಾಧ್ಯ ಸ್ವಾಮೀಜಿಗೆ ನೀಡಿದ ದತ್ತಿಯನ್ನು ದಾಖಲಿಸಿದೆ. ಕೃಷ್ಣರಾಜಪೇಟೆ ತಾಲೂಕಿನ ಬೀರವಳ್ಳಿಯ ಕ್ರಿ.ಶ. ೧೬೭೮ರ ಶಾಸನವು, ಶ್ರೀರಂಗಪಟ್ಟಣದಲ್ಲಿ ಚಿಕ್ಕದೇವರಾಯ ಒಡೆಯರ್ ಆಳ್ವಿಕೆಯ ಅವಧಿಯಲ್ಲಿ ನಾರಾಯಣಸ್ವಾಮಿಯ ದೈನಂದಿನ ಕೈಂಕರ್ಯಕ್ಕಾಗಿ ಶಿಂಗನಮಾರನಹಳ್ಳಿಗೆ ಬದಲಾಗಿ ನರಸೀಪುರ ಹೋಬಳಿಯ ವ್ಯಾಪ್ತಿಯಲ್ಲಿದ್ದ ಮಂದಗೆರೆ ಸ್ಥಳದ ನಾಟನಹಳ್ಳಿ ಬಿಟುಬಳ್ಳಿ ಗ್ರಾಮಗಳನ್ನು ದತ್ತಿಬಿಟ್ಟ ವಿಚಾರವನ್ನು ಉಲ್ಲೇಖಿಸಿದೆ. ಮಳವಳ್ಳಿಯ ಕ್ರಿ.ಶ. ೧೬೮೫ರ ಶಾಸನವು ಚಿಕ್ಕದೇವರಾಜರ ಆಳ್ವಿಕೆಯಲ್ಲಿ ಇದೇ ಸ್ಥಳದ ನೈಋತ್ಯಕ್ಕೆ ದೊಡ್ಡದಾದ ಕೆರೆಯನ್ನು ನಿರ್ಮಿಸಿದ ಉಲ್ಲೇಖವಿದೆ. ಇದೇ ಶಾಸನದ ಇನ್ನೊಂದು ಪ್ರತಿಯು ಮೇಲುಕೋಟೆಯಲ್ಲಿ ದೊರೆತಿದೆ. ಶ್ರೀರಂಗಪಟ್ಟಣದ ಭಂಡಾರದಲ್ಲಿರುವ ತಾಮ್ರಪಟವು ಕ್ರಿ. ಶ. ೧೬೮೬ರಲ್ಲಿ ಚಿಕ್ಕದೇವರಾಯ ಒಡೆಯರ್ ಅವರ ವಂಶಾವಳಿಯ ವಿವರಗಳನ್ನು ನೀಡುವುದರ ಜೊತೆಗೆ ಬೆಳಗೊಳದ ಸಮೀಪವಿರುವ ಅವ್ವೇರಹಳ್ಳಿಯನ್ನು ರಂಗನಾಥ ದೇವಾಲಯದಲ್ಲಿರುವ ಕೋದಂಡರಾಮ ದೇವಾಲಯಕ್ಕೆ ದಾನ ನೀಡಿದ ಬಗ್ಗೆ ದಾಖಲಿಸಿದೆ. ಈ ಶಾಸನದಲ್ಲಿ ಚಿಕ್ಕರಾಜ ಒಡೆಯರ್ ಅವರ ಹಸ್ತಾಕ್ಷರವೂ ಕಂಡುಬರುತ್ತದೆ. ಮೇಲುಕೋಟೆಯ ನಮ್ಮಾಳ್ವರ್ ದೇವಾಲಯದಲ್ಲಿರುವ ದೇವರ ಬಂಗಾರದ ಒಡವೆಗಳನ್ನು ಚಿಕ್ಕದೇವರಾಜಒಡೆಯರ್ ಅವರು ದಾನ ನೀಡಿದ ಬಗ್ಗೆ ದಾಖಲೆಗಳಿವೆ. ಇದೇ ತಾಲೂಕಿನ ತಾಮ್ರಪಟವು ಕ್ರಿ. ಶ. ೧೭೨೨ರಲ್ಲಿ ಮೊದಲನೇ ಕೃಷ್ಣರಾಜಒಡೆಯರ್ ಇವರ ವಂಶಾವಳಿಯನ್ನು ಕೊಟ್ಟಿದ್ದು ಕುರುವಂಕನಾಡಿನ ಹಾಗೂ ಹೊಯ್ಸಳ ದೇಶದ ವ್ಯಾಪ್ತಿಯಲ್ಲಿದ್ದ ತೊಂಡನೂರು ಅಗ್ರಹಾರವನ್ನು ಮತ್ತು ಅತ್ತಿಕುಪ್ಪೆ ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿದ ಬಗ್ಗೆ ಮಾಹಿತಿಯನ್ನೊಳಗೊಂಡಿದೆ. ಇದೇ ಅರಸರಿಗೆ ಸೇರಿದ

ಮೇಲುಕೋಟೆಯ ಕಂಚಿಮಠದ ತಾಮ್ರಪಟವು ಕ್ರಿ. ಶ. ೧೭೨೪ರಲ್ಲಿ ಕಂಚಿಯ ವರದರಾಜಸ್ವಾಮಿಯ ಸೇವೆಗಾಗಿ ಹಲವು ಗ್ರಾಮಗಳನ್ನು ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ. ಇಲ್ಲಿರುವ ಇನ್ನೊಂದು ತಾಮ್ರಪಟವು ಮೊದಲನೇ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ (ಕ್ರಿ. ಶ. ೧೭೨೫) ಹೊಯ್ಸಳ ದೇಶದ ಹೊಗರ ನಾಡಿನ ನಾಗಮಂಗಲ ಸ್ಥಳದ ವ್ಯಾಪ್ತಿಯಲ್ಲಿದ್ದ ಹುಲ್ಲೇನಹಳ್ಳಿ ಹಾಗೂ ಇತರೆ ಗ್ರಾಮಗಳನ್ನು ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ.

## ಹೈದರ್ ಆಲಿ ಮತ್ತು ಟಿಪ್ಪುಸುಲ್ತಾನ್

ದಳವಾಯಿ ನಂಜರಾಜನ ಸೇನೆಯಲ್ಲಿ ಹೈದರಾಲಿಯು ಒಬ್ಬ ಸಾಮಾನ್ಯ ಸೈನಿಕನಾಗಿ ಕ್ರಿ.ಶ. ೧೭೩೯ರಲ್ಲಿ ವೃತ್ತಿಯನ್ನು ಆರಂಭಿಸಿದನು. ಈತನು ದೇವನಹಳ್ಳಿಯ ಕ್ರಿ.ಶ. ೧೭೪೯ರ ಕಾಳಗದಲ್ಲಿ ಹೆಚ್ಚಿನ ಧೈರ್ಯ ಮತ್ತು ಬುದ್ಧಿಶಕ್ತಿಗಳನ್ನು ಪ್ರದರ್ಶಿಸಿ ತನ್ನ ವೈಯಕ್ತಿಕ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡನು. ತರುವಾಯ ಕ್ರಿ.ಶ. ೧೭೫೧ರಲ್ಲಿ ಆರ್ಕಾಟಿನ ದಾಳಿಯ ಸಮಯದಲ್ಲಿ ಜಿಂಜಿಯ ಸಮೀಪ ಯುದ್ಧವು ಸಂಭವಿಸಿದಾಗ ಬರಕಿ ವೆಂಕಟರಾಯನ ನೇತೃತ್ವದಲ್ಲಿ ಒಂದು ಸೈನ್ಯದ ತುಕಡಿಯೊಂದಿಗೆ ಹೈದರನನ್ನು ಅರಸರು ಕಳುಹಿಸಿಕೊಟ್ಟರು. ಮೂಲತಃ ಈ ಸೇನೆಯು ಹೈದರಾಬಾದ್‌ನ ನಿಜಾಮ ನಾಸೀರ್‌ಜಂಗನಿಗೆ ಸಹಾಯ ಮಾಡುವುದಕ್ಕಾಗಿ ಹೋಗಿತ್ತು. ಆದರೆ ಯುದ್ಧದಲ್ಲಿ ನಾಸೀರ್‌ಜಂಗನು ಕೊಲ್ಲಲ್ಪಟ್ಟಾಗ ಬಂಗಾರದ ನಾಣ್ಯಗಳನ್ನು ಹೊತ್ತುಕೊಂಡು ಪ್ರಯಾಣಿಸುತ್ತಿದ್ದ, ನಿಜಾಮನ ಸಂಚಾರಿ ತಿಜೋರಿಗಳೇ ಆಗಿದ್ದ ಒಂಟೆಗಳನ್ನು ತನ್ನ ವಶಕ್ಕೆ ಪಡೆಯುವಲ್ಲಿ ಹೈದರನು ಯಶಸ್ವಿಯಾದನು. ಈ ವಿಜಯವು ಹೈದರಾಲಿಯು ಮುಂದೆ ದಿಂಡಿಗಲ್‌ನ ಸೈನ್ಯಾಧಿಕಾರಿಯಾಗಲು ಅನುಕೂಲ ಮಾಡಿಕೊಟ್ಟಿತು. ಕ್ರಿ.ಶ. ೧೭೫೫ರಲ್ಲಿ ದಿಂಡಿಗಲ್‌ನಲ್ಲಿ ಮೈಸೂರು ಸೇನೆಯ ಮೇಲೆ ಹೈದರಾಬಾದಿನ ಸಲಾಬತ್‌ಜಂಗ್‌ನು ದಾಳಿ ಮಾಡಿ ಮೈಸೂರು ರಾಜನಿಗೆ ೫೬ ಲಕ್ಷ ರೂ. ಹಣವನ್ನು ಯುದ್ಧ ವೆಚ್ಚದ ಬಾಬ್ತಾಗಿ ನೀಡಬೇಕೆಂಬ ಷರತ್ತು ಒಡ್ಡಿದನು. ದೇವರಾಜನ ಭಂಡಾರ ಖಾಲಿಯಾಗಿದ್ದು ಹೆಚ್ಚು ಮೊತ್ತದ ಹಣವನ್ನು ಹೊಂದಿಸಲು, ಸಂಸ್ಥಾನದ ಎಲ್ಲಾ ಚಿನ್ನಾಭರಣಗಳ ಜೊತೆಗೆ, ದೇವಾಲಯಗಳಲ್ಲಿದ್ದ ಆಭರಣಗಳನ್ನು ಒತ್ತೆ ಹಾಕಿದಾಗಲೂ ಸಹ ಸಲಾಬತ್‌ಜಂಗನು ಒತ್ತಾಯಿಸಿದ್ದ ಹಣದ ಮೂರನೇ ಒಂದು ಭಾಗದಷ್ಟು ಹಣವನ್ನು ಮಾತ್ರ ಹೊಂದಿಸಲು ಸಾಧ್ಯವಾಯಿತು. ಈ ಕಾರಣದಿಂದಾಗಿ ನಂಜರಾಜನು ತನ್ನ ಸೇನಾ ಬಲದಲ್ಲಿ ಒಂದನೇ ಮೂರು ಭಾಗದಷ್ಟು ಸೇನೆಯನ್ನು ಕಡಿತಗೊಳಿಸಿದನು. ಈ ಬೇಡಿಕೆಗಳಿಂದ ಹಾಗೂ ನಂಜರಾಜನ ತಮಿಳುನಾಡಿನ ದುಸ್ಸಾಹಸಗಳಿಂದ ಬೊಕ್ಕಸವು ಬರಿದಾಗಿತ್ತು. ಪುನಃ ಮರಾಠರು ಪೇಶ್ವೆ ಬಾಳಾಜಿರಾಯನ ಆದೇಶದಂತೆ ಸದಾಶಿವಭಾವುವಿನ ನಾಯಕತ್ವದಲ್ಲಿ ಶ್ರೀರಂಗಪಟ್ಟಣದ ಮೇಲೆ ಎರಗಿದಾಗ, ಅವರ ಬೇಡಿಕೆಯನ್ನು ಈಡೇರಿಸುವುದು ಬೊಕ್ಕಸಕ್ಕೆ ಅಸಾಧ್ಯವಾಯಿತು. ಪೇಶ್ವೆಯು ೩೨ ಲಕ್ಷ ರೂ. ಬೇಡಿದಾಗ ಮೈಸೂರು ಅರಸನು ಆರು ಲಕ್ಷ ರೂಪಾಯಿಗಳನ್ನು ಕೊಡಲೊಪ್ಪಿ ಉಳಿದುದಕ್ಕೆ ನಾಗಮಂಗಲ ತಾಲೂಕೂ ಸೇರಿದಂತೆ ೧೩ ತಾಲೂಕುಗಳನ್ನು ಒತ್ತೆಹಾಕಿದನು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ದಳವಾಯಿ ನಂಜರಾಜನು ಹೈದರ್‌ಆಲಿಯನ್ನು ರಾಜಧಾನಿಗೆ ಕರೆಸಿಕೊಂಡನು. ಶ್ರೀರಂಗಪಟ್ಟಣದಲ್ಲಿ ರಾಜಕೀಯ ಪರಿಸ್ಥಿತಿಯು ಅಸ್ತವ್ಯಸ್ತಗೊಂಡಿತು. ಅನೇಕ ದಿನಗಳಿಂದಲೂ ಸಂಬಳಕ್ಕಾಗಿ ಕಾದು ನಿರಾಶರಾಗಿದ್ದ ಸೈನಿಕರು ದಂಗೆ ಎದ್ದಿದ್ದರು. ಮರಾಠರಿಗೆ ಒತ್ತೆಹಾಕಿದ್ದ ಪ್ರದೇಶಗಳನ್ನು ಬಿಡಿಸಿಕೊಳ್ಳುವಂತೆ ಹೈದರನು ನಂಜರಾಜನಿಗೆ ಸಲಹೆ ನೀಡಿದನು. ಈ ಕಾರಣದಿಂದಾಗಿ ಮರಾಠರು ಕ್ರಿ.ಶ. ೧೭೫೯ರಲ್ಲಿ ಪುನಃ ದಾಳಿ ಮಾಡಿದರು. ಮೈಸೂರಿನ ಸೈನಿಕರು ಸಂಬಳ ದೊರೆಯುವವರೆಗೂ ಯುದ್ಧ ಮಾಡಲು ನಿರಾಕರಿಸಿದನು. ಹೈದರನು ತನ್ನ ಸಹಾಯಕನಾದ ಖಂಡೇರಾಯನ ನೆರವಿನಿಂದ ಅಸಂತೋಷಗೊಂಡಿದ್ದ ಸೈನಿಕರನ್ನು ಸಮಾಧಾನಪಡಿಸಿ ಮರಾಠರ ಜೊತೆಗೆ ಚಾಣಾಕ್ಷತೆಯಿಂದ ಮಾತನಾಡಿ ಕಠಿಣ ಪ್ರಸಂಗವನ್ನು ದೂರ ಮಾಡಿದನು. ನಂತರ ದಳವಾಯಿ ನಂಜರಾಜನನ್ನು ಹೊರಹಾಕಲಾಯಿತು. ನಂಜರಾಜನಿಂದ ಮುಕ್ತನಾಗಿ ಅವನ ಸ್ಥಾನದಲ್ಲಿ ಹೈದರ್‌ನನ್ನು ನೇಮಿಸಿದ

ಅರಸರ ಪರಿಸ್ಥಿತಿ ದರಿಯಿಂದ ಪಾರಾಗಿ ಹುಲಿಯ ಕೈಯಲ್ಲಿ ಸಿಕ್ಕಿದಂತಾಯಿತು.  ಇದನ್ನರಿತ ಇಮ್ಮಡಿ ಕೃಷ್ಣರಾಜಒಡೆಯರ್ (ಕ್ರಿ.ಶ ೧೭೩೪–೧೭೬೬) ಖಂಡೇರಾಯನನ್ನು ತನ್ನೆಡೆಗೆ ಸೆಳೆದುಕೊಂಡು, ಮನವೊಲಿಸಿ, ಅವನ ಸಹಾಯದಿಂದ ದಕ್ಷಿಣದಲ್ಲಿ ದಂಡಯಾತ್ರೆಯನ್ನು ಮಾಡುತ್ತಿದ್ದ ಮರಾಠ ನಾಯಕ ವಿಸಾಜಿ ಕೃಷ್ಣ ಬಿನಿವಾಲೆಯ ನೆರವನ್ನು ಪಡೆದರು.  ಇವರಿಬ್ಬರೂ ದಾಳಿ ಮಾಡಿದ್ದರಿಂದ ಹೈದರನು ಶ್ರೀರಂಗಪಟ್ಟಣವನ್ನು ಬಿಡಬೇಕಾಯಿತು. ಹೈದರ್ ಆನೇಕಲ್‌ನಲ್ಲಿ ಆಶ್ರಯ ಪಡೆದನು. ಅನಂತರ ಬೆಂಗಳೂರನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದನು. ರಾಜನ ಸೈನ್ಯ ಮತ್ತು ಮರಾಠರು ಅವನನ್ನು ಸುತ್ತುವರಿದಾಗ ಹೈದರನು ನಿಸ್ಸಹಾಯಕನಾದನು. ಇದೇ ಸಮಯದಲ್ಲಿ ಪಾಣಿಪತ್‌ನ ಪರಾಭವದ ವಾರ್ತೆ ವಿಸಾಜಿಗೆ ತಲುಪಿತು. ಹೈದರನು ಮಾತುಕತೆಯ ಮೂಲಕ ವಿಸಾಜಿಯು ಹಾಕಿದ ಕರಾರುಗಳಿಗೆ ಒಪ್ಪಿದನು. ಇದರಿಂದಾಗಿ ಮೈಸೂರು ಅರಸು ಹೈದರನನ್ನು ಗುರುತಿಸುವಂತಾಯಿತು. ಆಗಿನ (ಕ್ರಿ.ಶ. ೧೭೬೧) ಆಂತರಿಕ ಮತ್ತು ಬಾಹ್ಯ ಬಿಕ್ಕಟ್ಟುಗಳಿಂದ ಮೈಸೂರಿನ ಸ್ವಾತಂತ್ರ್ಯ ಮತ್ತು ಐಕ್ಯತೆಯನ್ನು ಕಾಪಾಡಲು ಹೈದರ್‌ಆಲಿಯ ಮುಖಂಡತ್ವದ ಆಡಳಿತದ ಹೊರತು ಅನ್ಯಮಾರ್ಗವೇ ಇರಲಿಲ್ಲ.  ಹೈದರನು ದಂಗೆಕೋರ ನಿಜಾಮ ಸಲಾಬತ್‌ಜಂಗನಿಗೆ ಕರ್ನಾಟಕದಲ್ಲಿ ಮರಾಠರ ವಿರುದ್ಧ ಸಹಾಯ ಮಾಡಿದನು. ಶಿರಾವನ್ನೂ ಕ್ರಿ.ಶ. ೧೭೬೨ರಲ್ಲಿ ವಶಪಡಿಸಿಕೊಂಡ ಹೈದರನು ಶಿರಾ ನವಾಬನೆಂದು ಸ್ವಯಂ ಘೋಷಿಸಿಕೊಂಡನು.  ತನ್ನ ಚಿಕ್ಕಪ್ಪ ಮೀರ್ ಇಬ್ರಾಹಿಂನನ್ನು ಮಳವಳ್ಳಿ ಠಾಣ್ಯಕ್ಕೂ ಲತೀಫ್ ಅಲಿ ಬೇಗನನ್ನು ಮದ್ದೂರು ಠಾಣ್ಯಕ್ಕೂ ನೇಮಿಸಿ, ಅವರ ನೆರವಿಗೆ ಸೈನಿಕ ತುಕಡಿಯನ್ನೂ ಒದಗಿಸಿದನು. ಅನಂತರ ಅವನು ಕ್ರಿ.ಶ. ೧೭೬೨ರಲ್ಲಿ ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಪೆನುಗೊಂಡ ಮತ್ತು ಮಡಕಶಿರಾಗಳನ್ನೂ ವಶಪಡಿಸಿಕೊಂಡನು.

ನೆರೆಯ ಕೆಲವು ಸಣ್ಣಪುಟ್ಟ ರಾಜ್ಯಗಳಲ್ಲಿ ತಲೆದೋರಿದ ಆಂತರಿಕ ಬಿಕ್ಕಟ್ಟಿನ ಉಪಯೋಗವನ್ನು ಹೈದರನು ಪಡೆದುಕೊಂಡನು. ಕೆಳದಿ ರಾಜ್ಯದಲ್ಲಿ ಉಂಟಾದ ಆಂತರಿಕ ತೊಂದರೆಗಳಿಂದಾಗಿ ಹೈದರನು ಕ್ರಿ.ಶ. ೧೭೬೩ರಲ್ಲಿ ಅದನ್ನು ಸುಲಭವಾಗಿ ತನ್ನ ವಶಕ್ಕೆ ತೆಗೆದುಕೊಂಡನು. ನಂತರ ಸೋಂದಾ ರಾಜ್ಯವನ್ನೂ ಕ್ರಿ.ಶ. ೧೭೬೪ರಲ್ಲಿ ವಶಪಡಿಸಿಕೊಂಡನು. ಕೆಳದಿಯನ್ನು ವಶಕ್ಕೆ ತೆಗೆದುಕೊಂಡಾಗ ಅದರ ರಾಜಧಾನಿಯಾದ ಬಿದನೂರಿನಲ್ಲಿ ಶೇಖರಿಸಿಟ್ಟಿದ್ದ ಅಪಾರ ಸಂಪತ್ತು ಹೈದರನ ಕೈಸೇರಿತು. ಹಾಗೂ ಈ ಬೆಳವಣಿಗೆಯು ಆತನ ಮುಂದಿನ ಸಾಹಸಗಳಿಗೆ ಮುಖ್ಯ ಪ್ರೇರಣೆಯಾಯಿತು. ಅನಂತಪುರದ  ಸಮೀಪದಲ್ಲಿದ್ದ ಗುತ್ತಿಯತ್ತ ತನ್ನ ಆಕ್ರಮಣವನ್ನು ಮುಂದುವರಿಸಿ ಅಲ್ಲಿದ್ದ ಮರಾಠ ಮುಖ್ಯಸ್ಥ ಘೋರ್ಪಡೆಯನ್ನೂ ಹಾಗೂ ಸವಣೂರು ನವಾಬನನ್ನೂ ಪರಾಭವಗೊಳಿಸಿದನು. ತುಂಗಭದ್ರೆಯನ್ನು ದಾಟಿ ಧಾರವಾಡದವರೆಗೂ ತನ್ನ ಹತೋಟಿಯನ್ನು ವಿಸ್ತರಿಸಿಕೊಂಡನು. ಆದರೆ ಅವನನ್ನು ಮರಾಠ ಪೇಶ್ವೆ ಮಾಧವರಾಯನು ಸೋಲಿಸಿದನು. ಗುತ್ತಿಯನ್ನು ಘೋರ್ಪಡೆಗೆ ಹಿಂದಿರುಗಿಸಲಾಯಿತು. ಹೀಗಾಗಿ ಹೈದರನು ಮರಾಠರಿಗೆ ಕಪ್ಪವನ್ನು (ಖಾನದಾನಿ)ಕೊಡಲು ಒಪ್ಪಿದನು.  ಹೈದರನು ತಮಿಳುನಾಡಿನಲ್ಲಿ ರಾಜ್ಯ ವಿಸ್ತರಣಾ ಆಕಾಂಕ್ಷೆ ಹೊಂದಿ, ಬ್ರಿಟೀಷರೊಂದಿಗೆ ಕಲಹಕ್ಕೆ ತೊಡಗಬೇಕಾಯಿತು. ಈ ಮನಸ್ತಾಪದಲ್ಲಿ ಮರಾಠರು, ನಿಜಾಮರು ಹಾಗೂ ಇಂಗ್ಲೀಷರು ಹೈದರ್‌ಆಲಿಯ ವಿರುದ್ಧ ಕೂಟ ರಚಿಸಿಕೊಂಡರು.  ಇದರ ಪರಿಣಾಮವಾಗಿ ಕ್ರಿ.ಶ. ೧೭೬೭ರಲ್ಲಿ ಆರಂಭಗೊಂಡ ಆಂಗ್ಲೋ–ಮೈಸೂರು ಯುದ್ಧವು ಕೊನೆಗೆ ಕ್ರಿ.ಶ. ೧೭೬೯ರಲ್ಲಿ ಮದ್ರಾಸಿನಲ್ಲಿ ಬ್ರಿಟೀಷರ ಪರಾಭವದೊಂದಿಗೆ ಅಂತ್ಯಗೊಂಡಿತು.  ಹೈದರನು ಬ್ರಿಟೀಷರನ್ನು ಶಾಂತಿಗಾಗಿ ಒತ್ತಾಯಿಸಲು ಸಮಯ ಕೂಡಿಬಂದು ಆತನ ಪ್ರಖ್ಯಾತಿಯು ಉನ್ನತ ಮಟ್ಟಕ್ಕೇರಿತು.  ಇದರ ನಂತರ ಮರಾಠರು ಕ್ರಿ.ಶ. ೧೭೭೧ರಲ್ಲಿ ಮೈಸೂರಿನ ಮೇಲೆ ದಾಳಿ ಮಾಡಿ ಹೈದರ್‌ಆಲಿಯನ್ನು ಸೋಲಿಸಿದರು. ಈ ಅಪಾಯದ ಸಮಯದಲ್ಲಿ ಕ್ರಿ.ಶ. ೧೭೬೯ರ ಒಪ್ಪಂದದ ಪ್ರಕಾರ ಬ್ರಿಟೀಷರು ಇವನ ಸಹಾಯಕ್ಕೆ ಬರಲಿಲ್ಲ.  ಜೊತೆಗೆ ಮರಾಠರು ಸತತವಾಗಿ ಅನೇಕ ಬಾರಿ ಈತನನ್ನು ಅಪಮಾನಗೊಳಿಸಿದರು. ಹೈದರನು ದೃತಿಗೆಡದೆ ಮುಂದುವರಿದು, ಕ್ರಿ.ಶ. ೧೭೭೨ರಲ್ಲಿ ಕೊಡಗನ್ನು ವಶಪಡಿಸಿಕೊಂಡನು. ಅನಂತರ ಸ್ವಲ್ಪ ಸಮಯದ ನಂತರ ಮರಾಠರೊಂದಿಗೆ

ಸ್ನೇಹವನ್ನು ಬೆಳೆಸಿ, ಕಾಲಾಂತರದಲ್ಲಿ ಸಂಪದ್ಭರಿತ ಚಿತ್ರದುರ್ಗ ಸಂಸ್ಥಾನವನ್ನು ತನ್ನ ಅಧೀನಕ್ಕೆ ತೆಗೆದುಕೊಂಡನು. ಧಾರವಾಡ, ಬಳ್ಳಾರಿವರೆಗಿನ ಕರ್ನಾಟಕದ ಪ್ರಮುಖ ಭಾಗಗಳು, ತಮಿಳುನಾಡಿನ ಕೆಲವು ಭಾಗಗಳು ಮತ್ತು ಕೇರಳಗಳು ಈತನ ನಿಯಂತ್ರಣಕ್ಕೆ ಬಂದವು. ಈ ವಿಜಯಗಳೂ ಹಾಗೂ ಬ್ರಿಟೀಷರ ವಿರುದ್ಧ ತಾಳಿದ್ದ ನಿಲುವಿನ ಫಲವಾಗಿ ಹೈದರನಿಗೆ ಫ್ರೆಂಚ್‌ರೊಂದಿಗೆ ಮಿತ್ರತ್ವ ಬೆಳೆಸಿಕೊಳ್ಳಲು ದಾರಿ ಸುಗಮವಾಯಿತು.

ಮೈಸೂರಿನಲ್ಲಿ ಎರಡನೇ ಕಂಠೀರವ ನರಸರಾಜರ ಮೊಮ್ಮಗನಾದ ಎರಡನೇ ಕೃಷ್ಣರಾಜ ಒಡೆಯರು ಕ್ರಿ.ಶ. ೧೭೬೬ರಲ್ಲಿ ನಿಧನನಾದಾಗ ಅವರ ಮಗ ನಂಜರಾಜ ಒಡೆಯರು ಉತ್ತರಾಧಿಕಾರಿಯಾದರು. ಈ ಸಂದರ್ಭದಲ್ಲಿ ಹೈದರನು, ರಾಜನಿಗೆ ಕೊಟ್ಟ ಜಹಗೀರು, ಅರಮನೆಯ ಅಮೂಲ್ಯ ವಸ್ತು, ಹಣ ಮುಂತಾದವುಗಳನ್ನು ಮುಟ್ಟುಗೋಲು ಹಾಕಿಕೊಂಡನು. ಈ ರಾಜಕುಮಾರನು ನಿಧನನಾಗುವವರೆಗೂ (ಕ್ರಿ.ಶ. ೧೭೭೦) ಹೈದರನ ಸೆರೆಯಾಳಿನಂತೆಯೇ ಇದ್ದನು. ಇವರ ಅಣ್ಣಂದಿರಾದ ಎರಡನೇ (ಬೆಟ್ಟದ) ಚಾಮರಾಜರು ತರುವಾಯ(ಕ್ರಿ.ಶ. ೧೭೭೦–೧೭೭೬) ಅಧಿಕಾರಕ್ಕೆ ಬಂದರು. ಹೈದರನು ೧೭೮೦ರಲ್ಲಿ ಬ್ರಿಟೀಷರ ವಿರುದ್ಧದ ಮೈಸೂರು, ಮರಾಠರು ಮತ್ತು ನಿಜಾಮರನ್ನೊಳಗೊಂಡ ಕೂಟವನ್ನು ಸೇರಿದನು. ಬಲಯುತವಾಗಿದ್ದ ಈ ಕೂಟ ಸೇನೆಯು ತಮಿಳುನಾಡಿನ ಮೇಲೆ ರಭಸದ ಪ್ರವಾಹದಂತೆ ಮುನ್ನುಗ್ಗಿ ಯುದ್ಧದಲ್ಲಿ ಮೇಲುಗೈ ಸಾಧಿಸಿತು. ಆದರೆ ಅವನ ಕೈಹಿಡಿದಿದ್ದವರು ಕೊನೆಗಳಿಗೆಯಲ್ಲಿ ಕೈ ಬಿಟ್ಟ ಕಾರಣ ಹೈದರಾಲಿಯು ಏಕಾಂಗಿಯಾದನು. ಎರಡನೇ ಆಂಗ್ಲೋ–ಮೈಸೂರು ಯುದ್ಧವು ಸಂಭವಿಸಿದಾಗ ಹೈದರನು ಅನಾರೋಗ್ಯದಿಂದ ಮಡಿದನು. ಆ ಸಮಯದಲ್ಲಿ ಈತನ ಸಾಮ್ರಾಜ್ಯವು ೮೦,೦೦೦ ಚದರ ಮೈಲಿಯಷ್ಟು ವಿಶಾಲವಾಗಿತ್ತೆಂದು ವ್ಯಕ್ತವಾಗುತ್ತದೆ. ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಶಿರಾ, ಹರಪನಹಳ್ಳಿ, ಬಳ್ಳಾರಿ, ರಾಯದುರ್ಗ ಮುಂತಾದ ಸಣ್ಣ ಪುಟ್ಟ ಸಂಸ್ಥಾನಗಳನ್ನು ಒಂದುಗೂಡಿಸಿ ಒಂದು ಶಕ್ತಿಯುತ ರಾಜ್ಯವನ್ನು ಸ್ಥಾಪನೆ ಮಾಡಿದುದೇ ಹೈದರನ ಪ್ರಮುಖ ಸಾಧನೆಯಾಗಿತ್ತು. "ಸಹಜವಾದ ಸಾಮರ್ಥ್ಯ ಹಾಗೂ ಮುತ್ಸದ್ಧಿತನ ಇವುಗಳಿಂದ ಎಲ್ಲಾ ವ್ಯವಹಾರಗಳನ್ನೂ ಸುಲಭವಾಗಿಯೂ ತೀಕ್ಷ್ಣವಾಗಿಯೂ ಬಗೆಹರಿಸಲು ಹೈದರನಿಗೆ ಶಕ್ಯವಿದ್ದರೂ, ಅವನು ಸಂಪೂರ್ಣವಾಗಿ ಅನಕ್ಷರಸ್ಥನಾಗಿದ್ದನು" ಎಂದು ಎಂ.ಶಾಮರಾವ್ ಅಭಿಪ್ರಾಯಪಡುತ್ತಾರೆ. ಒಬ್ಬ ಯೋಧನಾಗಿ, ಸಂಘಟಕನಾಗಿ, ಆಡಳಿತಗಾರನಾಗಿ, ರಾಜಕಾರಣಿಯಾಗಿ, ಕರ್ನಾಟಕದ ಇತಿಹಾಸದಲ್ಲಿ ಈತನು ಉನ್ನತ ಸ್ಥಾನವನ್ನು ಪಡೆದಿದ್ದನು. ಉಜ್ವಲ ಮುಸ್ಲಿಂ ಧರ್ಮಾಭಿಮಾನಿಯಾಗಿದ್ದರೂ, ತನ್ನ ಧರ್ಮವು ರಾಜಕೀಯ ವ್ಯವಹಾರದಲ್ಲಿ ಎಂದಿಗೂ ಅಡಚಣೆಯಾಗದಂತೆ ಈತನು ಎಚ್ಚರವಹಿಸಿದ್ದನು. ಕೃಷ್ಣರಾಜಪೇಟೆ ತಾಲೂಕಿನ ಚಟ್ಟಂಗೆರೆಯ ಕ್ರಿ.ಶ.೧೭೫೯ರ ಶಾಸನವು ಎರಡನೇ ಕೃಷ್ಣರಾಜ ಒಡೆಯರ್ ಅವರಿಂದ ಚಟ್ಟಮಗೆರೆ ಗ್ರಾಮವನ್ನು ಹೈದರ್ ಆಲಿ ಬಹಾದೂರನು ಖರೀದಿಸಿ ತೊಣ್ಣೂರಿನ ನೀಲಾ ವಸೂದ್ ಖಾದ್ರಿ ಪೀರ್ ದರ್ಗಾದಲ್ಲಿ ನಡೆಯುವ ವಾರ್ಷಿಕ ಉರುಸ್ ಸಂದರ್ಭದಲ್ಲಿ ಬಡಜನರಿಗೆ ಅನ್ನದಾನಕ್ಕಾಗಿ ಉಂಬಳಿ ಬಿಟ್ಟ ವಿಚಾರವನ್ನು ದಾಖಲಿಸಿದೆ.

**ಟಿಪ್ಪುಸುಲ್ತಾನ (ಕ್ರಿ.ಶ.೧೭೮೨–೧೭೯೯)**

ಟಿಪ್ಪುಸುಲ್ತಾನನು ಎರಡನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ ಹಾಗೂ ಅದಕ್ಕೂ ಮೊದಲು, ತನ್ನ ತಂದೆಗೆ ಒತ್ತಾಸೆಯಾಗಿ ಸೈನ್ಯಗಳನ್ನು ತೆಗೆದುಕೊಂಡು ಹೋಗಿ ಅನೇಕ ಜಯಗಳನ್ನು ಸಾಧಿಸಿದ್ದನು. ಹೈದರನಂತೆ ಟಿಪ್ಪು, ಬ್ರಿಟೀಷರ ವಿರುದ್ಧ ಯುದ್ಧಗಳನ್ನು ಮುಂದುವರಿಸಿದನು. ಪ್ರಾರಂಭದಲ್ಲಿ ಅವನು ಬ್ರಿಟೀಷರನ್ನು ವಾಂಡಿವಾಶದಲ್ಲಿ ಕ್ರಿ.ಶ. ೧೭೮೩ರಲ್ಲಿ ಪರಾಭವಗೊಳಿಸಿದನು. ಆದರೆ ಪಶ್ಚಿಮದಲ್ಲಿ ಬಿದನೂರು ಮತ್ತು ಮಂಗಳೂರುಗಳಲ್ಲಿ ಸೋಲನ್ನನುಭವಿಸಿದನು. ತನ್ನ ಹಾಗೂ ಬ್ರಿಟೀಷ್ ಸಂಬಂಧಗಳನ್ನು ಉತ್ತಮಪಡಿಸುವ ದೃಷ್ಟಿಯಿಂದ ಕ್ರಿ.ಶ. ೧೭೮೪ರಲ್ಲಿ ಅವರೊಡನೆ ಮಂಗಳೂರಿನಲ್ಲಿ ಒಪ್ಪಂದವನ್ನು ಮಾಡಿಕೊಂಡನು. ತಿರುಚಿನಾಪಳ್ಳಿಯಲ್ಲಿ ಕ್ರಿ.ಶ.

೧೭೫೨ರಲ್ಲಿ ಮಹಮ್ಮದ್ ಆಲಿಯು ಈ ವಿಷಯದಲ್ಲಿ ಮೋಸ ಮಾಡಿದ ಮೇಲೆ ಫ್ರೆಂಚರಿಗೂ ಮೈಸೂರಿನವರಿಗೂ ರಾಜಕೀಯವಾಗಿ ಬೇರ್ಪಡಿಸಲಾಗದ ಬೆಸುಗೆ ಉಂಟಾಯಿತು. ಹೈದರನ ಕಾಲದಲ್ಲಿ ಉಂಟಾದ ಫ್ರೆಂಚರ ಬಾಂಧವ್ಯವು ಅವನ ಮಗ ಟಿಪ್ಪು ಸುಲ್ತಾನನ ಆಳ್ವಿಕೆಯಲ್ಲಿ ಭದ್ರಗೊಂಡು ಮೈಸೂರು ರಾಜ್ಯ ಸೈನಿಕ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರವಹಿಸುವಂತಾಯಿತು. ಅವರು ಮಾಡಿಕೊಂಡ ಸೈನಿಕ ಒಪ್ಪಂದದ ಪ್ರಕಾರ ಫ್ರೆಂಚರು ೧೦,೦೦೦ ಸೈನಿಕರುಳ್ಳ ತಮ್ಮ ಸೈನ್ಯವನ್ನು ಭಾರತಕ್ಕೆ ಕಳುಹಿಸಬೇಕು ಮತ್ತು ಈ ಸೈನ್ಯವು ಟಿಪ್ಪುವಿನ ಆದೇಶದಂತೆ ನಡೆದುಕೊಳ್ಳುವಂತೆ ಆಜ್ಞೆ ಮಾಡಬೇಕು ಎಂದು ತೀರ್ಮಾನಿಸಲಾಯಿತು. ಅಲ್ಲದೆ ಈ ಅವಧಿಯಲ್ಲಿ ಯಾವೊಂದು ಪಕ್ಷವೂ ಸ್ವತಂತ್ರವಾಗಿ ಇಂಗ್ಲೀಷರೊಂದಿಗೆ ಪ್ರತ್ಯೇಕವಾದ ಒಪ್ಪಂದವನ್ನು ಮಾಡಿಕೊಳ್ಳಕೂಡದು. ಇಂಗ್ಲೀಷರು ಸಮಸ್ತವನ್ನು ಒಪ್ಪಿಸಿದ ಮೇಲೆ ಫ್ರೆಂಚರು ಮತ್ತು ಟಿಪ್ಪುವೂ ಸಮನಾಗಿ ಹಂಚಿಕೊಳ್ಳತಕ್ಕದ್ದು ಎಂಬುದು, ಸಂಧಿಯ ಮುಖ್ಯ ಕರಾರುಗಳಾಗಿದ್ದವು. ಮುಂದೆ ಕ್ರಿ.ಶ. ೧೭೯೭ರಲ್ಲಿ ಫ್ರೆಂಚರ ನೆರವು ಸ್ವೀಕರಿಸಿದಾಗಲೂ ಟಿಪ್ಪು ಅವೇ ಷರತ್ತುಗಳನ್ನು ಸಲಹೆ ಮಾಡಿದನು. ಹಲವು ಅನುಚ್ಛೇದಗಳನ್ನು ಹೊಂದಿದ್ದ ಈ ಸೈನಿಕ ಕರಾರಿನಲ್ಲಿ ಟಿಪ್ಪು ಫ್ರೆಂಚರ ಈ ಸಹಕಾರಕ್ಕೆ ಪ್ರತಿಯಾಗಿ ಆಹಾರ ಸಾಮಗ್ರಿಗಳ ಪೂರೈಕೆಯ ಭರವಸೆ ನೀಡಿದ್ದನು. ಫ್ರಾನ್ಸಿಗೆ ಕಳುಹಿಸಿದ ರಾಯಭಾರ ತಂಡದಲ್ಲಿ ಮೂವರು ಪ್ರಧಾನ ರಾಯಭಾರಿಗಳಾದ ಮಹಮ್ಮದ್ ದರವೇಶ್‌ಖಾನ್, ಅಕ್ಬರ್ ಆಲಿಖಾನ್ ಮತ್ತು ಉಸ್ಮಾನ್‌ಖಾನಗಳಿದ್ದರು. ಟಿಪ್ಪುವಿನ ಅಭಿಲಾಶೆಯಂತೆ ಫ್ರೆಂಚರು ಈತನೊಂದಿಗೆ ರಾಜಕೀಯ ಹಾಗೂ ಸೈನಿಕ ಸಂಬಂಧಗಳನ್ನು ಇಟ್ಟುಕೊಳ್ಳಲು ಪೂರ್ಣವಾಗಿ ಒಪ್ಪದೇ ಇದ್ದರೂ, ವಾಣಿಜ್ಯ ಸೌಲಭ್ಯಗಳನ್ನು ಪಡೆಯಲು ಕಾತುರರಾಗಿದ್ದರು. ಭಾರತದಲ್ಲಿದ್ದ ಅಂದಿನ ಫ್ರೆಂಚ್ ಕಂಪನಿಯನ್ನು ಪೂರ್ಣವಾಗಿ ಒಂದು ವಾಣಿಜ್ಯ ಸಂಸ್ಥೆಯಾಗಿ ಪರಿವರ್ತಿಸುವುದು ಅವರ ಉದ್ದೇಶವಾಗಿತ್ತು. ಟಿಪ್ಪುವಿಗೂ ತನ್ನ ರಾಜ್ಯದ ವಾಣಿಜ್ಯ ಮತ್ತು ಕೈಗಾರಿಕೆಗಳನ್ನು ಬೆಳೆಸುವುದರಲ್ಲಿ ಹೆಚ್ಚು ಆಸಕ್ತಿ ಇದ್ದಿತು. ಈ ಉದ್ದೇಶಗಳು ಫಲಪ್ರದವಾಗಲೆಂದು ಕ್ರಿ.ಶ. ೧೭೮೮ರಲ್ಲಿ ಟಿಪ್ಪುವಿನೊಂದಿಗೆ ಫ್ರೆಂಚರು ಒಂದು ವಾಣಿಜ್ಯ ಕರಾರು ಮಾಡಿಕೊಳ್ಳಲು ಮುಂದಾದರು. ಫ್ರೆಂಚ್ ಕಂಪನಿಯು ಟಿಪ್ಪುವಿನಿಂದ ಮೆಣಸು, ಶ್ರೀಗಂಧ, ಏಲಕ್ಕಿ, ಹತ್ತಿದಾರ, ಉಣ್ಣೆದಾರ ಮುಂತಾದವುಗಳನ್ನು ಖರೀದಿಸಲು ಮುಂದಾಯಿತು. ಇದಕ್ಕೆ ಪ್ರತಿಯಾಗಿ ಟಿಪ್ಪುವಿಗೆ ಅವರ ತೋಪುಗಳು, ಬಂದೂಕುಗಳು ಮತ್ತಿತರ ಯುದ್ಧ ಸಾಮಗ್ರಿಗಳನ್ನು ಒದಗಿಸಲು ಅವರು ಒಪ್ಪಿದರು. ಬ್ರಿಟೀಷರನ್ನು ಈ ದೇಶದಿಂದ ಹೊರದೂಡುವವರೆಗೆ ಟಿಪ್ಪು ಸುಲ್ತಾನನಿಗೆ ವಿಶ್ರಾಂತಿ ಇರಲಿಲ್ಲ. ಟಿಪ್ಪು ತಿರುವಾಂಕೂರು ರಾಜ್ಯದ ಮೇಲೆ ಕ್ರಿ.ಶ. ೧೭೮೯ರಲ್ಲಿ ದಂಡೆತ್ತಿ ಹೋಗುವುದರೊಂದಿಗೆ ಮೂರನೆಯ ಆಂಗ್ಲೋ–ಮೈಸೂರು ಯುದ್ಧ ಆರಂಭವಾಯಿತು. ಲಾರ್ಡ್ ಕಾರ್ನ್‌ವಾಲೀಸನ ಮುಂದಾಳತ್ವದಲ್ಲಿ ಸಾಂಪ್ರದಾಯಿಕವಾದ ಚನ್ನಪಟ್ಟಣ–ಮದ್ದೂರು–ಮಂಡ್ಯ ಮಾರ್ಗಕ್ಕೆ ಬದಲು ಕನಕಪುರ–ಬನ್ನೂರು–ಅರಕೆರೆ ಮಾರ್ಗವಾಗಿ ಕನ್ನಂಬಾಡಿ ತಲುಪಿದ ಬ್ರಿಟಿಷ್ ಸೈನ್ಯವು ಶ್ರೀರಂಗಪಟ್ಟಣಕ್ಕೆ ಕ್ರಿ.ಶ. ೧೭೯೧ರಲ್ಲಿ ಮುತ್ತಿಗೆ ಹಾಕಿದರೂ ಮಳೆಯಿಂದಾಗಿ ಯಶಸ್ಸು ದೊರಕಲಿಲ್ಲ. ಆದರೆ ಮರುವರ್ಷವೇ (ಕ್ರಿ.ಶ. ೧೭೯೨) ನಿಜಾಂ ಸಿಕಂದರ್‌ಝಾನ ನೆರವಿನೊಂದಿಗೆ ಹುಲಿಯೂರು ದುರ್ಗದ ಕಡೆಯಿಂದ ಹೊರಟು ಪಾಂಡವಪುರದಲ್ಲಿ ತಂಗಿದ್ದು, ನಂತರ ಮೂರು ಗುಂಪಾಗಿ ಶ್ರೀರಂಗಪಟ್ಟಣದ ಮೇಲೇರಿ ಬಂದ ಕಾರ್ನ್‌ವಾಲೀಸನು ಟಿಪ್ಪುವನ್ನು ಸೋಲಿಸಿದನು. ಮೂರು ವರ್ಷ ಕಾಲ ನಡೆದ ಈ ಯುದ್ಧವು, ಕ್ರಿ.ಶ. ೧೭೯೨ರ ಶ್ರೀರಂಗಪಟ್ಟಣ ಒಪ್ಪಂದದೊಂದಿಗೆ ಅಂತ್ಯಗೊಂಡು ಈ ಅಪಮಾನಕಾರಿ ಒಪ್ಪಂದಕ್ಕೆ ಟಿಪ್ಪು ಸಹಿ ಹಾಕುವಂತಾಯಿತು. ಆ ಪ್ರಕಾರ ಯುದ್ಧ ದಂಡವಾಗಿ ಮೂರು ಕೋಟಿ ಮೂವತ್ತು ಲಕ್ಷ ರೂ.ಗಳ ನಗದು ಹಣ ಹಾಗೂ ಸಾಮ್ರಾಜ್ಯದ ಅರ್ಧಭಾಗವನ್ನು ಟಿಪ್ಪು ನೀಡಬೇಕಾಗಿ ಬಂತು. ಹಣದ ಕೊರತೆಯುಂಟಾದ ಪ್ರಯುಕ್ತ, ಟಿಪ್ಪು ಅನಿವಾರ್ಯವಾಗಿ ತನ್ನ ಇಬ್ಬರು ಮಕ್ಕಳನ್ನು ಬ್ರಿಟೀಷರ ಬಳಿ ಒತ್ತೆಯಾಳುಗಳನ್ನಾಗಿ ಇರಿಸಬೇಕಾಯಿತು. ಅವರನ್ನು ಕ್ರಿ.ಶ. ೧೭೯೪ರಲ್ಲಿ ಬಿಡಿಸಿಕೊಳ್ಳುವಲ್ಲಿ ಟಿಪ್ಪು ಯಶಸ್ವಿಯಾದನು. ಆದರೆ ಈ ಒಪ್ಪಂದ ಟಿಪ್ಪುವಿನ ಗಾಯದ ಮೇಲೆ ಬರೆ ಎಳೆದಂತಿತ್ತು. ಇಷ್ಟೆಲ್ಲಾ

ಒತ್ತಡದ ನಡುವೆಯೂ, ಮೈಸೂರು ರಾಜವಂಶದ ನಾಮಕಾವಸ್ತೆ ರಾಜರಾಗಿದ್ದ ಚಾಮರಾಜ ಒಡೆಯರ್‌ರವರು ಕ್ರಿ.ಶ. ೧೭೯೬ರಲ್ಲಿ ಗತಿಸಿದ ನಂತರ ಯಾರನ್ನೂ ಉತ್ತರಾಧಿಕಾರಿಯನ್ನಾಗಿ ನೇಮಿಸದ ಟಿಪ್ಪು, ಮೈಸೂರು ರಾಜಮನೆತನವನ್ನು ಸಂಪೂರ್ಣ ಮೂಲೆಗುಂಪು ಮಾಡಿದನು.

ಈ ಅಪಮಾನಕಾರಿ ಒಪ್ಪಂದದ ನಂತರ ಬ್ರಿಟೀಷರ ವಿರುದ್ಧ ಒಳಗೊಳಗೆ ಕುದಿಯುತ್ತಿದ್ದ ಟಿಪ್ಪು, ಬ್ರಿಟೀಷ್‌ರನ್ನು ಸದೆಬಡಿಯಲು ಹೊಂಚು ಹಾಕುತ್ತಿದ್ದನು. ಫ್ರೆಂಚರು, ಅಫಘಾನಿಸ್ತಾನದವರು ಹಾಗೂ ಟರ್ಕೀಸ್ತಾನದವರೊಂದಿಗೆ ಟಿಪ್ಪು ಬೆಳೆಸಿದ ಮೈತ್ರಿಯು ಆತನ ಬ್ರಿಟೀಷ್ ವಿರೋಧಿ ನೀತಿಯಲ್ಲಿ ಪ್ರಮುಖ ಪಾತ್ರ ವಹಿಸುವಂತಾಯಿತು. ಈ ಮಧ್ಯೆ ಲಾರ್ಡ್ ವೆಲ್ಲೆಸ್ಲಿ ಸೂಚಿಸಿದ ಸಹಾಯಕ ಸೈನ್ಯ ಪದ್ಧತಿಯನ್ನು, ಟಿಪ್ಪು ತಿರಸ್ಕರಿಸಿದ್ದನು. ಇದರ ಪರಿಣಾಮವಾಗಿ ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧವು ಆರಂಭವಾಯಿತು. ಸ್ಟೂವರ್ಟ್, ಬ್ರಿಟಿಷರ ಬಾಂಬೆ ತುಕಡಿಗೂ, ಹ್ಯಾರಿಸ್ ಮದ್ರಾಸ್ ತುಕಡಿಗೂ ಸೇನಾನಿಗಳಾಗಿದ್ದು ಬಾಂಬೆ ತುಕಡಿಯು ಪಿರಿಯಾಪಟ್ಟಣ ಮಾರ್ಗವಾಗಿಯೂ, ಮದ್ರಾಸ್ ತುಕಡಿಯು ಮಳವಳ್ಳಿ ಮಾರ್ಗವಾಗಿಯೂ ಮುನ್ನಡೆದು ಕ್ರಮವಾಗಿ ಕ್ರಿ.ಶ. ೧೭೯೯ರ ಮಾರ್ಚ್ ಮೂರು ಹಾಗೂ ಮಾರ್ಚ್ ೨೭ ರಂದು, ಪಿರಿಯಾಪಟ್ಟಣ ಹಾಗೂ ಮಳವಳ್ಳಿಗಳಲ್ಲಿ ಜಯಗಳಿಸಿದವು. ಮುಂದುವರಿದು ಸೋಸಲೆ ಬಳಿ ಕಾವೇರಿಯನ್ನು ದಾಟಿದ ಹ್ಯಾರಿಸನು (ಮಾರ್ಚ್ ೩೦) ಚಂದಗಾಲದ ಬಳಿ ಇವನನ್ನು ಎದುರಿಸಲು ಸಜ್ಜಾಗಿದ್ದ ಟಿಪ್ಪುವಿನ ಲೆಕ್ಕಚಾರವನ್ನು ತಲೆಕೆಳಗೆ ಮಾಡಿ ಏಪ್ರಿಲ್ ಐದರಂದು ಬೇರೆ ಮಾರ್ಗವಾಗಿ ಶ್ರೀರಂಗಪಟ್ಟಣವನ್ನು ತಲುಪಿದನು. ಇದೂ ಸಾಲದೆಂಬಂತೆ ಕರ್ನಲ್ ಆರ್ಥರ್ ವೆಲ್ಲೆಸ್ಲಿಯು ಬಂಗಾಳದ ತುಕಡಿಯೊಂದಿಗೆ ಬಂದು ಸೇರಿಕೊಂಡನು. ಕ್ರಿ.ಶ. ೧೭೯೯ರ ಏಪ್ರಿಲ್ ಒಂಬತ್ತರಂದು ಟಿಪ್ಪು, ಹ್ಯಾರಿಸ್‌ಗೆ ಪತ್ರ ಬರೆದು ಯುದ್ಧಕ್ಕೆ ಕಾರಣವೇನೆಂದು ಕೇಳಿದನು. ಇದಕ್ಕೆ ಉತ್ತರವಾಗಿ ಏಪ್ರಿಲ್ ೨೨ರಂದು ಕಳುಹಿಸಲ್ಪಟ್ಟ ಸಂಧಾನದ ಕರಡಿನಲ್ಲಿ ಟಿಪ್ಪುವಿನ ಅರ್ಧ ಸಾಮ್ರಾಜ್ಯ, ಎರಡು ಕೋಟಿ ರೂ. ಗಳಷ್ಟು ಕಪ್ಪ, ಟಿಪ್ಪುವಿನ ನಾಲ್ವರು ಅಧಿಕಾರಿಗಳು ಹಾಗೂ ನಾಲ್ವರು ಪುತ್ರರನ್ನು ಒತ್ತೆಯಾಳುಗಳಾಗಿ ಕಳುಹಿಸುವಂತೆ ಸೂಚಿಸಲಾಗಿತ್ತು. ಆದರೆ ಇದಕ್ಕೆ ಟಿಪ್ಪು ಒಪ್ಪದಿದ್ದಾಗ ಯುದ್ಧ ಅನಿವಾರ್ಯವಾಯಿತು. ಬ್ರಿಟೀಷರನ್ನು ಕೂಡಿಕೊಂಡ ಮರಾಠರು ಮತ್ತು ಹೈದರಾಬಾದ್‌ನ ನಿಜಾಮರು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದರು. ಟಿಪ್ಪು ವೀರಾವೇಶದಿಂದ ಹೋರಾಡಿದರೂ ಕ್ರಿ.ಶ. ೧೭೯೯ರ ಮೇ ನಾಲ್ಕರಂದು ಈ ಪ್ರಬಲ ಯುದ್ಧದಲ್ಲಿ ಪರಾಭವವನ್ನು ಅನುಭವಿಸಿ ಶತ್ರುಸೈನ್ಯದ ಆಕ್ರಮಣವನ್ನು ತಡೆಗಟ್ಟುವ ಪ್ರಯತ್ನದಲ್ಲೇ ಯುದ್ಧಭೂಮಿಯಲ್ಲಿ ನಿಧನನಾದನು. ನಂತರ ಶ್ರೀರಂಗಪಟ್ಟಣ ನಗರವು ಶತ್ರುಗಳ ಸುಲಿಗೆ ಲೂಟಿಗಳಿಗೆ ತುತ್ತಾಯಿತು. ಈ ಗೆಲುವಿನಲ್ಲಿ ಅರ್ಥರ್ ವೆಲ್ಲೆಸ್ಲಿ, ಹ್ಯಾರಿಸ್, ಬೇಡ್, ಸ್ಟೂವರ್ಟ್ ಲ್ಯಾಂಬ್‌ಡೆನ್, ಶೇರ್‌ಬ್ರೂಕ್, ಮುಂತಾದ ಬ್ರಿಟಿಷ್ ದಂಡನಾಯಕರು ಮಹತ್ವದ ಪಾತ್ರವಹಿಸಿದ್ದರು. ಇಂಗ್ಲೀಷರ ದಬ್ಬಾಳಿಕೆಯನ್ನು ಅವಿರತವಾಗಿ ದ್ವೇಷಿಸಿ ಪ್ರಬಲ ವಿರೋಧವನ್ನೊಡ್ಡಿದ ಟಿಪ್ಪು ಏಕೈಕ ಭಾರತೀಯ ರಾಜನಾಗಿದ್ದನು. ಈತನ ಉದ್ದೇಶದ ಏಕಾಗ್ರತೆ, ಆಲೋಚನಾ ಸ್ವಾತಂತ್ರ್ಯ ಮತ್ತು ಕಾರ್ಯಾಚರಣಾ ವೈಖರಿಗಳು ಕಂಪನಿ ಸರಕಾರಕ್ಕೆ ಇರಿಸುಮುರಿಸಾಗಿದ್ದವು. ಟಿಪ್ಪು ಸುಲ್ತಾನನ ಪರಾಭವವು ಭಾರತದಲ್ಲಿ ಫ್ರೆಂಚರನ್ನು ಎಂದೆಂದಿಗೂ ತಲೆ ಎತ್ತದಂತೆ ದುರ್ಬಲಗೊಳಿಸಿದುದಲ್ಲದೇ, ಅವರನ್ನು ಭಾರತದ ರಾಜಕಾರಣದಿಂದ ಸಂಪೂರ್ಣವಾಗಿ ನಿರ್ಗಮಿಸುವಂತೆ ಮಾಡಿತು. ಆಡಳಿತಾತ್ಮಕವಾಗಿ ಲಾರ್ಡ್ ವೆಲ್ಲೆಸ್ಲಿಯು ಭಾರತದಲ್ಲಿ ಹೊಸದೊಂದು ರಾಜಕೀಯ ವ್ಯವಸ್ಥೆಯಾದ ಸಹಾಯಕಸೈನ್ಯ ಪದ್ಧತಿಯನ್ನು (Subsidiary System) ಸ್ಥಾಪಿಸುವುದರ ಮೂಲಕ ಬ್ರಿಟೀಷರ ಸಾರ್ವಭೌಮತ್ವವನ್ನು ಬಲಗೊಳಿಸಿದನು. ಇದರ ಪರಿಣಾಮವಾಗಿ ಭಾರತೀಯ ರಾಜರುಗಳು ನಿವೃತ್ತಿ ವೇತನ ಪಡೆಯುವ ರಾಜರೂ ನವಾಬರಾಗಿ ನಾಮಕಾವಸ್ತೆಯ ಅರಸರಾಗುಳಿಯುವ ಹೀನದೆಸೆಗೆ ದೂಡಲ್ಪಟ್ಟರು. ಅವರ ತಲೆಯ ಮೇಲೆ ಒಬ್ಬ ರೆಸಿಡೆಂಟ್‌ನನ್ನು ಆಡಳಿತಾತ್ಮಕ ಹತೋಟಿಗಾಗಿ ನೇಮಿಸಲಾಯಿತು. ಅವನ ನೆರವಿಗೆ ಬ್ರಿಟೀಷರ ಸೈನ್ಯದ ತುಕಡಿಯೊಂದನ್ನು ಸ್ಥಾಪಿಸಲಾಯಿತು. ಹೀಗಾಗಿ ನಾಲ್ಕನೇ ಆಂಗ್ಲೋ–

ಮೈಸೂರು ಯುದ್ಧವು ಭಾರತ–ಬ್ರಿಟೀಷ್ ರಾಜಕೀಯ ಇತಿಹಾಸದಲ್ಲಿ ಒಂದು ಮುಖ್ಯವಾದ ಮಜಲನ್ನು ಸೃಷ್ಟಿಸಿತು. ಈ ವಿದ್ಯಮಾನವು ಒಂದು ಯುಗದ ಮುಕ್ತಾಯವನ್ನೂ ಹಾಗೂ ಮತ್ತೊಂದರ ಉದಯವನ್ನೂ ನಿರ್ಣಾಯಕವಾಗಿ ಸ್ಥಾಪಿಸಿತು. ಬ್ರಿಟೀಷರ ಪ್ರಾಬಲ್ಯತೆಗೆ ಅಡ್ಡಿ ಉಂಟು ಮಾಡಿದ್ದ ದಕ್ಷಿಣ ಭಾರತದ ರಾಜರಲ್ಲಿ ಟಿಪ್ಪು ಏಕೈಕನಾಗಿದ್ದನು. ಆತನ ಪತನವು ಅವರನ್ನು ಈ ದೇಶದ ಪ್ರಶ್ನಾತೀತ ಪ್ರಭುಗಳನ್ನಾಗಿ ಮಾಡಿತು.

ಟಿಪ್ಪು ಸ್ವತಃ ಬೌದ್ಧಿಕ ಪರಿಶ್ರಮತೆಯನ್ನು ಹೊಂದಿದ್ದ ಪ್ರಜ್ಞಾವಂತ ಸುಲ್ತಾನನಾಗಿದ್ದನು. ವೈಜ್ಞಾನಿಕ ಅಭಿವೃದ್ಧಿಯ ಬಗ್ಗೆಯೂ ಆತನಿಗೆ ಅರಿವಿದ್ದಿತು. ತನ್ನ ಸಾಮ್ರಾಜ್ಯದ ಪ್ರಗತಿಗೆ ನಿರಂತರ ಶ್ರಮಿಸಿದ್ದ ಆತನು ರೇಷ್ಮೆ ಕೃಷಿಯನ್ನು ಬೃಹತ್ ಪ್ರಮಾಣದಲ್ಲಿ ಜಾರಿಗೆ ತಂದ ಮೊದಲ ದೊರೆಯಾಗಿದ್ದನು. ಹಿಪ್ಪನೇರಳೆ (Mulberry) ಸೊಪ್ಪಿನ ಕೃಷಿಯ ಬಗ್ಗೆ ವಿಶೇಷ ತಂತ್ರಜ್ಞಾನವನ್ನು ಬಂಗಾಳದಿಂದ ಆಮದು ಮಾಡಿಕೊಂಡು ಮೈಸೂರು ಪ್ರಾಂತದ ೨೧ ಕೇಂದ್ರಗಳಲ್ಲಿ ಇದರ ಕೃಷಿಯನ್ನು ವ್ಯಾಪಕವಾಗಿ ಬೆಳೆಸಿದ ಕೀರ್ತಿ ಟಿಪ್ಪು ಸುಲ್ತಾನನಿಗೆ ಸಲ್ಲುತ್ತದೆ. ಇದರ ಜೊತೆಗೆ ಮೈಸೂರಿನಿಂದ ಹೊರದೇಶಗಳಿಗೆ ರಫ್ತಾಗುತ್ತಿದ್ದ ಹತ್ತಿಯ ಮೇಲೆ ನಿಷೇಧವನ್ನು ವಿಧಿಸಿ ಸ್ಥಳೀಯ ಬಟ್ಟೆ ಕೈಗಾರಿಕೆ ಮತ್ತು ನೇಕಾರರಿಗೆ ವಿಶೇಷ ಉತ್ತೇಜನಗಳನ್ನು ನೀಡಿದನು. ತಮಿಳುನಾಡಿನಿಂದ ವಲಸೆ ಬಂದಿದ್ದ ಬರಮಹಾಳರ (ನೇಯ್ಗೆಗಾರರ) ಒಂದು ಗುಂಪು ಮೈಸೂರು ಪ್ರಾಂತದಲ್ಲಿ ಬಂದು ನೆಲೆಸುವಂತಾಯಿತು. ಈತನು ಕಬ್ಬಿನ ಬೆಳೆಯನ್ನು ಬೃಹದ್ ಪ್ರಮಾಣದಲ್ಲಿ ಬೆಳೆಸಿ ಉತ್ತಮ ಗುಣಮಟ್ಟದ ಸಕ್ಕರೆ ಮತ್ತು ಸಕ್ಕರೆ ಕ್ಯಾಂಡಿಗಳನ್ನು ಉತ್ಪಾದಿಸುವಲ್ಲಿ ವಿಶೇಷ ಆಸ್ಥೆ ವಹಿಸಿದ್ದನು. ಈ ಉತ್ಪಾದನೆಗೆ ಅವಶ್ಯಕವಾದ ಉತ್ತೇಜನವನ್ನು ಟಿಪ್ಪು ನೀಡಿದ್ದು ಮಾತ್ರವಲ್ಲದೇ ಇದಕ್ಕೆ ಬೇಕಾಗುತ್ತಿದ್ದ ಕೆಲವು ವಸ್ತುಗಳನ್ನು ಚೀಣಾ ದೇಶದಿಂದ ಆಮದು ಮಾಡಿಕೊಳ್ಳಲೂ ನಿರ್ಧರಿಸಿದನು. ಚನ್ನಪಟ್ಟಣದಲ್ಲಿ ಗಾಜು ಮತ್ತು ಕಬ್ಬಿಣದ ತಂತಿಗಳ ತಯಾರಿಕೆಗೆ ಹೆಚ್ಚಿನ ಗಮನವನ್ನು ನೀಡಲಾಯಿತು. ಈ ತಂತಿಗಳು ಸಂಗೀತದ ವಾದ್ಯಗಳಿಗೆ ಹೆಚ್ಚು ಉಪಯೋಗವಾಗುತ್ತಿತ್ತು. ಪಶುಸಂಗೋಪನೆಗೆ, ಅದರಲ್ಲೂ ಕೃಷಿಗೆ ಅವಶ್ಯಕವಾದ ಎತ್ತುಗಳ ಸಂಗೋಪನೆಗೆ ವಿಶೇಷ ಉತ್ತೇಜನವನ್ನು ನೀಡಲಾಯಿತು. ಮಾದಕ ಪಾನೀಯಗಳು ಮತ್ತು ಮಾದಕ ಗುಳಿಗೆಗಳ ಮಾರಾಟದ ಬಗ್ಗೆ ನಿಷೇಧ ವಿಧಿಸಿದ್ದು, ಟಿಪ್ಪುವಿನ ಪ್ರಮುಖ ಸಾಧನೆಯಾಗಿತ್ತು. ಯುದ್ಧಕ್ಕೆ ಅವಶ್ಯಕವಾದ ತೋಪುಗಳ ಹಾಗೂ ಮದ್ದುಗುಂಡುಗಳ ತಯಾರಿಕೆಯನ್ನು ವೃದ್ಧಿಸಲಾಯಿತು. ಟಿಪ್ಪುವು ಬೌದ್ಧಿಕ ಅಧ್ಯಯನದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದ್ದನೆಂದು ಹೇಳಲಾಗುತ್ತದೆ. ವಿವಿಧ ಭಾಷೆಗಳನ್ನು ಬಲ್ಲವನಾಗಿದ್ದ ಟಿಪ್ಪು ತನ್ನ ಗ್ರಂಥಾಲಯದಲ್ಲಿ ೨೦೦೦ಕ್ಕೂ ಹೆಚ್ಚು ಪುಸ್ತಕಗಳನ್ನು (ವಿವಿಧ ಭಾಷೆಗಳ) ಸಂಗ್ರಹಿಸಿದ್ದನು. ಈತನ ಅರಮನೆ ಇತಿಹಾಸಕಾರನಾಗಿದ್ದ ಕಿರ್ಮಾಣಿಯು ಹೇಳುವಂತೆ "ವಿವಿಧ ವೈಜ್ಞಾನಿಕ ವಿಷಯಗಳ ಬಗ್ಗೆ ಈತನಿಗೆ ಜ್ಞಾನವಿದ್ದುದರಿಂದ, ಪ್ರತಿಯೊಂದು ಕ್ರಮವನ್ನು ಕೈಗೊಳ್ಳುವಾಗ ನೂತನ ಸಂಶೋಧನೆಗೆ ಅವಕಾಶ ಕೊಟ್ಟು ಹೊಸ ಪದ್ಧತಿಯನ್ನು ಜಾರಿಗೊಳಿಸುವುದು ಈತನ ವಾಡಿಕೆಯಾಗಿತ್ತು". ಟಿಪ್ಪು ಈ ಪ್ರಾಂತ್ಯದ ಆಡಳಿತವನ್ನು ತನ್ನ ತಂದೆಯಿಂದ ವಹಿಸಿಕೊಂಡಾಗ ಕೇವಲ ಐದು ಅಸೋಫಿ (ಪ್ರಾಂತ) ಗಳು ಮಾತ್ರ ಇದ್ದವು. ಈ ಅಸೋಫಿಗಳು ಏಕ ರೀತಿಯ ವಿಸ್ತಾರವನ್ನು ಹೊಂದಿರದೇ ಡಾ.ಎಂ.ಎಚ್.ಗೋಪಾಲ್ ಅವರು ತಿಳಿಸುವಂತೆ ಒಟ್ಟು ೧೭೧ ಪರಗಣಗಳಿದ್ದ (ತಾಲೂಕುಗಳು) ಐದು ಪ್ರಾಂತಗಳ ಪೈಕಿ ಸಿರಾ ಅಸೋಫಿಯಲ್ಲಿ ಕೇವಲ ಐದು ಪರಗಣಗಳಿದ್ದರೆ ಶ್ರೀರಂಗಪಟ್ಟಣದಲ್ಲಿ ೧೦೨ ಪರಗಣಗಳಿದ್ದವು. ಆತನ ಸಾಮ್ರಾಜ್ಯವು ಕ್ರಿ.ಶ. ೧೭೯೬ರಲ್ಲಿ ಸುಮಾರು ೬೨,೦೦೦ ಚದರ ಮೈಲಿಗಳಷ್ಟು ವಿಶಾಲವಾಗಿದ್ದು ಒಟ್ಟು ೧೨೭ ಪರಗಣಗಳನ್ನು ಹೊಂದಿದ್ದಿತು. ಪ್ರತಿಯೊಂದು ಅಸೋಫಿ (ಪ್ರಾಂತ್ಯ) ಯಲ್ಲೂ ಒಬ್ಬ ಅಸೋಫ್ ಮತ್ತು ಒಬ್ಬ ಉಪ ಅಸೋಫ್ ಎಂಬ ಅಧಿಕಾರಿಯು ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಪ್ರಾಂತವನ್ನು 'ಅಮಿಲ್' ಅಥವಾ ತಾಲೂಕುಗಳನ್ನಾಗಿ ವಿಂಗಡಿಸಿ ಒಬ್ಬ ಅಮಿಲ್‌ದಾರನ ಆಡಳಿತದಲ್ಲಿಡಲಾಗಿತ್ತು. ತಾಲೂಕುಗಳ ಕೆಳಗೆ ಕೆಲವು ಗ್ರಾಮಗಳನ್ನು ಒಟ್ಟುಗೂಡಿಸಿ 'ಸಿಂಫ್ಟ್' (ಹೋಬಳಿ) ಗಳೆಂದು ಕರೆದು ಅವುಗಳ ಆಡಳಿತವನ್ನು

ಪಟೇಲನೆಂಬ ಅಧಿಕಾರಿಯು ನೋಡಿಕೊಳ್ಳುತ್ತಿದ್ದ. ರಾಜ್ಯದ ಕೇಂದ್ರಿಕೃತ ಆಡಳಿತವನ್ನು ನೋಡಿಕೊಳ್ಳಲು ಕೇಂದ್ರ ಸರಕಾರವೊಂದು ಅಸ್ತಿತ್ವದಲ್ಲಿದ್ದು ಸೇನೆ, ಕಂದಾಯ, ವಾಣಿಜ್ಯ, ಸಾಗರಯಾನ, ಖಜಾನೆ ಮತ್ತು ನ್ಯಾಯಾಂಗಗಳೆಂಬ ಆರು ಇಲಾಖೆಗಳನ್ನು ಹೊಂದಿದ್ದಿತು. ಆ ಆರು ಇಲಾಖೆಗಳನ್ನು ನಿರ್ವಹಿಸಲು ನಾಲ್ಕು ಮಂತ್ರಿಗಳು ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದರು. ಮಿರ್‌ವಿರಾನ್ ಎಂಬ ಯುದ್ಧ ತಂತ್ರಜ್ಞಾನ ಮಂತ್ರಿ, ಮೀರ್‌ಅಸೋಫ್ ಎಂಬ ಕಂದಾಯ ಮಂತ್ರಿ, ಮೀರ್‌ಯಮ್ ಎಂಬ ಸಾಗರಯಾನ ಮಂತ್ರಿ ಮತ್ತು ಮಲ್ಲಿಕ್–ಯು–ತುಜಾರ್ ಎಂಬ ನ್ಯಾಯಾಂಗ ಹಾಗೂ ಖಜಾನೆ ಮಂತ್ರಿಗಳು ರಾಜನಿಂದ ತಮಗೊದಗಿದ ಅಧಿಕಾರವನ್ನು ನಿರ್ವಹಿಸುತ್ತಿದ್ದರು. ಪ್ರತಿಯೊಬ್ಬ ಮಂತ್ರಿಗೂ ಎರಡು ಅಥವಾ ನಾಲ್ಕು ಸದಸ್ಯರುಳ್ಳ ಸಲಹಾ ಸಮಿತಿಯನ್ನು ನೇಮಿಸಲಾಗಿತ್ತು. ಈ ಸಮಿತಿಯು ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿತ್ತು.

ಸರಕಾರಿ ಪತ್ರ–ವ್ಯವಹಾರಗಳಿಗೆ ಟಿಪ್ಪು ಚಿಕ್ಕದೇವರಾಜ ಒಡೆಯರ್ ಜಾರಿಗೆ ತಂದಿದ್ದ ಅಂಚೆ ವ್ಯವಸ್ಥೆಯನ್ನೇ ಮುಂದುವರಿಸಿ ಶ್ರೀರಂಗಪಟ್ಟಣ, ಬೆಂಗಳೂರು, ಬಿದನೂರು, ಗುತ್ತಿ, ಗುರ್ರಮಕೊಂಡ, ಚಿತ್ರದುರ್ಗ ಮತ್ತು ಸಿರಾಗಳಲ್ಲಿ ಅಂಚೆಯ ಪ್ರಮುಖ ಕೇಂದ್ರಗಳನ್ನು ಸ್ಥಾಪಿಸಿದನು. ನೀರಾವರಿ ಯೋಜನೆಗಳಿಗೆ ಉತ್ತಮ ರೂಪವನ್ನು ನೀಡಿ ವಿಶೇಷ ಆಸಕ್ತಿಯಿಂದ ಜಾರಿಗೊಳಿಸಿದನು. ಸರಕಾರದ ಹತೋಟಿಯಲ್ಲಿದ್ದ ನಿರ್ಲಕ್ಷ್ಯ ಜಮೀನುಗಳನ್ನು ಕೃಷಿಕರಿಗೆ ವಿತರಿಸಿ ಆ ಪ್ರದೇಶಗಳಲ್ಲೂ ವ್ಯವಸಾಯವನ್ನು ವಿಸ್ತರಿಸುವಂತೆ ಕೃಷಿಕರಿಗೆ ಉತ್ತೇಜಿಸಿದನು. ಎರಡನೇ ವರ್ಷಕ್ಕೆ ಇಂತಹ ನಿರ್ಲಕ್ಷ್ಯ ಜಮೀನಿನ ಮೇಲೆ ಅರ್ಧಭಾಗದಷ್ಟು ಮಾತ್ರ ಕಂದಾಯವನ್ನು ವಿಧಿಸಲಾಗುತ್ತಿತ್ತು. ರೈತರಿಗೆ ಅವಶ್ಯಕವಾದ ನೇಗಿಲು ಮುಂತಾದ ಕೃಷಿ ಉಪಕರಣಗಳನ್ನು ಕೊಳ್ಳಲು ತಕ್ಕಾವಿ ಸಾಲವನ್ನು ನೀಡುವುದು ಟಿಪ್ಪುವಿನ ಕಾಲದಲ್ಲಿಯೇ ರೂಢಿಯಲ್ಲಿತ್ತು. ಸಾಂಪ್ರದಾಯಿಕವಾಗಿ ರೂಢಿಯಲ್ಲಿದ್ದ ತೆರಿಗೆಗಳು ಮತ್ತು ಕಂದಾಯ ಪದ್ಧತಿಯನ್ನು ಮುಂದುವರಿಸಲಾಯಿತು. ತನ್ನ ಸಾಮ್ರಾಜ್ಯದ ಜನತೆಯ ಜನಗಣತಿಯನ್ನು ವ್ಯವಸ್ಥಿತವಾಗಿ ನಿರ್ದೇಶಿಸುತ್ತಿದ್ದುದಲ್ಲದೇ ಜನನ ಮತ್ತು ಮರಣಗಳನ್ನು ದಾಖಲಿಸುವುದೂ ಕಾನೂನುಬದ್ಧವಾಗಿಸಿದ್ದನು. ವಾರ್ಷಿಕ ಭೂಕಂದಾಯ ಸಮೀಕ್ಷೆ ಮತ್ತು ತಪಾಸಣೆಯನ್ನು ಕೈಗೊಳ್ಳಲಾಗುತ್ತಿತ್ತು. ತೆರಿಗೆ ಹಾಗೂ ಭೂಕಂದಾಯಗಳನ್ನು ಕಾನೂನಿನನ್ವಯ ವಸೂಲು ಮಾಡುವುದು ಅಮಿಲ್ದಾರರ ಅಧಿಕಾರವಾಗಿತ್ತು. ಹಾಗೆ ಮಾಡುವಾಗ ತೆರಿಗೆದಾರರಿಗೆ ಯಾವುದೇ ಕಿರುಕುಳ ಕೊಡಬಾರದೆಂಬ ನಿಯಮವೂ ಜಾರಿಯಲ್ಲಿತ್ತು. ಒಂದು ವೇಳೆ ಕಂದಾಯವನ್ನು ಅಧಿಕವಾಗಿ ವಸೂಲು ಮಾಡಿದರೆ, ವಿಧಿಸುವ ಅಧಿಕಾರಿಯ ಮೇಲೆ ಸರಕಾರವು ಕ್ರಮ ಕೈಗೊಂಡು ದಂಡ ವಿಧಿಸುವುದೂ ರೂಢಿಯಲ್ಲಿತ್ತು. ತನ್ನ ಜೀವಿತದ ಕೊನೆಯ ವರುಷಗಳಲ್ಲಿ ಟಿಪ್ಪು ಆಡಳಿತದ ಸುಧಾರಣೆಯ ಬಗ್ಗೆ ದೀರ್ಘ ಹಾಗೂ ಕಠಿಣ ಕ್ರಮಗಳನ್ನು ಕೈಗೊಂಡುದು ವ್ಯಕ್ತವಾಗುತ್ತದೆ. ಪರ್ಷಿಯನ್ ಭಾಷೆಯಲ್ಲಿ ನಿರ್ವಹಿಸಲಾಗುತ್ತಿದ್ದ ಆಡಳಿತ ಪದ್ಧತಿಯನ್ನು ಕನ್ನಡ ಮತ್ತು ಮರಾಠಿ (ಡಬಲ್ ದಫ್ತರ್ ಪದ್ಧತಿ) ಭಾಷೆಗಳಲ್ಲಿ ದಾಖಲಿಸುವ ಪದ್ಧತಿಯನ್ನು ಈತನು ಜಾರಿಗೆ ತಂದನು. ಈತನೇ ಕ್ರಿ.ಶ. ೧೭೯೨ರಲ್ಲಿ ಸರಕಾರಿ ದಾಖಲೆಗಳನ್ನು ಕೇವಲ ಪರ್ಷಿಯನ್ ಭಾಷೆಯಲ್ಲಿ ಮಾತ್ರ ಇಡಬೇಕೆಂದು ಆದೇಶಿಸಿದ್ದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದಾಗಿದೆ. ಮುಸಲ್ಮಾನರಲ್ಲಿ ಆಗ ಸಾಕ್ಷರತೆಯ ಪ್ರಮಾಣವು ಕಡಿಮೆಯಿದ್ದ ಕಾರಣ ಕೆಲವು ವೇಳೆ ಪರಿಣತ ವಿದ್ಯಾವಂತ ಅಧಿಕಾರಿಗಳು ಸಿಗದೆ ಅರೆ–ವಿದ್ಯಾವಂತರನ್ನು ನೇಮಿಸುವುದು ಅನಿವಾರ್ಯವಾಗಿತ್ತು. ಕಿರ್ಮಾಣಿಯವರ ಪ್ರಕಾರ ಇಂತಹ ಅಸಮರ್ಥ ಅಧಿಕಾರಿಗಳಿಂದಾಗಿ ರಾಜ್ಯದ ಕಂದಾಯ ಸಂಗ್ರಹವು ಕ್ಷೀಣಗೊಂಡಿತು. ಟಿಪ್ಪು ಉತ್ತಮ ಆಡಳಿತಗಾರನಾಗಿದ್ದಂತೆಯೇ ಹಲವು ಉದಾರ ನೀತಿಗಳನ್ನೊಳಗೊಂಡ ಕ್ರಮಗಳನ್ನು ಜಾರಿಗೊಳಿಸಿದನು. ಅನೇಕ ಹಿಂದೂ ದೇವಾಲಯಗಳಿಗೆ ದತ್ತಿ ದಾನಗಳನ್ನು ನೀಡಿದ್ದುದೇ ಅಲ್ಲದೇ ಶೃಂಗೇರಿ ಸಂಸ್ಥಾನಕ್ಕೆ ವಿಶೇಷ ಪ್ರೋತ್ಸಾಹ ನೀಡಿದ್ದನು. ಇತರೆ ಧರ್ಮಗಳ ಬಗ್ಗೆ ಸಹಿಷ್ಣುತೆಯನ್ನು ಹೊಂದಿದ್ದರೂ ಈತನೊಬ್ಬ ಶ್ರದ್ಧಾವಂತ ಮುಸಲ್ಮಾನನಾಗಿದ್ದನೆಂಬುದು ಗಮನಿಸಬೇಕಾದ ಅಂಶವಾಗಿದೆ. ಹೈದರ್ ಆಲಿಯ ನಿಯಂತ್ರಿತ ಸರಕಾರವು ಟಿಪ್ಪುವಿನ ಆಡಳಿತಾವಧಿಯಲ್ಲಿ ಹೆಚ್ಚು ಸುವ್ಯವಸ್ಥಿತವಾಯಿತು

ಎಂದು ಕರ್ನಲ್ ಮನ್ರೋ ಅಭಿಪ್ರಾಯಪಟ್ಟಿದ್ದಾನೆ. ಮೈಸೂರಿನ ಇತಿಹಾಸದಲ್ಲಿ ಈ ಮುಸಲ್ಮಾನ ವಂಶದ ಮಧ್ಯಕಾಲೀನ ಆಳ್ವಿಕೆಯು ಮೈಸೂರು ಇತಿಹಾಸದಲ್ಲಿ ಮಹತ್ವದ ಯುಗವಾಗಿದೆ.

**ಮುಮ್ಮಡಿ ಕೃಷ್ಣರಾಜ ಒಡೆಯರ್ (೧೭೯೯–೧೮೩೧) :** ಟಿಪ್ಪು ಸುಲ್ತಾನನ ಮರಣಾನಂತರ ಈಸ್ಟ್ ಇಂಡಿಯಾ ಕಂಪನಿಯು ಮೈಸೂರು ಸಂಸ್ಥಾನವನ್ನು ಅನೂರ್ಜಿತಗೊಳಿಸಬಹುದಾಗಿತ್ತು. ಆದರೆ, ಮೈಸೂರು ರಾಜವಂಶದ ಬೇಡಿಕೆಗಳನ್ನು ಅವರು ಪರಿಗಣಿಸಿ ರಾಜಕೀಯವಾಗಿ ಸಂಸ್ಥಾನದ ಆಳ್ವಿಕೆಯನ್ನು ಮುಂದುವರಿಸುವಂತೆ ನಿಶ್ಚಯಿಸಿದ್ದು ಒಂದು ಸುಯೋಗವೆನ್ನಬಹುದು. ಮೈಸೂರು ಸಂಸ್ಥಾನವನ್ನು ಯಾವುದಾದರೂ ಒಂದು ಸ್ವರೂಪದಲ್ಲಿ ತಮ್ಮ ಚಕ್ರಾಧಿಪತ್ಯದ ಅಡಿಯಲ್ಲೇ ಉಳಿಸಿಕೊಳ್ಳುವುದು ಬ್ರಿಟಿಷರ ರಾಜಕೀಯ ಮುತ್ಸದ್ಧಿತನವಾಗಿತ್ತು. ಬ್ರಿಟಿಷ್ ಗವರ್ನರ್ ಜನರಲ್ ಈ ವಿಷಯದ ಬಗ್ಗೆ ತೀರ್ಮಾನಿಸಲು ಜನರಲ್ ಹ್ಯಾರಿಸ್, ಕರ್ನಲ್ ಅರ್ಥರ್ ವೆಲ್ಲೆಸ್ಲಿ, ಕಿರ್ಕ್ ಪ್ಯಾಟ್ರಿಕ್ ಮತ್ತು ಬ್ಯಾರಿಕ್ಲೋಸ್ ಅವರುಗಳು ಸದಸ್ಯರಾಗಿ ಹಾಗೂ ಮಾಲ್ಕೋಮ್ ಮತ್ತು ಮೇಜರ್ ಮುನ್ರೋರವರನ್ನು ಕಾರ್ಯದರ್ಶಿಗಳನ್ನಾಗಿಯೂ ಹಾಗೂ ಎಡ್ವರ್ಡ್ ಗಾಡ್‌ಲಿಂಗ್ ಅವರನ್ನು ಸಹಾಯಕ ಸದಸ್ಯರಾಗಿರುವಂತೆ ಒಂದು ಉನ್ನತ ಮಟ್ಟದ ಆಯೋಗವನ್ನು ರಚಿಸಿದನು. ಈ ಆಯೋಗವು ಶಿಫಾರಸ್ಸು ಮಾಡಿದಂತೆ ಹಾಗೂ ತದನಂತರದ ಒಪ್ಪಂದದಂತೆ ಜೂನ್ ೧೭೯೯ರಲ್ಲಿ ಮೈಸೂರಿನೊಡನೆ ಒಪ್ಪಂದಕ್ಕೆ ಬ್ರಿಟೀಷ್ ಸರ್ಕಾರವು ಸಹಿ ಮಾಡಿತು. ಬ್ರಿಟೀಷ್ ಸರ್ಕಾರವು ಒಂಬತ್ತನೇ ಚಾಮರಾಜ ಒಡೆಯರ್ ಅವರ ಮಗ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಸಾಮ್ರಾಜ್ಯದ ಬೇಡಿಕೆಯನ್ನು ಮನ್ನಿಸಿತು. ಟಿಪ್ಪುವಿಗೆ ಮಂತ್ರಿಯಾಗಿದ್ದ ದಿವಾನ್ ಪೂರ್ಣಯ್ಯನವರನ್ನು ದಕ್ಷ ಆಡಳಿತಗಾರರೆಂದು ಬ್ರಿಟಿಷ್ ಸರ್ಕಾರವು ಪರಿಗಣಿಸಿ ಅವರ ಸೇವೆಯನ್ನು ಮೈಸೂರು ರಾಜ್ಯಕ್ಕೆ ಪಡೆಯುವ ಬಯಕೆ ಹೊಂದಿತ್ತು. ಆದರೆ ಪೂರ್ಣಯ್ಯನವರು ಟಿಪ್ಪುವಿನ ದಿವಾನರಾಗಿ ಹಿಂದೆ ಕಾರ್ಯನಿರ್ವಹಿಸಿದ್ದುದರಿಂದಾಗಿ, ಸಹಜವಾಗಿಯೇ ಅವರು ಸುಲ್ತಾನನ ಮಗನನ್ನು ಸಿಂಹಾಸನದಲ್ಲಿ ಕೂಡಿಸಬೇಕೆಂದು ಬ್ರಿಟಿಷರಿಗೆ ಮನವಿ ಮಾಡಿದ್ದರು. ಆದರೆ ಫ್ರಾನ್ಸ್ ದೇಶದ ಸ್ನೇಹಿತನಾದ ಟಿಪ್ಪು ವಂಶಕ್ಕೆ ರಾಜ್ಯವನ್ನು ಪುನ: ಒಪ್ಪಿಸುವುದು ಬ್ರಿಟಿಷರಿಗೆ ಸಮ್ಮತವಿರಲಿಲ್ಲ. ಆದುದರಿಂದ ಅವರು ಆ ಸಲಹೆಯನ್ನು ಒಪ್ಪಲಿಲ್ಲ. ಮಹಾರಾಜರು ಜೂನ್ ೩೦, ೧೭೯೯ರಂದು ಸಿಂಹಾಸನವನ್ನಲಂಕರಿಸಿದರು. ದಿವಾನ್ ಪೂರ್ಣಯ್ಯರನ್ನು ದಿವಾನರೆಂದು ಅಂದಿನ ರೆಸಿಡೆಂಟ್ ಆಗಿದ್ದ ಬ್ಯಾರಿಕ್ಲೋಸ್ ಅವರು ನೇಮಕ ಮಾಡಿದರು. ಬ್ರಿಟೀಷ್ ಸರ್ಕಾರಕ್ಕೆ ದಿವಾನ್ ಪೂರ್ಣಯ್ಯನ ಆಡಳಿತ ದಕ್ಷತೆಯ ಬಗ್ಗೆ ಅಪಾರವಾದ ನಂಬಿಕೆಯಿತ್ತೆಂದು ಬ್ರಿಟಿಷರ ಈ ಕ್ರಮದಿಂದ ಸ್ಪಷ್ಟವಾಗುತ್ತದೆ.

### ದಿವಾನ್ ಪೂರ್ಣಯ್ಯನವರ ಆಡಳಿತ

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಇನ್ನೂ ಅಪ್ರಾಪ್ತ ವಯಸ್ಕರಾಗಿದ್ದುದರಿಂದ ದಿವಾನ್ ಪೂರ್ಣಯ್ಯನವರೇ ಸುಮಾರು ೧೨ ವರ್ಷಗಳ ಕಾಲ (೧೮೦೦–೧೮೧೧) ರಾಜ್ಯಭಾರವನ್ನು ನಿರ್ವಹಿಸಿದರು. ಹಿಂದಿನ ಅನುಭವದ ಆಧಾರದ ಮೇಲೆ ಪೂರ್ಣಯ್ಯನವರು ಕೆಲವು ಸಮಸ್ಯೆ ಒಡ್ಡುತ್ತಿದ್ದ ಕೆಲವು ಪಾಳೆಯಗಾರರನ್ನು ಸದೆ ಬಡಿಯಲು ಪ್ರಾರಂಭಿಸಿದರು. ರಾಜ್ಯವನ್ನು ಮೂರು ಸುಭಾಗಳನ್ನಾಗಿ ವಿಂಗಡಿಸಿ ಪ್ರತಿಯೊಂದರ ಆಡಳಿತವನ್ನು ನಿರ್ವಹಿಸಲು ಸುಭೇದಾರರನ್ನು ನೇಮಿಸಿದರು. ತಾಲೂಕುಗಳಲ್ಲಿದ್ದ ಅಮೀಲ್‌ದಾರರು, ನ್ಯಾಯಾಂಗ, ಪೋಲೀಸ್ ಮತ್ತು ಕಂದಾಯದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ಇದಕ್ಕೂ ಕೆಳಗಡೆ ಹೋಬಳಿಗಳಿದ್ದು, ಅವುಗಳ ಆಡಳಿತವನ್ನು ಪಾರುಪತ್ತಿ ಅಥವಾ ಪಾರುಪತ್ತೆದಾರರು ನಿರ್ವಹಿಸುತ್ತಿದ್ದರು. ಗ್ರಾಮಗಳ ಆಡಳಿತವನ್ನು ಪಟೇಲ ಹಾಗೂ ಶಾನುಭೋಗ, ತೋಟಿ ಮತ್ತು ತಳವಾರರೆಂಬ ಅಧಿಕಾರಿಗಳು ನಿರ್ವಹಿಸುತ್ತಿದ್ದರು. ಭೂಕಂದಾಯ, ಮಾದಕ ವಸ್ತುಗಳ ಮೇಲಿನ ತೆರಿಗೆ, ನೇಯ್ಗೆ ತೆರಿಗೆ ಹಾಗೂ ವಾಣಿಜ್ಯ ತೆರಿಗೆಗಳು ಸಂಸ್ಥಾನದ ಮೂಲ ವರಮಾನಗಳಾಗಿದ್ದವು. ಪ್ರಬಲವಾದ ಬಾರ್ ಸಿಪಾಯಿಗಳ ಕಂದಾಚಾರ ಉಪ ಸೈನ್ಯ ಪದ್ಧತಿಯನ್ನು ರಾಜ್ಯದಲ್ಲಿ

ಪ್ರಥಮ ಬಾರಿಗೆ ಜಾರಿಗೊಳಿಸಿದ್ದು ದಿವಾನ್ ಪೂರ್ಣಯ್ಯನವರ ಆಡಳಿತ ಸುಧಾರಣೆಗಳ ಪೈಕಿ ಅತಿ ಮುಖ್ಯವಾದುದ್ದಾಗಿದೆ. ನೀರಾವರಿ ಮತ್ತು ಸಾರ್ವಜನಿಕ ಕಟ್ಟಡಗಳ ನಿರ್ಮಾಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಯಿತು. ಮೈಸೂರು ರಾಜ್ಯದಲ್ಲಿ ಆರ್ಥಿಕ ಸಮೃದ್ಧತೆಯು ಎಷ್ಟು ಬಲಗೊಂಡಿತೆಂದರೆ, ತೀವ್ರ ಬರಗಾಲದಿಂದ ಪೀಡಿತರಾಗಿದ್ದ ಹೈದರಾಬಾದ್‌ನ ಬರಪೀಡಿತ ನಿರಾಶ್ರಿತರು ೧೮೦೪ರಲ್ಲಿ ಮೈಸೂರು ಸಂಸ್ಥಾನದಲ್ಲಿ ಬಂದು ನೆಲೆಸಲು ಅವಕಾಶ ಮಾಡಿಕೊಡುವಷ್ಟು ಸಂಸ್ಥಾನವು ಸಮೃದ್ಧತೆಯನ್ನು ಸಾಧಿಸಿತ್ತು. ಪೂರ್ಣಯ್ಯನವರ ಆಳ್ವಿಕೆಯ ಅವಧಿಯಲ್ಲಿಯೇ ಬ್ರಿಟೀಷ್ ಯಾತ್ರಿಕ ಕಾಲಿನ್ ಮೆಕೆನ್ಜಿಯು (೧೭೯೯–೧೮೦೦) ಮೈಸೂರು ರಾಜ್ಯದ ಸರ್ವೇಕ್ಷಣೆಯನ್ನು ಕೈಗೊಂಡು, 'Mackenzie Collections' ಎಂಬ ಉತ್ತಮ ಕೃತಿಯನ್ನು ರಚಿಸಿದನು. ಭಾರತದಲ್ಲೇ ಪ್ರಥಮ ಬಾರಿಗೆ ಎಂದು ಪರಿಗಣಿಸಲಾಗಿರುವ ಸಿಡುಬು ರೋಗ ನಿವಾರಕ (ವ್ಯಾಕ್ಸಿನೇಷನ್) ಚುಚ್ಚುಮದ್ದನ್ನು ಹಾಕುವ ಕಾರ್ಯಕ್ರಮವನ್ನು ಮೈಸೂರು ಪ್ರಾಂತದಲ್ಲಿ ೧೮೦೬ರಲ್ಲಿ ಸಾರ್ವತ್ರಿಕವಾಗಿ ಹಮ್ಮಿಕೊಳ್ಳಲಾಯಿತು. ಪೂರ್ಣಯ್ಯನವರ ಆಡಳಿತ ಪರಿಶ್ರಮತೆಯ ಬಗ್ಗೆ ಮೈಸೂರಿನಲ್ಲಿ ಮಾತ್ರವಲ್ಲದೇ ಹೊರ ರಾಜ್ಯಗಳಲ್ಲಿ ಕೂಡ ಮೆಚ್ಚುಗೆ ವ್ಯಕ್ತವಾಯಿತು. ಮೈಸೂರು ಸರ್ಕಾರವು ೧೮೦೭ರಲ್ಲಿ ಪೂರ್ಣಯ್ಯನವರಿಗೆ ಯಳಂದೂರು ಜಹಗೀರನ್ನು ದತ್ತಿಯಾಗಿ ನೀಡಿತು. ನಂತರ ರಾಜರಿಗೆ ೧೬ ವಯಸ್ಸು ತುಂಬಿದಾಗ ೧೮೧೧ರಲ್ಲಿ ಮೈಸೂರಿನ ಆಡಳಿತವನ್ನು ಅವರೇ ವಹಿಸಿಕೊಂಡನು. ದಿವಾನ್ ಪೂರ್ಣಯ್ಯ ನಂತರ ೧೮೧೨ರಲ್ಲಿ ನಿಧನರಾದರು.

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ನೇರ ಆಡಳಿತವು ೧೮೧೧ರಿಂದ ಆರಂಭವಾಯಿತು. ಇವರು ಮೊದಲ ಹಲವು ವರ್ಷಗಳಲ್ಲಿ ಕೆಲವು ಕಷ್ಟಗಳನ್ನು ಎದುರಿಸಬೇಕಾಯಿತು. "ರಾಜರಿಗೆ ಈ ಸಮಸ್ಯೆಗಳ ಬಗ್ಗೆ ಸ್ವತ: ನಿರ್ಧಾರ ಕೈಗೊಳ್ಳಲು ಸಾಕಷ್ಟು ಅನುಭವವಿಲ್ಲದೇ ಇಂತಹ ಪರಿಸ್ಥಿಯಲ್ಲಿ ದಕ್ಷ ಆಡಳಿತಗಾರನೊಬ್ಬನ ಸಹಾಯದ ಅವಶ್ಯಕತೆಯಿದ್ದಿತು" ಎಂದು ಡಾ.ಬಿ.ಆರ್.ಕೇಶವಮೂರ್ತಿ ಅಭಿಪ್ರಾಯಪಡುತ್ತಾರೆ. ಈ ಪ್ರಾಂತದ ಆಡಳಿತವನ್ನು ಮದರಾಸಿನಲ್ಲಿದ್ದ ಬ್ರಿಟೀಷ್ ಸರ್ಕಾರವು ನಿರ್ವಹಿಸುತ್ತಿದ್ದುದೇ ಅಲ್ಲದೆ, ತಮ್ಮ ಆಡಳಿತ ಪ್ರತಿನಿಧಿಯಾಗಿದ್ದ ಬ್ರಿಟಿಷ್ ರೆಸಿಡೆಂಟ್ ಮುಖೇನ ಹಲವು ಆಡಳಿತ ಸೂಚನೆಗಳನ್ನು ರಾಜನಿಗೆ ಒದಗಿಸಲಾಗುತ್ತಿತ್ತು. ರಾಜರು ತಮ್ಮ ರಾಜ್ಯವನ್ನು ಆರು ತುಕಡಿ ಅಥವಾ ಫೌಜ್‌ದಾರಿಗಳಾಗಿ (ಜಿಲ್ಲೆಗಳು) ವಿಭಜಿಸಿದ್ದರು. ತುಕ್ಕಡಿ ಅಥವಾ ಫೌಜ್‌ದಾರಿಗಳನ್ನು ಪುನ: ತಾಲೂಕುಗಳನ್ನಾಗಿ ವಿಂಗಡಿಸಲಾಗಿತ್ತು. ರಾಜ್ಯದ ಆಡಳಿತವು ಕೆಲವು ಸುಧಾರಣೆಗಳ ಪರಿಣಾಮವಾಗಿ ಸುಗಮಗೊಂಡು ೧೮೧೧ರಲ್ಲಿ ರಾಜ್ಯವು ಗಳಿಸಿದ್ದ ೬೦ ಲಕ್ಷ ರೂ.ಗಳ ಆದಾಯವು ೧೮೧೬ರ ವೇಳೆಗೆ ೭೧ ಲಕ್ಷ ರೂ.ಗಳಿಗೆ ವೃದ್ಧಿಗೊಂಡಿತು. ಆದರೆ, ಸ್ವಲ್ಪಕಾಲದಲ್ಲೇ ಭ್ರಷ್ಟಾಚಾರ, ಸ್ವಜನಪಕ್ಷಪಾತ ಮತ್ತು ರಾಜರ ಆಸ್ಥಾನದ ವಿಪರೀತ ವೆಚ್ಚಗಳಿಂದಾಗಿ ರಾಜ್ಯದಲ್ಲಿ ಆರ್ಥಿಕ ಹಿನ್ನಡೆಯು ತಲೆದೋರಿತು. ಆಗ, ಆಡಳಿತ ನಿರ್ವಹಿಸುತ್ತಿದ್ದ ದಿವಾನ್ ರಾಮರಾವ್ ತನ್ನ ಬಂಧುಗಳನ್ನು ಹಾಗೂ ಸ್ನೇಹಿತರನ್ನು ಹಲವು ಪ್ರಮುಖ ಹುದ್ದೆಗಳಿಗೆ ನೇಮಕ ಮಾಡಿದನು. ಇಷ್ಟೇ ಅಲ್ಲದೆ ರಾಜರು ಕೆಲವು ಅನಾವಶ್ಯಕ ವೆಚ್ಚಗಳಾದ ಉಡುಗೊರೆಗಳು, ನಿವೃತ್ತಿ ವೇತನ, ದತ್ತಿದಾನಗಳನ್ನು ಯಾವುದೇ ಜಾಗರೂಕತೆಯಿಲ್ಲದೇ ನೀಡಿದ ಕಾರಣ ರಾಜ್ಯದ ಬೊಕ್ಕಸವು ಖಾಲಿಯಾಗುತ್ತಿತ್ತು. ಮಹಾರಾಜರ ಅಜಾಗರೂಕತೆಯ ಆಡಳಿತವನ್ನು ಗಮನಿಸುತ್ತಿದ್ದ ಬ್ರಿಟಿಷ್ ರೆಸಿಡೆಂಟ್ ಮದರಾಸಿನ ತನ್ನ ಸರ್ಕಾರಕ್ಕೆ ಗೋಪ್ಯ ವರದಿಗಳನ್ನು ಕಳುಹಿಸುತ್ತಿದ್ದನು. ರಾಜರು ಆಡಳಿತ ನಿಯಂತ್ರಣ ಕ್ರಮವಾಗಿ ೧೮೧೪ರಲ್ಲಿ ದಿವಾನ್ ರಾಮರಾಯನನ್ನು ಕೆಲಸದಿಂದ ವಜಾಮಾಡಿ ತಾವೇ ೧೮೧೮ರವರೆಗೆ ಆಡಳಿತದ ಸೂತ್ರಗಳನ್ನು ಹಿಡಿದರು. ಆದರೆ, ರಾಜರ ಆಸ್ಥಾನದ ವೆಚ್ಚಗಳು ಮಾತ್ರ ಯಾವುದೇ ಅಡೆತಡೆ ಇಲ್ಲದೇ ಮುಂದುವರಿದಿತ್ತು. ನಂತರ ಸಿದ್ಧರಾಜ (೧೮೧೮–೨೦), ಬಾಬುರಾವ್ (೧೮೨೦) ಮತ್ತು ಅಳಿಯ ಲಿಂಗರಾಜ(೧೮೨೧) ಇವರು ಒಬ್ಬರ ತರುವಾಯ ಒಬ್ಬರು ದಿವಾನರಾಗಿ ಸೇವೆ ಸಲ್ಲಿಸಿದರು. ಆದರೆ, ಇವರಾರೂ ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಉತ್ತಮಪಡಿಸುವಲ್ಲಿ ಸಫಲರಾಗಲಿಲ್ಲ. ಲಿಂಗರಾಜನನ್ನು ೧೮೨೨ರಲ್ಲಿ ದಿವಾನಗಿರಿಯಿಂದ ವಜಾ ಮಾಡಿದ ಮೇಲೆ

ರಾಜರು ಸ್ವತಃ ತಾವೇ ಆಡಳಿತವನ್ನು ನಿರ್ವಹಿಸುವುದು ಬಹಳ ಕಠಿಣವಾಯಿತು. ಮುಮ್ಮಡಿಯವರು ೧೮೨೭ರಲ್ಲಿ ವೆಂಕಟರಾಜನನ್ನು ದಿವಾನನ್ನಾಗಿ ನೇಮಕ ಮಾಡಿದರು. ಈತನು ಹಿಂದೆ ಹಲವು ಅವ್ಯವಹಾರಗಳು ನಡೆದಿದ್ದ ಬಗ್ಗೆ ವಿಚಾರಣೆಯನ್ನು ಕೈಗೊಂಡು ಕಂದಾಯಗಳ ಪಾವತಿಯಲ್ಲಿ ವಾರಬಂದಿ ಮತ್ತು ತಿಂಗಳ ಬಂದಿ ಎಂಬ ಹೊಸ ಪದ್ಧತಿಗಳನ್ನು ಜಾರಿಗೆ ತಂದು ಭೂಕಂದಾಯ ವ್ಯವಸ್ಥೆಯನ್ನು ತಾನೇ ಸ್ವತಃ ಪರಿವೀಕ್ಷಿಸಿದನು. ಮೈಸೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದ ಅಮೀಲ್‌ದಾರರು ಕೇಂದ್ರಸ್ಥಾನವನ್ನು ಬಿಟ್ಟು ಹೋಗಕೂಡದೆಂಬ ಕಟ್ಟಾಜ್ಞೆಯನ್ನೂ ಹೊರಡಿಸಿದನು. ಏಕೆಂದರೆ, ರಾಜ್ಯದ ಬೊಕ್ಕಸಕ್ಕೆ ಅಧಿಕ ಹಣ ಸಂಗ್ರಹಿಸುತ್ತಿದ್ದವರೇ ಆಗಿನ ಅಮೀಲ್‌ದಾರರುಗಳಾಗಿದ್ದರು. ಅಲ್ಲದೇ ಅವರುಗಳು ಕೃಷಿಕರು ಎದುರಿಸುತ್ತಿದ್ದ ಸಮಸ್ಯೆಗಳನ್ನು ಬಗೆಹರಿಸಲು ಅವಶ್ಯಕವಾದ ನಿರ್ಧಾರಗಳನ್ನು ಕೂಡಲೇ ಕೈಗೊಳ್ಳಬೇಕೆಂಬುದು ಈ ಹೊಸ ವ್ಯವಸ್ಥೆಯ ಗುರಿಯಾಗಿತ್ತು. ಇದರ ಪರಿಣಾಮವಾಗಿ ೧೮೨೮ರಲ್ಲಿ 'ದಿವಾನ್ ವೆಂಕಟರಾಜನು ಯಶಸ್ವಿಯಾಗಿ ತಾಲೂಕು ಮಟ್ಟದ ಕಂದಾಯಗಳನ್ನು ಸುವ್ಯವಸ್ಥಿತವಾಗಿ ವಸೂಲು ಮಾಡಿರುವನು' ಎಂದು ಬ್ರಿಟಿಷ್ ರೆಸಿಡೆಂಟನು ತನ್ನ ಸರಕಾರಕ್ಕೆ ವರದಿ ಸಲ್ಲಿಸಿದನು. ಈ ಸಂದರ್ಭದಲ್ಲಿ (೧೮೨೭-೨೮) ರಾಜ್ಯದಲ್ಲಿ ಕೆಲವು ಕಡೆ ಬರ ಪರಿಸ್ಥಿತಿ ಉಂಟಾಗಿದ್ದರೂ ಇಂತಹ ಉತ್ತಮ ಕಂದಾಯ ಸುಧಾರಣೆ ಜಾರಿಗೆ ಬಂದದ್ದು ವೆಂಕಟರಾಜನ ಸಾಧನೆಯಾಗಿತ್ತು. ಇಷ್ಟೆಲ್ಲಾ ಇದ್ದರೂ ರಾಜರು ತಮ್ಮ ವೈಯಕ್ತಿಕ ವೈಭವಯುತ ವೆಚ್ಚಗಳಿಗೆ ಕಡಿವಾಣ ಹಾಕಿಕೊಳ್ಳಲೇ ಇಲ್ಲವೆಂದು ತಿಳಿದುಬರುತ್ತದೆ. ಮಹಾರಾಜರ ಈ ವೆಚ್ಚಗಳ ಬಗ್ಗೆ ಕಂಪನಿ ಸರ್ಕಾರವು ತಿಳಿವಳಿಕೆ ನೀಡಲು ಪ್ರಯತ್ನಿಸಿದಾಗ, ರಾಜರು, ಅವು ತಮ್ಮ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ವೆಚ್ಚಗಳು ಎಂದು ಸಮರ್ಥಿಸಿಕೊಂಡರು.

ಇಂತಹ ಕಠಿಣ ಆರ್ಥಿಕ ಪರಿಸ್ಥಿತಿಯಲ್ಲಿ ೧೮೩೦ರಲ್ಲಿ ಶಿವಮೊಗ್ಗ ಜಿಲ್ಲೆಯ ಹೊಸನಗರದಲ್ಲಿ ರಾಜರ ದುರಾಡಳಿತದ ವಿರುದ್ಧ ಬಂಡಾಯವು ಆರಂಭಗೊಂಡಾಗ ರಾಜಕೀಯ ಪರಿವರ್ತನೆಯು ಅವಶ್ಯಕವಾಗಿ ಕಂಡುಬಂದಿತು. ಮಹಾರಾಜರು ಬಂಡುಗೋರರನ್ನು ಸದೆ ಬಡಿಯಲು ತಮ್ಮ ದಿವಾನನನ್ನು ಸೈನ್ಯದೊಂದಿಗೆ ನಗರಕ್ಕೆ ಕಳುಹಿಸಿದರು. ಕೆಲವು ಪ್ರದೇಶಗಳನ್ನು ಹೊರತುಪಡಿಸಿ ನಗರ ಪ್ರಾಂತದ ಬಹುತೇಕ ಭಾಗಗಳಲ್ಲಿ ಶಾಂತ ಪರಿಸ್ಥಿತಿ ಏರ್ಪಟ್ಟಿತು. ಆದರೆ ಈ ವೇಳೆಗಾಗಲೇ ರಾಜರ ದುರ್ಬಲ ಆಡಳಿತವನ್ನು ಗಮನಿಸಿದ್ದು ಮಾತ್ರವಲ್ಲದೇ ರಾಜ್ಯದ ಬೊಕ್ಕಸವನ್ನು ದುಂದುವೆಚ್ಚದಿಂದ ಅವರು ಖಾಲಿ ಮಾಡಿದ್ದ ಅಂಶವನ್ನೂ ಮದರಾಸಿನಲ್ಲಿದ್ದ ರಾಜ್ಯಪಾಲನಿಗೆ ಮೈಸೂರಿನ ರೆಸಿಡೆಂಟನು ವರದಿಯ ಮುಖೇನ ತಿಳಿಸಿದ್ದನು. ಪುನ: ೧೮೩೧ರಲ್ಲಿ ಬಾಲಮ್‌ನ ಪಾಳೆಯಗಾರರುಗಳು, ಮಂಜರಾಬಾದಿನ ಮತ್ತು ತರೀಕೆರೆಯ ಪಾಳೆಯಗಾರರು ಹಾಗೂ ಹೊಸನಗರದ ರಾಜಕುಮಾರನಂತೆ ನಟಿಸುತ್ತಿದ್ದ ಬೂದಿಬಸಪ್ಪ ಇವರುಗಳು ಬಂಡುಕೋರರೊಡನೆ ಸೇರಿಕೊಂಡು ಬಂಡಾಯವನ್ನು ದ್ವಿಗುಣಗೊಳಿಸಿದರು. ಪರಿಸ್ಥಿತಿಯನ್ನು ಹತೋಟಿಗೆ ತರಲು ಬ್ರಿಟಿಷರು ಇರಿಸಿದ್ದ ಸಬ್ಸಿಡಿಯರಿ ಸೇನೆಯ ಸಹಾಯವನ್ನೂ ಕೋರಬೇಕಾಯಿತು. ಜುಲೈ ೧೮೩೧ರ ವೇಳೆಗೆ ಸ್ವಲ್ಪ ಮಟ್ಟಿಗೆ ಕಾನೂನಿನ ಹತೋಟಿಯನ್ನು ಈ ಪ್ರದೇಶದಲ್ಲಿ ಸ್ಥಾಪಿಸಲಾಯಿತು. ಇದೇ ಸಮಯದಲ್ಲಿ ಅಂದರೆ ದಿನಾಂಕ ೦೪-೦೭-೧೮೩೧ರಂದು ಮೈಸೂರಿಗೆ ಭೇಟಿಯಿತ್ತಿದ್ದ ಮದರಾಸಿನ ರಾಜ್ಯಪಾಲ ಲೂಷಿಂಗ್‌ಟನ್ ಭಾರತದ ಗವರ್ನರ್ ಜನರಲ್ಲಿಗೆ ಮೈಸೂರಿನ ಆಡಳಿತದ ಬಗ್ಗೆ ಒಂದು ಸುದೀರ್ಘ ವರದಿಯನ್ನು ಬರೆಯುತ್ತಾ ರಾಜರ ದುರಾಡಳಿತ ಹಾಗೂ ಕಿರುಕುಳಕ್ಕೆ ಗುರಿಯಾದ ಜನರು ರಾಜ್ಯದಲ್ಲಿ ಉಂಟಾಗಿದ್ದ ವಿಷಮ ಆರ್ಥಿಕ ಹಿನ್ನಡೆಯ ವಿರುದ್ಧ ಬಂಡು ಏಳುತ್ತಿರುವರೆಂದು ತಿಳಿಸಿದನು. ಗವರ್ನರ್ ಜನರಲ್ ಸರ್ ವಿಲಿಯಂ ಬೆಂಟಿಂಕ್ ದಿನಾಂಕ ಏಳನೇ ಸೆಪ್ಟೆಂಬರ್‌ರಂದು ಮಹಾರಾಜರಿಗೆ ಅಧಿಕೃತ ಪತ್ರ ಬರೆದು ಮೈಸೂರಿನ ಆಡಳಿತವನ್ನು ಕಂಪನಿ ಸರ್ಕಾರವು ವಹಿಸಿಕೊಳ್ಳುತ್ತದೆಂದು ಮುನ್ಸೂಚನೆಯಿತ್ತನು. ಇದರ ಪ್ರಕಾರ ಅಕ್ಟೋಬರ್ ೨೧ರ ೧೮೩೧ರಂದು ಒಂದು ನಿರ್ಬಂಧನಾ ಆದೇಶವನ್ನು ಹೊರಡಿಸಿ ಮೈಸೂರು ಸಂಸ್ಥಾನಕ್ಕೆ ಬ್ರಿಟೀಷ್ ಕಮೀಶನರ್‌ಗಳನ್ನು ನೇಮಕ ಮಾಡುವ ಮೂಲಕ ಆಡಳಿತವನ್ನು ಬ್ರಿಟಿಷ್ ಸರ್ಕಾರವೇ ಅಧಿಕೃತವಾಗಿ ವಹಿಸಿಕೊಂಡಿತು.

ಆಡಳಿತವನ್ನು ಬ್ರಿಟೀಷ್ ಸರ್ಕಾರವು ವಹಿಸಿಕೊಂಡ ತರುವಾಯ (೧೮೩೧-೧೮೮೧) ಮುಮ್ಮಡಿ ಕೃಷ್ಣರಾಜ ಒಡೆಯರು ಪುನಃ ಸಿಂಹಾಸನವನ್ನು ಪಡೆಯುವ ಪ್ರಯತ್ನದಲ್ಲೇ ೧೮೬೮ರಲ್ಲಿ ನಿಧನರಾದರು. ಆಡಳಿತದ ಹೊಣೆಗಾರಿಕೆಯು ತಮ್ಮಿಂದ ಕಸಿದುಕೊಂಡ ತರುವಾಯ ರಾಜರು ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಕಾರಣ, ಮೈಸೂರಿನಲ್ಲಿ ಹಿಂದೆಂದೂ ಆಗದ ಸಾಂಸ್ಕೃತಿಕ ಪುನರುಜ್ಜೀವನ ಈ ಕಾಲದಲ್ಲಿ ಆರಂಭವಾಗಿ ಮುಂದೆ ಪ್ರಬಲಗೊಂಡಿದ್ದು ಗಮನಾರ್ಹವಾಗಿದೆ. ತಾವೇ ವಿದ್ವಾಂಸರಾಗಿದ್ದು ಮಾತ್ರವಲ್ಲದೇ ರಾಜರು ಆಸ್ಥಾನದಲ್ಲಿದ್ದ ವಿದ್ವಾಂಸರು ಹಾಗೂ ಕೃತಿ ರಚನೆಕಾರರಿಗೆ ಯಥೇಚ್ಛವಾಗಿ ಉತ್ತೇಜನವನ್ನು ನೀಡಿದರು. ಕನ್ನಡ ವಿದ್ವಾಂಸರಾದ ದೇವಚಂದ್ರ, ಕೆಂಪುನಾರಾಯಣ, ಅಳಿಯ ಲಿಂಗರಾಜ ಮೊದಲಾದವರು ಈ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದರು. ವೀಣಾವಾದನದಲ್ಲಿ ಜನಪ್ರಿಯರಾಗಿದ್ದ ವೀಣಾ ಶಂಭಯ್ಯ ಮತ್ತು ವೆಂಕಟಸುಬ್ಬಯ್ಯ ಇವರುಗಳು ಮೈಸೂರಿನ ಸಂಗೀತ ಸಾಮ್ರಾಜ್ಯಕ್ಕೆ ವಿಶಿಷ್ಠ ಸ್ಥಾನವನ್ನು ದೊರಕಿಸಿ ಮೈಸೂರು ಶೈಲಿಯ ಪ್ರವರ್ತಕರಾಗಿದ್ದರು. ಸುಪ್ರಸಿದ್ಧ ಗಮಕಿ ಮೈಸೂರು ಸದಾಶಿವರಾಯರೂ ಈ ಕಾಲದಲ್ಲಿ ಜೀವಿಸಿದ್ದರು. ಮೈಸೂರಿನಲ್ಲಿರುವ ಜಗನ್ಮೋಹನ ಅರಮನೆಯನ್ನು ಮುಮ್ಮಡಿಯವರೇ ೧೮೬೧ರಲ್ಲಿ ನಿರ್ಮಿಸಿದರು. ಆಂಗ್ಲ ಶಿಕ್ಷಣಕ್ಕೆಂದೇ ಆರಂಭಿಸಲಾದ ರಾಜಾ ಶಾಲೆ ಮತ್ತು ಮಹಾರಾಜ ಸಂಸ್ಕೃತ ವಿದ್ಯಾಲಯಗಳು ಇವರ ಕಾಲದಲ್ಲಿ ಸ್ಥಾಪಿತವಾದವು. ಚಾಮರಾಜನಗರದಲ್ಲಿ (ತನ್ನ ತಂದೆಯ ಸ್ಮರಣಾರ್ಥವಾಗಿ) ನಿರ್ಮಿಸಲಾದ ಚಾಮರಾಜೇಶ್ವರ ದೇವಾಲಯ,ಮೈಸೂರಿನ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ, ವರುಣದ ಮಹಾದೇಶ್ವರ ದೇವಾಲಯಗಳು ಮುಮ್ಮಡಿಕೃಷ್ಣರಾಜ ಒಡೆಯರ್ ಅವರ ಮಹತ್ ಸಾಧನೆಯಾಗಿವೆ. ಚಾಮುಂಡಿ ದೇವಾಲಯದ ಮುಖ್ಯಗೋಪುರ ಮತ್ತು ನಂಜನಗೂಡಿನ ನಂಜುಂಡೇಶ್ವರ ದೇವಾಲಯದ ಪ್ರಾಕಾರಗಳು ಇವರ ಕಾಲದಲ್ಲೇ ನಿರ್ಮಿತಗೊಂಡವು.

ಮಂಡ್ಯ ಜಿಲ್ಲೆಯಲ್ಲಿ ಇಮ್ಮಡಿ ಮತ್ತು ಮುಮ್ಮಡಿಯವರ ಕಾಲದ ಶಾಸನಗಳು ಅಧಿಕವಾಗಿ ಕಂಡುಬರುತ್ತವೆ. ಮಂಡ್ಯ ತಾಲೂಕಿನ ಮುದಗುಂಡೂರಿನ ಕ್ರಿ.ಶ. ೧೭೬೦ರ ತಾಮ್ರ ಶಾಸನವು ಇಮ್ಮಡಿ ಕೃಷ್ಣರಾಜ ಒಡೆಯರವರ ಆಳ್ವಿಕೆಯಲ್ಲಿ ವಿಚಾರದ ಚಾವಡಿ ಒಳಿತದ ಪಟ್ಟಣ ಹೋಬಳಿಯ ನಾಗಮಂಗಲ ತಾಲೂಕಿನ ಕಲಿದೇವನಹಳ್ಳಿ ಮತ್ತು ಅದರ ಸಹ ಗ್ರಾಮ ಹೊನ್ನೂರುಗಳನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ನಾಗಮಂಗಲ ತಾಲೂಕಿನ ಅಂಕನಹಳ್ಳಿಯ ಕ್ರಿ.ಶ. ೧೭೬೩ರ ಶಾಸನದಲ್ಲಿ ಇದೇ ಅರಸರಿಗೆ ಸೇರಿದ್ದು, ತಿರುಮಲಗಿರಿಯ ಮಗನಾದ ತಿಮ್ಮನೆಂಬ ವೀರನು ಹೊಸಕೋಟೆಯಲ್ಲಿ ನಡೆದ ಯುದ್ಧದಲ್ಲಿ ಮಡಿದ ಸ್ಮಾರಕವಾಗಿ ಇಮ್ಮಡಿ ಕೃಷ್ಣರಾಜ ಒಡೆಯರ್ ಅವರು ರಕ್ತ ಕೊಡುಗೆಯನ್ನು ನೀಡಿದ ವಿಚಾರವನ್ನು ಉಲ್ಲೇಖಿಸಲಾಗಿದೆ. ಶ್ರೀರಂಗಪಟ್ಟಣದ ೧೮೦೦ರ ಶಾಸನವು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯಲ್ಲಿ ನಲ್ಲತಂಬಿ ಮೊದಲಿ ಎಂಬ ಅಧಿಕಾರಿಯು ಶ್ರೀರಂಗನಾಥ ದೇವಾಲಯದಲ್ಲಿ ವೇದ ಪುಷ್ಕರಣಿಯನ್ನು ನಿರ್ಮಿಸಿದ ಬಗ್ಗೆ ವಿವರಿಸಿದೆ. ಇದೇ ಸ್ಥಳದ ಕ್ರಿ.ಶ.೧೮೦೧ರ ಶಾಸನವು ಮೈಸೂರಿನ ಕೃಷ್ಣರಾಜ ಒಡೆಯರ್ ಅವರು ಆಳ್ವಿಕೆ ಮಾಡುತ್ತಿದ್ದಾಗ ಶ್ರೀರಂಗಪಟ್ಟಣದಲ್ಲಿ ವಾಸಿಸುತ್ತಿದ್ದ ಹಜಾಮರು, ಅಕ್ಕಸಾಲಿಗರು ಮತ್ತು ಕೋಮಟಿಗರ ಮನೆಗಳಲ್ಲಿ ಚನ್ನಪಟ್ಟಣ ಹಾಗೂ ಅಷ್ಟಗ್ರಾಮಗಳಲ್ಲಿ ವಾಲಗ ನುಡಿಸುತ್ತಿದ್ದುದು ಪದ್ಧತಿಯಾಗಿದ್ದು ಅವರುಗಳು ಬಂದ ಆದಾಯದಲ್ಲಿ ನರಮಕಟ್ಟೆ ಹನುಮಂತ ದೇವರಿಗೆ ಒಂದಷ್ಟು ಭಾಗವನ್ನು ನೀಡಬೇಕೆಂದು ದಾಖಲಿಸಲಾಗಿದೆ. ಇದೇ ಸ್ಥಳದ ಉತ್ತರದಲ್ಲಿ ಕಾವೇರಿನದಿಗೆ ಕಟ್ಟಿರುವ ಸೇತುವೆಯ ಸಮೀಪವಿರುವ ಶಾಸನವು ಕ್ರಿ.ಶ.೧೮೦೪ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರಿನಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ಅವರ ಆದೇಶದಂತೆ ದಿವಾನ್ ಪೂರ್ಣಯ್ಯನವರು ಈ ಕಾವೇರಿ ಸೇತುವೆಯ ಕಾಮಗಾರಿಯನ್ನು ಆಗಸ್ಟ್ ಕ್ರಿ.ಶ. ೧೮೦೨ರಲ್ಲಿ ಆರಂಭಿಸಿ ಅಕ್ಟೋಬರ್ ೧೮೦೪ರಲ್ಲಿ ಅದರ ಉದ್ಘಾಟನೆಯನ್ನು ಕೈಗೊಂಡರೆಂದು ದಾಖಲಿಸಿದೆ. ಈ ಸೇತುವೆಯನ್ನು ಅಂದಿನ ಬ್ರಿಟಿಷ್ ಗವರ್ನರ್ ಜನರಲ್ ಆಗಿದ್ದ ರಿಚರ್ಡ್ ಮಾರ್ಕಸ್ ವೆಲ್ಲೆಸ್ಲಿಯವರಿಗೆ ಅರ್ಪಿಸಿದ್ದನ್ನೂ ಶಾಸನವು ಉಲ್ಲೇಖಿಸಿದೆ. ಇದೇ ಸ್ಥಳದಲ್ಲಿರುವ

ಇನ್ನೊಂದು ಶಾಸನವು ಪರ್ಷಿಯನ್ ಭಾಷೆಯಲ್ಲಿದ್ದು, ಈ ಸೇತುವೆ ಬಗ್ಗೆ ದಾಖಲಿಸಿದೆ. ಮೇಲುಕೋಟೆಯ ೧೮೧೭ರ ಶಾಸನವು ಇಲ್ಲಿರುವ ಕಲ್ಯಾಣಿಯ ಭುವನೇಶ್ವರಿ ಮಂಟಪವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ನಿರ್ಮಿಸಿದ ಬಗ್ಗೆ ಉಲ್ಲೇಖಿಸಿದೆ. ಕನ್ನಂಬಾಡಿಯ ೧೮೧೮ರ ಶಾಸನವು ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯ ಅವಧಿಯಲ್ಲಿ ಕಾಲರಾ ಮಾರಿಯು ಹರಡಿ ಸಾವಿರಾರು ಜನ ಮೃತಪಟ್ಟು, ಅದರ ಪರಿಹಾರಕ್ಕಾಗಿ ಗಂಗಡಿಕಾರ ವಂಶದ ಬೋರೆಗೌಡ ಎಂಬ ಅಧಿಕಾರಿಯು ಇಲ್ಲಿ ಮಹಾಕಾಳಿಯ ದೇವಾಲಯವನ್ನು ಕಟ್ಟಿಸಿದ ವಿಚಾರವನ್ನು ಉಲ್ಲೇಖಿಸುತ್ತದೆ. ಮಂಡ್ಯ ತಾಲೂಕಿನ ಯಲೆಚಾಕನಹಳ್ಳಿಯ ಕ್ರಿ.ಶ.೧೮೨೫ರ ಶಾಸನವು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯಲ್ಲಿ ಯಲೆಚಕ್ಕನಹಳ್ಳಿಯ ವೀರಭದ್ರ ದೇವಾಲಯವನ್ನು, ಚನ್ನಪ್ಪ ಅರಮನೆಯ ಒಳಬಾಗಿಲ ಪಾರಂಪರಿಕ ಗುರಿಕಾರನಾದ(ಸೇವಕ) ಚನ್ನಪ್ಪನು ದುರಸ್ತಿಗೊಳಿಸಿದ ಬಗ್ಗೆ ದಾಖಲಿಸಿದೆ. ಇದೇ ತಾಲೂಕಿನ ಮೇಲುಕೋಟೆಯ ೧೮೨೯ರ ಶಾಸನವು ಮುಮ್ಮಡಿ ಕೃಷ್ಣರಾಜರ ಆದೇಶದಂತೆ, ಪಿಳ್ಳೈಲೋಕಾಚಾರ್ಯರ ವಿಗ್ರಹವನ್ನು ಪ್ರತಿಷ್ಠಾಪಿಸಿದ ಉಲ್ಲೇಖವನ್ನು ನೀಡುತ್ತದೆ. ಶ್ರೀರಂಗಪಟ್ಟಣದ ೧೮೨೯ರ ಶಾಸನವು ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ತುಪ್ಪದ ವೆಂಕಟಪ್ಪನೆಂಬ ಅಧಿಕಾರಿಯು ಇಲ್ಲಿಯ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ ಮಂಟಪವನ್ನು ಕಟ್ಟಿಸಿದ ಬಗ್ಗೆ ದಾಖಲಿಸಿದೆ. ಮೇಲುಕೋಟೆಯ ೧೮೪೨ರ ಶಾಸನವು ಕೃಷ್ಣರಾಜ ಒಡೆಯರ್ ಅವರ ರಾಣಿ ಲಿಂಗರಾಜಮ್ಮಣ್ಣಿಯವರು ಇಲ್ಲಿಯ ಯೋಗಾನರಸಿಂಹ ದೇವರಿಗೆ ಹೊನ್ನಿನ ಕಿರೀಟವನ್ನು ದಾನ ನೀಡಿದ ವಿಚಾರವನ್ನು ಉಲ್ಲೇಖಿಸಿದೆ. ಮದ್ದೂರಿನ ೧೮೫೧ರ ಶಾಸನವು ಕೃಷ್ಣರಾಜ ಒಡೆಯರ್ ಅವರ ಪಾದ ಸೇವಕಳಾದ ಹೊಸೂರು ವೆಂಕಟಲಕ್ಷ್ಮಮ್ಮ ಇಲ್ಲಿಯ ನರಸಿಂಹ ದೇವಾಲಯಕ್ಕೆ ಬೆಳ್ಳಿಯ ಮುಲಾಮಿರುವ ಗರುಡನನ್ನು ದಾನ ಕೊಟ್ಟ ವಿಚಾರವನ್ನು ಉಲ್ಲೇಖಿಸಿದೆ. ಇದೇ ಸ್ಥಳದ ೧೮೫೨ರ ಶಾಸನವು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಭಂಡಾರಾಧಿಕಾರಿ ರಂಗಾಚಾರಿಯು ಕಾಳಮ್ಮನ ದೇವಾಲಯದಲ್ಲಿ ತಾಂಡವೇಶ್ವರ ವಿಗ್ರಹವನ್ನು ಮಾಡಿಸಿಕೊಟ್ಟ ಅಂಶವನ್ನು ವಿವರಿಸುತ್ತದೆ. ಮಂಡ್ಯ ತಾಲೂಕಿನ ಮದ್ದೂರಿನ ೧೮೩೫ರ ಶಾಸನವು ಇಲ್ಲಿಯ ನರಸಿಂಹ ದೇವಾಲಯದ ಹಿತ್ತಾಳೆ ತಗಡಿನ ಬಾಗಿಲುವಾಡವನ್ನು ನರಸಯ್ಯನೆಂಬ ಮೋದಿಖಾನೆ ಶಿರಸ್ತೇದಾರನು ಮಾಡಿಸಿದ ವಿಚಾರವನ್ನು ದಾಖಲಿಸಿದೆ. ಶ್ರೀರಂಗಪಟ್ಟಣ ತಾಲೂಕಿನ ಚಂದ್ರವನದ ೧೮೩೮ರ ಶಾಸನವು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಈಶ್ವರ ದೇವಾಲಯವನ್ನು ತಮ್ಮ ತಂದೆ ಚಾಮರಾಜ ಒಡೆಯರ್ ಅವರ ಸ್ಮರಣಾರ್ಥವಾಗಿ ನಿರ್ಮಿಸಿದ ಬಗ್ಗೆ ದಾಖಲಿಸಿದೆ. ನಾಗಮಂಗಲ ತಾಲೂಕಿನ ಆದಿ ಚುಂಚನಗಿರಿಯ ೧೯೬೩ರ ಶಾಸನವು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯಲ್ಲಿ ಸ್ವರವನಹಳ್ಳಿಯ ದೊಡ್ಡೆಗೌಡನ ಮಗ ಕರೀಗೌಡನ ಇಲ್ಲಿನ ಗಂಗಾಧರೇಶ್ವರ ದೇವಾಲಯದ ಮಹಾದ್ವಾರಕ್ಕೆ ಹಿತ್ತಾಳೆಯ ತಗಡಿನ ಹೊದಿಕೆಯನ್ನು ಹಾಕಿಸಿದ ವಿಚಾರವನ್ನು ತಿಳಿಸುತ್ತದೆ.

**ಕಮೀಷನರ್‌ಗಳ ಆಳ್ವಿಕೆ**

ಮೈಸೂರು ಸಂಸ್ಥಾನದ ಆಡಳಿತವನ್ನು ೧೮೩೧ರ ಅಕ್ಟೋಬರ್ ತಿಂಗಳಲ್ಲಿ ‘ಆಯುಕ್ತ ಮಂಡಳಿ’ ಗೆ(ಬೋರ್ಡ್ ಆಫ್ ಕಮಿಷನರ್ಸ್) ವಹಿಸಲಾಗಿದ್ದು ಅದರಲ್ಲಿ ಹಿರಿಯ ಹಾಗೂ ಕಿರಿಯ ಕಮಿಷನರರೆಂಬ ಇಬ್ಬರು ಅಧಿಕಾರಿಗಳು ಇರುತ್ತಿದ್ದರು. ಹಣಕಾಸು ಮತ್ತು ಆಡಳಿತದಲ್ಲಿ ಸಹಾಯ ಮಾಡಲು ಒಬ್ಬ ದಿವಾನರು ಇರುತ್ತಿದ್ದರು. ರಾಜ್ಯದ ಆಡಳಿತವನ್ನು ಪರಿವೀಕ್ಷಿಸಲು ರೆಸಿಡೆಂಟ್ ಎಂಬ ಬ್ರಿಟಿಷ್ ಅಧಿಕಾರಿಯು ರಾಜರ ಕಾಲದಲ್ಲೆ ನೇಮಕಗೊಂಡಿದ್ದು, ಈ ಸಮಯದಲ್ಲೂ ಮುಂದುವರಿದರು. ಜೂನ್ ೧೮೩೨ರಲ್ಲಿ ಅಧಿಕಗೊಂಡ ಅಧಿಕಾರಗಳೊಂದಿಗೆ ಪ್ರಬಲಗೊಂಡ ಕಮೀಷನರ್‌ರವರು ಮದರಾಸ್ ಸರ್ಕಾರಕ್ಕೆ ಬದಲು ಭಾರತ ಸರ್ಕಾರಕ್ಕೆ ಹೊಣೆಗಾರರಾಗಿ ಉಳಿದುಕೊಂಡು ಮುಂದುವರೆಯಬೇಕಾಯಿತು. ಲೂಶಿಂಗ್ಟನ್ ಕಿರಿಯ ಕಮಿಷನರ್ ಎಂದು ೧೮೩೧ರಲ್ಲಿ ಮತ್ತು ಬ್ರಿಗ್ಸ್ ಹಿರಿಯ

ಕಮಿಷನರ್ ಎಂದು ೧೮೩೧ರ ಡಿಸೆಂಬರ್‌ನಲ್ಲಿ ಅಧಿಕಾರ ವಹಿಸಿಕೊಂಡರು. ಲೂಶಿಂಗ್‌ಟನ್‌ಗೆ ಬದಲಾಗಿ ಡ್ರೂರಿ ಎಂಬುವವರನ್ನು ಕಿರಿಯ ಕಮೀಷನರ್ ಆಗಿ ನೇಮಿಸಲಾಯಿತು. ಮದರಾಸ್ ರಾಜ್ಯಪಾಲರಿಗೂ ಬ್ರಿಗ್ಸ್‌ಗೂ ಭಿನ್ನಾಭಿಪ್ರಾಯ ಏರ್ಪಟ್ಟ ಕಾರಣ ಜೂನ್ ೧೮೩೨ರಲ್ಲಿ ಅವರು ರಾಜಿನಾಮೆ ನೀಡಿದರು. ಇದರ ಪರಿಣಾಮವಾಗಿ ಕಮಿಷನರ್ ಮಂಡಳಿಯನ್ನು ರದ್ದುಗೊಳಿಸಿ ಒಬ್ಬನೇ ಕಮಿಷನರ್‌ನನ್ನು ನೇಮಿಸಿ, ಏಕರೀತಿಯ ಆಡಳಿತವನ್ನು ರೂಪಿಸಲಾಯಿತು. ಬ್ರಿಗ್ಸ್ ತರುವಾಯ ನೇಮಕಗೊಂಡ ಮೊರಿಸನ್ ಅವರಿಗೆ ಈ ಪ್ರಥಮ ಕಮಿಷನರ್ ಹುದ್ದೆ ದೊರೆಯುವಂತಾಯಿತು. ಇವರು ಮೈಸೂರು ಪ್ರಾಂತದಲ್ಲಿದ್ದ ಆರು ಫೌಜ್‌ದಾರಿಗಳನ್ನು ನಾಲ್ಕಕ್ಕೆ ಇಳಿಸಿದರು ಮತ್ತು ಪ್ರತಿಯೊಂದು ಫೌಜದಾರಿಗೂ ಯೂರೋಪಿಯನ್ ಪರಿವೀಕ್ಷಕರನ್ನು ನೇಮಿಸಿದರು. ಅವರಿಗೆ ನೀಡಲಾದ ಹೊಸ ಅಧಿಕಾರದ ಪ್ರಕಾರ, ಅಸ್ತಿತ್ವದಲ್ಲಿದ್ದ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಸಂರಕ್ಷಿಸಿ ಆಡಳಿತವನ್ನು ಮುಂದುವರಿಸುವಂತೆ ಸೂಚಿಸಲಾಯಿತು. ಮೊರಿಸನ್ ತರುವಾಯ ೧೮೩೪ರಲ್ಲಿ ಸರ್ ಮಾರ್ಕ್ ಕಬ್ಬನ್ ಅವರನ್ನು ಮೈಸೂರಿನ ಕಮಿಷನರ್ ಸ್ಥಾನಕ್ಕೆ ನೇಮಿಸಲಾಯಿತು.

### ಸರ್ ಮಾರ್ಕ್‌ಕಬ್ಬನ್ (೧೮೩೪–೧೮೬೧)

ಸರ್ ಮಾರ್ಕ್‌ಕಬ್ಬನ್ ಅವರ ಆಡಳಿತಾವಧಿಯಲ್ಲಿ ಮೈಸೂರು ಸಂಸ್ಥಾನದ ಆಡಳಿತವು ಸುವ್ಯವಸ್ಥಿತ ರೀತಿಯಲ್ಲಿ ನಡೆದದ್ದರಿಂದ, ಇದು ವಿಶ್ವವ್ಯಾಪಿ ಜನಪ್ರಿಯತೆಯನ್ನು ಪಡೆಯಿತು ಎಂದು ಸಿ.ಹಯವದನರಾವ್ ಅಭಿಪ್ರಾಯಪಟ್ಟಿರುವರು. ಈ ಸಂಸ್ಥಾನಕ್ಕೆ ಕಮಿಷನರ್ ಆಗುವ ಮೊದಲೇ ಕಬ್ಬನ್ ಅವರಿಗೆ ಮೈಸೂರು ರಾಜ್ಯದ ಪರಿಚಯವಿದ್ದಿತ್ತು. ಏಕೆಂದರೆ ೧೮೩೧ರಲ್ಲಿಯ ನಗರ ಬಂಡಾಯದ ಕಾರಣಗಳನ್ನು ಅನ್ವೇಷಿಸಲು ನೇಮಕಗೊಂಡ ನಾಲ್ಕು ಮಂದಿ ಸದಸ್ಯರ ಸಮಿತಿಯಲ್ಲಿ ಅವರೊಬ್ಬ ಸದಸ್ಯರಾಗಿದ್ದರು. ಇವರ ಕಾಲದಲ್ಲಿ ಹೊಸ ಬೆಂಗಳೂರು ವಿಭಾಗವನ್ನೊಳಗೊಂಡ ಸಂಸ್ಥಾನದಲ್ಲಿ ನಾಲ್ಕು ವಿಭಾಗಗಳಿದ್ದವು. ಮಂಡ್ಯ ಪ್ರಾಂತವು ಅಷ್ಟಗ್ರಾಮ ವಿಭಾಗದಲ್ಲಿತ್ತು. ನಾಲ್ಕು ವಿಭಾಗಗಳಲ್ಲಿ ಒಟ್ಟು ೧೨೦ ತಾಲೂಕುಗಳಲ್ಲಿದ್ದವು ಹಾಗೂ ಪ್ರತೀ ತಾಲೂಕಿನಲ್ಲಿ ಒಬ್ಬ ಅಮಲ್ದಾರನು ಇದ್ದು ತಾಲೂಕಿನ ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ಆತನೇ ಹೊತ್ತಿದ್ದನು. ಅಮಲ್ದಾರರುಗಳು ನಾಲ್ಕು ಫೌಜ್‌ದಾರಿಗಳಲ್ಲಿದ್ದ ಯೂರೋಪಿಯನ್ ಪರಿವೀಕ್ಷಕರಿಗೆ (ಸೂಪರಿಂಟೆಂಡೆಂಟ್ಸ್) ವಿಧೇಯರಾಗಿ ನಡೆದುಕೊಳ್ಳಬೇಕಾದುದು ನಿಯಮವಾಗಿತ್ತು. ಕಮಿಷನರ್ ಅವರ ಸಚಿವಾಲಯದಲ್ಲಿ ಒಂಬತ್ತು ಇಲಾಖೆಗಳಿದ್ದವು. ಕೆಳಮಟ್ಟದ ದಾಖಲೆಗಳನ್ನು ಕೇವಲ ಕನ್ನಡ ಭಾಷೆಯಲ್ಲಿ ಇಡಲಾಗುತ್ತಿತ್ತು. ಕಬ್ಬನ್ ಅವರ ಇನ್ನೊಂದು ಸಾಧನೆಯೆಂದರೆ ಅಸ್ತಿತ್ವದಲ್ಲಿದ್ದ ನ್ಯಾಯಾಂಗ ಪದ್ಧತಿಯನ್ನು ಆಧುನಿಕ ರೀತಿಯಲ್ಲಿ ಪುನರ್ ರಚನೆ ಮಾಡಿದುದೇ ಆಗಿದೆ. ಕೆಲ ಸಮಯದ ನಂತರ ಕಮಿಷನರ್ ಮೇಲಿದ್ದ ಜವಾಬ್ದಾರಿಯನ್ನು ಕಡಿಮೆ ಮಾಡುವ ದೃಷ್ಟಿಯಿಂದ 'ನ್ಯಾಯಾಂಗ ಕಮೀಷನರ್' ಎಂಬ ಪ್ರತ್ಯೇಕ ಅಧಿಕಾರಿಯನ್ನು ನೇಮಿಸಲಾಯಿತು. ಕಬ್ಬನ್ ಅವರ ಇನ್ನೊಂದು ಪ್ರಮುಖ ನಿರ್ಧಾರವೆಂದರೆ ರಾಜಧಾನಿಯನ್ನು ಮೈಸೂರಿನಿಂದ ಬೆಂಗಳೂರಿಗೆ ಸ್ಥಳಾಂತರಿಸಿದ್ದು, ಇದರ ಪರಿಣಾಮವಾಗಿ ರಾಜ್ಯದ ನಾಲ್ಕು ವಿಭಾಗಗಳಿಂದ ಸಂಪರ್ಕ ಕಲ್ಪಿಸಲು ಬೆಂಗಳೂರಿಗೆ ಹೊಸ ರಸ್ತೆಗಳನ್ನು ನಿರ್ಮಿಸಲಾಯಿತು. ಆರಂಭದಲ್ಲಿ ಬೆಂಗಳೂರಿನಲ್ಲಿ ಕೇಂದ್ರ ಸಚಿವಾಲಯವನ್ನು ಟಿಪ್ಪು ಅರಮನೆ (ಬೇಸಿಗೆ ಕಟ್ಟಡ) ಯಲ್ಲಿ ಸ್ಥಾಪಿಸಲಾಯಿತು. ನಂತರ ೧೮೬೭ರಲ್ಲಿ ಅಠಾರ ಕಛೇರಿಯನ್ನು ನಿರ್ಮಿಸಿದ ಮೇಲೆ (ಈಗಿನ ಉನ್ನತ ನ್ಯಾಯಾಲಯ ಕಟ್ಟಡ) ಸಚಿವಾಲಯವನ್ನು ಅಲ್ಲಿಗೆ ಸ್ಥಳಾಂತರಿಸಲಾಯಿತು. ಕಬ್ಬನ್ ಅವರ ಮತ್ತೊಂದು ಪ್ರಮುಖ ಸಾಧನೆಯೆಂದರೆ ೩೦೯ ಸೇತುವೆಗಳನ್ನೊಳಗೊಂಡ ೧೫೯೭ ಮೈಲಿಗಳಷ್ಟು ಉದ್ದದ ಹೊಸ ರಸ್ತೆಗಳ ಕಾಮಗಾರಿಯನ್ನು ಕೈಗೊಂಡು ಉತ್ತಮ ಸಂಪರ್ಕಕ್ಕಾಗಿ ಟೆಲಿಗ್ರಾಫ್ ತಂತಿ ಮಾರ್ಗಗಳನ್ನು ನಿರ್ಮಿಸಿದುದೇ ಆಗಿದೆ. ಇದೇ ಸಮಯದಲ್ಲಿ ಬೆಂಗಳೂರನ್ನು ಹೊಸ ರೈಲು ಮಾರ್ಗದ ಮೂಲಕ ಜೋಲಾರಪೇಟೆಗೆ ೧೮೫೯ರಲ್ಲಿ ಸಂಪರ್ಕಿಸಲಾಯಿತು.

ಮೈಸೂರು ಸಂಸ್ಥಾನದಲ್ಲಿ ನಿರ್ಮಾಣಗೊಂಡ ಮೊದಲ ರೈಲುಮಾರ್ಗ ಇದಾಗಿತ್ತು. ಸಾಮಾನ್ಯ ಜನರಿಗೆ ಕಠಿಣವೆನಿಸಿದ್ದ ಸುಮಾರು ೭೬೯ ಕಿರುಕುಳ ತೆರಿಗೆಗಳನ್ನು ರದ್ದುಗೊಳಿಸಲಾಯಿತು. ಇಂತಹ ಉತ್ತಮ ಆಡಳಿತ ಸುಧಾರಣೆಗಳ ಪರಿಣಾಮವಾಗಿ ೧೮೩೪–೩೫ರಲ್ಲಿ ೬೮ ಲಕ್ಷ ರೂ.ಗಳಷ್ಟಿದ್ದ ಸಂಸ್ಥಾನದ ಒಟ್ಟು ಆದಾಯವು ೧೮೫೫–೫೬ರಲ್ಲಿ ೮೪ ಲಕ್ಷ ರೂ.ಗಳಿಗೆ ಏರಿತು. ಕಂಪನಿ ಸರಕಾರಕ್ಕೆ ಸಲ್ಲಿಸಬೇಕಾಗಿದ್ದ ಪ್ರತೀ ವರ್ಷದ ಕಪ್ಪವನ್ನು ನಿಯಮಿತವಾಗಿ ಸಲ್ಲಿಸಲಾಗುತ್ತಿತ್ತು. ಇವರು ೧೮೫೪ರಲ್ಲಿ ಪಗೋಡಗಳ ರೂಪದ ಹಣಕಾಸು ಮಾಧ್ಯಮವನ್ನು ಬೆಳ್ಳಿ ರೂಪಾಯಿಗಳಿಗೆ ಬದಲಾಯಿಸಿದರು. ಕಬ್ಬನ್ ೧೮೬೧ರಲ್ಲಿ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ ತರುವಾಯ ಲ್ಯೂವಿನ್ ಬೌರಿಂಗ್ ಅವರು ಮೈಸೂರು ಸಂಸ್ಥಾನದ ಕಮೀಷನರ್ ಆಗಿ ನೇಮಕಗೊಂಡರು. ಇವರು ಅಧಿಕಾರಕ್ಕೆ ಬರುವ ಮೊದಲು ಸ್ವಲ್ಪ ಸಮಯ, ಸಿ.ಬಿ.ಸ್ಯಾಂಡರ್ಸ್ ಅವರು ಪ್ರಭಾರ ಕಮಿಷನರ್ ಆಗಿದ್ದರು.

**ಲ್ಯೂವಿನ್ ಬೌರಿಂಗ್ (೧೮೬೧–೧೮೭೦)**

ಬೌರಿಂಗ್ ಅವರ ಅಧಿಕಾರ ಅವಧಿಯಲ್ಲಿ ಮೈಸೂರು ಸಂಸ್ಥಾನವನ್ನು ಆರಂಭದಲ್ಲಿ ಮೂರು ವಿಭಾಗಗಳಾಗಿ ಹಾಗೂ ನಂತರ ಎಂಟು ಜಿಲ್ಲೆಗಳಾಗಿ ವಿಂಗಡಿಸಲಾಯಿತು. ಪ್ರತೀ ವಿಭಾಗಕ್ಕೂ ಒಬ್ಬೊಬ್ಬ ಅಧೀಕ್ಷಕ (Superintendent) ನನ್ನೂ ಮತ್ತು ಪ್ರತಿಯೊಂದು ಜಿಲ್ಲೆಗೂ ಒಬ್ಬೊಬ್ಬ ಉಪ–ಅಧೀಕ್ಷಕರನ್ನೂ ನೇಮಿಸಲಾಯಿತು. ಭೂಸರ್ವೇಕ್ಷಣ ಮತ್ತು ಕಂದಾಯ ನಿಗದಿ (Survey and Settlement) ವ್ಯವಸ್ಥೆಯನ್ನು ಪುನರ್ ವ್ಯವಸ್ಥೆಗೊಳಿಸಲಾಯಿತು. ಹೊಸ ಭೂಮಿಯ ಮೋಜಣಿ ಮತ್ತು ಅವುಗಳಿಗೆ ಕಂದಾಯ ವಿಧಿಸುವಲ್ಲಿ ೧೮೬೨ ರಿಂದ ಬೌರಿಂಗ್ ಭಾರತದ ಇತರೆ ಬ್ರಿಟಿಷ್ ರಾಜ್ಯಗಳಲ್ಲಿ ಜಾರಿಯಲ್ಲಿದ್ದಂತೆ ಇದ್ದ ವ್ಯವಸ್ಥೆಯನ್ನು ಮೈಸೂರು ಸಂಸ್ಥಾನದ ಪ್ರದೇಶಗಳಲ್ಲೂ ಜಾರಿಗೆ ತಂದರು. ನ್ಯಾಯಾಂಗ ಅಧಿಕಾರವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸಲು ಅವರು ಪ್ರಥಮ ಬಾರಿಗೆ ಕ್ರಮ ಕೈಗೊಂಡರು. ಅಧಿಕಾರಗಳನ್ನು ಬೇರ್ಪಡಿಸಲು ಅವರು ಆರಂಭದಲ್ಲಿ ಕೈಗೊಂಡ ನೀತಿಯನ್ನೇ ಅವರ ನಂತರ ಬಂದವರು ಮುಂದುವರಿಸಿದರು. ಬೌರಿಂಗ್ ಭಾರತೀಯ ದಂಡಸಂಹಿತೆಯನ್ನೂ, ಅಪರಾಧ ಪ್ರಕ್ರಿಯೆಯ ಸಂಹಿತೆಯನ್ನೂ ಮೈಸೂರು ಸಂಸ್ಥಾನದಲ್ಲಿ ಜಾರಿಗೊಳಿಸಿದರು. ಪ್ರಥಮ ಬಾರಿಗೆ ನೋಂದಣಿ ಕಾನೂನನ್ನು ೧೮೬೪ರಲ್ಲಿ ಕೇಂದ್ರ ಸರ್ಕಾರದೊಂದಿಗೆ ಸಮ್ಮತಿ ಸ್ವೀಕರಿಸಿ ಎಲ್ಲಾ ಭೂಮಿ ಹಾಗೂ ಆಸ್ತಿ ವ್ಯವಹಾರಗಳಿಗೆ ನೋಂದಣಿಯನ್ನು ಕಡ್ಡಾಯಗೊಳಿಸಿದರು. ಅಂದಿನ ಮದರಾಸ್ ರಾಜ್ಯವು ಅನುಸರಿಸುತ್ತಿದ್ದ (೧೮೬೪) ಪದ್ಧತಿಯ ಆಧಾರದ ಮೇಲೆ ಆರಕ್ಷಕ (ಪೋಲಿಸ್) ಖಾತೆಯನ್ನು ಸಂಘಟಿಸಲಾಯಿತು. ಇದೇ ಸಮಯದಲ್ಲಿ ಬೆಂಗಳೂರು ಮತ್ತು ಮೈಸೂರುಗಳಿಗೆ ಸ್ವಯಂ ಸ್ಥಾನಿಕ ಸ್ವರಾಜ್ಯವನ್ನು ನೀಡಿ ಅಲ್ಲಿ ನಗರಸಭೆಗಳನ್ನು ಸ್ಥಾಪಿಸಲಾಯಿತು. ಅಲ್ಲದೆ ಈ ಸೌಕರ್ಯಗಳನ್ನು ಎಲ್ಲಾ ಜಿಲ್ಲಾ ಕೇಂದ್ರಗಳಿಗೂ ೧೮೬೫ರಲ್ಲಿ ವಿಸ್ತರಿಸಲಾಯಿತು. ಬೆಂಗಳೂರಿನಲ್ಲಿ ಕೇಂದ್ರ ಸೆರೆಮನೆಯನ್ನು ೧೮೬೩ರಲ್ಲಿ ಉದ್ಘಾಟಿಸಲಾಯಿತು. ದೇವಾಲಯಗಳನ್ನು ಹಾಗೂ ಧಾರ್ಮಿಕ ದತ್ತಿಗಳನ್ನು ನೋಡಿಕೊಳ್ಳಲು ಮುಜರಾಯಿ ಇಲಾಖೆಯನ್ನೂ ಆರಂಭಿಸಲಾಯಿತು. ಇವರ ಆಡಳಿತಾವಧಿಯಲ್ಲಿ ೧೮೭೧ರಲ್ಲಿ ಮೊಟ್ಟಮೊದಲ ಬಾರಿಗೆ ಖಾನೇಶುಮಾರಿ ಅಥವಾ ಜನಗಣತಿ (Census) ಯನ್ನು ನಡೆಸಲಾಗಿ ಮೈಸೂರು ರಾಜ್ಯದ ಜನಸಂಖ್ಯೆಯು ಸು.೫೦.೦೫ ಲಕ್ಷಗಳಿದ್ದುದು ಕಂಡುಬಂತು. ಬೌರಿಂಗ್ ೧೮೭೦ರಲ್ಲಿ ರಾಜಿನಾಮೆ ಕೊಟ್ಟ ನಂತರ, ಅವರ ಸ್ಥಾನದಲ್ಲಿ ೧೮೭೫ರವರೆಗೆ ರಿಚರ್ಡ್ ಮೀಡ್, ನಂತರ ೧೮೭೭ರವರೆಗೆ ಸ್ಯಾಂಡರ್ಸ್ ಹಾಗೂ ಅವರ ನಂತರ ೧೮೭೮ರವರೆಗೆ ಕ್ರಮವಾಗಿ ಕಮಿಷನರ್‌ಗಳಾಗಿ ನೇಮಕಗೊಂಡಿದ್ದರು. ಮೈಸೂರು ಸಂಸ್ಥಾನದಲ್ಲಿ ಆಡಳಿತ ನಡೆಸಿದ ಕಮಿಷನರ್‌ಗಳ ಪೈಕಿ ತಮ್ಮ ಉದ್ಯೋಗಶೀಲ ದಕ್ಷತೆಯಿಂದಲೂ ಪರಿಣಾಮಕಾರಿ ಕಾರ್ಯಗಳಿಂದಲೂ ಅಚ್ಚಳಿಯದ ಪರಿಣಾಮ ಬೀರಿದವರೆಂದರೆ ಮಾರ್ಕ್‌ಕಬ್ಬನ್ ಮತ್ತು ಲ್ಯೂವಿನ್ ಬೌರಿಂಗ್ ಮಾತ್ರ. ಅವರ ಅಧಿಕಾರಾವಧಿಯಲ್ಲಿ ಮೈಸೂರಿನ ಆಡಳಿತ ವ್ಯವಸ್ಥೆಯು ಆಧುನೀಕರಣಗೊಂಡಿತು.

ಕಾನೂನು ಮತ್ತು ಸುವ್ಯವಸ್ಥೆಯನ್ನು ಹೆಚ್ಚು ಬಲಯುತವಾಗಿ ಜಾರಿಗೊಳಿಸಲು ಆರಂಭವಾಯಿತು. ಕಂದಾಯ ಪದ್ಧತಿಯು ಸಮಂಜಸವೂ ಕೃಷಿಕರಿಗೆ ತೃಪ್ತಿ ತರುವಂತೆ ಆಯಿತಲ್ಲದೇ ಅದರ ವಸೂಲಿ ಪದ್ಧತಿಯೂ ನಿಯಮಬದ್ಧವಾಯಿತು. ರಸ್ತೆ, ರೈಲು, ಅಂಚೆ-ತಂತಿ ವ್ಯವಸ್ಥೆಗಳು ಪ್ರಥಮ ಬಾರಿಗೆ ಆಧುನಿಕ ಪದ್ಧತಿಗಳಾಗಿ ಜಾರಿಗೆ ಬಂದವು. ಶಿಕ್ಷಣ ವ್ಯವಸ್ಥೆಯು ಉತ್ತಮಗೊಂಡು ಸಂಸ್ಥಾನವು ಭರದಿಂದ ಆಧುನಿಕತೆಯತ್ತ ಮುನ್ನಡೆಯುವಂತಾಯಿತು. ಇಲ್ಲದಿದ್ದಲ್ಲಿ ಆಧುನೀಕರಣ ಕ್ರಿಯೆಯು ವಿಳಂಬವಾಗಬಹುದಿತ್ತು ಎಂಬ ಅಭಿಪ್ರಾಯವಿದೆ.

### ಮೈಸೂರು ಸಂಸ್ಥಾನಕ್ಕೆ ಮರು ಅಧಿಕಾರ ಮತ್ತು ದಿವಾನರ ಆಡಳಿತ

ಮುಮ್ಮಡಿ ಕೃಷ್ಣರಾಜ ಒಡೆಯರು ತಮಗೆ ಪುನಃ ಅಧಿಕಾರವನ್ನು ಮರಳಿ ನೀಡಬೇಕೆಂದು ಹಲವಾರು ಕೋರಿಕೆಗಳನ್ನು ಕಂಪನಿ ಸರ್ಕಾರದ ಭಾರತದ ಪ್ರಮುಖರಿಗೆ ನೀಡಿದ್ದಲ್ಲದೇ ತಮ್ಮ ಖಾಸಗಿ ಶಸ್ತ್ರಚಿಕಿತ್ಸಾ ತಜ್ಞರಾಗಿದ್ದ ಡಾ.ಕ್ಯಾಂಪ್‌ಬೆಲ್ ಅವರು ಇಂಗ್ಲೆಂಡ್‌ಗೆ ಹೋಗಿದ್ದಾಗ ಅವರ ಮುಖೇನ ಬ್ರಿಟನ್ನಿನ ರಾಣಿಗೂ ಪ್ರಬಲವಾದ ಕೋರಿಕಾ ಪತ್ರವನ್ನು ಕಳುಹಿಸಿದ್ದರು. ಮುಮ್ಮಡಿಯವರು ತಮ್ಮ ಪರವಾಗಿ ಪುನಃ ಸಿಂಹಾಸನಕ್ಕೆ ತರುವಂತೆ ಲಂಡನ್‌ನಲ್ಲಿ ಹೊಸದಾಗಿ ಶಿಫಾರಸ್ಸು ಮಾಡುವವರ ತಂಡವೊಂದನ್ನು ಹುಟ್ಟು ಹಾಕಿದರು. ಲಂಡನ್ನಿನ ಮೇಜರ್ ಇವಾನ್ಸ್ ಬೆಲ್ ಎಂಬುವವರು ಕೃಷ್ಣರಾಜ ಒಡೆಯರ್ ಅವರಿಗೆ ಬೆಂಬಲವನ್ನು ವ್ಯಕ್ತಪಡಿಸುವ 'Mysore Reversion, An exceptional case' ಎಂಬ ಪುಸ್ತಕವೊಂದನ್ನು ಪ್ರಕಟಿಸಿದರು. ಮಹಾರಾಜರು ತಮಗೆ ಮಕ್ಕಳಿಲ್ಲದ ಕಾರಣ ಹತ್ತನೇ ಚಾಮರಾಜೇಂದ್ರ ಒಡೆಯರ್ ಅವರನ್ನು ದತ್ತು ಪಡೆಯಲು ಅನುಮತಿ ನೀಡಬೇಕೆಂದು ೧೮೬೫ರಲ್ಲಿ ಬ್ರಿಟೀಷ್ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದರು. ಇದರ ಪ್ರಕಾರ ಎರಡೂವರೆ ವರ್ಷದ ಮಗುವಾಗಿದ್ದ ಚಾಮರಾಜೇಂದ್ರನನ್ನು ೧೮೬೫ರಲ್ಲಿ ದತ್ತು ಪುತ್ರನಾಗಿ ಸ್ವೀಕರಿಸಲು ಬ್ರಿಟೀಷ್ ಸರ್ಕಾರವು ಅನುಮತಿ ನೀಡಿತು. ರಾಜರಿಗೆ ಪುನಃ ಅಧಿಕಾರ ನೀಡಲು ಒತ್ತಾಯಿಸಲು ಮೈಸೂರಿನಲ್ಲಿ ೭,೦೦೦ ಅಧಿಕ ನಾಗರೀಕರು ಸೇರಿ ಆಗ ಸೇವೆ ಸಲ್ಲಿಸುತ್ತಿದ್ದ ಪಾರ್ಸಿ ರೆಸಿಡೆಂಟ್ ಒಬ್ಬರ ಶಿಫಾರಸ್ಸಿನೊಂದಿಗೆ ಇಂಗ್ಲೆಂಡಿನ ರಾಣಿಗೆ ಮನವಿ ಸಲ್ಲಿಸಿದರು. ಇದಲ್ಲದೇ ಜುಲೈ ೧೮೬೬ರಲ್ಲಿ ಮೇಜರ್ ರಾಲಿನ್‌ಸನ್ ಅವರ ಮುಖಂಡತ್ವದಲ್ಲಿ ಭಾರತೀಯ ಕಾರ್ಯದರ್ಶಿ (ಲಂಡನ್ನಿನ) ಯವರನ್ನು ಭೇಟಿ ಮಾಡಿ ಮುಮ್ಮಡಿ ಅವರಿಗೆ ಅಧಿಕಾರವನ್ನು ಹಿಂದಿರುಗಿಸಬೇಕೆಂದು ಒತ್ತಾಯಿಸಿದರು. ಇಂಗ್ಲೆಂಡಿನ ವೃತ್ತಪತ್ರಿಕೆಗಳಲ್ಲಿ (Morning Star, Morning Standard, Daily News) ೧೮೬೬ ಜುಲೈ ಮಾಹೆಯಲ್ಲಿ ಮಹಾರಾಜರ ಕೋರಿಕೆಯನ್ನು ಪ್ರಕಟಿಸಲಾಗಿತ್ತು. ಲಂಡನ್ನಿನ ಸಾಮಾನ್ಯರ ಪ್ರತಿನಿಧಿ ಸಭೆಯಲ್ಲೂ (House of Commons) ಮಹಾರಾಜರಿಗೆ ಅಧಿಕಾರವನ್ನು ಮರಳಿಸುವ ಬಗ್ಗೆ ದೀರ್ಘ ಚರ್ಚೆ ನಡೆದು ದತ್ತು ಪುತ್ರ ಚಾಮರಾಜೇಂದ್ರರನ್ನು ಅಧಿಕಾರಕ್ಕೆ ತರಬಹುದೆಂಬ ಪ್ರಸ್ತಾಪಕ್ಕೆ ಒಪ್ಪಿಗೆ ನೀಡಿತು. (೨೨-೦೨-೧೮೬೭) ಮುಮ್ಮಡಿಯವರು ೧೮೬೮ರಲ್ಲಿ ನಿಧನರಾದರು ಮತ್ತು ಅವರ ದತ್ತು ಪುತ್ರ ಹತ್ತನೇ ಚಾಮರಾಜೇಂದ್ರ ಒಡೆಯರ್ ಅವರನ್ನು ಮಾರ್ಚಿ ೧೮೮೧ರಲ್ಲಿ ಸಿಂಹಾಸನದಲ್ಲಿ ಪಟ್ಟಾಭಿಷೇಕ ಮಾಡಿಸುವ ಮೂಲಕ, (Rendition) ಬ್ರಿಟೀಷ್ ಸರ್ಕಾರವು ಪುನ: ಆಡಳಿತವನ್ನು ಮೈಸೂರು ಸಂಸ್ಥಾನದ ಒಡೆಯರ್ ವಂಶಕ್ಕೆ ಹಿಂದಿರುಗಿಸಿತು.

ಮೈಸೂರು ಸಂಸ್ಥಾನಕ್ಕೆ ಆಡಳಿತವನ್ನು ಹಿಂದಿರುಗಿಸಿದ ಮೇಲೆ ಹಲವಾರು ಆಡಳಿತಾತ್ಮಕ ಬದಲಾವಣೆಗಳನ್ನು ಜಾರಿಗೊಳಿಸಲಾಯಿತು. ಮೈಸೂರು ಸಂಸ್ಥಾನದ ಆಡಳಿತ ವ್ಯವಹಾರ ನೋಡಿಕೊಳ್ಳುತ್ತಿದ್ದ ಕಮಿಷನರ್ ಪದವಿಯನ್ನು ಅನೂರ್ಜಿತಗೊಳಿಸಲಾಯಿತು. ಮೈಸೂರು ಸಂಸ್ಥಾನದಲ್ಲಿದ್ದ ಬ್ರಿಟೀಷ್ ರೆಸಿಡೆಂಟ್ ಅವರನ್ನು ಮುಂದುವರಿಸಲಾಯಿತು. ಮಹಾರಾಜರಿಗೆ ಆಡಳಿತ ಸಹಾಯವನ್ನು ನೀಡಲು ಹಿಂದೆ ಇದ್ದ ದಿವಾನರ ಹುದ್ದೆಯನ್ನು ಹಲವು ಬದಲಾವಣೆಗಳೊಂದಿಗೆ ಮುಂದುವರಿಸಲಾಯಿತು. ದಿವಾನರ ಆಡಳಿತದಲ್ಲಿ ನೆರವಾಗಲು ಇಬ್ಬರು

ಸಲಹೆಗಾರರಿದ್ದ ಸಮಿತಿಯನ್ನೂ ನೇಮಿಸಲಾಯಿತು. ಮೈಸೂರು ಸರ್ಕಾರದ ಕಂದಾಯ ಇಲಾಖೆಯ ಮುಖ್ಯ ಕಾರ್ಯದರ್ಶಿಗಳಾಗಿದ್ದ ಸಿ.ರಂಗಾಚಾರ್ಲು ಅವರನ್ನು ಪ್ರಥಮ ದಿವಾನರಾಗಿ ನೇಮಕ ಮಾಡಲಾಯಿತು. ಇವರು, ಅನೇಕ ಆಡಳಿತಾತ್ಮಕ ಬದಲಾವಣೆಗಳನ್ನು ಜಾರಿಗೆ ತರುವಲ್ಲಿ ಯಶಸ್ವಿಯಾದರು. ಮೈಸೂರು ಪ್ರಜಾಪ್ರತಿನಿಧಿ ಸಭೆಯು ೧೮೮೧ರ ದಸರಾ ಸಮಯದಲ್ಲಿ ಅಸ್ತಿತ್ವಕ್ಕೆ ಬರಲು ದಿವಾನ್ ರಂಗಚಾರ್ಲು ಅವರು ಮೂಲ ಕಾರಣಕರ್ತರಾದರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಾರಂಭದಲ್ಲಿ ೧೪೪ ಸದಸ್ಯರುಗಳಿದ್ದರು. ಇದೊಂದು ಸ್ವಯಂ ಸಂವಿಧಾಯಕ ಸಂಸ್ಥೆಯಾಗಿಲ್ಲದಿದ್ದರೂ ಸರ್ಕಾರದ ಖರ್ಚುವೆಚ್ಚ ಹಣಕಾಸು ನೀತಿಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿತ್ತು. ರಂಗಾಚಾರ್ಲು ಅವರು ದಿವಾನರಾಗಿ ಅಧಿಕಾರ ವಹಿಸಿಕೊಂಡಾಗ ಮೈಸೂರಿನ ಆರ್ಥಿಕ ಪರಿಸ್ಥಿತಿಯು ಅಷ್ಟೇನೂ ಉತ್ತಮವಾಗಿರಲಿಲ್ಲ. ೧೮೭೬–೭೭ರಲ್ಲಿ ರಾಜ್ಯವು ಹಿಂದೆಂದೂ ಎದುರಿಸದಿದ್ದ ಭೀಕರ ಬರಗಾಲ ಸಂಭವಿಸಿ, ಇದನ್ನು ಧಾತು ಈಶ್ವರ ಸಂವತ್ಸರದ ಕ್ಷಾಮವೆಂದು ಕರೆಯಲಾಗಿದ್ದು, ರಾಜ್ಯದ ಬಹುತೇಕ ಪ್ರದೇಶಗಳು ಇದಕ್ಕೆ ಬಲಿಯಾಗಿದ್ದವು. ಕೃಷಿಕರು ಅನುಭವಿಸಿದ ತೊಂದರೆಯಿಂದಾಗಿ ರಾಜ್ಯದ ಬೊಕ್ಕಸಕ್ಕೆ ಸಂದಾಯವಾಗಬೇಕಾಗಿದ್ದ ಕಂದಾಯದ ಹಣವೆಲ್ಲಾ ಬಾಕಿಯಾಗಿ ಉಳಿದಿತ್ತು. ರಾಜ್ಯದಾದ್ಯಂತ ಹತ್ತು ಲಕ್ಷಕ್ಕಿಂತಲೂ ಹೆಚ್ಚು ಜನರು ಮಡಿದು ಹಾಗೂ ಇಷ್ಟೇ ಸಂಖ್ಯೆಯ ಜಾನುವಾರುಗಳು ಹಸಿವೆಯಿಂದ ಹಾಗೂ ಬೇನೆಯಿಂದ ಬಳಲಿ ನಾಶವಾಗಿದ್ದವು. ಭೀಕರ ಬರಗಾಲದ ಸಾಂಕ್ರಾಮಿಕ ರೋಗಗಳು ಆರಂಭವಾದವು. ಸಂಸ್ಥಾನದ ಖಜಾನೆಯಲ್ಲಿ ಕಾದಿರಿಸಿದ್ದ ಹಣವೆಲ್ಲವನ್ನೂ ಪರಿಹಾರ ಕಾರ್ಯಕ್ಕಾಗಿ ವೆಚ್ಚ ಮಾಡಲಾಯಿತು. ದಿವಾನರು ಆಡಳಿತದಲ್ಲಿ ಬಹಳಷ್ಟು ಮಿತವ್ಯಯವನ್ನು ತಂದರು. ಕೆಲಸವಿಲ್ಲದ ಬೇಸಾಯಗಾರರಿಗೆ ಕೆಲಸ ಕೊಡಬಹುದಾದ ಸಾರ್ವಜನಿಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಯಿತು. ಬೆಂಗಳೂರು–ಮೈಸೂರು ರೈಲು ಮಾರ್ಗವು ಇದರ ಪರಿಣಾಮವಾಗಿ ೧೮೮೨ರಲ್ಲಿ ಪೂರ್ಣಗೊಂಡು, ಬೆಂಗಳೂರು–ತಿಪಟೂರು ರೈಲುಮಾರ್ಗದ ಕಾರ್ಯವನ್ನು ಆರಂಭಿಸಲಾಯಿತು. ಭ್ರಷ್ಟಾಚಾರವು ಇಲ್ಲದಂತಾಯಿತು. ರಂಗಾಚಾರ್ಲು ಅವರು ಮೂಲತಃ ತಮಿಳುನಾಡಿನವರಾಗಿದ್ದರೂ ಕನ್ನಡ ಭಾಷೆಯನ್ನು ಕಲಿತರು ಮತ್ತು ಈ ಭಾಷೆಯನ್ನು ಹೆಚ್ಚು ಪ್ರೀತಿಸಿದ್ದರು. ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆ (Mysore Representative Assembly) ಯನ್ನು ಸ್ಥಾಪಿಸಿದ್ದು, ಇವರ ಒಂದು ಪ್ರಮುಖ ಸಾಧನೆಯೆಂದು ಪರಿಗಣಿಸಲಾಗಿದೆ. ಇವರ ಪ್ರತಿಭೆಯನ್ನು ಗುರುತಿಸಿದ ಬ್ರಿಟೀಷ್ ಅಧಿಕಾರಿಯೊಬ್ಬರು ರಂಗಾಚಾರ್ಲು ವಿದ್ಯುಜ್ಜನಕ (Dynamo) ದಂತೆ ಬುದ್ಧಿಶಕ್ತಿ ಪಡೆದಿದ್ದ ವ್ಯಕ್ತಿ ಎಂದು ವರ್ಣಿಸಿರುವರು. ರಂಗಚಾರ್ಲುರವರು ೧೮೮೩ರಲ್ಲಿ ನಿಧನರಾದ ಮೇಲೆ ಸರ್.ಕೆ.ಶೇಷಾದ್ರಿ ಐಯ್ಯರ್ ಅವರು ದಿವಾನರಾಗಿ ನೇಮಕಗೊಂಡರು.

### ಸರ್.ಕೆ.ಶೇಷಾದ್ರಿ ಐಯ್ಯರ್ (೧೮೮೩–೧೯೦೧)

ಸರ್.ಕೆ.ಶೇಷಾದ್ರಿ ಐಯ್ಯರ್ ಅವರು ಆಡಳಿತದ ವಿವಿಧ ಆಯಾಮಗಳನ್ನು ಕಂಡಿದ್ದ ದಕ್ಷ ಆಡಳಿತಗಾರರಾಗಿದ್ದರು. ಸಂಸ್ಥಾನದ ಆರ್ಥಿಕ ಪ್ರಗತಿಯ ದೃಷ್ಟಿಯಿಂದ ಅನೇಕ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲು ತಾವೇ ಮುಂದಾದರು. ಬ್ರಿಟೀಷ್ ಸರ್ಕಾರಕ್ಕೆ ಕೊಡಬೇಕಾದ ಪೊಗದಿಯನ್ನು (Subsidy) ೧೮೯೬ರವರೆಗೆ ರದ್ದುಪಡಿಸಲು ಕಂಪನಿ ಸರಕಾರವನ್ನು ಇವರು ಪ್ರಥಮ ಬಾರಿಗೆ ಒತ್ತಾಯಿಸಿದರು. ಕೋಲಾರ ಜಿಲ್ಲೆಯ ಚಿನ್ನದಗಣಿ ಕಾರ್ಯವು (೧೮೮೬) ಆರಂಭವಾದುದು ಇವರ ಕಾಲದಲ್ಲಿಯೇ. ಕೃಷಿಯ ಜೊತೆಗೆ ತೋಟಗಾರಿಕೆಗೆ ವಿಶೇಷ ಒತ್ತು ನೀಡಿದ ಕಾರಣ ಕಾಫಿತೋಟಗಳ ಕ್ಷೇತ್ರವೂ ವಿಸ್ತೃತಗೊಂಡವು. ಬೆಂಗಳೂರಿನಿಂದ ಹರಿಹರದವರೆಗಿನ (೧೮೮೯) ರೈಲು ಮಾರ್ಗವು ಪೂರ್ಣಗೊಂಡಿತು. ಪೂರ್ವದಲ್ಲಿ ಹಿಂದೂಪುರದವರೆಗೂ ಒಂದು ರೈಲುಮಾರ್ಗವು ರಚನೆಗೊಂಡಿದ್ದು, ಈಗ ಇದನ್ನು ಕೋಲಾರದ ಚಿನ್ನದ ಗಣಿಯವರೆಗೂ (KGF) ವಿಸ್ತರಿಸಲಾಯಿತು. ಇದೇ ರೀತಿ ಮೈಸೂರಿನಿಂದ

ನಂಜನಗೂಡು ಹಾಗೂ ಬೀರೂರು–ಶಿವಮೊಗ್ಗ ರೈಲು ಮಾರ್ಗವು ಪ್ರಾರಂಭವಾಯಿತು. (೧೮೮೯). ಇವರ ಆಡಳಿತದಲ್ಲೂ ಮೈಸೂರು ಪ್ರಜಾಪ್ರತಿನಿಧಿ ಸಭೆಯು ಮತ್ತಷ್ಟು ಪ್ರಗತಿ ಸಾಧಿಸಿತು. ಇದೇ ಸಮಯದಲ್ಲಿ, ಅಂದರೆ ೧೮೮೭ರಿಂದ ಆ ಸಭೆಯು ಸದಸ್ಯರ ಹೆಸರುಗಳು ಪ್ರಥಮ ಬಾರಿಗೆ ರಾಜ್ಯಪತ್ರದಲ್ಲಿ ಪ್ರಕಟವಾಗತೊಡಗಿತು. ಇವರು ೧೮೮೬ರಲ್ಲಿ ತಾಲೂಕು ಮಂಡಳಿಗಳನ್ನು ಸ್ಥಾಪಿಸಿದರು. ರಾಜ್ಯದಲ್ಲಿ ಪ್ರಥಮ ಬಾರಿಗೆ (೧೮೮೧) ಮೈಸೂರು ನಾಗರೀಕ ಸೇವಾ (Mysore Civil Service) ಪರೀಕ್ಷೆಗಳನ್ನು ಪ್ರಾರಂಭಿಸಲಾಯಿತು. ಇಲ್ಲಿ ಜಾರಿಯಲ್ಲಿದ್ದ ಹಳೆಯ ಅಂಚೆ ವ್ಯವಸ್ಥೆಯನ್ನು ಬ್ರಿಟೀಷ್ ಅಂಚೆ ವ್ಯವಸ್ಥೆಯ ಜೊತೆಗೆ ಸಮ್ಮಿಲನಗೊಳಿಸಲಾಯಿತು. ಮೈಸೂರು ದಸರಾ ಉತ್ಸವದಲ್ಲಿ ಕೃಷಿ ಹಾಗೂ ಔದ್ಯೋಗಿಕ ಪ್ರದರ್ಶನವನ್ನು ಶೇಷಾದ್ರಿ ಐಯ್ಯರ್ ಅವರು ಪ್ರಥಮ ಬಾರಿಗೆ ಆರಂಭಿಸಿದ್ದು, ಅದು ಇಂದಿಗೂ ಜಾರಿಯಲ್ಲಿದೆ. ರಾಜ್ಯದಲ್ಲಿ ೧೮೯೪ರಲ್ಲಿ ಭೂಗರ್ಭಶಾಸ್ತ್ರ ಇಲಾಖೆಯನ್ನೂ ಮತ್ತು ಕೃಷಿ ಇಲಾಖೆಯನ್ನು ೧೮೯೮ರಲ್ಲಿ ಸ್ಥಾಪಿಸಿದರು. ಇವರು ನೀರಾವರಿಗೆ ಕೊಟ್ಟ ಗಮನ ಬಹಳ ಪ್ರಮುಖವಾಗಿತ್ತು. ಸಂಸ್ಥಾನದಲ್ಲಿ ವಾಣಿವಿಲಾಸ ಜಲಸಂಗ್ರಹವನ್ನು ನಿರ್ಮಿಸಿದ ಮಾರಿಕಣಿವೆ ಯೋಜನೆ ಇವರು ಕೈಗೊಂಡ ಬೃಹತ್ ನೀರಾವರಿ ಯೋಜನೆಯಾಗಿತ್ತು. ಮಂಡ್ಯ ಜಿಲ್ಲೆಯಲ್ಲಿ ೧೮೯೯–೧೯೦೦ರಲ್ಲಿ ಅವರು ಕಾರ್ಯರೂಪಕ್ಕೆ ತಂದ ಶಿವಸಮುದ್ರ ಜಲವಿದ್ಯುತ್ ಯೋಜನೆಯಿಂದ ಕೋಲಾರ ಚಿನ್ನದಗಣಿ ಘಟಕಕ್ಕೆ ೧೯೦೨ರಲ್ಲಿ ಮತ್ತು ಬೆಂಗಳೂರಿಗೆ ೧೯೦೫ರಲ್ಲಿ ವಿದ್ಯುತ್‍ಚ್ಛಕ್ತಿಯನ್ನು ಪೂರೈಸಲಾಯಿತು. ಭಾರತದಲ್ಲೇ ವಿದ್ಯುತ್‍ಚ್ಛಕ್ತಿ ಪಡೆದ ಪ್ರಥಮ ನಗರ ಎಂಬ ಹೆಗ್ಗಳಿಕೆಯು ಬೆಂಗಳೂರು ನಗರಕ್ಕೆ ಪ್ರಾಪ್ತವಾಯಿತು. ಬೆಂಗಳೂರಿಗೆ ನಂತರ ಕುಡಿಯುವ ನೀರು ಪೂರೈಸಿದ ಹೆಸರಘಟ್ಟ ಜಲಾಶಯವನ್ನು ಶೇಷಾದ್ರಿ ಐಯ್ಯರ್ ಅವರು ನಿರ್ಮಿಸಿದರು. ಇವರು ಶಿಕ್ಷಣ ಮತ್ತು ವಿದ್ಯಾರ್ಜನೆಗೆ ಹೆಚ್ಚಿನ ಪ್ರೋತ್ಸಾಹವನ್ನು ಒದಗಿಸಿದರು. ಮೈಸೂರಿನ ಮಹಿಳಾ ಶಾಲೆಯನ್ನು ೧೯೦೧ರಲ್ಲಿ ಮಹಾರಾಣಿ ಕಾಲೇಜೆಂದು ಉನ್ನತೀಕರಿಸಲಾಯಿತು. ಬಿ.ಎಲ್.ರೈಸ್ ಅವರು ಮುಖ್ಯಸ್ಥರಾಗಿದ್ದ ಮೈಸೂರು, ಪುರಾತತ್ವ ಇಲಾಖೆಯನ್ನು ೧೮೯೦ರಲ್ಲಿ ರಚಿಸಲಾಯಿತು. ಮೈಸೂರು ಓರಿಯಂಟಲ್ ಹಸ್ತಪ್ರತಿ ಗ್ರಂಥಭಂಡಾರವನ್ನು ಇವರ ಕಾಲದಲ್ಲೆ ತೆರೆಯಲಾಯಿತು. ಇಂದು ಈ ಗ್ರಂಥಾಲಯದಲ್ಲಿ ೭೦,೦೦೦ಕ್ಕೂ ಮೀರಿದ ಹಸ್ತಪ್ರತಿ ದಾಖಲೆಗಳಿದ್ದು, ಇಲ್ಲಿಯ ಕ್ಯೂರೇಟರ್ ಆಗಿದ್ದ ಡಾ.ಶಾಮಾಶಾಸ್ತ್ರಿಯವರು ಕೌಟಲ್ಯನ ಅರ್ಥಶಾಸ್ತ್ರವನ್ನು ಇಲ್ಲಿಯೇ ಸಂಶೋಧಿಸಿ ಪ್ರಥಮ ಬಾರಿಗೆ ಪ್ರಕಟಿಸಿದ ಹೆಗ್ಗಳಿಕೆ ಈ ಸಂಸ್ಥೆಗೆ ಸಲ್ಲುತ್ತದೆ. ಕೆ.ಶೇಷಾದ್ರಿ ಐಯ್ಯರ್ ಅವರ ಮತ್ತೊಂದು ಪ್ರಮುಖ ಸಾಧನೆ ಎಂದರೆ ಜಾತೀಯ ಹಿಂದೂಗಳ ಶಾಲೆಯಲ್ಲಿ ಸಮನಾದ ಅವಕಾಶಗಳಿದ್ದರೂ ಪ್ರವೇಶದ ಸಂಕೋಚಕ್ಕೆ ಒಳಗಾಗಿದ್ದ ಪರಿಜನರಿಗಾಗಿ ಪ್ರತ್ಯೇಕ ಶಾಲೆಗಳನ್ನು ರಾಜ್ಯದಲ್ಲಿ ತೆರೆಯಲು ನಿರ್ಧರಿಸಿದ್ದೇ ಆಗಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಇಂತಹ ಶಾಲೆಯನ್ನು ಆದಿ ಕರ್ನಾಟಕ ಮಕ್ಕಳಿಗೆ ೧೯೦೦ರಲ್ಲಿ ತೆರೆದಾಗ ಸವರ್ಣೀಯ ಹಿಂದೂ ಮಾಸ್ತರರುಗಳು ಯಾರೂ ಅಲ್ಲಿ ಪಾಠ ಹೇಳಲು ಸಿದ್ಧರಿರಲಿಲ್ಲ. ಆ ಸಂದರ್ಭದಲ್ಲಿ ತಲಕಾಡಿನ ಆರ್.ರಂಗೇಗೌಡ (ಜನನ:೧೮೮೦) ಎಂಬ ವಿಶಾಲ ಮನೋಭಾವದ ಮಾಸ್ತರರು ಸ್ವಇಚ್ಛೆಯಿಂದ ಈ ಶಾಲೆಯಲ್ಲಿ ಅವಿರತ ಸೇವೆ ಸಲ್ಲಿಸಿದರು. ಈ ಸಾಧನೆಯು ಮೈಸೂರು ರಾಜ್ಯದ ದಿವಾನರ ಆಡಳಿತದಲ್ಲಿ ಕ್ರಾಂತಿಕಾರಕ ಸಾಧನೆಯಾಗಿತ್ತು. ಅಪ್ರಾಪ್ತ ವಯಸ್ಕರ ವಿವಾಹ (೧೮೯೪) ನಿಷೇಧ ಕಾಯ್ದೆಯನ್ನು ಸಹ ಶೇಷಾದ್ರಿ ಐಯ್ಯರ್ ಅವರೇ ಜಾರಿಗೊಳಿಸಿದ್ದು ಗಮನಾರ್ಹವಾಗಿದೆ. ಹತ್ತನೇ ಚಾಮರಾಜೇಂದ್ರ ಒಡೆಯರ್ ಅವರು ೧೮೯೪ರಲ್ಲಿ ನಿಧನರಾದಾಗ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಿಂಹಾಸನದ ಉತ್ತರಾಧಿಕಾರಿಗಳಾದರು. ಇವರು ಅಪ್ರಾಪ್ತ ವಯಸ್ಕರಾಗಿದ್ದ ಕಾರಣ ಅವರ ತಾಯಿ ರಾಣಿ ಕೆಂಪರಾಜಮ್ಮಣ್ಣಿಯವರು ಆಡಳಿತವನ್ನು ನೇರವಾಗಿ ವಹಿಸಿಕೊಂಡರು. ಶೇಷಾದ್ರಿ ಐಯ್ಯರ್ ಅವರು ೧೯೦೧ರಲ್ಲಿ ಸೇವೆಯಿಂದ ನಿವೃತ್ತರಾದರು.

**ಪಿ.ಕೃಷ್ಣಮೂರ್ತಿ (೧೯೦೧–೧೯೦೬)**

ದಿವಾನ್ ಪೂರ್ಣಯ್ಯನ ಮೊಮ್ಮಗ ಪಿ. ಕೃಷ್ಣಮೂರ್ತಿ ಅವರನ್ನು ೧೯೦೧ರಲ್ಲಿ ದಿವಾನರಾಗಿ ನೇಮಕಮಾಡಲಾಯಿತು. ಅದರ ಮುಂದಿನ ವರ್ಷವೇ ನಾಲ್ವಡಿ ಅವರಿಗೆ ಪ್ರಾಪ್ತ ವಯಸ್ಕರಾದ ಕಾರಣ ಅವರೇ ಅಧಿಕಾರವನ್ನು ಸಂಪೂರ್ಣವಾಗಿ ವಹಿಸಿಕೊಂಡರು. ಈ ಕಾರ್ಯಕ್ರಮದಲ್ಲಿ ಲಾರ್ಡ್ ಕರ್ಜನ್ ಅವರು ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಭಾರತದ ಸಮಕಾಲೀನ ಸಂಸ್ಥಾನ ರಾಜರುಗಳ ಪೈಕಿ ಅತ್ಯಂತ ಪ್ರಜ್ಞಾವಂತ (Enlightened) ರಾಜಕುಮಾರನೆಂದು ಪರಿಗಣಿಸಲಾಗಿದೆ. ಪ್ರಜೆಗಳ ಸರ್ವತೋಮುಖ ಪ್ರಗತಿ ಮತ್ತು ಕಲ್ಯಾಣದ ಬಗ್ಗೆ ಇವರು ಸಹಜವಾದ ಆಸಕ್ತಿಯನ್ನು ಹೊಂದಿದ್ದರು. ಶಿಕ್ಷಣ ಹಾಗೂ ಉನ್ನತ ವ್ಯಾಸಂಗದ ಬಗ್ಗೆ ಇವರಿಗೆ ಅತೀವವಾದ ಪ್ರೀತಿ ಇತ್ತು. ಇವರ ಆಡಳಿತದ ಯಶಸ್ಸಿಗೆ ಮುಂದಾಲೋಚನೆ ಹಾಗೂ ದಕ್ಷತೆಯಿಂದ ನಿರ್ಧಾರಗಳನ್ನು ಕೈಗೊಳ್ಳಬಲ್ಲ ದಿವಾನರಾಗಿದ್ದ ಸರ್ ಎಂ.ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಅವರ ನಿಸ್ವಾರ್ಥ ಸೇವೆ ಹಾಗೂ ಅಮೂಲ್ಯ ಮಾರ್ಗದರ್ಶನವೇ ಮುಖ್ಯ ಕಾರಣವೆಂದು ಅಭಿಪ್ರಾಯಪಡಲಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು 'ರಸಋಷಿ' ಎಂದು ಕರೆಯಲಾಗಿದ್ದು, ಅವರ ಆಡಳಿತಾವಧಿಯನ್ನು ಮೈಸೂರು ಅರಸು ಮನೆತನದ ಆಳ್ವಿಕೆಯ ಸುವರ್ಣ ಕಾಲವೆಂದು ಪರಿಗಣಿಸಲಾಗಿದೆ. ದಿವಾನ್ ಕೃಷ್ಣಮೂರ್ತಿಯವರು, ಆಡಳಿತದಲ್ಲಿ ಆಧುನಿಕತೆಯನ್ನು ತರುವ ಉದ್ದೇಶದಿಂದ ಬ್ರಿಟೀಷ್ ಪದ್ಧತಿಗಳನ್ನು ಜಾರಿಗೆ ತಂದು, ಕಛೇರಿಯ ಕಡತ ಮತ್ತು ದಾಖಲೆಗಳನ್ನು ವೈಜ್ಞಾನಿಕವಾಗಿ ಸಂರಕ್ಷಿಸಿ ಮುಂದುವರಿಸುವಂತೆ ನಿರ್ಧಾರ ಕೈಗೊಂಡರು. ಸಚಿವಾಲಯದ ಕೈಪಿಡಿಯನ್ನು ಪ್ರಥಮ ಬಾರಿಗೆ ಇವರ ಆಡಳಿತದಲ್ಲಿ ತಯಾರಿಸಲಾಯಿತು. ಕೃಷಿ ಇಲಾಖೆಯನ್ನು ವಿಸ್ತರಿಸಲಾಯಿತು ಮತ್ತು ೧೯೦೫ರಲ್ಲಿ ಸಹಕಾರ ಚಳವಳಿಯನ್ನು ಆರಂಭಿಸಲಾಯಿತು. ಇವರ ಇನ್ನೊಂದು ಪ್ರಮುಖ ನಿರ್ಧಾರವು ಸ್ಥಳೀಯ ಸ್ವಯಂ ಸರ್ಕಾರದ ಕಲ್ಪನೆ ಮತ್ತು ಅದರ ಅನುಷ್ಠಾನವನ್ನು ಸಂಸ್ಥಾನದ ಪ್ರಾಂತಗಳಲ್ಲಿ ಪರಿಚಯಿಸಿದ್ದೇ ಆಗಿದೆ.

**ವಿ.ಪಿ.ಮಾಧವರಾವ್ (೧೯೦೬–೧೯೦೯)**

ದಿವಾನರಾಗಿ ವಿ.ಪಿ.ಮಾಧವರಾವ್ ಅವರು ೧೯೦೬ರಲ್ಲಿ ಪಿ.ಕೃಷ್ಣಮೂರ್ತಿ ಅವರ ತರುವಾಯ ನೇಮಕಗೊಂಡರು. ಇವರು ಅರಣ್ಯಗಳ ಸಂರಕ್ಷಣೆಗೆ ವಿಶೇಷ ಗಮನ ನೀಡಿದ್ದರು. ಪಶುಸಂಗೋಪನಾ ಇಲಾಖೆ ಇವರ ಕಾಲದಲ್ಲಿ ಸ್ಥಾಪಿತವಾಯಿತು. ಮೇಲ್ಮನೆಯ ನ್ಯಾಯ ವಿಧಾಯಕ ಸಭೆಯನ್ನು ೧೯೦೭ರಲ್ಲಿ ಪ್ರಾರಂಭಿಸಿದುದು ಕೇಂದ್ರ ಸಹಕಾರಿ ಬ್ಯಾಂಕನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ಮೈಸೂರು ವಾರ್ತಾಪತ್ರಿಕೆ ೧೯೦೮ರ ಕಾನೂನಿನ ಅನುಷ್ಠಾನವು ಆಡಳಿತದ ಹಿನ್ನೆಡೆಗೆ ಕಾರಣವಾಯಿತು. ಈ ಕಾನೂನನ್ನು ವಿರೋಧಿಸಿ ಬಹಳಷ್ಟು ಪತ್ರಿಕೆಗಳು ಮುಚ್ಚಲ್ಪಟ್ಟವು.

**ಟಿ.ಆನಂದರಾವ್ (೧೯೦೯–೧೯೧೩)**

ವಿ.ಪಿ.ಮಾಧವರಾವ್ ಅವರ ತರುವಾಯ ೧೯೦೯ರಲ್ಲಿ ಟಿ. ಆನಂದರಾವ್ ಅವರು ದಿವಾನರಾಗಿ ನೇಮಕಗೊಂಡರು. ಡಾ.ಡಿ.ವಿ.ಗುಂಡಪ್ಪನವರು ಆನಂದರಾವ್ ಅವರ ಆಡಳಿತಾವಧಿಯು ಕೇವಲ ದೈನಂದಿನ ವಹಿವಾಟನ್ನು ಉಸ್ತುವಾರಿ ಮಾಡುವ ವ್ಯವಸ್ಥೆಯಾಗಿತ್ತೇ ಹೊರತು ಬೇರೆ ಯಾವುದೇ ವೈಶಿಷ್ಟ್ಯತೆಗಳಿಂದಲೂ ಕೂಡಿರಲಿಲ್ಲ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಮೈಸೂರು ಆರ್ಥಿಕ ಸಮ್ಮೇಳನದ ಉದ್ಘಾಟನೆ ಮತ್ತು ರಾಜ್ಯದ ಪ್ರಧಾನ ಇಂಜಿನಿಯರ್ ಆಗಿದ್ದ ಸರ್.ಎಂ.ವಿಶ್ವೇಶ್ವರಯ್ಯನವರ ನಿರ್ದೇಶನದಲ್ಲಿ ಕನ್ನಂಬಾಡಿಯ ಯೋಜನೆಯನ್ನು ಅಂತಿಮವಾಗಿ ಒಪ್ಪಿ ಕಾರ್ಯತಗೊಳಿಸಿದುದು ಇವರ ಕಾಲದ ಪ್ರಮುಖ ನಿರ್ಧಾರಗಳು. ಹಿಂದೆ ಆರಂಭವಾಗಿದ್ದ ಮೈಸೂರು ಅರಮನೆಯ ನಿರ್ಮಾಣ ಕಾರ್ಯವು ಇವರ ಆಡಳಿತಾವಧಿಯಲ್ಲಿ ಪೂರ್ಣಗೊಂಡಿತು.

**ಸರ್.ಎಂ.ವಿಶ್ವೇಶ್ವರಯ್ಯ (೧೯೧೩–೧೯೧೯)**

ಟಿ.ಆನಂದರಾವ್ ಅವರ ತರುವಾಯ ೧೯೧೩ರಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರು ದಿವಾನರಾಗಿ ನೇಮಕಗೊಂಡರು. ಆಧುನಿಕ ಮೈಸೂರಿನ ಇತಿಹಾಸದಲ್ಲಿ ವಿಶ್ವೇಶ್ವರಯ್ಯನವರ ಹೆಸರನ್ನು ಅತ್ಯಂತ ಗೌರವಯುತವಾಗಿ ಸ್ಮರಿಸಲಾಗುತ್ತದೆ. ಅವರು ಮೈಸೂರು ಸಂಸ್ಥಾನದ ಪ್ರಧಾನ ಇಂಜಿನಿಯರ್ ಆಗಿ ಸೇರಿದರು. ವಿಶ್ವೇಶ್ವರಯ್ಯನವರು ದಾರ್ಶನಿಕ ವ್ಯಕ್ತಿತ್ವವುಳ್ಳ ಹಾಗೂ ದೂರದೃಷ್ಟಿಯುಳ್ಳ ಅರ್ಥಶಾಸ್ತ್ರಜ್ಞರೂ ಆಗಿದ್ದರು. ಇವರು ೧೯೦೨ರಲ್ಲಿ ರಚಿಸಿದ 'A Vision of Prosperous Mysore' ಎಂಬ ಗ್ರಂಥದಲ್ಲಿ ರಾಜ್ಯಕ್ಕೆ ಅವಶ್ಯಕವಾದ ಶಿಕ್ಷಣದ ಬೆಳವಣಿಗೆ, ತಾಂತ್ರಿಕ ಜ್ಞಾನದ ಬೆಳವಣಿಗೆ, ಉತ್ತಮ ನೀರಾವರಿ ಯೋಜನೆಗಳು, ಔದ್ಯಮೀಕರಣ ಹಾಗೂ ವಾಣಿಜ್ಯದ ಬೆಳವಣಿಗೆಗಳು ಮತ್ತು ಅದರಲ್ಲೂ ಉದ್ಯಮ ಕ್ಷೇತ್ರದಲ್ಲಿ ಹೆಚ್ಚು ಬೆಳವಣಿಗೆ ಮುಂತಾದ ಪ್ರಗತಿಪರ ಪದ್ಧತಿಗಳ ಬಗ್ಗೆ ಆಳವಾಗಿ ಅಭ್ಯಸಿಸಿ ಅವರು ತಮ್ಮ ಅಭಿಪ್ರಾಯವನ್ನು ತಿಳಿಸಿರುವರು. ಸರ್.ಎಂ.ವಿಶ್ವೇಶ್ವರಯ್ಯನವರ ದಿವಾನಗಿರಿಯು ಸರ್ವಾಂಗೀಣ ಬೆಳವಣಿಗೆಯ, ಅದರಲ್ಲೂ ವಿಶೇಷವಾಗಿ ಉದ್ಯಮ ಕ್ಷೇತ್ರದ ಕಾರ್ಯದಲ್ಲಿ ಹೆಚ್ಚು ಬೆಳವಣಿಗೆಯ ಅರುಣೋದಯವನ್ನು ಕಂಡಿತು ಎಂದು ಪ್ರೊ.ಕೆ.ಸಂಪದ್‌ಗಿರಿರಾಯರು ಅಭಿಪ್ರಾಯಪಟ್ಟಿರುವರು. ನಮ್ಮ ಕಾರ್ಯಾಚರಣೆಯ ಉದ್ದೇಶ ಹಾಗೂ ಗುರಿ ಸಮೃದ್ಧ, ಸತ್ವಶಾಲಿ ಹಾಗೂ ಕಾರ್ಯಶೀಲ ಜನಾಂಗವನ್ನು ನಿರ್ಮಿಸುವುದಾಗಿರಬೇಕು ಎಂದು ದಿವಾನರು ಒಮ್ಮೆ ಅಭಿಪ್ರಾಯ ಪಟ್ಟಿರುವರು. ಗೋಪಾಲಕೃಷ್ಣ ಗೋಖಲೆ ಮತ್ತು ಮಹಾದೇವಗೋವಿಂದ ರಾನಡೆ ಅವರುಗಳ ಸಹವಾಸವನ್ನು ಪಡೆದಿದ್ದ ಇವರು ಉದಾರವಾದೀ ರಾಜನೀತಿಜ್ಞರಾಗಿದ್ದು ಪ್ರಜಾ ತಾಂತ್ರಿಕ ಸಂಸ್ಥೆಗಳಲ್ಲಿ ಬಹಳಷ್ಟು ವಿಶ್ವಾಸವುಳ್ಳವರಾಗಿದ್ದರು. ಮೈಸೂರು ನ್ಯಾಯವಿಧಾಯಕ ಸಭೆಯ ಸದಸ್ಯ ಬಲವನ್ನು ಅವರ ಕಾಲದಲ್ಲಿ (೧೯೧೩) ೧೮ ರಿಂದ ೨೪ಕ್ಕೆ ಏರಿಸಲಾಯಿತು. ಪ್ರಜಾಪ್ರತಿನಿಧಿ ಸಭೆಯಿಂದ ಮೂವರು ಮತ್ತು ಎಂಟು ಜಿಲ್ಲೆಗಳಿಂದ ನಾಲ್ವರು ಸದಸ್ಯರುಗಳನ್ನು ಅದಕ್ಕೆ ಚುನಾಯಿಸಬೇಕಾಗುತ್ತಿತ್ತು. ಪ್ರಜಾಪ್ರತಿನಿಧಿ ಸಭೆಗೆ ಮುಂಗಡಪತ್ರವನ್ನು ಚರ್ಚಿಸುವ ವಿಶೇಷ ಹಕ್ಕನ್ನು ನೀಡಲಾಯಿತು. ಮುಂಗಡಪತ್ರ ಅಧಿವೇಶನವೆಂದು (೧೯೧೭) ಕರೆಯಲಾದ ಎರಡನೇ ಅಧಿವೇಶನವನ್ನು ಸಮಾವೇಶಗೊಳಿಸಲು ಜೂನ್ ನಲ್ಲಿ ಸಭೆ ಕರೆಯಲು ಒಪ್ಪಿಗೆ ನೀಡಲಾಯಿತು.

ಮೈಸೂರು ಸಂಸ್ಥಾನಿಕ ಸಂಸ್ಥೆಗಳ ಹಾಗೂ ಪಂಚಾಯಿತಿಗಳ ವಿಧೇಯಕ–೬ ಕ್ಕೆ ಇವರ ಆಡಳಿತಾವಧಿಯಲ್ಲಿ ೧೯೧೮ರಲ್ಲಿ ಸಮ್ಮತಿಸಲಾಯಿತು. ಇದರ ಫಲವಾಗಿ ಜಿಲ್ಲಾ ಮತ್ತು ತಾಲೂಕು ಮಂಡಳಿಗಳಿಗೆ ಚುನಾಯಿತ ಸದಸ್ಯರನ್ನು ನೇಮಿಸುವಂತಾಯಿತು. ಇದೇ ರೀತಿ ನಗರಸಭೆಗಳಿಗೆ ಉಪಾಧ್ಯಕ್ಷರುಗಳನ್ನು ಮತ್ತು ಗ್ರಾಮ ಪಂಚಾಯಿತಿಗಳಿಗೆ ಚುನಾಯಿತ ಅಧ್ಯಕ್ಷರನ್ನೂ ನೇಮಿಸಲು ೧೯೧೮ರ ವಿಧೇಯಕವು ಕಾರಣವಾಯಿತು. ವಿಶ್ವೇಶ್ವರಯ್ಯನವರು ಮೈಸೂರು ಆರ್ಥಿಕ ಸಮಾವೇಶವನ್ನು ವಿಸ್ತಾರಗೊಳಿಸಿ, ಮೂರು ಸಮಿತಿಗಳನ್ನು ರಚಿಸಿ ಅವುಗಳಿಗೆ ಕೈಗಾರಿಕೆ ಮತ್ತು ವಾಣಿಜ್ಯ ಹಾಗೂ ಶಿಕ್ಷಣ ಮತ್ತು ಕೃಷಿ ಇಲಾಖೆಗಳ ಉಸ್ತುವಾರಿಯನ್ನು ನೀಡಲು ಅವಕಾಶ ಮಾಡಿಕೊಟ್ಟರು.

ನೀರಾವರಿ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಅನೇಕ ಹೊಸ ಯೋಜನೆಗಳನ್ನು ಇವರ ಆಡಳಿತಾವಧಿಯಲ್ಲಿ ಆರಂಭಿಸಲಾಯಿತು. ಇವುಗಳಲ್ಲಿ ಕನ್ನಂಬಾಡಿಯ ಕೃಷ್ಣರಾಜಸಾಗರ ಅಣೆಕಟ್ಟು ಒಂದು ಪ್ರಮುಖ ಯೋಜನೆಯಾಗಿದ್ದು ಇದರಡಿ ಮಂಡ್ಯ ಜಿಲ್ಲೆಗೆ ವಿಶೇಷ ನಾಲೆಯ ಮೂಲಕ ನೀರು ಹಾಯಿಸಿದ ಪರಿಣಾಮವಾಗಿ ಈ ಪ್ರದೇಶದ ಕೃಷಿ ಅಭಿವೃದ್ಧಿಗೆ ಅವಕಾಶವಾಯಿತು. ಈ ನಾಲೆಗೆ ವಿಶ್ವೇಶ್ವರಯ್ಯ ನಾಲೆ ಎಂದೇ ಕರೆಯಲಾಗಿರುವುದು ಸೂಕ್ತವಾಗಿದೆ. ಭದ್ರಾವತಿಯ ಉಕ್ಕಿನ ಕಾರ್ಖಾನೆ, ಮೈಸೂರಿನ ಗಂಧದ ಎಣ್ಣೆಯ ಕಾರ್ಖಾನೆ, ಬೆಂಗಳೂರಿನ ಸರ್ಕಾರಿ ಸಾಬೂನು ಕಾರ್ಖಾನೆ, ಮುಂತಾದ ಕಾರ್ಖಾನೆಗಳು ಇವರ ಬೌದ್ಧಿಕ ಶಿಶುಗಳಾಗಿ ಜನ್ಮತಾಳಿದವು. ರಾಜ್ಯದ ಬ್ಯಾಂಕಿಂಗ್

ವ್ಯವಹಾರಗಳು ಸುವ್ಯವಸ್ಥಿತವಾಗಿ ನಡೆಯಲು ಅನುವು ಮಾಡಿಕೊಡುವ ಸಲುವಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸಂಸ್ಥೆಯನ್ನು ೧೯೧೩ರಲ್ಲಿ ಸ್ಥಾಪಿಸಿದರು. ಪ್ರಥಮ ಬಾರಿಗೆ ಶಾಸನ ಬದ್ಧವಾಗಿ ಕಡ್ಡಾಯ ಶಿಕ್ಷಣವನ್ನು ಹಂತ ಹಂತವಾಗಿ ಜಾರಿಗೊಳಿಸುವ ಜೊತೆಗೆ ಮಹಿಳಾ ಶಿಕ್ಷಣಕ್ಕೂ ಕ್ರಮಕೈಗೊಂಡರು. ಕೈಗಾರಿಕೆ ಮತ್ತು ವಾಣಿಜ್ಯವನ್ನು ಸಾಂಸ್ಥಿಕವಾಗಿ ಸುಗಮಗೊಳಿಸುವ ದೃಷ್ಟಿಯಿಂದ ಮೈಸೂರು ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಯನ್ನು (Mysore Chamber of Commerce) ೧೯೧೬ರಲ್ಲಿ ಪ್ರಾರಂಭಿಸಿದರು. ಮೈಸೂರು ವಿಶ್ವವಿದ್ಯಾಲಯ (೧೯೧೬) ಮತ್ತು ಕರ್ನಾಟಕ ಸಾಹಿತ್ಯ ಪರಿಷತ್ತು (೧೯೧೫) ಎರಡೂ ಮುಖ್ಯ ಸಂಸ್ಥೆಗಳ ಸ್ಥಾಪನೆಗೆ ಇವರೇ ಮೂಲ ಕಾರಣಕರ್ತರಾದರು. ಇವರ ಪ್ರಯತ್ನದಿಂದಾಗಿ ಬೆಂಗಳೂರಿನಲ್ಲಿ ಸರ್ಕಾರಿ ತಾಂತ್ರಿಕ ಶಿಕ್ಷಣ ಕಾಲೇಜು ಆರಂಭಗೊಂಡಿತು. ಈಗ ಈ ಕಾಲೇಜನ್ನು ವಿಶ್ವೇಶ್ವರಯ್ಯ ತಾಂತ್ರಿಕ ಕಾಲೇಜು ಎಂದು ಕರೆಯಲಾಗುತ್ತಿದೆ. ಇದಲ್ಲದೇ ತಾಂತ್ರಿಕ ಮತ್ತು ಕೈಗಾರಿಕಾ ಶಾಲೆಗಳೂ ಇವರ ಕಾಲದಲ್ಲಿ ಸ್ಥಾಪನೆಗೊಂಡವು. ರಾಜ್ಯದಲ್ಲಿ ಇವರ ಆಡಳಿತದ ಕೊನೆಯ ವೇಳೆಗೆ ಒಟ್ಟು ೩೭೨ ಮೈಲಿಗಳಷ್ಟು ಉದ್ದ ರೈಲ್ವೇ ಹಳಿಗಳು ಇದ್ದವು. ಮೈಸೂರು–ಅರಸಿಕೆರೆ ಮತ್ತು ಬೌರಿಂಗ್‌ಪೇಟೆ–ಕೋಲಾರ ರೈಲು ಹಳಿಗಳ ಕಾರ್ಯವನ್ನು ಪೂರ್ಣಗೊಳಿಸಿ ಪ್ರಯಾಣಕ್ಕೆ ಅನುವು ಮಾಡಿಕೊಡಲಾಯಿತು. ವಿಶ್ವೇಶ್ವರಯ್ಯನವರ ಕಾಲದಲ್ಲಿ ೧೯೧೭ರಲ್ಲಿ ಬ್ರಾಹ್ಮಣೇತರ ಸಂಸ್ಥೆಯ ಅಗತ್ಯವಿದ್ದ ಕಾರಣ ಪ್ರಜಾಮಿತ್ರ ಮಂಡಳಿಯನ್ನು ಸ್ಥಾಪಿಸಿ ರಾಜ್ಯ ಸರ್ಕಾರದ ಕಛೇರಿಗಳಲ್ಲಿ ಬ್ರಾಹ್ಮಣೇತರರಿಗೆ ಕೆಲಸಗಳನ್ನು ಮೀಸಲಿರಿಸಬೇಕೆಂದು ಈ ಸಂಸ್ಥೆಯ ಮೂಲಕ ಚಳವಳಿ ನಡೆಸಲಾಯಿತು. ಇದೇ ಸಂದರ್ಭದಲ್ಲಿ ಮಹಾರಾಜರು ಈ ದೋಷಗಳನ್ನು ಪರಿಹರಿಸುವ ದೃಷ್ಟಿಯಿಂದ ಮಿಲ್ಲರ್ ಸಮಿತಿಯನ್ನು ನೇಮಿಸಿದರು. ಆದರೆ, ಬುದ್ಧಿಶಕ್ತಿಗೆ ಮತ್ತು ಉತ್ತಮ ಅಂಕಗಳನ್ನು ಗಳಿಸಿದವರಿಗೆ ಕೆಲಸಗಳ ನೀಡಿಕೆಯಲ್ಲಿ ಆದ್ಯತೆ ನೀಡುತ್ತಿದ್ದ ವಿಶ್ವೇಶ್ವಯ್ಯನರು, ಕೆಲಸಗಳನ್ನು ಕಾದಿಸಿಡುವ ನಿಯಮವನ್ನು ಒಪ್ಪದಿದ್ದ ಕಾರಣ ೧೯೧೮ರಲ್ಲಿ ದಿವಾನರ ಹುದ್ದೆಗೆ ರಾಜಿನಾಮೆ ನೀಡಿದರು.

**ಸರ್ದಾರ್ ಕಾಂತರಾಜ ಅರಸರು** (೧೯೧೯–೧೯೨೨) :

ಸರ್.ಎಂ.ವಿಶ್ವೇಶ್ವರಯ್ಯನವರ ತರುವಾಯ ಸರ್ದಾರ್ ಕಾಂತರಾಜ ಅರಸರು ೧೯೧೯ರಲ್ಲಿ ದಿವಾನರಾಗಿ ನೇಮಕಗೊಂಡರು. ಇವರು ಅಧಿಕಾರದಲ್ಲಿದ್ದ ಮೂರು ವರ್ಷಗಳ ಅವಧಿಯಲ್ಲಿ ಭದ್ರಾವತಿ ಉಕ್ಕಿನ ಕಾರ್ಖಾನೆಯು ಪ್ರಾರಂಭಿಸಲ್ಪಟ್ಟು ಉತ್ಪಾದನೆ ಆರಂಭಿಸಿತು. ಹಿಂದೆ ನೇಮಕಗೊಂಡಿದ್ದ ಮಿಲ್ಲರ್ ಸಮಿತಿಯು ಹಿಂದುಳಿದ ವರ್ಗಗಳ ಕುಂದುಕೊರತೆಗಳ ಬಗ್ಗೆ ೧೯೧೯ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಈ ಸಮಿತಿಯ ಶಿಫಾರಸ್ಸಿನ ಅನುಸಾರ ಹಿಂದುಳಿದ ವರ್ಗಗಳಿಗೆ ಉದ್ಯೋಗಾವಕಾಶಗಳನ್ನು ಮೀಸಲಿರಸಲಾಯಿತು. ರಾಜ್ಯದಲ್ಲಿ ಪ್ರಥಮ ಬಾರಿಗೆ ಕಾಂತರಾಜ ಅರಸು ಅವರ ಪ್ರಯತ್ನದಿಂದಾಗಿ ವೇತನ ತೆರಿಗೆಯನ್ನು ಜಾರಿಗೊಳಿಸಲಾಯಿತು. ಅರಸು ಅದರ ತರುವಾಯ **ಆಲ್‌ಬಿಯನ್ ಬ್ಯಾನರ್ಜಿಯವರು** ೧೯೨೨ರಲ್ಲಿ ದಿವಾನರಾಗಿ ನೇಮಕಗೊಂಡರು. ಇವರ ಆಡಳಿತಾವಧಿಯಲ್ಲಿ ಸ್ಥಾನಿಕ ಸ್ವಯಂ ಸರ್ಕಾರಗಳ ಸಮ್ಮೇಳನವು ೧೯೨೩ರಲ್ಲಿ ನೆರವೇರಿತು. ಆ ಸಮ್ಮೇಳನದ ಶಿಫಾರಸ್ಸುಗಳ ಅನುಸಾರ ತಾಲೂಕು ಮಂಡಲಗಳನ್ನು ರದ್ದುಪಡಿಸಲಾಯಿತು. ಹಾಗೂ ಶಾಸನಬದ್ಧವಾಗಿ ಗ್ರಾಮಪಂಚಾಯಿತಿಗಳನ್ನು ರಚಿಸಲಾಯಿತು. ನಗರಸಭೆಗಳಲ್ಲಿ ಚುನಾಯಿತ ಅಧ್ಯಕ್ಷರು ಇರುವಂತೆಯೂ ವ್ಯವಸ್ಥೆ ಮಾಡಲಾಯಿತು. ರಚನಾತ್ಮಕ ಸುಧಾರಣೆಗಳನ್ನು ಸೂಚಿಸಲು ಸೀಲ್ ಸಮಿತಿಯನ್ನೂ ನೇಮಿಸಲಾಯಿತು. ಅವರ ಶಿಫಾರಸ್ಸಿನನ್ವಯ ೧೯೨೩ರಲ್ಲಿ ಪ್ರಜಾಪ್ರತಿನಿಧಿ ಸಭೆಗಳಲ್ಲಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಮತಾಧಿಕಾರವನ್ನು ವಿಸ್ತರಿಸಲಾಯಿತು. ಮೊದಲ ಬಾರಿಗೆ ಮಹಿಳೆಯರಿಗೂ ಮತಾಧಿಕಾರ ದೊರಕಿತು. ಉದ್ಯಮ ಹಾಗೂ ವಾಣಿಜ್ಯ ಇಲಾಖೆಯು ಪ್ರಾರಂಭವಾಯಿತು. ಇದೇ ಸಮಯದಲ್ಲಿ ಸಹಕಾರಿ ವಲಯದಲ್ಲಿ ಅಪೆಕ್ಸ್ ಬ್ಯಾಂಕನ್ನು ಸ್ಥಾಪಿಸಲಾಯಿತು.

**ಸರ್ ಮಿರ್ಜಾ ಎಂ.ಇಸ್ಮಾಯಿಲ್ (೧೯೨೬-೧೯೪೧) :**

ಆಲ್‌ಬಿಯನ್ ಬ್ಯಾನರ್ಜಿಯವರು ನಿವೃತ್ತರಾದ ಮೇಲೆ ೧೯೨೬ರಲ್ಲಿ ಸರ್ ಮಿರ್ಜಾ ಇಸ್ಮಾಯಿಲ್ ರವರನ್ನು ದಿವಾನರನ್ನಾಗಿ ನೇಮಿಸಲಾಯಿತು. ರಾಜ್ಯದ ಆಡಳಿತವನ್ನು ಸುವ್ಯವಸ್ಥೆಗೊಳಿಸಿ ಬಲಗೊಳಿಸುವಲ್ಲಿ ಇವರ ಆಡಳಿತವು ಮಹತ್ವಪೂರ್ಣವಾಗಿದ್ದಿತು. ವಿಶ್ವೇಶ್ವರಯ್ಯನವರು ನಿರ್ಮಿಸಿದ ಸುಭದ್ರ ಆಡಳಿತ ತಳಹದಿಯ ಮೇಲೆ ಮಿರ್ಜಾ ಅವರು ಭವ್ಯ ಆಡಳಿತ ಯಂತ್ರವನ್ನು ಸ್ಥಾಪಿಸಿದರೆಂದು ವರ್ಣಿಸಲಾಗಿದೆ. ಇವರ ಆಡಳಿತಾವಧಿಯಲ್ಲಿ ಸಂಸ್ಥಾನದ ಪ್ರಗತಿಗೆ ಅವಶ್ಯಕವೆಂದು ಪರಿಗಣಿಸಿ ಕೈಗಾರಿಕಾ ಮತ್ತು ಔದ್ಯಮಿಕ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲಾಯಿತು. ಖಾಸಗಿ ಮತ್ತು ಸರ್ಕಾರಿ ಎರಡೂ ವಲಯಗಳಲ್ಲಿ ಕೈಗಾರಿಕಾ ಪ್ರಗತಿಗೆ ಇವರು ಗಮನ ನೀಡಿದರು. ಇದರ ಜೊತೆಗೆ ಆಡಳಿತದ ಬಹುತೇಕ ಕಾಲವನ್ನು ರಾಜ್ಯದಲ್ಲಿ ಸಂಭವಿಸಿದ ಹಲವು ಗಲಭೆಗಳನ್ನು ಅಡಗಿಸುವಲ್ಲಿ ಇವರು ಹೆಚ್ಚಿನ ಗಮನವನ್ನು ಹರಿಸಬೇಕಾಯಿತು. ಕಾಂಗ್ರೆಸ್ ಪಕ್ಷವು ವ್ಯವಸ್ಥೆಗೊಳಿಸಿದ ಜನತೆಯ ಆಂದೋಲನಗಳನ್ನು ಹತ್ತಿಕ್ಕುವುದು ನಿಜವಾಗಿಯೂ ಸರ್ ಮಿರ್ಜಾರವರಿಗೆ ಬಿಗಿಯಾಗಿ ಕಟ್ಟಿದ ಹಗ್ಗದ ಮೇಲಿನ ನಡಗೆಯೇ ಆಗಿತ್ತು. ಒಂದೆಡೆ ರಾಷ್ಟ್ರ ನಾಯಕರಾದ ಗಾಂಧೀಜಿ, ನೆಹರೂ ಅವರಂತಹ ಮೇಲ್ಮಟ್ಟದ ನಾಯಕರುಗಳ ಜೊತೆಗೆ ಒಳ್ಳೆಯ ಸಂಬಂಧಗಳನ್ನು ಉಳಿಸಿಕೊಳ್ಳಲು ಇವರು ಪ್ರಯತ್ನಿಸಿದರು. ಇನ್ನೊಂದೆಡೆ ಸಂಸ್ಥಾನದಲ್ಲಿ ಕಾಂಗ್ರೆಸ್ ಚಳವಳಿಯನ್ನು ಹತ್ತಿಕ್ಕಲು ಸಾಧ್ಯವಾದ ಎಲ್ಲಾ ಶಿಸ್ತಿನ ಕ್ರಮಗಳನ್ನೂ ಕೈಗೊಳ್ಳುತ್ತಿದ್ದರು. ಇವರ ಆಡಳಿತದಲ್ಲಿ ಸಂಭವಿಸಿದ (೧೯೨೮-೧೯೩೯) ಸುಲ್ತಾನಪೇಟೆ ಗಣಪತಿ ಗಲಭೆಗಳಿಂದ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ವಿಚಾರಣಾ ಆಯೋಗವನ್ನು ನೇಮಿಸುವಂತಾಯಿತು. ಆಯೋಗವು ಸಂಸ್ಥಾನದಲ್ಲಿ ಜವಾಬುದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದು ಸಲಹೆ ಮಾಡಿತು. ಈ ಗಲಭೆಗಳು ದಿವಾನರನ್ನು ಅಪ್ರಿಯವಾಗುವಂತೆ ಮಾಡಿದವು. ಇದರಿಂದಾಗಿ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಉತ್ತಮ ಭವಿಷ್ಯವನ್ನು ಕಂಡುಕೊಳ್ಳುವಂತಾಯಿತು.

ಮಿರ್ಜಾ ಅವರು ಭದ್ರಾವತಿ ಕಬ್ಬಿಣ ಕಾರ್ಖಾನೆಯನ್ನು ಮತ್ತಷ್ಟು ವಿಸ್ತರಿಸಿದರು. ಇದರ ಜೊತೆಗೆ ಅಲ್ಲಿ ಕಾಗದ ಮತ್ತು ಸಿಮೆಂಟ್ ಕಾರ್ಖಾನೆಗಳನ್ನು ಸ್ಥಾಪಿಸಲಾಯಿತು. ಬೆಂಗಳೂರಿನಲ್ಲಿ ಹಿಂದೂಸ್ಥಾನ ವಿಮಾನ ಕಾರ್ಖಾನೆ, ಪಿಂಗಾಣಿ ಮತ್ತು ಗಾಜಿನ ಕಾರ್ಖಾನೆಗಳನ್ನೂ ಸ್ಥಾಪಿಸಲಾಯಿತು. ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ ಮತ್ತು ಬದನವಾಳದಲ್ಲಿ ಖಾದಿ ಉತ್ಪಾದನೆಯ ಕೇಂದ್ರ ಮುಂತಾದವುಗಳನ್ನು ಸ್ಥಾಪಿಸಿದ್ದು, ಇವರ ಆಡಳಿತದ ಪ್ರಮುಖ ಸಾಧನೆಗಳು. ಇವರ ವಿಶೇಷ ಪ್ರಯತ್ನದಿಂದಾಗಿ ಮೈಸೂರಿನ ಗಂಧದ ಎಣ್ಣೆ, ರೇಷ್ಮೆ, ಸಾಬೂನು, ಅಗರಬತ್ತಿ ಮುಂತಾದ ಸಿದ್ಧವಸ್ತುಗಳು ವಿದೇಶಗಳಲ್ಲಿ ಮಾರಾಟವಾಗುವಂತಾಯಿತು. ಇದರ ಪರಿಣಾಮವಾಗಿ ಲಂಡನ್ನಿನಲ್ಲಿ ಮೈಸೂರು ಸರ್ಕಾರದ ವ್ಯಾಪಾರ ಆಯುಕ್ತರನ್ನು ನೇಮಿಸುವಂತಾಯಿತು. ಇವರು ತೋಟಗಾರಿಕೆಯನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಪಟ್ಟಣ ಹಾಗೂ ನಗರಗಳಲ್ಲಿ ಹೂತೋಟಗಳನ್ನೂ, ಉಪವನಗಳನ್ನು, ಕೂಡುರಸ್ತೆಗಳಲ್ಲಿ ಸುಂದರವಾದ ಉದ್ಯಾನವನಗಳನ್ನು ನಿರ್ಮಿಸಲು ಉತ್ತೇಜನ ಕೊಟ್ಟರು. ಮಂಡ್ಯದಲ್ಲಿ ಮೇಲ್ಮಟ್ಟದ ನೀರಾವರಿ ಕಾಲುವೆ ರಚನೆಯಾಗಿ, ಸುಮಾರು ೧,೨೦,೦೦೦ ಎಕರೆ ಭೂಮಿಯು ನೀರಾವರಿಗೆ ಒಳಪಟ್ಟಿತು. ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರದ ಆಣೆಕಟ್ಟಿಗೆ ಲಗತ್ತಾದಂತೆ ವೃಂದಾವನ ತೋಟವನ್ನೂ ಇವರ ಕಾಲದಲ್ಲಿ ನಿರ್ಮಿಸಲಾಯಿತು.

**ನಾಲ್ವಡಿ ಕೃಷ್ಣರಾಜ ಒಡೆಯರ್ ಮಹಾರಾಜರ ಸಾಧನೆ :**

ಮಾದರಿ ಮೈಸೂರು ರಾಜ್ಯದ ಕನಸನ್ನು ಸಾಕಾರಗೊಳಿಸಲು ಶ್ರಮಿಸಿದ ಪ್ರಗತಿಪರ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ೧೯೪೦ರಲ್ಲಿ ನಿಧನರಾದರು. ಇವರ ಆಳ್ವಿಕೆಯ ಅವಧಿಯನ್ನು ಮೈಸೂರಿನ ಸುವರ್ಣಯುಗವೆಂದು ಪರಿಗಣಿಸಲಾಗಿದೆ. ಇವರ ಕನಸಿನ ಮೈಸೂರು ರಾಜ್ಯವು ಒಂದು ಮಾದರಿ ರಾಜ್ಯವಾಗಿ ಪರಿವರ್ತಿತವಾಯಿತು. ಇದಕ್ಕೆ ನೆರವಾದವರು ಸಮರ್ಥ ಹಾಗೂ ದಕ್ಷ ದಿವಾನರುಗಳಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ

ಎಂ. ಇಸ್ಮಾಯಿಲ್ ಅವರುಗಳು. ವಿವಿಧ ಕ್ಷೇತ್ರಗಳಲ್ಲದೇ ಕೃಷಿ ಮತ್ತು ಕೈಗಾರಿಕೆಗಳಿಗೆ ವಿಶೇಷ ಗಮನವನ್ನು ನೀಡಿದ ಕಾರಣ ರಾಜ್ಯದ ಸರ್ವತೋಮುಖ ಪ್ರಗತಿ ಸಾಧ್ಯವಾಯಿತು. ಉತ್ತಮ ಆಡಳಿತಗಾರರಿಗಲ್ಲದೇ ಅನೇಕ ಸಾಂಸ್ಕೃತಿಕ ಸಾಧನೆಗೆ ಪ್ರಾಮುಖ್ಯತೆಯನ್ನು ನೀಡಿದ್ದರು. ಇವರ ಸಮಕಾಲೀನರಾಗಿದ್ದ ಪ್ರಸಿದ್ಧ ಸಂಗೀತಗಾರರಾದ ವೀಣೆ ಶೇಷಣ್ಣ, ಬಿಡಾರಂ ಕೃಷ್ಣಪ್ಪ ಮತ್ತು ಟಿ.ಚೌಡಯ್ಯ ಮೊದಲಾದವರು ರಾಜ್ಯದ ಹಿರಿಮೆಯನ್ನು ಮೆರೆಸಿದರು. ಕೃಷ್ಣರಾಜ ಒಡೆಯರ್ ಅವರ ವೈಯಕ್ತಿಕ ಆಸಕ್ತಿಯಿಂದಾಗಿ ಮೈಸೂರು ಉನ್ನತ ಶಿಕ್ಷಣ ಮತ್ತು ಅಧ್ಯಯನಕ್ಕೂ ಕೇಂದ್ರವಾಯಿತು. ಪ್ರಸಿದ್ಧ ವಿದ್ವಾಂಸರಾದ ಡಾ.ಆರ್.ಶಾಮಶಾಸ್ತ್ರಿ, ಪ್ರೊ.ಎಂ.ಹಿರಿಯಣ್ಣ, ಪ್ರೊ.ಎಂ.ಎಚ್.ಕೃಷ್ಣ, ಪ್ರೊ.ಬಿ.ಎಂ.ಶ್ರೀಕಂಠಯ್ಯ, ಪ್ರೊ.ಟಿ.ಎಸ್.ವೆಂಕಣ್ಣಯ್ಯ ಹೆಸರಾಂತ ಕಲಾವಿದ ಕೆ.ವೆಂಕಟಪ್ಪ ಇನ್ನೂ ಮೊದಲಾದವರು ರಾಷ್ಟ್ರಮಟ್ಟದ ಖ್ಯಾತಿಯನ್ನು ಗಳಿಸಿದ್ದರು. ಅಂದಿನ ಮೈಸೂರು ವಿಶ್ವವಿದ್ಯಾಲಯವು ಪ್ರತಿಷ್ಠಿತ ಪ್ರಾಧ್ಯಾಪಕರುಗಳಿಂದ ಕೂಡಿದ್ದು ಉತ್ತಮ ಪರಿಸರವನ್ನು ಹೊಂದಿದ್ದ ಕಾರಣ ಉನ್ನತ ವ್ಯಾಸಂಗಕ್ಕೆ ವಿಶಿಷ್ಟವಾದ ಉತ್ತೇಜನ ದೊರೆಯುವಂತಾಯಿತು. ಇಷ್ಟೇ ಅಲ್ಲದೆ ಸರ್.ಎಂ.ವಿಶ್ವೇಶ್ವರಯ್ಯನವರು ಸ್ಥಾಪಿಸಿದ ಮೈಸೂರು ಆರ್ಥಿಕ ಸಮಾವೇಶವನ್ನು ರಾವ್‌ಬಹುದ್ದೂರ್ ಸಿ.ಹಯವದನರಾಯರು ಮುಂದುವರಿಸಿದ್ದು ಈ ಪ್ರಾಂತದ ಸಾಂಸ್ಕೃತಿಕ ಪ್ರಗತಿಗೆ ಕಾರಣವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ರಾಜಋಷಿ ಎಂದು ವರ್ಣಿಸಲಾಗಿದೆ. ನಾಲ್ವಡಿಯವರ ನಂತರ ಅಧಿಕಾರಕ್ಕೆ ಬಂದ ಜಯಚಾಮರಾಜ ಒಡೆಯರು (೧೯೪೦–೪೭) ಈ ಅರಸು ಮನೆತನದ ಕೊನೆಯ ಜನಪ್ರಿಯ ಅರಸರಾಗಿದ್ದರು.

ಸರ್.ಮಿರ್ಜಾ ಎಂ.ಇಸ್ಮಾಯಿಲ್ ಅವರು ಮೇ ೧೯೪೧ರಲ್ಲಿ ರಾಜಿನಾಮೆ ನೀಡಿದರು. ಅವರ ತರುವಾಯ **ನ್ಯಾಪತಿ ಮಾಧವರಾಯರು** ದಿವಾನರಾಗಿ ನೇಮಕಗೊಂಡರು. ಇವರು ಎರಡನೇ ಮಹಾಯುದ್ಧದ ಒತ್ತಡಗಳನ್ನು ಹಾಗೂ ಕಾಂಗ್ರೆಸ್ಸಿನ ನೇತೃತ್ವದಲ್ಲಿ ಬಿರುಸಿನಿಂದ ಆರಂಭಗೊಂಡ ಜನತೆಯ ಸತ್ಯಾಗ್ರಹಗಳನ್ನು ಎದುರಿಸಬೇಕಾಯಿತು. ಇದೇ ಸಮಯದಲ್ಲಿ ಕೆ.ಆರ್.ಶ್ರೀನಿವಾಸ ಐಯ್ಯಂಗಾರ್ ಸಮಿತಿಯು ಸೂಚಿಸಿದ ಸಂವಿಧಾನಾತ್ಮಕ ಸುಧಾರಣೆಗಳನ್ನು ಕಾರ್ಯಗತಗೊಳಿಸಲಾಯಿತು. ಭದ್ರಾ ಜಲಾಶಯ ಯೋಜನೆ ಮತ್ತು ಶರಾವತಿಯ ಮಹಾತ್ಮ ಗಾಂಧೀ ಜಲವಿದ್ಯುತ್ ಯೋಜನೆಗಳನ್ನು ಇವರ ಕಾಲದಲ್ಲೆ ಪ್ರಾರಂಭಿಸಲಾಯಿತು. ಮಾಧವರಾಯರು ಜುಲೈ ೧೯೪೬ರಲ್ಲಿ ನಿವೃತ್ತಿರಾದ ನಂತರ **ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್** ಅವರು ಮೈಸೂರಿನ ದಿವಾನರಾದರು. ಇವರ ಆಡಳಿತಾವಧಿಯಲ್ಲಿ ೧೯೪೭ರಲ್ಲಿ ಭಾರತವು ಸ್ವಾತಂತ್ರ್ಯ ಪಡೆದ ಮೇಲೆ, ಅಂದಿನ ಮೈಸೂರು ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್ ಅವರು ಜನರ ಒತ್ತಾಯಕ್ಕೆ ಮಣಿದು ಮೈಸೂರು ಸಂಸ್ಥಾನವನ್ನು ಭಾರತ ಒಕ್ಕೂಟದಲ್ಲಿ ವಿಲೀನಗೊಳಿಸಲು ಒಪ್ಪಬೇಕಾಯಿತು.

## ಸ್ವಾತಂತ್ರ್ಯ ಹೋರಾಟ

ಮೈಸೂರು ರಾಜ್ಯದಲ್ಲಿ ಸಂಭವಿಸಿದ ಸ್ವಾತಂತ್ರ್ಯ ಹೋರಾಟವನ್ನು ಪ್ರಮುಖವಾಗಿ ಎರಡು ಆಯಾಮಗಳಲ್ಲಿ ಪರಿಶೀಲಿಸಬೇಕಾಗುತ್ತದೆ. ರಾಷ್ಟ್ರದಲ್ಲಿ ಮಾಂಟೆಗ್ಯೂ ಚೆಲ್ಮ್ಸ್ ಫೋರ್ಡ್ ಸುಧಾರಣೆಗಳು (೧೯೧೯) ಪ್ರಥಮ ಮಹಾಯುದ್ಧದ ಅಂತ್ಯದ ವೇಳೆಗೆ ಜಾರಿಗೆ ಬಂದ ತರುವಾಯ ಭಾರತವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡುವ ದೃಷ್ಟಿಯಿಂದ ಜವಾಬುದಾರಿ ಸರಕಾರದ ಬೇಡಿಕೆಯು ದೇಶಾದ್ಯಂತ ತೀವ್ರಗೊಂಡಿತು. ಭಾರತವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡುವುದು ಮತ್ತು ರಾಷ್ಟ್ರದಲ್ಲಿ ಜವಾಬುದಾರಿ ಸರಕಾರದ ಸ್ಥಾಪನೆ ಈ ಎರಡು ಪ್ರಮುಖವಾದ ಆಯಾಮಗಳು ಸ್ವಾತಂತ್ರ ಸಂಗ್ರಾಮದ ಎರಡು ಮುಖ್ಯ ಕಾರ್ಯಕ್ರಮಗಳಾಗಿ ಈ ವೇಳೆಗೆ ಮೈಸೂರು ಪ್ರಾಂತ್ಯದಲ್ಲೂ ಪ್ರಬಲವಾಗಿ ಕಂಡುಬಂದವು. ಮೈಸೂರಿನ ಮಹಾರಾಜರ ಆಳ್ವಿಕೆಯ ಕಾಲದಲ್ಲಿ ದಸರಾ ವೈಭವಗಳನ್ನು ಕಾಣುತ್ತಿದ್ದ ಮೈಸೂರಿನ ಜನತೆಗೆ ವಿದೇಶಿಯರ ಆಳ್ವಿಕೆಯ ಪ್ರಭಾವವು ನೇರವಾಗಿ ಉಂಟಾಗಲೇ

ಇಲ್ಲ. ಆದರೆ, ಸ್ಥಳೀಯ ಸವಲತ್ತುಗಳು ಲಭಿಸದೇ ಇದ್ದಾಗ ಇದಕ್ಕೆ ವಿದೇಶಿಯರ ಆಳ್ವಿಕೆಯೇ ಪರೋಕ್ಷವಾಗಿ ಕಾರಣವೆಂಬ ಅಂಶವು ಮೈಸೂರಿನ ಜನತೆಗೆ ಅರಿವಾಗತೊಡಗಿತು. ಕನ್ನಂಬಾಡಿ ಅಣೆಕಟ್ಟು ಕಟ್ಟಿದ ಮೇಲೆ ಕಾವೇರಿ ನೀರನ್ನು ಮದರಾಸ್ ಪ್ರಾಂತದೊಂದಿಗೆ ಹಂಚಿಕೊಳ್ಳುವ ಸಮಸ್ಯೆ ಒದಗಿದಾಗಲೆಲ್ಲಾ ಬ್ರಿಟಿಷರು ಮದರಾಸ್ ಪ್ರಾಂತದ ಹಿತಾಸಕ್ತಿಯನ್ನು ಕಾಪಾಡಿದರೆಂಬ ಅಭಿಪ್ರಾಯ ಮೈಸೂರಿನ ಜನತೆಯಲ್ಲಿ ಮೂಡಿತು. ಮೈಸೂರು ಜನತೆಗೆ ತಾವು ಗುಲಾಮರ ಗುಲಾಮರು ಎಂಬ ಅಂಶವು ಈ ವೇಳೆಗೆ ಮನದಟ್ಟಾಯಿತು. ಮೈಸೂರು ಸಂಸ್ಥಾನವನ್ನು ಕೈಗಾರಿಕೀಕರಣಗೊಳಿಸುವ ಬಗ್ಗೆ ಸರ್.ಎಂ.ವಿಶ್ವೇಶ್ವರಯ್ಯನವರು ಪ್ರಯತ್ನಿಸುತ್ತಿದ್ದಾಗ ಬ್ರಿಟೀಷರ ಸಾಮ್ರಾಜ್ಯಶಾಹಿ ಧೋರಣೆಗಳು ಸಹಜವಾಗಿಯೇ ಅಡೆತಡೆಗಳನ್ನುಂಟು ಮಾಡಿದವು. ಬೆಂಗಳೂರಿನಲ್ಲಿ ಆಟೋಮೋಬೈಲ್ ಕಾರ್ಖಾನೆಯನ್ನು ಪ್ರಾರಂಭಿಸಬೇಕೆಂದು ಸಂಸ್ಥಾನ ಸರಕಾರವು ಪ್ರಯತ್ನಿಸಿದಾಗ ಬ್ರಿಟೀಷರು ಅನುಮತಿಯನ್ನು ನಿರಾಕರಿಸಿದರು. ಈ ಎಲ್ಲಾ ಕಾರಣಗಳಿಂದಾಗಿ ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ಜಾಗೃತವಾಗತೊಡಗಿತು.

ಹೀಗೆ ಸಂಸ್ಥಾನದಲ್ಲಿ ಬೆಳೆದು ಬಂದ ರಾಷ್ಟ್ರೀಯ ಪ್ರಜ್ಞೆಯು, ದೇಶದ ಇತರೆಡೆ ಉಂಟಾದ ದೇಶಾಭಿಮಾನ ಕಾರ್ಯದ ಪ್ರತಿಧ್ವನಿಯಾಗಿತ್ತು. ರಾಷ್ಟ್ರೀಯ ವೃತ್ತಪತ್ರಿಕೆಗಳಾಗಿದ್ದ ಹಿಂದೂ, ನ್ಯೂ ಇಂಡಿಯಾ ಹಾಗೂ ಮರಾಠಿ ಭಾಷೆಯ 'ಕೇಸರಿ' ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಬಾಲಗಂಗಾಧರ್ ಟಿಳಕ್ ಅವರ ವಿಚಾರಧಾರೆಗಳು ಈ ರಾಜ್ಯದ ಜನತೆಯ ಮೇಲೂ ಪ್ರಭಾವ ಬೀರಿದವು. ಕನ್ನಡ ಪತ್ರಿಕೆಗಳಾದ ಮೈಸೂರಿನ 'ಕರ್ನಾಟಕ ಪ್ರಕಾಶಿಕ' (೧೮೭೪) ಮತ್ತು 'ಸೂರ್ಯೋದಯ ಪ್ರಕಾಶಿಕಾ' (ಮೈಸೂರು ೧೮೮೮) ಮತ್ತು ಎಂ.ವೆಂಕಟಕೃಷ್ಣಯ್ಯ ಅವರು ಆರಂಭಿಸಿದ ವೃತ್ತಾಂತ ಚಿಂತಾಮಣಿ (೧೮೮೪) ಆ ಕಾಲದ ಪ್ರಮುಖ ಪತ್ರಿಕೆಗಳಾಗಿದ್ದವು. ರಾಷ್ಟ್ರೀಯ ಕಾಂಗ್ರೆಸ್‌ನ ಚಟುವಟಿಕೆಗಳನ್ನು ೧೮೯೬ರಲ್ಲಿ 'ಕರ್ನಾಟಕ ಪ್ರಕಾಶಿಕ' ಪ್ರಕಟಿಸಿದ್ದೇ ಅಲ್ಲದೇ ಬ್ರಿಟೀಷ್ ಹೌಸ್ ಆಫ್ ಕಾಮನ್ಸ್‌ನಲ್ಲಿ ಸ್ಥಳೀಯ ರಾಜ್ಯಗಳಿಗೆ ಪ್ರಾತಿನಿಧಿತ್ವವನ್ನು ನೀಡಬೇಕೆಂದು ಒತ್ತಾಯಿಸಿತು. ಪುಣೆಯಲ್ಲಿ ಪ್ಲೇಗ್ ವಿರುದ್ಧದ ಕಾರ್ಯಾಚರಣೆಯಲ್ಲಿ ಸಂಭವಿಸಿದ ಪೋಲೀಸರ ದೌರ್ಜನ್ಯಗಳ ಬಗ್ಗೆ ಮೈಸೂರಿನಿಂದ ಪ್ರಕಟವಾಗುತ್ತಿದ್ದ 'ಸೂರ್ಯೋದಯ ಪ್ರಕಾಶಿಕಾ' ಪತ್ರಿಕೆಯು ಖಂಡಿಸಿ ಪ್ರಕಟಿಸಿತು. ಭಾರತ ಸರ್ಕಾರದ ೧೮೯೦ರ ಕಾಯ್ದೆಯ ದೋಷಗಳನ್ನು ಎತ್ತಿ ತೋರಿಸಿ ರಾಷ್ಟ್ರೀಯತೆಯ ಅಭಿಪ್ರಾಯವನ್ನು ಈ ಪತ್ರಿಕೆಯು ಪ್ರಥಮ ಬಾರಿಗೆ ವ್ಯಕ್ತಪಡಿಸಿತು. ಟಿಳಕರು ತಮ್ಮ ಕೇಸರಿ ಪತ್ರಿಕೆಯಲ್ಲಿ (೦೬-೧೦-೧೮೯೭) ವ್ಯಕ್ತಪಡಿಸಿದ ಕೆಲವು ಮೂಲಭೂತ ತತ್ವಗಳನ್ನು ಮೈಸೂರಿನ ಎಂ.ವೆಂಕಟಕೃಷ್ಣಯ್ಯ ಅವರು ಈ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ದೇಶದ ವಿವಿಧ ಭಾಗಗಳಲ್ಲಿ ಆರಂಭವಾದ ಸ್ವದೇಶಿ ಚಳವಳಿಯ ಪ್ರಭಾವದಿಂದಾಗಿ, ಬಂಗಾಳದ ವಿಭಜನೆಯನ್ನು ಪ್ರಶ್ನಿಸಿ (೧೯೦೫) ಸ್ವಾಮಿರಾವ್ ದೇಶಪಾಂಡೆಯವರು ಮೈಸೂರಿನಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಈ ಭಾಷಣವು ತೀವ್ರವಾದ ಪ್ರಭಾವವನ್ನು ಬೀರಿದ ಕಾರಣ ವಿದೇಶಿ ವಸ್ತುಗಳನ್ನು ತ್ಯಜಿಸಬೇಕೆಂಬ ಹೋರಾಟವನ್ನು ಆರಂಭಿಸಲಾಯಿತು. ವಿದೇಶಿಯರೇ ಸಂಪೂರ್ಣವಾಗಿ ತಯಾರಿಸಿದ ಸಕ್ಕರೆಯನ್ನು ಉಪಯೋಗಿಸುವುದನ್ನು ಕೆ.ಜೀವನರಾಯರು ಮೈಸೂರಿನಲ್ಲಿ ಏರ್ಪಡಿಸಿದ್ದ ವಾರ್ಷಿಕ ವನಭೋಜನದಲ್ಲಿ ಖಂಡಿಸಲಾಯಿತು. ದಿವಾನರ ಆಡಳಿತ ಸಮಿತಿಯಲ್ಲಿ ಪ್ರತಿನಿಧಿತ್ವವನ್ನು ನೀಡಬೇಕೆಂದು ೧೮೯೦, ೧೮೯೨ ಮತ್ತು ೧೮೯೩ರ ಪ್ರಜಾಪ್ರತಿನಿಧಿ ಸಭೆಗಳಲ್ಲಿ ದಿವಾನರನ್ನು ಒತ್ತಾಯಿಸಲಾಯಿತು. ಇದೇ ಸಂದರ್ಭದಲ್ಲಿ ಪ್ರಜಾಪ್ರತಿನಿಧಿ ಸಭೆ ಸದಸ್ಯರಾಗಿದ್ದ ಶ್ರೀನಿವಾಸರಾವ್, ಇನ್ನೊಬ್ಬ ಸದಸ್ಯ ಎಂ.ವೆಂಕಟಕೃಷ್ಣಯ್ಯರವರೊಡಗೂಡಿ, ದಿವಾನರ ಆಡಳಿತ ಸಮಿತಿಗೆ ಇನ್ನೂ ಮೂರು ಜನ ಸದಸ್ಯರನ್ನು ಅಧಿಕವಾಗಿ ಸೇರಿಸಿಕೊಳ್ಳಲು ಅವಕಾಶ ನೀಡಬೇಕೆಂದು ನಿರ್ಣಯವನ್ನು ಮಂಡಿಸಿದರು.

ಪ್ರಥಮ ಮಹಾಯುದ್ಧವು ಸಂಭವಿಸುತ್ತಿದ್ದಾಗ, ಮೈಸೂರಿನಲ್ಲಿ ತಗಡೂರು ರಾಮಚಂದ್ರರಾಯರು ಕ್ರೈಸ್ತ ಮಿಷನರಿಗಳು ಹಿಂದೂ ಸಮಾಜವನ್ನು ಅನಾವಶ್ಯಕವಾಗಿ ಖಂಡಿಸುವುದರ ವಿರುದ್ಧ ಪ್ರಥಮ ಚಳವಳಿಯನ್ನು

ಆರಂಭಿಸಿದರು. ಭಾರತದಾದ್ಯಂತ ಸಂಭವಿಸಿದ ಹೋಂ ರೂಲ್ ಚಳವಳಿಯು ಮೈಸೂರಿನಲ್ಲಿ ಜವಬ್ದಾರಿ ಸರ್ಕಾರದ ಶಕ್ತಿಯುತ ಬೇಡಿಕೆಗೆ ಚಾಲನೆ ನೀಡಿತು. ಮೈಸೂರಿನ ಸತ್ಯವಾದಿ ಎಂಬ ಪತ್ರಿಕೆಯು ಇಂತಹ ಬೇಡಿಕೆಯನ್ನು ಪ್ರಥಮಬಾರಿಗೆ ಮಾರ್ಚ ೧೯೧೮ರಲ್ಲಿ ಪ್ರಕಟಿಸಿತೆಂದು ಕಂಡುಬರುತ್ತದೆ. ೧೯೧೭ರಲ್ಲಿ ಸ್ಥಾಪಿತವಾಗಿದ್ದ ಪ್ರಜಾಮಿತ್ರ ಮಂಡಲಿಯು ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಸಲ್ಲಿಸಲು ಇನ್ನೂ ಅನುಕೂಲಕರವಾಗಿರಲಿಲ್ಲ. ಈ ಚಳವಳಿಯ ಅಂಗವಾಗಿ, ತಗಡೂರರು ೧೯೧೯ರಲ್ಲಿ ಸಂಭವಿಸಿದ ಜಲಿಯನ್‌ವಾಲಾಬಾಗ್ ದುರಂತದ ಛಾಯಾಚಿತ್ರಗಳನ್ನು ತಮ್ಮ ಚಾಲನಾ ಅಂಗಡಿಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮಾರಾಟ ಮಾಡಿದರು. ಬಾಲಗಂಗಾಧರ ಟಿಳಕ್ ಅವರು ೧೯೨೦ರಲ್ಲಿ ನಿಧನರಾದ ಮೇಲೆ ರಾಜ್ಯಾದ್ಯಂತ ಶಾಂತಿ ಮೆರವಣಿಗೆಗಳನ್ನು ಹಾಗೂ ಶೋಕಾಚರಣೆಯ ಸಭೆಗಳನ್ನು ಮೈಸೂರು ಪ್ರಾಂತದಾದ್ಯಂತ ಏರ್ಪಡಿಸಲಾಯಿತು. ಮೈಸೂರಿನ ಎಂ.ಎನ್.ಜೋಯಿಸರು, ಹಿರಿಯರಾದ ತಾತಯ್ಯ, ತಗಡೂರು ರಾಮಚಂದ್ರರಾಯರು ಹಾಗೂ ಅಗರಂ ರಂಗಯ್ಯ ಇವರುಗಳು ಮತಾಂತರಗಳ ವಿರುದ್ಧ ಚಳವಳಿ ನಡೆಸಿ ಖಾದಿ ಪ್ರಚಾರ ಕಾರ್ಯ ಹಾಗೂ ಇದಲ್ಲದೇ ಮುಂದೆ ಸೇವಾದಳದ ಚಟುವಟಿಕೆ ಮೊದಲಾದ ಕೆಲಸಗಳಲ್ಲಿ ೧೯೨೦ರಿಂದಲೂ ಪಾಲ್ಗೊಂಡಿದ್ದರು. ಮರಿಮಲ್ಲಪ್ಪ ಹೈಸ್ಕೂಲಿನ ಅಧ್ಯಾಪಕರಾಗಿದ್ದ ತಾತಯ್ಯನವರು ಇವರಿಗೆ ದೇಶಪ್ರೇಮದ ದೀಕ್ಷೆಯನ್ನು ಬೋಧಿಸಿದರು. ಇವರ ಜೊತೆಗೆ ತಗಡೂರರು, ಅಗರಂ ರಂಗಯ್ಯ, ಪಾಲಹಳ್ಳಿ ಸೀತಾರಾಮಯ್ಯ ಅವರೆಲ್ಲರೂ ಇದೇ ಗರಡಿಯಲ್ಲಿದ್ದರು. ಮೈಸೂರಿನಲ್ಲಿ ೧೯೨೦ರ ಸುಮಾರಿಗೆ ಸ್ಥಾಪಿತವಾದ ಮೈಸೂರು ಟಿಳಕ ಸಂಘವು ಸ್ವದೇಶಿ ಪ್ರಚಾರ ಚಟುವಟಿಕೆಗಳನ್ನು ಆರಂಭಿಸಿ ಸಕಲ ವಿಧದ ದೇಶಭಕ್ತಿಪರ ಕಾರ್ಯಗಳಲ್ಲಿ ಹದಿ ವಯಸ್ಸಿನ ಯುವಕರು ಪಾಲ್ಗೊಂಡು ಭಾಗವಹಿಸುವಂತೆ ಪ್ರಚೋದಿಸಿತು. ಸ್ವಾಮಿರಾವ್, ರಾಮಸ್ವಾಮಿ ಅಯ್ಯಂಗಾರ್, ವಿರೂಪಾಕ್ಷ, ನಾರಾಯಣ (ಪತ್ರಿಕೋದ್ಯಮಿ) ಮೊದಲಾದವರು ಈ ಸಂಸ್ಥೆಯ ಹಿಂದಿದ್ದ ಸ್ಫೂರ್ತಿ ಚೇತನಗಳಾಗಿದ್ದರು. ಹಳೆಯ ಮೈಸೂರು ಪ್ರಾಂತದಲ್ಲಿ ತನ್ನ ಚಟುವಟಿಕೆಯನ್ನು ೧೯೨೧ರಲ್ಲಿ ಆರಂಭಿಸಿದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು (ಕೆ.ಪಿ.ಸಿ.ಸಿ) ಭಾರತದಾದ್ಯಂತ ಪ್ರಬಲಗೊಂಡಿದ್ದ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಹಂತಹಂತವಾಗಿ ಮುಂದಿಟ್ಟಿತು. 'ಕರ್ನಾಟಕದ ಸಿಂಹ' ಎಂದು ಪ್ರಖ್ಯಾತರಾಗಿರುವ ಗಂಗಾಧರರಾವ್ ದೇಶಪಾಂಡೆ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಪ್ರಥಮ ಅಧ್ಯಕ್ಷರಾದರು. ಧಾರವಾಡ ಜಿಲ್ಲೆಯ ಗದಗ, ಕರ್ನಾಟಕ ಕಾಂಗ್ರೆಸ್ ಸಮಿತಿಯ ಕೇಂದ್ರವಾಯಿತು. ಮೈಸೂರು ಒಡೆಯರ್ ರಾಜವಂಶವು ಆಳುತ್ತಿದ್ದ ಮೈಸೂರು ಸಂಸ್ಥಾನದಲ್ಲಿ ೧೯೨೧–೨೨ರಲ್ಲಿ ತುಮಕೂರು, ಬೆಂಗಳೂರು, ಮೈಸೂರು ಹಾಗೂ ಕಡೂರುಗಳಲ್ಲಿ ಕಾಂಗ್ರೆಸ್ ಸಮಿತಿಗಳು ಕ್ರಮೇಣ ಸ್ಥಾಪಿತವಾದುವು. ಮೈಸೂರು ಜಿಲ್ಲಾ ರಾಜ್ಯ ಕಾಂಗ್ರೆಸ್ ವಿಭಾಗಕ್ಕೆ ನ್ಯಾಯಮೂರ್ತಿ ಸೆಟ್ಲೂರ್ ಅವರು ಮೊದಲ ಅಧ್ಯಕ್ಷರಾದರು. ಆದರೆ ಸಂಸ್ಥಾನದಲ್ಲಿಯ ಕಾಂಗ್ರೆಸ್ ಧೋರಣೆಯಂತೆ ಸಂಸ್ಥಾನದಲ್ಲಿಯ ಚಳವಳಿಗಳಲ್ಲಿ ತಕ್ಷಣ ಭಾಗವಹಿಸುವುದು ಸಾಧ್ಯವಿರಲಿಲ್ಲ. ತರುವಾಯ ೧೯೨೩ರಲ್ಲಿ ಸೀಲ್ ಸಮಿತಿಯು ನೇಮಕಗೊಂಡಿತು; ಶಾಸನಬದ್ಧವಾಗಿ ಮೈಸೂರಿನಲ್ಲಿ ಹಿಂದೆ ಸ್ಥಾಪಿತಗೊಂಡಿದ್ದ ಪ್ರಜಾಪ್ರತಿನಿಧಿ ಸಭೆಯನ್ನು ರಚಿಸಬೇಕೆಂದು ಅದರ ವರದಿಯಲ್ಲಿ ಸೂಚಿಸಲಾಗಿತ್ತು. ಇದರ ಸದಸ್ಯತ್ವದ ಸಂಖ್ಯೆಯನ್ನು ೨೫೦ ರಿಂದ ೨೭೫ಕ್ಕೆ ಏರಿಸುವಂತಾಯಿತು. ಭೂಕಂದಾಯ ರೂ.೫೦ ಅಥವಾ ನಗರಸಭೆಗೆ ರೂ.೧೦ ತೆರಿಗೆಯನ್ನು ಸಲ್ಲಿಸುವವರು ಮಾತ್ರ ಮತದಾರರಾಗಲು ಅರ್ಹರೆಂದು ನಿಶ್ಚಯ ಮಾಡಲಾಯಿತು. ಮೊದಲ ಬಾರಿಗೆ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಲಾಯಿತು. ಅಧಿಕಾರೇತರರು ಬಹುಸಂಖ್ಯಾತರಾಗುವಂತೆ ನ್ಯಾಯವಿಧಾಯಕ ಸಭೆಯ ಸದಸ್ಯರ ಬಲವನ್ನು ೫೦ಕ್ಕೆ ಏರಿಸಲಾಯಿತು. ಮೈಸೂರು ಪ್ರಾಂತದಲ್ಲಿ ಸಂಸದೀಯ ಅಭಿವೃದ್ಧಿಗಾಗಿ ೧೯೨೩ರಲ್ಲಿ ರೂಪುಗೊಂಡ ಸಂವಿಧಾನವು ಮಹತ್ವಪೂರ್ಣವಾದ ಹೆಜ್ಜೆಯಾಗಿದೆ ಎಂದು ಪ್ರೊ.ಕೆ.ಎನ್.ವಿ.ಶಾಸ್ತ್ರಿ ಅವರು ಅಭಿಪ್ರಾಯಪಡುತ್ತಾರೆ. ಇಷ್ಟೆಲ್ಲಾ ಆದರೂ ಅದು ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲಿಲ್ಲ. ಮದ್ದೂರು ತಾಲೂಕಿನ ಸೋಮನಹಳ್ಳಿಯ ಚಿಕ್ಕೇಗೌಡ ಮಲ್ಲಯ್ಯ (ಎಸ್.ಸಿ.ಮಲ್ಲಯ್ಯ)ನವರು ತಮ್ಮ ೨೮ನೇ ವಯಸ್ಸಿನಲ್ಲಿ

ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಗೊಂಡು ೨೦ ವರ್ಷಗಳಿಗೂ ಹೆಚ್ಚು ಕಾಲ ಅದರಲ್ಲಿ ಪ್ರತಿನಿಧಿಯಾಗಿದ್ದರು. ಇವರು ಮಂಡ್ಯ ಒಂದು ಪ್ರತ್ಯೇಕ ಜಿಲ್ಲೆಯಾಗಬೇಕೆಂದು ವಾದಿಸಿದವರಲ್ಲಿ ಪ್ರಮುಖರಾಗಿದ್ದರು. ಇದೇ ಭಾಗದ ಎಂ.ಸಿ.ಲಿಂಗೇಗೌಡ ಅವರೂ ಪ್ರಜಾಪ್ರತಿನಿಧಿ ಸಭೆ ಹಾಗೂ ಕೌನ್ಸಿಲ್‌ನ ಸದಸ್ಯರಾಗಿದ್ದರು. ಸ್ವಲ್ಪ ಕಾಲ ಕೌನ್ಸಿಲ್‌ನ ಉಪಾಧ್ಯಕ್ಷರೂ ಆಗಿದ್ದ ಇವರು, ಪ್ರತ್ಯೇಕ ಜಿಲ್ಲೆಗಾಗಿ ದುಡಿದವರಾಗಿದ್ದರು.

**ಪ್ರಾರಂಭದ ಚಳವಳಿಗಳು**

ಮೈಸೂರು ಪ್ರಾಂತ್ಯದಲ್ಲಿ ರಾಜ್ಯ ಕಾಂಗ್ರೆಸ್ ಘಟಕದ ಸ್ಥಾಪನೆಗೆ ಮೊದಲು ಜವಾಬ್ದಾರಿ ಸರ್ಕಾರದ ಹೋರಾಟಕ್ಕಾಗಿ ಪ್ರಜಾಮಿತ್ರ ಮಂಡಳಿ, ಪ್ರಜಾಪಕ್ಷ ಮತ್ತು ಪ್ರಜಾಸಂಯುಕ್ತ ಪಕ್ಷಗಳು ಜನ್ಮತಾಳಿ ಅನೇಕ ಹೋರಾಟಗಳನ್ನು ನಡೆಸಿದುವು. ಪ್ರಜಾಮಿತ್ರ ಮಂಡಳಿಯು ೧೯೧೭ರಲ್ಲಿ ಅಸ್ತಿತ್ವಕ್ಕೆ ಬಂದು ಬ್ರಾಹ್ಮಣೇತರರಿಗೆ ಸರ್ಕಾರಿ ಕೆಲಸಗಳನ್ನು ಮೀಸಲಿಡಬೇಕೆಂದು ಹೋರಾಟ ನಡೆಸಿತು. ಅನಂತರ ಕೆ.ಸಿ.ರೆಡ್ಡಿ ಮತ್ತು ವಿ.ವೆಂಕಟಪ್ಪ ಇವರುಗಳು ೧೯೩೦ರಲ್ಲಿ ಸ್ಥಾಪಿಸಿದ್ದ ಪ್ರಜಾಪಕ್ಷದೊಂದಿಗೆ ೧೯೩೪ರಲ್ಲಿ ಪ್ರಾಜಾಮಿತ್ರ ಮಂಡಳಿಯನ್ನು ವಿಲೀನಗೊಳಿಸಲಾಯಿತು. ಹೀಗೆ ವಿಲೀನಗೊಂಡ ಪ್ರಜಾಸಂಯುಕ್ತ ಪಕ್ಷವು ಕಾಂಗ್ರೆಸ್ ಪಕ್ಷದೊಂದಿಗೆ ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಭಾಗವಹಿಸಲು ನಿರಾಸಕ್ತವಾಗಿತ್ತು. ಆದರೆ ಈ ವೇಳೆಗಾಗಲೇ ಕಾಂಗ್ರೆಸ್ ಪಕ್ಷವು ಆಡಳಿತದಲ್ಲಿತ್ತು. ಆದಕಾರಣ ಆ ಪ್ರಾಂತ್ಯದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವು ಪ್ರತ್ಯೇಕ ರೂಪವನ್ನು ತಾಳಿದವು. ಮೈಸೂರು ಪ್ರಾಂತ್ಯವು ಪರೋಕ್ಷವಾಗಿ ಬ್ರಿಟೀಷರ ಅಳ್ವಿಕೆಗೆ ಒಳಪಟ್ಟಿದ್ದ ಕಾರಣ ಅನೇಕ ಪ್ರಾರಂಭಿಕ ಚಳವಳಿಗಳು ಇಲ್ಲಿ ಪ್ರಭಾವಶಾಲಿಯಾಗಿ ಸಂಭವಿಸಿಲ್ಲದಿರುವುದು ಗಮನಾರ್ಹವಾದ ಅಂಶವಾಗಿದೆ. ಹೀಗಾಗಿ ಮೈಸೂರು ಪ್ರಾಂತ್ಯದಲ್ಲಿ ೧೯೩೭–೩೮ ಕ್ಕೆ ಮೊದಲು ಸ್ವಾತಂತ್ರ್ಯ ಆಂದೋಲನದ ಯಾವುದೇ ನೇರವಾದ ಕಾರ್ಯಕ್ರಮ ಇರಲಿಲ್ಲ. ಇಲ್ಲಿಯ ಅನೇಕ ಯುವಕರು ಸ್ವಯಂಸೇವಕರಾಗಿ ಕರ್ನಾಟಕದ ಇತರೆ ಪ್ರಾಂತ್ಯಗಳಿಗೆ ಹೋಗಿ ಸೇವೆ ಸಲ್ಲಿಸುತ್ತಿದ್ದರು. ಮೈಸೂರಿನ ಟಿ.ಎಸ್. ಸುಬ್ಬಣ್ಣ, ಎನ್.ಡಿ.ಶ್ರೀರಂಗಚಾರ್, ಎಲ್.ವಿ.ರಾಜಗೋಪಾಲ, ಎಂ.ಎನ್.ಜೋಯಿಸ್ ಮೊದಲಾದವರನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ. ಅಗರಂ ರಂಗಯ್ಯನವರ ನೇತೃತ್ವದಲ್ಲಿ ಕರ್ನಾಟಕದ ಚಳವಳಿಗೆ ಸಹಾಯ ಮಾಡುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ಎಂ.ಎನ್.ಜೋಯಿಸ್ ಅವರೂ ಇದ್ದರು. ಇದಾದ ತರುವಾಯ ೧೯೩೨ರ ನಂತರ ಕರ್ನಾಟಕದಲ್ಲೂ ಬಹಳ ದೊಡ್ಡ ಆಂದೋಲನವು ನಡೆಯಿತು. ಇದಕ್ಕೆ ಜನ, ಧನ, ಮತ್ತು ಮಾರ್ಗದರ್ಶನ ನೀಡುವ ಜವಾಬ್ದಾರಿ ಮೈಸೂರಿನ ಜನರ ಮೇಲೆ ಬಿದ್ದಿತು. ಇದಕ್ಕಾಗಿ ಎಸ್. ವೆಂಕಟಪತಯ್ಯ, ನಿಟ್ಟೂರು ಶ್ರೀನಿವಾಸರಾವ್, ಎಸ್.ಕೆ.ವೆಂಕಟರಂಗ ಅಯ್ಯಂಗಾರ್ ಇವರೇ ಮೊದಲಾದವರನ್ನೊಳಗೊಂಡ ಒಂದು ಗುಪ್ತ ಸಮಿತಿಯು ರಚನೆಗೊಂಡಿತು. ಇದಕ್ಕೆ ಪ್ರತಿಯಾಗಿ ಗಾಂಧಿ ಇರ್ವಿನ್ ಒಪ್ಪಂದ ತರುವಾಯ ಮೈಸೂರಿಗೆ ನೆಹರೂರವರನ್ನು ಒಂದು ದಿನದ ಭೇಟಿ ಕೊಡಬೇಕೆಂದು ಮಹಾರಾಜರು ಅವರಿಗೆ ಪತ್ರ ಬರೆದರು. ಇದೇ ಸಂದರ್ಭದಲ್ಲಿ ಪ್ರಜಾಪ್ರತಿನಿಧಿ ಸಭೆಗೂ ದಿವಾನ್ ಮಿರ್ಜಾಇಸ್ಮಾಯಿಲ್ ಅವರು ನೆಹರು ಅವರನ್ನು ಆಹ್ವಾನಿಸಿದರು. ಈ ಸಭೆಯಲ್ಲಿ ನೆಹರೂರವರು ದಿವಾನರೊಂದಿಗೆ ಭಾಗವಹಿಸಿದ್ದು ಇದೇ ಪ್ರಥಮ ಬಾರಿಯಾಗಿತ್ತು.

೧೯೨೧ರಲ್ಲಿ ನಡೆದ ಭಾರತೀಯ ರಾಷ್ಟ್ರಿಯ ಕಾಂಗ್ರೆಸ್‌ನ ನಾಗಪುರದ ಅಧಿವೇಶದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ರಚಿಸಲು ನಿರ್ಧಾರ ಕೈಗೊಂಡಾಗ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಅಸ್ತಿತ್ವಕ್ಕೆ ಬಂದಿತು. ಮೈಸೂರು ಪ್ರದೇಶ ಕಾಂಗ್ರೆಸ್‌ನ ಪ್ರಥಮ ಅಧ್ಯಕ್ಷರಾಗಿ ಎಂ.ವೆಂಕಟಕೃಷ್ಣಯ್ಯನವರು ನೇಮಕಗೊಂಡರು. ರಾಜ್ಯದ ಪ್ರಸಿದ್ಧ ನಾಯಕರಾಗಿದ್ದ ಆಲೂರು ವೆಂಕಟರಾಯರು, ಕಡಪ ರಾಘವೇಂದ್ರರಾಯರು, ಮುದವೀಡು ಕೃಷ್ಣರಾಯರು ಮತ್ತು ಮದರಾಸಿನ ಪ್ರತಿನಿಧಿಯಾಗಿದ್ದ ಎಸ್. ಸತ್ಯಮೂರ್ತಿ ಇವರೇ ಮೊದಲಾದವರು ಮೈಸೂರು

ಜಿಲ್ಲೆ ಹಾಗೂ ಮಂಡ್ಯದ ವಿವಿಧ ಭಾಗಗಳಲ್ಲಿ ೧೯೨೦ರಲ್ಲಿ ಪ್ರಚಾರ ಭಾಷಣ ಮಾಡಿದರು. ಮುದವೀಡು ಕೃಷ್ಣರಾಯರು ಮೈಸೂರು ಸಂಸ್ಥಾನದಲ್ಲಿ ಸಂಚರಿಸಿ ವಿದೇಶಿ ವಸ್ತುಗಳನ್ನು ತ್ಯಜಿಸಬೇಕೆಂದು ಮಾಡಿದ ಬಾಷಣಗಳ ಪ್ರಭಾವದಿಂದಾಗಿ ಸಂಸ್ಥಾನದಾದ್ಯಂತ ವಿದೇಶಿ ಉಡುಪುಗಳನ್ನು ತ್ಯಜಿಸುವ ಚಳವಳಿಯನ್ನು ವ್ಯಾಪಕವಾಗಿ ತಗಡೂರು ರಾಮಚಂದ್ರರಾಯರ ಮುಖಂಡತ್ವದಲ್ಲಿ ಸಂಯೋಜಿಸಲಾಯಿತು. ಮೈಸೂರಿನ ಲ್ಯಾಂಡ್ಸ್‌ಡೌನ್ ಕಟ್ಟಡದಲ್ಲಿ ಕಾಂಗ್ರೆಸ್ ಕಛೇರಿಯನ್ನು ಆರಂಭಿಸಲಾಯಿತು. ಈ ವೇಳೆಗಾಗಲೇ ಸಂಸ್ಥಾನದಲ್ಲಿ ತಗಡೂರು ರಾಮಚಂದ್ರರಾಯುರು ಸ್ವರಾಜ್ಯಮಂದಿರವನ್ನು ನಂಜನಗೂಡಿನಲ್ಲಿ ನಿರ್ಮಿಸಿ ೧೯೧೯ರಲ್ಲಿ ಹರಿಜನೋದ್ಧಾರ ಕಾರ್ಯಗಳನ್ನು ಚುರುಕುಗೊಳಿಸಿದ್ದರು. ಹಲವು ಕಾಂಗ್ರೆಸ್ಸಿಗರು ಚಿಕ್ಕಮಗಳೂರು ಜಿಲ್ಲೆಯ ಹರಿಹರಪುರದಲ್ಲಿ ಹೊಸಕೊಪ್ಪ ಕೃಷ್ಣರಾವ್ ಅವರ ಧುರೀಣತ್ವದಲ್ಲಿ ೧೯೨೪ರಲ್ಲಿ ಹರಿಜನರ ಅಖಿಲ ಮೈಸೂರು ಸಮ್ಮೇಳನವನ್ನು ಏರ್ಪಾಟು ಮಾಡಿದರು; ಮತ್ತು ಜವಾಬುದಾರಿ ಸರ್ಕಾರದ ಬೇಡಿಕೆಯನ್ನು ಶಕ್ತಿಯುತವಾಗಿ ಮುಂದಿಟ್ಟರು ಅನೇಕ ಕನ್ನಡವರ್ತಮಾನ ಪತ್ರಿಕೆಗಳು ಈ ಬೇಡಿಕೆಗಳನ್ನು ಪುಷ್ಟೀಕರಿಸಿದುವು. ಬೆಳಗಾವಿ ಕಾಂಗ್ರೆಸ್ಸಿಗೆ ಮೊದಲು ಡಾ.ಎನ್.ಎಸ್. ಹರ್ಡೀಕರ್ ಅವರು ಹಿಂದೂಸ್ಥಾನಿ ಸೇವಾದಳದ ಒಂದು ತುಕಡಿಯನ್ನು ಮೈಸೂರಿನಲ್ಲಿ ಸ್ಥಾಪಿಸಿದರು. ಇದರಡಿಯಲ್ಲಿ ಸೇವಾದಳದ ಸ್ವಯಂ ಸೇವಕರುಗಳಿಂದ ಎಂ.ಎನ್.ಜೋಯಿಸ್, ಅಗರಂ ರಂಗಯ್ಯ, ಎಲ್.ವಿ.ರಾಜಗೋಪಾಲ್ ಮತ್ತಿತರರು ವಾರಕ್ಕೊಮ್ಮೆ ಮೈಸೂರಿನಲ್ಲಿ, ಧ್ವಜವಂದನೆ ಕಾರ್ಯಕ್ರಮಗಳನ್ನು ನೆರವೇರಿಸಿದರು. ಬೆಳಗಾವಿಯಲ್ಲಿ ೧೯೨೪ರಲ್ಲಿ ಸಮಾವೇಶಗೊಂಡ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಈ ಪ್ರಾಂತ್ಯದ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಮೈಲಿಗಲ್ಲೆಂದು ಪರಿಗಣಿಸಲಾಗಿದೆ. ಇದಕ್ಕೆ ಪೂರ್ವಭಾವಿಯಾಗಿ ದಿನಾಂಕ ೧ನೇ ಮೇ ೧೯೨೩ ರಂದು ಮಹಾರಾಷ್ಟ್ರದ ನಾಗಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ಕರ್ನಾಟಕದಿಂದ ಅನೇಕ ಮಂದಿ ಕಾರ್ಯಕರ್ತರುಗಳು ಭಾಗವಹಿಸಿದ್ದರು. ಅವರಲ್ಲಿ ಡಾ.ಎನ್.ಎಸ್.ಹರ್ಡೀಕರರು, ಶ್ರೀನಿವಾಸರಾವ್ ಜೋಗ ಇವರುಗಳು ಪ್ರಮುಖರು. ಅಲ್ಲದೆ ಧಾರವಾಡ, ಬೆಂಗಳೂರು ಮುಂತಾದ ಕಡೆಗಳಿಂದ ಹಲವಾರು ಕಾರ್ಯಕರ್ತರುಗಳು ಈ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಕರ್ನಾಟಕದ ಪ್ರಥಮ ಕಾಂಗ್ರೆಸ್ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲು ತೀರ್ಮಾನಿಸಲಾಯಿತು. ಗಂಗಾಧರರಾವ್ ದೇಶಪಾಂಡೆಯವರು ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಮಹಾತ್ಮ ಗಾಂಧೀಜಿಯವರು ಅಧ್ಯಕ್ಷತೆವಹಿಸಿದ್ದ ಪ್ರಥಮ ಅಧಿವೇಶವು ಇದಾಗಿತ್ತು. ಕನ್ನಡನಾಡಿನ ನಾಡಗೀತೆಯಾಗಿರುವ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಗೀತೆಯನ್ನು ರಚಿಸಿದ ಹುಯಿಲಗೋಳ ನಾರಾಯಣರಾಯರು ಈ ಅಧಿವೇಶದಲ್ಲಿ ವಾಚನ ಮಾಡಿದುದು ಕರ್ನಾಟಕ ಮುಂದಿನ ಏಕೀಕರಣ ಚಳವಳಿಗೆ ನಂದಾದೀಪವಾಯಿತು. ಡಿಸೆಂಬರ್ ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಬಗ್ಗೆ ಡಾ. ಪಟ್ಟಾಭಿಸೀತಾರಾಮಯ್ಯನವರು ತಮ್ಮ 'ರಾಷ್ಟ್ರೀಯ ಕಾಂಗ್ರೆಸ್ ಇತಿಹಾಸ' ಎಂಬ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ. 'ಅಸಹಕಾರದ ಇತಿಹಾಸದಲ್ಲಿ ಬೆಳಗಾವಿ ಕಾಂಗ್ರೆಸ್ ಒಂದು ಮುಖ್ಯ ಘಟ್ಟ. ಗಾಂಧೀವಾದದ ಬಹಿಷ್ಕಾರ ಪದ್ಧತಿ ವಿರುದ್ಧ ಎದ್ದಿದ್ದ ಬಂಡು ಅಲ್ಲಿ ಶಾಂತವಾಯಿತು. ಕಾಂಗ್ರೆಸ್ ಎರಡು ಬಣ ಆಗಿ ಕವಲು ಒಡೆಯುವಂತೆ ಇತ್ತು. ಕಾಂಗ್ರೆಸ್ಸಿಗರು ಹೀಗೆ ಎರಡು ಗುಂಪು ಆಗಿ ಪರಸ್ಪರ ವಿರುದ್ಧ ನಿಲ್ಲಬೇಕೆ ಅಥವಾ ಏನಾದರೂ ಒಪ್ಪಂದ ಮಾಡಿಕೊಂಡು ತಮ್ಮ ಬೇಧಗಳನ್ನು ಮರೆತು ಪಕ್ಕಕ್ಕೆ ಸರಿಸಬೇಕೆ? ಹಾಗೆ ಒಪ್ಪಂದ ಮಾಡಿಸಬೇಕು ಎಂದರೆ ಯಾರು ಮಾಡಿಸಬೇಕು? ಎಂಬ ಜಿಜ್ಞಾಸೆ ಇತ್ತು. ಅಂತಹ ಏನಾದರೂ ಒಪ್ಪಂದವನ್ನು ಮಾಡಿಸಬಲ್ಲ ಸಮರ್ಥರು ಗಾಂಧೀಜಿ ಒಬ್ಬರೇ ಆಗಿದ್ದು, ಬೇರೆ ಯಾರೂ ಇರಲಿಲ್ಲ. ಆದ್ದರಿಂದ ಬೆಳಗಾವಿ ಕಾಂಗ್ರೆಸ್ಸಿಗೆ ಗಾಂಧೀಜಿ ಅಧ್ಯಕ್ಷರಾದುದು ಆ ಕಾಲದ ಪರಿಸ್ಥಿತಿಯ ದೃಷ್ಟಿಯಿಂದ ಈ ಬೆಳವಣಿಗೆ ಅತ್ಯಂತ ಸಮಂಜಸವಾದುದಾಗಿತ್ತು'. ಮುಂದಿನ ಕಾಂಗ್ರೆಸ್ಸಿನ ಅಧಿವೇಶನವು, ಅಂತಹ ಪ್ರಾಂತದ ಜನಸಂಖ್ಯೆಗೆ ಅನುಗುಣವಾಗಿ, ಅಂದರೆ ಎಲ್ಲಿ ಹೆಚ್ಚು ಸದಸ್ಯರಿರುವರೋ ಆ ಪ್ರಾಂತ್ಯದಲ್ಲಿ ನಡೆಯಬೇಕು ಎಂದು ತೀರ್ಮಾನಿಸಲಾಯಿತು.

ಸಮಾವೇಶ ನಡೆದ ಸ್ಥಳಕ್ಕೆ 'ವಿಜಯನಗರ' ಎಂದು ಕರೆಯಲಾಗಿತ್ತು. ಮಂಡ್ಯದಿಂದ ಎಚ್.ಕೆ.ವೀರಣ್ಣಗೌಡರು, ವಿ ವೆಂಕಟಪ್ಪನವರು, ಎ.ಆರ್ಯಮೂರ್ತಿ ಹಾಗೂ ಚನ್ನಪಟ್ಟಣದ ಹೆಚ್.ಜಿ.ಲಿಂಗಪ್ಪ ಮತ್ತು ಬಿ.ಎಲ್.ರಾಮಯ್ಯ ಇವರುಗಳು ಅತಿ ಉತ್ಸಾಹದಿಂದ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿದ್ದರು. ಈ ವೇಳೆಗಾಗಲೇ ಸಾಬರಮತಿ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದ ಹಾಗೂ ಮಂಡ್ಯದವರಾದ ರಾಮಾಯಣದ ಸಿದ್ದೇಗೌಡರು(ಸೀತಾಸುತ) ಬೆಳಗಾವಿ ಅಧಿವೇಶನದಲ್ಲೂ ಭಾಗವಹಿಸಿದ್ದರು. ಅಂದಿನ ಮೈಸೂರು ಸಂಸ್ಥಾನದ ಸರ್ಕಾರದವರು ಬೆಳಗಾವಿ ಪ್ರದರ್ಶನಕ್ಕೆಂದು ತಮ್ಮ ಸಂಗ್ರಹಾಲಯದಲ್ಲಿನ ಕೆಲವು ವಸ್ತುಗಳನ್ನು ತಮ್ಮ ಸ್ವಂತ ವೆಚ್ಚದಲ್ಲಿ ಕಳುಹಿಸಿದ್ದರು. ಭಾಗವಹಿಸಿದ ಸದಸ್ಯರ ಹಾಗೂ ಅತಿಥಿಗಳ ಮನರಂಜನೆಗಾಗಿ ಆಸ್ಥಾನ ವಿದ್ವಾನರಾಗಿದ್ದ ವೀಣೆಶೇಷಣ್ಣನವರನ್ನು ವಿಶೇಷವಾಗಿ ಸಾಂಸ್ಕೃತಿಕ ರಾಯಭಾರಿಯಾಗಿ ಮೈಸೂರು ಸಂಸ್ಥಾನವು ಈ ಅಧಿವೇಶನಕ್ಕೆ ಕಳುಹಿಸಿಕೊಟ್ಟಿತು.

ಅನಾರೋಗ್ಯ ಕಾರಣದ ಹಿನ್ನೆಲೆಯಲ್ಲಿ, ಗಾಂಧೀಜಿಯವರು (೦೭–೦೪–೧೯೨೭) ಬೆಂಗಳೂರಿಗೆ ಸಮೀಪವಿರುವ ನಂದೀದುರ್ಗದಲ್ಲಿ ಬಂದು ತಂಗಿದ್ದರು. ಮೈಸೂರಿನ ಕಾಂಗ್ರೆಸ್ ಧುರೀಣರಾಗಿದ್ದ ಕೆ.ಟಿ.ಭಾಷ್ಯಂ, ಎಂ.ಜಿ.ಲಕ್ಷ್ಮೀನರಸು, ಮಿರಾರ್‌ಹಂಜಾಹುಸೇನ್, ನಾಗೇಶ್ವರಅಯ್ಯರ್, ಸುಬ್ಬರಾಮಶೆಟ್ಟರು ಮುಂತಾದವರುಗಳು ಸ್ವಾಗತ ಸಮಿತಿಯಲ್ಲಿದ್ದರು. ಗಾಂಧೀಜಿಯವರು ನಂದೀಬೆಟ್ಟದಲ್ಲಿದ್ದ ಅವಧಿಯಲ್ಲಿ ಅನೇಕ ಯುವಕರುಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಲು ಅವರಿಂದ ಸ್ಫೂರ್ತಿ ಪಡೆದರು. ಅಂದಿನ ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾಇಸ್ಮಾಯಿಲ್ ಅವರು ನಂದೀಬೆಟ್ಟಕ್ಕೆ ಭೇಟಿ ನೀಡಿ ಗಾಂಧೀಜಿಯವರ ಆರೋಗ್ಯವನ್ನು ವಿಚಾರಿಸಿದರು. ಇದೇ ಸಂದರ್ಭದಲ್ಲಿ ಗಾಂಧೀಜಿಯವರು ಮೈಸೂರಿಗೆ ೧೯೨೭ರಲ್ಲಿ ಭೇಟಿಕೊಟ್ಟಿದ್ದರು. ವಕೀಲ ಲಕ್ಷ್ಮೀನಾರಾಯಣರಾಯರು, ಸಿ.ನರಸಿಂಹಯ್ಯನವರೂ, ಆಗರಂ ರಂಗಯ್ಯನವರು ಮೊದಲಾದವರುಗಳಿದ್ದ ಸ್ವಾಗತ ಸಮಿತಿಯೊಂದನ್ನು ಈ ಉದ್ದೇಶಕ್ಕಾಗಿ ರಚಿಸಲಾಗಿತ್ತು. ಅವರು ಅಲ್ಲಿದ್ದ ಮೂರು ದಿನಗಳಲ್ಲಿ ಎಡತೊರೆಗೆ (ಕೆ.ಆರ್.ನಗರ)ಮತ್ತು ಶ್ರೀರಂಗಪಟ್ಟಣಗಳಿಗೆ ಹೋಗಿ ಬಂದರು. ಶ್ರೀರಂಗಪಟ್ಟಣದಲ್ಲಿ ಅವರಿಗೆ ನಿಧಿಯನ್ನು ಸಮರ್ಪಿಸಲಾಯಿತು. ಅವರು ಕೃಷ್ಣರಾಜಸಾಗರ ಆಣೆಕಟ್ಟಿಗೂ ಭೇಟಿಕೊಟ್ಟಿದ್ದನ್ನು ಯಂಗ್ ಎಂಡಿಯಾ ಪತ್ರಿಕೆಯಲ್ಲಿ (೧೧.೦೮.೧೯೨೭) ದಾಖಲಿಸಲಾಗಿದೆ. 'ಕೃಷ್ಣರಾಜ ಸಾಗರ ಅಣೆಕಟ್ಟೆಯು ಸರ್.ಎಂ.ವಿಶ್ವೇಶ್ವರಯ್ಯನವರ ಇಂಜಿನಿಯರಿಂಗ್ ವಿದ್ಯೆಯ ಅಸಾಧಾರಣ ಅದ್ಭುತ ಫಲ' ಎಂದು ಅದನ್ನು ವೀಕ್ಷಿಸಿದ ಮಹಾತ್ಮ ಗಾಂಧೀಜಿಯವರು ಪ್ರತಿಕ್ರಿಯಿಸಿದರು. ಮೈಸೂರು ಸಂಸ್ಥಾನದಲ್ಲಿ ೧೯೨೭ರಲ್ಲಿ ಪ್ರವಾಸ ಕೈಗೊಂಡ ಗಾಂಧೀಜಿಯವರು ತಗಡೂರು, ಬದನವಾಳ, ನಂಜನಗೂಡು, ಮಂಡ್ಯ ಮತ್ತು ಮದ್ದೂರುಗಳಲ್ಲಿ ನಿಧಿಯನ್ನು ಸ್ವೀಕರಿಸಿ ಕಾನಕಾನಹಳ್ಳಿ, ಚನ್ನಪಟ್ಟಣ, ಕೆಂಗೇರಿ ಮೂಲಕ ಸಂಚರಿಸಿ ಬೆಂಗಳೂರಿಗೆ ಬಂದರು. ಈ ಪ್ರವಾಸಕ್ಕೆ 'ಹರಿಜನ ಪ್ರವಾಸ'ವೆಂದು ಕರೆಯಲಾಗಿದೆ. ಇದೇ ಸಂದರ್ಭದಲ್ಲಿ ಮಂಡ್ಯಕ್ಕೆ ಅವರು ಭೇಟಿ ನೀಡಿದಾಗ ಅಲ್ಲಿ ಅವರಿಗೊಂದು ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ಚನ್ನಪಟ್ಟಣದಲ್ಲಿ ಗಾಂಧೀಜಿಯವರು 'ಅಭಯ ಕುಟೀರ'ಕ್ಕೆ ಬಂದರು. ಹರಿಜನರ ಭಕ್ತಿಪೂರ್ವಕ ವಂದನೆಗಳನ್ನು ಸ್ವೀಕರಿಸಿ ಹರಿಜನರ ಮನೆಗಳನ್ನು ನೋಡಲು ಅಲ್ಲಿಯ ಬೀದಿಗಳಲ್ಲಿ ಗಾಂಧೀಜಿಯವರು ಸಂಚರಿಸಿ. ಹರಿಜನರ ವಸತಿಗಳ ಸಮೀಪವಿದ್ದ ಭಜನಾ ಮಂದಿರವನ್ನು ಉದ್ಘಾಟಿಸಿ ಎಲ್ಲರೂ ದೈವಭಕ್ತರಾಗಬೇಕೆಂದು ಕರೆಕೊಟ್ಟರು.

ಚನ್ನಪಟ್ಟಣದಲ್ಲಿ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಕಿತ್ತೊಗೆಯಬೇಕು, ಹರಿಜನರ ಅಭಿವೃದ್ಧಿಗೆ ದೇಶವಾಸಿಗಳೆಲ್ಲರೂ ಸಹಕರಿಸಿ ಅವರಿಗೆ ಆತ್ಮ ಶಾಂತಿಯನ್ನು ಉಂಟು ಮಾಡಬೇಕೆಂದು ಕಳಕಳಿಯ ಮನವಿಮಾಡಿದರು. ಈ ಸಭೆಗೆ ನೆರೆಯ ಮಂಡ್ಯ ಜಿಲ್ಲೆಯಿಂದಲೂ ಸಹಸ್ರಾರು ಜನ ಉತ್ಸಾಹದಿಂದ ಬಂದು ಪಾಲ್ಗೊಂಡಿದ್ದರು. ಚನ್ನಪಟ್ಟಣದ ಹರಿಜನ ಸೇವಕ ಸಂಘದ ಕಾರ್ಯದರ್ಶಿ ಆರ್ಯಮೂರ್ತಿಯವರು ತಮ್ಮ 'ಅಭಯ ಕುಟೀರ'ದ ಆವರಣದಲ್ಲಿ ಗಾಂಧೀ ಸ್ಮಾರಕ ಭವನಕ್ಕಾಗಿ ಅರ್ಧ ಎಕರೆ ನಿವೇಶನವನ್ನು ದಾನ ಮಾಡಿದರು. ಈ ಭೇಟಿಯಲ್ಲಿ ಅವರ ಜೊತೆಗೆ ಜಮನಾಲಾಲರ

ಮಗಳು ಹೊಬಾಯಿ, ಶ್ರೀಮತಿ ಕೃಷ್ಣಬಾಯಿ ಪಟಾಜೀಕರ, ಶ್ರೀಮತಿ ಮಾಗಂಟಿ ಅನ್ನಪೂರ್ಣಮ್ಮ ಮೊದಲಾದವರು ಇದ್ದರು. ಪರಿಜನೋದ್ಧಾರ ಕಾರ್ಯಕ್ರಮಗಳು ಮೈಸೂರು ಪ್ರಾಂತ್ಯದಲ್ಲಿ ಗಾಂಧೀಜಿಯವರ ಭೇಟಿಗೆ ಮೊದಲೇ ಆರಂಭವಾಗಿದ್ದವು. ಮೈಸೂರಿನ 'ಥಿಯೋಸಾಫಿಕಲ್ ಸೊಸೈಟಿಯವರು ಗಾಂಧೀಜಿಯವರಿಗಿಂತ ಮೊದಲೇ ಹರಿಜನೋದ್ಧಾರ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರೆಂದು' ಎಂ.ಎನ್.ಜೋಯಿಸ್ ಅವರು ಅಭಿಪ್ರಾಯಪಡುತ್ತಾರೆ. ಎಂ.ಎಸ್.ಜೋಯಿಸ್ ಅವರ ಜೊತೆಯಲ್ಲಿ ಖ್ಯಾತ ಹರಿಜನ ಸೇವಕರಾಗಿದ್ದ ಗೋಪಾಲಸ್ವಾಮಿ ಅಯ್ಯರ್ ಅವರೂ ಇದ್ದರು. ತಗಡೂರು ರಾಮಚಂದ್ರರಾಯರು ಹಿಂದುಳಿದ ಪಂಗಡದವರ ವಿಷಯದಲ್ಲಿ ಅನೇಕ ಪ್ರಕಟಣೆಗಳನ್ನು ಹೊರಡಿಸುತ್ತಿದ್ದರು. ಮೈಸೂರು ಜಿಲ್ಲೆಯ ಹಾಗೆಯೇ ಮಂಡ್ಯ ಜಿಲ್ಲೆಯಲ್ಲೂ ಎಂ.ಎನ್. ಜೋಯಿಸ್ ಮತ್ತು ಅವರ ತಂಡದವರು ೧೯೩೪ರಲ್ಲಿ ಹರಿಜನ ಸಮಿತಿಯ ಪ್ರಚಾರ ಕಾರ್ಯವನ್ನು ಕೈಗೊಂಡರು. ಕಣಿಯರ ಜಾತಿಯ ಜನರನ್ನು ದೇವಸ್ಥಾನಕ್ಕೆ ಅನಿರ್ಬಂದಿತ ಪ್ರವೇಶಾವಕಾಶವನ್ನು ನೀಡಬೇಕೆಂದು ಒಂದು ದೊಡ್ಡ ಆಂದೋಲನವನ್ನೇ ಗೋವಿಂದಾಚಾರ್ಯಸ್ವಾಮಿ ಎಂಬ ವೈಷ್ಣವಸ್ವಾಮಿಗಳ ಮುಂದಾಳತ್ವದಲ್ಲಿ ಕೈಗೊಳ್ಳಲಾಯಿತು. ಮೈಸೂರು ಸರ್ಕಾರದವರು ಇದನ್ನು ವಿರೋಧಿಸಿದರು. ಈ ಬೇಡಿಕೆಯನ್ನು ಕಾರ್ಯಗತವಾಗದಂತೆ ತಡೆಯಲು ಅನೇಕ ನಿಷೇಧಾಜ್ಞೆಗಳನ್ನು ಹೊರಡಿಸಿದರು. ಈ ವೇಳೆಗೆ ಗಾಂಧೀಜಿಯವರು ಆರಂಭಿಸಿದ 'ಹರಿಜನ ಸೇವಕ' ಸಂಘದ ಪ್ರಭಾವ ಮೈಸೂರು ಪ್ರಾಂತ್ಯದಲ್ಲೂ ಉಂಟಾಯಿತು. ಕಾಂಗ್ರೆಸ್ಸಿಗರು ಮತ್ತು ಇತರರು ಈ ಚಳವಳಿಗೆ ಬೆಂಬಲ ನೀಡುತ್ತಿದ್ದರು. ವಕೀಲರಾಗಿದ್ದ ಕೆ.ಶೇಷಾದ್ರಿಯವರು ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿದ್ದರು. ನಂಜನಗೂಡು ಶ್ರೀಕಂಠೇಶ್ವರನ ದೇವಸ್ಥಾನದಲ್ಲಿ ಹರಿಜನರ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕೆಂಬ ಚಳವಳಿ ನಡೆಯಿತು. ಈ ಚಳುವಳಿಯನ್ನು ಊರಿನ ಸಾರ್ವಜನಿಕರು ಬಹಳವಾಗಿ ಪ್ರತಿಭಟಿಸಿ ಚಳವಳಿಕಾರರ ಮೇಲೆ ಹಲ್ಲೆ ನಡೆಸಿದರು. ಆದರೂ ಚಳವಳಿಯು ಬಿರುಸಿನಿಂದ ಸಾಗಿತ್ತು. ಸ್ವಲ್ಪ ಸಮಯದ ತರುವಾಯ ದೇವಸ್ಥಾನದ ಅಧಿಕಾರಿಗಳಿಗೂ ಚಳವಳಿಗಾರರಿಗೂ ಒಂದು ಒಪ್ಪಂದವಾಗಿ ಚಳವಳಿಯು ಯಶಸ್ಸನ್ನು ಹೊಂದಿ ನಿಲ್ಲಿಸಲ್ಪಟ್ಟಿತು. ಈ ಚಳವಳಿಯಲ್ಲಿ ಮೈಸೂರಿನ ಎಂ.ಎನ್. ಜೋಯಿಸ್ ತಗಡೂರು ರಾಮಚಂದ್ರರಾಯರು ಮೊದಲಾದ ಪ್ರಮುಖರಿದ್ದರು. ಹರಿಜನೋದ್ಧರ ಚಳವಳಿಯ ಜೊತೆಗೆ ಈ ಪ್ರಾಂತ್ಯದಲ್ಲಿ ಆರಂಭವಾದ ಖಾದಿ ಚಳವಳಿಯು ಜನಪ್ರಿಯವಾದ ಆಂದೋಲನವಾಗಿತ್ತು. ಮೈಸೂರು ನಗರದಲ್ಲಿ 'ಖದ್ದರ್ ಪರಸ್ಪರ ಸಹಾಯ ಸಂಘ'ವು ಸ್ಥಾಪನೆಗೊಂಡು, ತಗಡೂರಿನ ಆಶ್ರಮ ಖಾದಿ ಕೈಗಾರಿಕೆಯ ಬೆಳವಣಿಗೆಗೆ ಕಾರಣವಾಯಿತು. ಈ ಕಾರ್ಯಕ್ರಮಗಳಿಂದ ಮೈಸೂರು ಪ್ರಾಂತ್ಯದ ಜನರು ಎಚ್ಚೆತ್ತರು. ರಾಷ್ಟ್ರೀಯ ಭಾವನೆ ಜನರಲ್ಲಿ ಬಹಳ ಮಟ್ಟಿಗೆ ಮೂಡಿತು. ಹಿಂದೂಸ್ಥಾನದ ನಾನಾ ಭಾಗಗಳಿಂದ ಗಾಂಧೀಜಿಯವರೇ ಮೊದಲಾದ ಅನೇಕ ರಾಷ್ಟ್ರೀಯ ಮುಖಂಡರುಗಳು ಮೈಸೂರು ಪ್ರಾಂತ್ಯಕ್ಕೆ ಭೇಟಿ ಕೊಟ್ಟು ಸಾರ್ವಜನಿಕ ಭಾಷಣಗಳ ಮೂಲಕ ಸಾಮಾನ್ಯ ಜನರನ್ನು ಜಾಗೃತಗೊಳಿಸಿದರು. ಈ ವಾತಾವರಣವನ್ನು ಉಪಯೋಗಿಸಿಕೊಂಡು ಮೈಸೂರಿನಲ್ಲಿ ಎಂ.ಎನ್. ಜೋಯಿಸ್ ಅವರ ನಾಯಕತ್ವದಲ್ಲಿ ಸ್ವದೇಶಿ ವಸ್ತುಗಳನ್ನು ಪ್ರತಿನಿಧಿಸುವ ವಸ್ತುಪ್ರದರ್ಶನವನ್ನು ಆರಂಭಿಸಲು ತೀರ್ಮಾನಿಸಲಾಯಿತು. ನಿವೃತ್ತ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಎಂ.ಸುಬ್ರಹ್ಮಣ್ಯಅಯ್ಯರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ ಒಂದು ಸಮಿತಿಯನ್ನು ರಚಿಸಲಾಯಿತು. ಈ ಕಾರ್ಯದಲ್ಲಿ ಎಂ.ಎನ್.ಜೋಯಿಸ್ ಮತ್ತು ಜಿ.ಎ.ಆಚಾರ್ಯ (ಬೆಂಗಾಲ್ ಲ್ಯಾಂಪ್) ಹಾಗೂ ಇನ್ನಿಬ್ಬರು ಸಂಚಾಲಕರಿದ್ದರು. ಈ ವಸ್ತುಪ್ರದರ್ಶನವನ್ನು ಪ್ರಥಮ ಬಾರಿಗೆ ಸಾಹುಕಾರ್ ಬನುಮಯ್ಯ ಪ್ರೌಢಶಾಲೆಯಲ್ಲಿ ಏರ್ಪಡಿಸಲಾಯಿತು. ಮೈಸೂರು ಅರಮನೆಯವರು ಈ ವಸ್ತುಪ್ರದರ್ಶನಕ್ಕೆ ತಮ್ಮ ಸಹಕಾರ ನೀಡಿದರು. ಈ ರೀತಿಯ ಎಲ್ಲಾ ಕಾರ್ಯಕ್ರಮಗಳು ಮೈಸೂರು ಪ್ರಾಂತ್ಯದಲ್ಲಿ ನಡೆದು ಜನರಲ್ಲಿ ರಾಷ್ಟ್ರೀಯ ಪ್ರೇಮ ಬೆಳೆಯುವ ಹೊತ್ತಿಗೆ ಗಾಂಧೀಜಿಯವರು ೧೯೩೦ರಲ್ಲಿ ದಂಡೀಯಾತ್ರೆಯ ಮೂಲಕ ಸ್ವಾತಂತ್ರ್ಯ ಸಂಗ್ರಾಮವನ್ನು ಬಿರುಸುಗೊಳ್ಳುವಂತೆ ಮಾಡಿದ್ದರು.

**ಇರ್ವಿನ್ ನಾಲ್ ಚಳವಳಿ**

ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಪೂರ್ವಭಾವಿಯಾಗಿ ಸಂಭವಿಸಿದ ಇರ್ವಿನ್ ನಾಲಾ ಚಳವಳಿಯು (೧೯೩೧-೩೨) ರೈತ ಸಂಘಟನೆಯ ಪ್ರಥಮ ಪ್ರದರ್ಶನವಾಗಿತ್ತು. ಇರ್ವಿನ್ (ಈಗಿನ ವಿಶ್ವೇಶ್ವರಯ್ಯ) ನಾಲೆಯು ಕೃಷ್ಣರಾಜಸಾಗರ (ಕನ್ನಂಬಾಡಿ)ದಿಂದ ಹರಿದು ಬರುವ ಕಾವೇರಿಯ ಶಾಖೆ ಹಾಗೂ ಶಿಂಷಾ ಶಾಖೆಯಾಗಿದ್ದು, ರೈತರು ಅನುಸರಿಸಬೇಕಾಗಿದ್ದ ವ್ಯವಸಾಯ ಕ್ರಮ, ನೀರಾವರಿಯಾಗುವ ಜಮೀನುಗಳಿಗೆ ಅವರು ಕೊಡಬೇಕಾಗಿದ್ದ ಕಂದಾಯ, ಕಾಣಿಕೆಧನ ಕೊಡುವುದು ತಡವಾದರೆ ಅದಕ್ಕೆ ನೀಡಬೇಕಾಗಿದ್ದ ಬಡ್ಡಿ ಇತ್ಯಾದಿ ವಿಷಯಗಳ ಬಗ್ಗೆ ಸರ್ಕಾರದವರು ಹೊರಡಿಸಿದ್ದ ಆಜ್ಞೆಯು ರೈತರಲ್ಲಿ ಪ್ರಬಲವಾದ ಅತೃಪ್ತಿಯನ್ನು ಮೂಡಿಸಿತ್ತು. ಇಂಥಹ ಸಂದರ್ಭದಲ್ಲಿ ಮಂಡ್ಯದ ಎಚ್.ಹೊನ್ನಯ್ಯನವರು, ಹೊನಗಾನಹಳ್ಳಿಯ ಕೆ.ಪುಟ್ಟಣ್ಣನವರು ಹಾಗೂ ಮದ್ದೂರಿನ ಎಚ್.ಕೆ. ವೀರಣ್ಣಗೌಡರು ರೈತರಲ್ಲಿ ಸಂಘಟಣೆಯನ್ನು ಮೂಡಿಸುವ ಮೂಲಕ ಇರ್ವಿನ್ ನಾಲಾ ಚಳವಳಿಯ ಮುಖಂಡತ್ವವನ್ನು ವಹಿಸಿದ್ದರು. ಮಂಡ್ಯ ಜಿಲ್ಲೆಯವರಾಗಿರದ್ದ ಎಚ್.ಕೆ.ವೀರಣ್ಣಗೌಡರು ಆ ಜಿಲ್ಲೆಯ ಯಾವ ತಾಲೂಕಿನಿಂದಲೂ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿರಲಿಲ್ಲದಿದ್ದ ಕಾರಣ ಮತ್ತು ಬೆಂಗಳೂರಿನ ಸುಲ್ತಾನಪೇಟೆ ಗಣಪತಿ ಗಲಭೆಯ ಬಗ್ಗೆ ಸರ್ಕಾರ ತಳೆದಿದ್ದ ನಿಲುವನ್ನು ತಮ್ಮ 'ಚಿತ್ರಗುಪ್ತ' ಪತ್ರಿಕೆಯಲ್ಲಿ ಪ್ರತಿಭಟಿಸಿದ್ದ ಕಾರಣ ಸರ್ಕಾರದವರ ವಕ್ರದೃಷ್ಟಿಗೆ ಪಾತ್ರರಾಗಿದ್ದರು. ಆದಕಾರಣ, ಈ ವಿಷಯವನ್ನು ಅರಿತಿದ್ದ ಪುಟ್ಟಣ್ಣನವರು ತಮ್ಮ ಪ್ರಭಾವದಿಂದ ವೀರಣ್ಣಗೌಡರ ಮನವೊಲಿಸಿ ಹೋರಾಟದ ಮುಂದಾಳತ್ವವನ್ನು ವಹಿಸುವಂತೆ ಮಾಡಿದರು. ಸರ್ಕಾರದ ಆಜ್ಞೆಯ ಪರಿಣಾಮವಾಗಿ ರೈತರಿಗಾಗುವ ಕಷ್ಟನಷ್ಟಗಳನ್ನು ಇರ್ವಿನ್‌ನಾಲಾ ಪ್ರದೇಶದ ಎಲ್ಲಾ ತಾಲೂಕುಗಳ ಪ್ರತಿಯೊಂದು ಹಳ್ಳಿಗೂ ಹೋಗಿ ಜನರಿಗೆ ಮನದಟ್ಟು ಮಾಡಿಕೊಟ್ಟರು. ಹಳ್ಳಿಯಿಂದ ಹಳ್ಳಿಗೆ ಕಾಲ್ನಡಿಗೆಯಿಂದಲೇ ಹೋಗಿ ರೈತರಲ್ಲಿ ಅವಶ್ಯಕವಾದ ಜಾಗೃತಿಯನ್ನು ಮೂಡಿಸುವಲ್ಲಿ ಇವರುಗಳು ಯಶಸ್ವಿಯಾದರು. ವೀರಣ್ಣಗೌಡರು ತಮ್ಮ ಪ್ರಥಮ ರೈತ ಸಂಘಟನಾ ಪ್ರಚಾರ ಸಭೆಯನ್ನು ಮಳವಳ್ಳಿ ತಾಲೂಕಿನ ಮತ್ತಿತಾಳೇಶ್ವರದ ಒಂದು ತೋಪಿನಲ್ಲಿ ಆರಂಭಿಸಿದರು. ಅನಂತರ ಮೇಲಿಂದ ಮೇಲೆ ಚಿಕ್ಕ ಅರಸಿನಕೆರೆ, ಗೆಜ್ಜಲಗೆರೆ, ಗೌಡಗೆರೆ, ಹೊಸ ಹೊಳಲು ಗ್ರಾಮಗಳಲ್ಲೂ, ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಫ್ರೆಂಚ್‌ರಾಕ್ಸ್(ಪಾಂಡವಪುರ) ತಾಲೂಕುಗಳಲ್ಲಿಯೂ ಹಾಗೂ ಅನೇಕ ದೊಡ್ಡ ದೊಡ್ಡ ಗ್ರಾಮಗಳಲ್ಲೂ ಈ ಸದಸ್ಯರುಗಳು ಪಾದಯಾತ್ರೆ ಕೈಗೊಂಡು ಪ್ರಚಾರ ಸಭೆಗಳನ್ನು ಏರ್ಪಡಿಸಿದರು. ಇದಲ್ಲದೇ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದ ಮುಡುಕುತೊರೆ ಜಾತ್ರೆಯಲ್ಲಿ ಮೂರು ದಿನಗಳು ಹಾಗೂ ಚುಂಚನಕಟ್ಟೆ ಜಾತ್ರೆಯಲ್ಲಿಯೂ ಪ್ರಚಾರ ಭಾಷಣವನ್ನು ಕೈಗೊಳ್ಳಲಾಯಿತು. ಈ ರೀತಿಯ ಪ್ರಚಾರ ಕಾರ್ಯವು ಹದಿನಾಲ್ಕು ತಿಂಗಳ ಕಾಲ ನಡೆದು ನೂರಾರು ಸಭೆಗಳನ್ನು ಸಂಘಟಿಸಿ ರೈತರಲ್ಲಿ ಪ್ರಬಲವಾಗಿ ಅರಿವು ಮೂಡುವಂತೆ ಮಾಡಲಾಯಿತು.

ಇರ್ವಿನ್ ನಾಲಾ ಪ್ರದೇಶದಲ್ಲಿ 'ಬ್ಲಾಕ್ ಸಿಸ್ಟಂ' ಅಂದರೆ ಒಂದು ನಿಗದಿಯಾದ ಪ್ರದೇಶದ ಜಮೀನನಲ್ಲಿ ಅಥವಾ ನಾಲೆ ಹಾಗೂ ಸೀಳು ನಾಲೆ ಕೆಳಗಿರುವ ಜಮೀನುಗಳಲ್ಲಿ ಒಂದು ವರ್ಷ ಕಬ್ಬು, ಎರಡನೇ ವರ್ಷ ಬತ್ತ ಮತ್ತು ಮೂರನೇ ವರ್ಷ ಕುಷ್ಕಿ ಈ ರೀತಿ ಬೆಳೆ ಬೆಳೆಯಬೇಕೆಂದು ಸರ್. ಮಿರ್ಜಾಇಸ್ಮಾಯಿಲ್ ಸ್ಥೂಲವಾಗಿ ತಿಳಿಸಿದ್ದರು. ದಿವಾನರ ಸಲಹೆಯನ್ನು ಕಾರ್ಯಗತಗೊಳಿಸುವ ವಿವರಗಳನ್ನು ಸಿದ್ಧಪಡಿಸಬೇಕೆಂದು ಸರ್ಕಾರದವರು ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರುಗಳಿಗೆ ಸೂಚನೆ ನೀಡಿದ್ದರು. ಆಗ ಕೃಷಿ ಇಲಾಖೆಯ ನಿರ್ದೇಶಕರಾಗಿದ್ದ ಡಾ. ಲೆಸ್ಲಿಕೋಲ್ಮನ್ ಅವರು ದಿವಾನರ ಸಲಹೆಯನ್ನೇ ಸೂಕ್ತತೆಗೆ ತಕ್ಕಂತೆ ಸಮರ್ಥಿಸಿದರು. ಇದರನ್ವಯ ಸರ್ಕಾರದ ಅಧಿಕಾರಿಗಳು ನಾಲೆಯ ಪ್ರದೇಶಗಳ ಸರ್ವೇಕ್ಷಣೆ ನಡೆಸಿದ ನಂತರ, ವ್ಯವಸಾಯ ಇಲಾಖೆಯ ತಜ್ಞರಾದ ಡಾ.ಬಿ. ನರಸಿಂಹಯ್ಯಂಗಾರ್ಯರು ದೀರ್ಘವಾದ ವರದಿಯನ್ನು ಸಲ್ಲಿಸಿ ಒಂಭತ್ತು ವಿಧಿಗಳ ಪದ್ಧತಿಯನ್ನು ಜಾರಿಗೊಳಿಸಲು

ಶಿಫಾರಸ್ಸು ಮಾಡಿದ್ದರು. ಇದರ ಪ್ರಕಾರ ಸಹಾಯಧನದ ಮೇಲಿನ ಬಡ್ಡಿಯನ್ನು ವಜಾ ಮಾಡಬೇಕೆಂದು ಸೂಚಿಸಲಾಗಿತ್ತು. ಆದರೆ, ಸರ್ಕಾರ ಬೇರೆಯೇ ನಿಲುವನ್ನು ತಾಳಿದ ಕಾರಣ ನರಸಿಂಹಯ್ಯಂಗಾರ್ಯರ ವರದಿಯನ್ನು ಡಾ.ಕೋಲ್ಮನ್ ಅವರ ನಿರ್ಧಾರದನ್ವಯ ಗೋಪ್ಯವಾಗಿಡಲಾಯಿತು. ಆದರೆ, ಸರ್ಕಾರದ ಎಕ್ಸಿಕ್ಯುಟಿವ್ ಇಂಜನೀಯರ್ ಕಛೇರಿಯಲ್ಲಿದ್ದ ಒಬ್ಬ ಅಧಿಕಾರಿ ಎಂ.ಎಲ್. ಲಿಂಗಣ್ಣನವರ ಮೂಲಕ ಈ ವರದಿಯ ಪ್ರತಿಯನ್ನು ಎಚ್.ಕೆ.ವೀರಣ್ಣಗೌಡರು ಪಡೆದುಕೊಂಡರು. ರೈತರ ಪ್ರಮುಖ ಬೇಡಿಕೆಗಳ ಪೈಕಿ ನರಸಿಂಹಯ್ಯಂಗಾರ್ಯರ ವರದಿಯನ್ನು ಜಾರಿಗೊಳಿಸಬೇಕೆಂಬುದು ಜನಪ್ರಿಯವಾಯಿತು. ಈ ವರದಿಯ ವಿವರಗಳನ್ನು ನ್ಯಾಯವಿಧಾಯಕ ಸಭಾ ಸದಸ್ಯರಾಗಿದ್ದ ಡಿ.ಎಸ್.ಮಲ್ಲಪ್ಪನವರನ್ನು ನ್ಯಾಯವಿಧಾಯಕ ಸಭೆಯಲ್ಲಿ ಮಂಡಿಸಬೇಕೆಂದು ರೈತ ಹೋರಾಟದ ನಾಯಕರುಗಳು ಒತ್ತಾಯಿಸಿದರು. ಅವರು ಈ ವರದಿಯ ಬಗ್ಗೆ ಪ್ರಸ್ತಾಪಿಸಿದಾಗ ಸರ್ಕಾರವು ಅಂತಹ ಯಾವುದೇ ವರದಿಯು ಇಲ್ಲವೆಂದು ಪ್ರಶ್ನೆಯನ್ನು ತಳ್ಳಿಹಾಕಿತು. ಇದರಿಂದಾಗಿ ಸರ್ಕಾರದ ವಿರುದ್ಧದ ಚಳವಳಿಯನ್ನು ತೀವ್ರಗೊಳಿಸಬೇಕಾದುದು ಅನಿವಾರ್ಯವಾಯಿತು. ಸರ್ಕಾರದ ಆಜ್ಞೆಯಿಂದಾಗಿ ರೈತರಿಗಾಗುವ ಕಷ್ಟನಷ್ಟಗಳ ವಿವರಗಳನ್ನೆಲ್ಲ ಮನನ ಮಾಡಿಕೊಂಡ ನಂತರ ಗೆಜ್ಜಲಗೆರೆಯಲ್ಲಿ ಸೇರಿದ್ದ ಬೃಹತ್ ಸಭೆಯಲ್ಲಿ ಹತ್ತು ಸಾವಿರ ಮಂದಿ ರೈತರನ್ನು ಸಂಘಟಿಸಿ ಕಾಲುನಡಗೆಯಲ್ಲಿ ಬೆಂಗಳೂರಿಗೆ ಜಾಥಾ ಹೊರಟು ದಿವಾನರಲ್ಲಿ ತಮ್ಮ ಕೋರಿಕೆಗಳನ್ನು ಸಲ್ಲಿಸಬೇಕೆಂದು ಈ ಹೋರಾಟದ ನಾಯಕತ್ವವಹಿಸಿದ್ದ ಎಚ್.ಕೆ. ವೀರಣ್ಣಗೌಡರು, ಎಚ್. ಹೊನ್ನಯ್ಯ ಮತ್ತು ಹೊನಗಾನಹಳ್ಳಿ ಕೆ.ಪುಟ್ಟಣ್ಣ ಅವರುಗಳು ತೀರ್ಮಾನಿಸಿದರು. ಈ ನಾಯಕರುಗಳ ಒತ್ತಾಯದ ಮೇಲೆ ೧೯೩೨ನೇ ಜನವರಿ ೪ ರಂದು ಮಧ್ಯಾಹ್ನ ಎರಡು ಗಂಟೆಗೆ ಬೆಂಗಳೂರಿನ ಅಠಾರಾ ಕಛೇರಿಯಲ್ಲಿ ರೈತರನ್ನು ಭೇಟಿ ಮಾಡಲು ದಿವಾನರು ಒಪ್ಪಿದರು. ಜಾಥಾವನ್ನು ಯಶಸ್ವಿಗೊಳಿಸಲು ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ರೈತರು ಕಾಲುನಡಗೆಯಲ್ಲಿ ಪಥಚಲನೆಯಲ್ಲಿ ಪಾಲಿಸಬೇಕಾದ ನಿಯಮಗಳ ಬಗ್ಗೆ ಶಿಸ್ತಿನ ಕಟ್ಟುಪಾಡುಗಳನ್ನು ವಿಧಿಸಲಾಯಿತು. ರೈತರ ಜಾಥಾ ೧೯೩೨ ಜನವರಿ ೧ ರಂದು ಮುಂಜಾನೆ ಮದ್ದೂರು ಬಳಿ ಕೋಡಿಹಳ್ಳಿ ಸಮೀಪ ಗಂಡು ತೋಪಿನಿಂದ ಆರಂಭಗೊಂಡಾಗ ೧೦,೦೦೦ ರೈತ ಸಮೂಹವು ಪಾಲ್ಗೊಂಡಿತ್ತು. ಮೂರು ದಿನಗಳ ಸತತ ಪ್ರಯಾಣದ ನಂತರ ಜಾತಾವು ದಿನಾಂಕ ೦೪-೦೧-೧೯೩೨ ರಂದು ಮಧ್ಯಾಹ್ನ ೧೨ ಗಂಟೆಗೆ ಬೆಂಗಳೂರಿನ ಅಠಾರ ಕಛೇರಿ ತಲುಪಿತು. ರೈತರು ಶಿಸ್ತಿನಿಂದ ಜಾಥಾದಲ್ಲಿ ಅಧಿಕಸಂಖ್ಯೆಯಲ್ಲಿ ಪಾಲ್ಗೊಂಡಿದ್ದು, ಮೈಸೂರಿನ ಇತಿಹಾಸದಲ್ಲೆ ಪ್ರಥಮವಾಗಿದ್ದು ಅಂದಿನ ದಿವಾನರಾಗಿದ್ದ ಸರ್.ಮಿರ್ಜಾಇಸ್ಮಾಯಿಲ್‌ವರಿಗೂ ಮೆಚ್ಚುಗೆಯಾಗಿತ್ತು. ಜಾಥಾದ ಮುಖಂಡತ್ವವನ್ನು ವಹಿಸಿದ್ದ ಎಚ್.ಕೆ.ವೀರಣ್ಣಗೌಡರನ್ನು ದಿವಾನರು ಕರೆಸಿ ಕೇವಲ ಎಂಟು-ಹತ್ತು ಮಂದಿಯೊಡನೆ ಮಾತುಕತೆಗೆ ಬರಬೇಕೆಂದು ತಿಳಿಸಿದರು. ಆದರೆ, ಅದಕ್ಕೆ ಅವರು ಒಪ್ಪದೇ ಕಾಲನಡಗೆಯಿಂದ ಕಷ್ಟಪಟ್ಟು ಬಂದಿರುವ ಎಲ್ಲಾ ರೈತರನ್ನೂ ಒಟ್ಟಾಗಿ ಭೇಟಿ ಮಾಡಬೇಕೆಂದು ದಿವಾನವರನ್ನು ಒತ್ತಾಯಿಸಿದರು. ಸರ್. ಮಿರ್ಜಾಇಸ್ಮಾಯಿಲ್ ಅವರು ಸಂತೋಷದಿಂದ ಒಪ್ಪಿಕೊಂಡು ಸ್ವಲ್ಪ ಸಮಯದ ನಂತರ ರೈತರನ್ನು ಉದ್ದೇಶಿಸಿ ಮಾತನಾಡಿ ಸಹಾಯಧನದ ಮೇಲೆ ಯಾವುದೇ ರೀತಿಯ ಬಡ್ಡಿಯನ್ನು ವಿಧಿಸಲಾಗುವುದಿಲ್ಲ. ಹಾಗೂ ಸರ್ಕಾರವು ಹೊರಡಿಸಿರುವ ಆಜ್ಞೆಯನ್ನು ವಜಾ ಮಾಡಬೇಕೆಂದು ರೈತರು ಕೋರಿರುವ ಬೇಡಿಕೆಯನ್ನು ಸರ್ಕಾರವು ಒಪ್ಪಿಕೊಳ್ಳುತ್ತದೆ, ಎಂದು ದಿವಾನರು ಸಭೆಗೆ ತಿಳಿಸಿದಾಗ ಮುಗಿಲು ಮುಟ್ಟುವಷ್ಟರ ಮಟ್ಟಿಗೆ ಕರತಾಡನವಾಯಿತು. ಮದ್ದೂರಿನಿಂದ ಬಂದ ರೈತರು ನಡೆಸಿದ ಜಾಥಾ ಹಾಗೂ ಪ್ರತಿಭಟನೆಯು ಕರ್ನಾಟಕ ಇತಿಹಾಸದಲ್ಲಿ ಪ್ರಥಮ ಹೋರಾಟವಾಗಿದ್ದಿತು. ಈ ಪ್ರತಿಭಟನೆಯ ಸಮಯದಲ್ಲಿ ಎಚ್.ಕೆ. ವೀರಣ್ಣಗೌಡರು ರಚಿಸಿದ 'ಇರ್ವಿನ್ ನಾಲಾ ರೈತರ ಕಷ್ಟನಷ್ಟಗಳು' ಎಂಬ ಪುಸ್ತಕವನ್ನು ರೈತರ ಸಂಘದಿಂದ ಪ್ರಕಟಿಸಿದ್ದು, ಅದನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರವು ಹವಣಿಸುತ್ತಿತ್ತು. ಆದರೆ ಅದು ಸಾಧ್ಯವಾಗದಂತೆ ವೀರಣ್ಣಗೌಡರು ಎಚ್ಚರವಹಿಸಿದರು.

ದಿವಾನರು ರೈತರ ಸಭೆಯಲ್ಲಿ ಆಶ್ವಾಸನೆ ನೀಡಿದ ಬಳಿಕ ತಾವೇ ಮಂಡ್ಯಕ್ಕೆ ಬಂದು ಸ್ಥಳ ವಿದ್ಯಮಾನಗಳನ್ನು ಪರಿಶೀಲಿಸುವುದಾಗಿ ರೈತರಿಗೆ ಭರವಸೆ ಕೊಟ್ಟಿದ್ದರೂ ಅದು ಕಾರ್ಯಗತವಾಗಲು ಹಲವು ಅಡಚಣೆಗಳಿದ್ದವು. ಮೇಲಿನವರ ಸೂಚನೆ ಹಾಗೂ ಒತ್ತಡಕ್ಕೆ ಮಣಿದು ದಿವಾನರು ಜಿಲ್ಲಾಧಿಕಾರಿಗಳಿಗೆ ಗೋಪ್ಯವಾಗಿ ಪತ್ರ ಬರೆದು ತಮ್ಮ ಮಂಡ್ಯ ಭೇಟಿಯನ್ನು ಆದಷ್ಟೂ ಗೋಪ್ಯವಾಗಿಟ್ಟುಕೊಂಡು ಸರ್ಕಾರದ ಬಗ್ಗೆ ಅನುಕಂಪವಿರುವ ಹಾಗೂ ಅವರ ದಾಕ್ಷಿಣ್ಯಕ್ಕೆ ಮಣಿಯುವ ಸುಮಾರು ಐವತ್ತು-ನೂರು ಮಂದಿಯನ್ನು ಮಾತ್ರ ಮಂಡ್ಯದ ಪ್ರವಾಸಿ ಮಂದಿರದಲ್ಲಿ ಸೇರಿಸಬೇಕೆಂದು ತಿಳಿಸಿದ್ದರೆಂಬ ಅಭಿಪ್ರಾಯವಿದೆ. ಆದರೆ, ಹೇಗೋ ಈ ವಿಷಯವು ವೀರಣ್ಣಗೌಡರಿಗೆ ತಿಳಿದು, ರಾತ್ರೋರಾತ್ರಿ ರೈತರಿಗೆಲ್ಲಾ ಸುದ್ದಿಯನ್ನು ಕಳುಹಿಸಿದ ಪರಿಣಾಮವಾಗಿ ಮಾರನೆಯ ದಿನ ಹತ್ತು ಗಂಟೆಗಾಗಲೇ ಸುಮಾರು ಹತ್ತು ಸಾವಿರ ಜನರನ್ನು ಸೇರಿಸಲು ಶೀಘ್ರ ಕ್ರಮ ಕೈಗೊಂಡರು. ದಿವಾನರು ಸುಮಾರು ಹನ್ನೊಂದು ಗಂಟೆಗೆ ಬರುವ ಸುದ್ದಿ ಇದ್ದರೂ ಸ್ವಲ್ಪ ತಡವಾಗಿ ಬಂದು ಅಲ್ಲಿ ಸೇರಿದ್ದ ಅಧಿಕ ಸಂಖ್ಯೆಯ ರೈತರನ್ನು ಕಂಡು ದಿಗ್ಭ್ರಾಂತರಾಗಿ, ಸ್ವಲ್ಪ ಸಮಯವಿದ್ದು ಮೈಸೂರಿಗೆ ಪ್ರಯಾಣ ಮಾಡಿದರು. ರೈತರ ನಾಯಕರುಗಳು ಜನಗಳಲ್ಲಿ ಜಾಗೃತಿ ಮೂಡಿಸುವ ದೃಷ್ಟಿಯಿಂದ ಕೃಷ್ಣರಾಜಸಾಗರ ಮಹಾದ್ವಾರದ ಮಂಟಪದಲ್ಲಿ ಈಗಲೂ ಇರುವ ಟಿಪ್ಪೂಸುಲ್ತಾನನ ಪರ್ಷಿಯನ್ ಶಾಸನವನ್ನು ಕನ್ನಡಕ್ಕೆ ಭಾಷಾಂತರಿಸಿ ಹತ್ತು ಸಾವಿರ ಪ್ರತಿಗಳನ್ನು ಅಚ್ಚು ಹಾಕಿಸಿ ಅಲ್ಲಿ ಸೇರಿದ್ದ ರೈತರಿಗೆಲ್ಲಾ ಹಂಚಿದರು. ಈ ಶಾಸನವು 'ಬೇಸಾಯ ಮಾಡುವ ರೈತರು ಬೇರೆ ಕಡೆಗಳಲ್ಲಿ ತರಿ ವ್ಯವಸಾಯದ ರೈತರು ಕೊಡುತ್ತಿದ್ದ ಕಂದಾಯದಲ್ಲಿ ರೂಪಾಯಿಗೆ ಹನ್ನೆರಡು ಆಣೆಯನ್ನಷ್ಟು ಮಾತ್ರ ಕೊಟ್ಟರೆ ಸಾಕೆಂದೂ ಹಾಗೂ ಉಳಿದನಾಲ್ಕಾಣೆಯನ್ನು ದೇವರ ಹೆಸರಿನಲ್ಲಿ ಧರ್ಮವಾಗಿ ಬಿಟ್ಟಿರುವುದಾಗಿ' ದಾಖಲಿಸಿರುತ್ತದೆ. ದಿವಾನರು ಮೈಸೂರಿಗೆ ಹೊರಟಮೇಲೆ ಅಲ್ಲಿದ್ದ ಸರ್ಕಾರಿ ಅಧಿಕಾರಿಗಳು ಸರ್ಕಾರವು ಹೊರಡಿಸಿದ್ದ ಆದೇಶವನ್ನು ಕಾರ್ಯಗತಗೊಳಿಸುವ ಮನೋದಾರ್ಢ್ಯವನ್ನು ವ್ಯಕ್ತಪಡಿಸಿದುದು ಹೋರಾಟದ ನಾಯಕರಿಗೆ ತಿಳಿದುಬಂದಿತು. ಜಾರಿಯಲ್ಲಿದ್ದ ನಿಷೇಧಾಜ್ಞೆಯನ್ನು ಉಲ್ಲಂಘಿಸಿದ ಆಪಾದನೆಯ ಮೇಲೆ ಎಚ್.ಕೆ.ವೀರಣ್ಣಗೌಡ ಅವರೂ ಸೇರಿದಂತೆ ಹದಿನೈದು ಮಂದಿ ರೈತ ಸಂಘದ ನಾಯಕರುಗಳನ್ನು ದಸ್ತಗಿರಿ ಮಾಡಿ ಸೆರೆಮನೆಗೆ ಕಳುಹಿಸಲಾಯಿತು. ಹೀಗೆ ಸರ್ಕಾರವು ಬೆಂಗಳೂರಿನ ಗಣಪತಿ ಗಲಭೆಯಲ್ಲಿ ಅನುಸರಿಸಿದ ನೀತಿಯನ್ನೇ ಮಂಡ್ಯ ಜಿಲ್ಲೆಯ ಇರ್ವಿನ್‌ನಾಲಾ ಚಳವಳಿಯಲ್ಲಿಯೂ ಅನುಸರಿಸಿತೆಂದು ಎಚ್.ಕೆ. ವೀರಣ್ಣಗೌಡರು ಅಭಿಪ್ರಾಯಪಡುತ್ತಾರೆ.

ಬ್ರಿಟೀಷರು ನೇರವಾಗಿ ಆಳುತ್ತಿದ್ದ ಪ್ರದೇಶಗಳಲ್ಲಿ ಮಾತ್ರ ಗಾಂಧೀಜಿಯವರು ಆರಂಭಿಸಿದ ದಂಡೀಯಾತ್ರೆ ಅಥವಾ 'ಉಪ್ಪಿನ ಸತ್ಯಾಗ್ರಹ' ಹಾಗೂ ನಾಗರೀಕ ಕಾನೂನು ಭಂಗ ಚಳವಳಿಗಳು ಬಿರುಸಿನಿಂದ ಆರಂಭಗೊಂಡವೇ ಹೊರತು ಬೇರೆ ಸಾಮಂತ ಪ್ರದೇಶಗಳಲ್ಲಿ ಯಾವುದೇ ರೀತಿಯಲ್ಲೂ ಆರಂಭವಾಗಲೇ ಇಲ್ಲ. ಮಂಡ್ಯ ಜಿಲ್ಲೆಯಲ್ಲಿ ೧೯೩೭-೩೮ಕ್ಕೆ ಮೊದಲು ಯಾವುದೇ ಸ್ವಾತಂತ್ರ್ಯ ಆಂದೋಲನದ ನೇರವಾದ ಕಾರ್ಯಕ್ರಮಗಳೂ ಕಂಡು ಬರುವುದಿಲ್ಲ. ಮದ್ದೂರಿನ ಬಳಿ ಶಿವಪುರದಲ್ಲಿ ೧೯೩೮ರಲ್ಲಿ ಸಂಭವಿಸಿದ ಧ್ವಜ ಸತ್ಯಾಗ್ರಹವೇ ಈ ಭಾಗದ ಪ್ರಮುಖ ಹಾಗೂ ಪ್ರಥಮ ಚಳವಳಿಯಾಗಿತ್ತು.

**ಶಿವಪುರದ ಧ್ವಜ ಸತ್ಯಾಗ್ರಹ**

ಸಂಯುಕ್ತ ಪ್ರಜಾ ಪಕ್ಷವು ಮೈಸೂರು ಅಧಿವೇಶನದಲ್ಲಿ ತನ್ನ ಮೂಲಭೂತ ನಿಲುವನ್ನು ಬದಲಿಸಿ ೧೬ನೇ ಅಕ್ಟೋಬರ್ ೧೯೩೭ ರಂದು ಕಾಂಗ್ರೆಸ್ ಪಕ್ಷದೊಡನೆ ವಿಲೀನವಾದೊಡನೆ ಪ್ರಸಿದ್ಧ ವ್ಯಕ್ತಿಗಳಾದ ಹೆಚ್.ಸಿ. ದಾಸಪ್ಪ, ಕೆ.ಸಿ.ರೆಡ್ಡಿ ಮೊದಲಾದ ಹಿರಿಯ ನಾಯಕರುಗಳು ಕಾಂಗ್ರೆಸ್ ಪಕ್ಷವನ್ನು ಸೇರಲು ಕಾರಣವಾಯಿತು. ಶಿವಪುರ ಧ್ವಜ ಸತ್ಯಾಗ್ರಹವು ಈ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಮೈಲಿಗಲ್ಲಾಗಿದ್ದರೂ ಇದಕ್ಕೆ ಪೂರ್ವಭಾವಿಯಾಗಿ ಮೈಸೂರಿನಲ್ಲಿ ೧೯೩೮ರ ಜನವರಿ ೨೬ ರಂದು ಸುಬ್ಬಮ್ಮ ಜೋಯಿಸ್ ಅವರು ತಗಡೂರು ರಾಮಚಂದ್ರರಾಯರು

ಮತ್ತು ಅಗರಂರಂಗಯ್ಯ ಅವರುಗಳ ಜೊತೆಗೂಡಿ ತ್ರಿವರ್ಣ ಧ್ವಜವನ್ನು ಹಾರಿಸಿದಾಗ ಅವರನ್ನು ಸೆರೆ ಹಿಡಿದು ದಸ್ತಗಿರಿ ಮಾಡಲಾಯಿತು. ಸುಬ್ಬಮ್ಮ ಅವರನ್ನು ಈ ರೀತಿ ಸೆರೆಹಿಡಿಯಲ್ಪಟ್ಟ ಪ್ರಥಮ ಮಹಿಳೆಯೆಂದು ಪರಿಗಣಿಸಲಾಗಿದೆ. ಇದರ ಪರಿಣಾಮವಾಗಿ ರೊಚ್ಚಿಗೆದ್ದ ಕಾಂಗ್ರೆಸ್ ನಾಯಕರುಗಳು ಮೈಸೂರಿನಿಂದ ಹೊರಗೇ ಅಂದರೆ ಮದ್ದೂರು ಬಳಿಯಿರುವ ಶಿವಪುರದಲಿ ಮೈಸೂರು ಜಿಲ್ಲಾ ಕಾಂಗ್ರೆಸ್‌ನ ಅಧಿವೇಶನವನ್ನು ಕರೆದರು. ಈ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಹಿರಿಯ ಸಮಾಜ ಕಾರ್ಯಕರ್ತರಾಗಿದ್ದ ಸಾಹುಕಾರ ಚನ್ನಯ್ಯ ಅವರನ್ನು ಚುನಾಯಿಸಲಾಯಿತು. ಈ ಅಧಿವೇಶನದಲ್ಲಿ ನಡೆಯಬಹುದಾದ ಬ್ರಿಟೀಷ್ ವಿರುದ್ಧದ ಚಳವಳಿಯನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರವು ಧ್ವಜಾರೋಹಣದ ವಿರುದ್ಧ ನಿರ್ಬಂಧಕ ಆಜ್ಞೆಯನ್ನು ಹೊರಡಿಸಿತ್ತು. ಕನ್ನಡದ ಹಿರಿಯ ಪತ್ರಕರ್ತರಾದ ಪಾಲಹಳ್ಳಿ ರಾಮಯ್ಯನವರು ತಮ್ಮ ಬೆಂಗಳೂರಿನ 'ತಾಯಿನಾಡು ಪತ್ರಿಕೆ' ಯ ಮೂಲಕ ಈ ಚಳವಳಿಯನ್ನು ಬೆಂಬಲಿಸಿದ್ದರು. ಶಿವಪುರದಲ್ಲಿ ನಡೆದ ಈ ಅಧಿವೇಶನಕ್ಕೆ 'ರಾಷ್ಟ್ರಕೂಟ' ಎಂಬ ಹೆಸರಿನ್ನಿಡಲಾಗಿತ್ತು. ಶಿವಪುರವು, ಮದ್ದೂರು ಬಳಿ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಶಿಂಷಾನದಿಯ ದಂಡೆಯಲ್ಲಿದೆ. ಅಧಿವೇಶನ ನಡೆಯಬೇಕಾಗಿದ್ದ ಸ್ಥಳವನ್ನು ಆಯ್ಕೆ ಮಾಡುವಲ್ಲಿ ಹಾಗೂ ವಿವಿಧ ಸಿದ್ಧತೆಗಳನ್ನು ಮಾಡುವಲ್ಲಿ ಮಂಡ್ಯ ತಾಲೂಕಿನ ಅಂದಿನ ರಾಜಕೀಯ ಮುಖಂಡರಾಗಿದ್ದ ಎಚ್.ಕೆ. ವೀರಣ್ಣಗೌಡರು ಪ್ರಮುಖ ಪಾತ್ರವಹಿಸಿದರು. ಮಂಡ್ಯದ ಗೋಪಾಲಶೆಟ್ಟರ ಮನೆಯ ಮಹಡಿಯಲ್ಲಿ ಮಾರ್ಚ್ ೧೧,೧೯೩೮ ರಂದು ಸೇರಿದ್ದ ಜಿಲ್ಲಾ ಪ್ರತಿನಿಧಿಗಳ ಸಭೆಯು ಶಿವಪುರದ ರಾಷ್ಟ್ರಕೂಟದ ಸಿದ್ಧತೆಯ ಸಂಪೂರ್ಣ ಜವಾಬ್ದಾರಿಯನ್ನು ಎಚ್.ಕೆ.ವೀರಣ್ಣಗೌಡರಿಗೆ ವಹಿಸಿಕೊಟ್ಟಿತು. ವ್ಯವಸ್ಥೆಮಾಡುವುದರಲ್ಲಿ ಅವರಿಗೆ ಸಹಕರಿಸಲು ಎ.ಜಿ.ಬಂಧೀಗೌಡ ಅವರನ್ನು ನೇಮಿಸಲಾಯಿತು. ಇವರಿಬ್ಬರನ್ನೂ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಯಿತು. ಎಚ್.ಸಿ. ದಾಸಪ್ಪ ಶಿವಪುರದ ತಿರುಮಲೇಗೌಡರು ಹಾಗೂ ಎಸ್.ರಂಗಯ್ಯ ಇವರುಗಳನ್ನು ಉಪಾಧ್ಯಕ್ಷರುಗಳೆಂದು ಮತ್ತು ಕೊಪ್ಪದ ಜೋಗಿಗೌಡರನ್ನು ಖಜಾಂಚಿಯೆಂದೂ ಹಾಗೂ ಎಂ.ಎನ್. ಜೋಯಿಸ್ ಅವರನ್ನು ಜನರಲ್ ಆಫೀಸರ್ ಕಮಾಂಡಿಂಗ್ ಅಥವಾ ದಳಪತಿ ಎಂದೂ ನೇಮಿಸಲಾಯಿತು. ಸ್ವಾಗತ ಸಮಿತಿಯ ಕಛೇರಿಯನ್ನು ತಿರುಮಲೇಗೌಡರ ಮನೆಯ ಮಹಡಿಯಲ್ಲಿ ಸ್ಥಾಪಿಸಲಾಯಿತು. ಮದ್ದೂರಿನಲ್ಲಿ ರಾಷ್ಟ್ರಕೂಟ ನಡೆಯದಂತೆ ಮಾಡಬೇಕೆಂದು ಸರ್ಕಾರದವರು ಬಹಳ ಪ್ರಯತ್ನ ಮಾಡಿದರು. ಆದರೆ ಮದ್ದೂರು ತಾಲೂಕಿನ ಅಮಲ್ದಾರರು ಮದ್ದೂರಿಗೆ ಬದಲಾಗಿ ನಂಜನಗೂಡಿನಲ್ಲಿ ರಾಷ್ಟ್ರಕೂಟ ನಡೆಸುವುದಾದರೆ ತಾವು ಅಧಿವೇಶನಕ್ಕೆ ಬೇಕಾದ ಸಹಾಯ ಒದಗಿಸುವುದಾಗಿ ಹೇಳಿದರು. ಇದಕ್ಕೆ ಪ್ರತಿಕ್ರಯಿಸಿ, ಒಬ್ಬ ಅಮಲ್ದಾರನ ನೆರವಿನಿಂದ ರಾಷ್ಟ್ರಕೂಟ ನಡೆಯುವದಾದರೆ ಅಂತಹ ರಾಷ್ಟ್ರಕೂಟವೇ ನಡೆಯಬೇಕಾಗಿಲ್ಲವೆಂದು ಹಿರಿಯ ನಾಯಕರಾಗಿದ್ದ ಹೆಚ್.ಕೆ.ವೀರಣ್ಣಗೌಡರು ಘೋಷಿಸಿದರು. ಹೀಗಾಗಿ ಸರ್ಕಾರದ ವಿರೋಧಿ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. 'ಏಪ್ರಿಲ್ ೯, ೧೦ ಮತ್ತು ೧೧, ೧೯೩೮ ಮೂರು ದಿನಗಳು ರಾಷ್ಟ್ರಕೂಟ ಸೇರಿಸಬೇಕೆಂದು ಸ್ವಾಗತ ಸಮಿತಿಯವರು ತೀರ್ಮಾನಿಸಿದ ನಂತರ ಕೇವಲ ಇಪ್ಪತ್ತು, ಇಪ್ಪತ್ತೈದು ದಿನಗಳಲ್ಲಿ ಸಿದ್ಧತೆಗಳನ್ನೆಲ್ಲಾ ಪೂರ್ಣಗೊಳಿಸಲಾಯಿತು' ಎಂದು ಎಚ್.ಕೆ. ವೀರಣ್ಣಗೌಡರು ತಿಳಿಸುತ್ತಾರೆ. ಸ್ವಾಗತ ಸಮಿತಿಯ ಕಾರ್ಯಾಲಯವನ್ನು ನಿರ್ವಹಿಸಲು ವಿ.ಎಸ್.ನಾರಾಯಣರಾಯರನ್ನು ನೇಮಿಸಲಾಯಿತು. ಈ ಸಮ್ಮೇಳನವು (ಏಪ್ರಿಲ್ ೧೯೩೮)ಮೈಸೂರು ಕಾಂಗ್ರೆಸ್ ನಡೆಸಿದ ಪ್ರಥಮ ಅಧಿವೇಶನವಾಗಿತ್ತು. ಬ್ರಿಟೀಷ್ ಸರ್ಕಾರವು ಧ್ವಜಾರೋಹಣದ ವಿರುದ್ಧ ಹೊರಡಿಸಿದ್ದ ನಿರ್ಬಂಧಕ ಆಜ್ಞೆಯು ಇನ್ನೂ ಜಾರಿಯಲ್ಲಿತ್ತು. ಅಧಿವೇಶನದಲ್ಲಿ ಭಾಗವಹಿಸಿದ್ದ ಮಹಿಳಾ ಪ್ರತಿನಿಧಿಗಳು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಲು ಒತ್ತಾಯಿಸಿದರು. ಈ ವಿಚಾರವನ್ನು ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದ ಟಿ.ಸಿದ್ಧಲಿಂಗಯ್ಯನವರು ಆಗಲೇ ಪ್ರಸ್ತಾಪಿಸಿದ್ದರು. ಶ್ರೀಮತಿ. ಯಶೋಧರಮ್ಮ ದಾಸಪ್ಪ, ಸುನಂದ ಅಯ್ಯಂಗಾರ್, ಪಾಲಹಳ್ಳಿ ವೆಂಕಮ್ಮ ಮತ್ತು ಸುಬ್ಬಮ್ಮ ಜೋಯಿಸರಂತಹ ಪ್ರಮುಖ ಮಹಿಳಾ ಪ್ರತಿನಿಧಿಗಳು ಈ ಅಧಿವೇಶನದಲ್ಲಿ ಭಾಗವಹಿಸಿದ್ದುದು ವಿಶೇಷವಾಗಿತ್ತು.

ಇವರುಗಳೇ ಅಲ್ಲದೆ ೨೫ ಮಂದಿ ಸ್ವಯಂ ಸೇವಕಿಯರಿದ್ದರು. ಸಾಹುಕಾರ್ ಚನ್ನಯ್ಯನವರ ಮಗಳು, ಪಾಲಹಳ್ಳಿ ಸೀತಾರಾಮಯ್ಯನವರ ಮಗಳೂ, ಹೆಚ್.ಸಿ.ದಾಸಪ್ಪ ಮತ್ತು ಟಿ.ಸಿದ್ಧಲಿಂಗಯ್ಯ ಇವರುಗಳ ಗಂಡು ಮಕ್ಕಳೂ ಸ್ವಯಂ ಸೇವಕರಾಗಿ ತಮಗೆ ವಹಿಸಿದ ಕೆಲಸಗಳನ್ನು ಶ್ರದ್ಧೆ ಹಾಗೂ ಶಿಸ್ತಿನಿಂದ ನಿರ್ವಹಿಸಿದರು. ಸ್ವಯಂ ಸೇವಕರನ್ನು ಹಲವಾರು ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ಗುಂಪನ್ನೂ ರಾಷ್ಟ್ರನಾಯಕರ ಹೆಸರಿನಿಂದ ಕರೆಯುತ್ತಿದ್ದರು. ಉದಾಹರಣೆಗೆ ತಿಲಕ್ ದಸ್ತ, ಭಗತ್‌ಸಿಂಗ್‌ದಸ್ತ, ಪಟೇಲ್‌ದಸ್ತ ಇತ್ಯಾದಿ. ಶಿವಪುರ ಧ್ವಜ ಸತ್ಯಾಗ್ರಹದ ಉದ್ದೇಶಿತ ಕಾಂಗ್ರೆಸ್ ಅಧಿವೇಶನದ ಸಿದ್ಧತೆಯಲ್ಲಿ ಸ್ಥಳೀಕರ ದುಡಿಮೆ ಹೆಚ್ಚು. ಕೊಪ್ಪದ ಜೋಗಿಗೌಡರ ಮಗ ಕೆ.ರಮೇಶ್, ಬೆಸಗರಹಳ್ಳಿ ತಮ್ಮಯ್ಯ, ಹನುಮಂತಪುರದ ಸೊತ್ತೆಲಿಂಗೇಗೌಡ, ಗುರುದೇವರಹಳ್ಳಿ ಕೆಂಪಯ್ಯ, ನರಸಿಂಹೇಗೌಡ, ಪಾಲಗ್ರಹಾರದ ಪಿ.ಎನ್.ನರಸಿಂಹಯ್ಯ ಕೊತ್ತನಹಳ್ಳಿ ಪಟೇಲ್ ಮಲ್ಲಯ್ಯ ಸಹೋದರರು, ಅರಕೆರೆಯ ಎ.ಕೆಂಚಪ್ಪ, ಬೆಲ್ಲಪ್ಪನ ಕೊಪ್ಪದ ಚಿಕ್ಕಬಿಳೀಗೌಡ, ದೊಡ್ಡಬಿಳೀಗೌಡ, ಕುದುರುಗುಂಡಿ ಮರಿಯಪ್ಪ, ನಗರಕೆರೆ ಎನ್.ಪಿ.ಲಿಂಗೇಗೌಡ, ಮಳವಳ್ಳಿಯ ಸುಬ್ಬಯ್ಯ ಮೊದಲಾದವರು ಸಲ್ಲಿಸಿದ ಸ್ವಯಂ ಸೇವೆಯು ಸ್ಮರಣಾರ್ಹ. ಈ ರಾಷ್ಟ್ರಕೂಟವನ್ನು ನಡೆಸುವುದಕ್ಕಾಗಿ ಶಿವಪುರದ ಪಿ.ತಿರುಮಲೇಗೌಡರು ತಮ್ಮ ಎಂಟು ಎಕರೆ ಜಮೀನನ್ನು ದಾನ ಮಾಡಿದರು. ಸುಮಾರು ೪೦,೦೦೦ ಜನ ಕುಳಿತುಕೊಳ್ಳುವಷ್ಟು ವಿಸ್ತೀರ್ಣವಾದ ಬಹಿರಂಗ ಮಂಟಪದಲ್ಲಿ ಆರು ಅಡಿ ಎತ್ತರದ ಸಾಕಷ್ಟು ವಿಶಾಲವಾದ ವೇದಿಕೆಯನ್ನು ನಿರ್ಮಿಸಿ ರಾಷ್ಟ್ರಧ್ವಜ ಮತ್ತು ಬಣ್ಣಬಣ್ಣದ ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿತ್ತು. ಅಧಿವೇಶನದ ಸ್ಥಳದಲ್ಲಿ ಖಾದೀ ಪ್ರದರ್ಶನ, ಔಷಧಾಲಯ, ಅಂಗಡಿ ಸಾಲು ಮೊದಲಾದ ಮಳಿಗೆಗಳನ್ನು ತೆರೆಯಲಾಗಿತ್ತು. ಎಚ್.ಕೆ.ವೀರಣ್ಣಗೌಡರ ನೇತೃತ್ವದಲ್ಲಿ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಹಾಗೂ ಸ್ವಾಗತ ಸಮಿತಿಯ ಸದಸ್ಯರಾದ ಬಳ್ಳಾರಿ ಸಿದ್ಧಮ್ಮ, ಎಂ.ಎನ್.ಜೋಯಿಸ್. ಸುಬ್ಬಮ್ಮ ಜೋಯಿಸ್, ಟಿ. ಸುನಂದಮ್ಮ ಮೊದಲಾದ ಸ್ತ್ರೀಯರು, ವೀರಕೇಸರಿ ಸೀತಾರಾಮಶಾಸ್ತ್ರಿ, ಕೆ.ಟಿ.ಭಾಷ್ಯಂ ಅಯ್ಯಂಗಾರ್, ಟಿ. ಸಿದ್ಧಲಿಂಗಯ್ಯ ಮೊದಲಾದ ಮುಖಂಡರು ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ದಿನಾಂಕ ೮ನೇ ಏಪ್ರಿಲ್ ೧೯೩೮ ರಂದು ಶಿವಪುರದ ರಾಷ್ಟ್ರಕೂಟಕ್ಕೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಟಿ.ಸಿದ್ಧಲಿಂಗಯ್ಯನವರ ಮೆರವಣಿಗೆ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಮದ್ದೂರು ಪ್ರವಾಸಿ ಮಂದಿರದಿಂದ ಹೊರಟ ಸುಮಾರು ೧೦,೦೦೦ ಜನರು ಭಾಗವಹಿಸಿದ್ದ ಮೆರವಣಿಗೆಯು ಮದ್ದೂರಿನ ಪೇಟೆ ಬೀದಿಯಲ್ಲಿ ಹಾಗೂ ಶಿವಪುರದ ಮುಖ್ಯ ಬೀದಿಯಲ್ಲಿಯೂ ಹಾದು ಶಿವಪುರದ ಪ್ರವಾಸಿ ಮಂದಿರವನ್ನು ಸೇರಿತು . ದಾರಿಯುದ್ದಕ್ಕೂ ಹೋರಾಟಗಾರರು 'ಏನೇ ಬರಲಿ ಒಗ್ಗಟ್ಟಿರಲಿ' ಎಂದು ಘೋಷಣೆಗಳನ್ನು ಕೂಗುತ್ತಿದ್ದರು. ಮಹಾತ್ಮಗಾಂಧೀಜಿ ಮೊದಲಾದ ರಾಷ್ಟ್ರನಾಯಕರುಗಳ ಹೆಸರುಗಳಿಗೂ ಹಾಗೂ ಕಾಂಗ್ರೆಸ್‌ಗೂ ಜಯಕಾರಗಳು ಎಡಬಿಡದೇ ನಡೆಯುತ್ತಿದ್ದುವು. ಸಂಜೆ ಆರು ಗಂಟೆಗೆ ಪ್ರಾರಂಭವಾದ ಈ ಮೆರವಣಿಗೆಯು ಶಿವಪುರ ತಲುಪಿದಾಗ ರಾತ್ರಿ ಹನ್ನೊಂದು ಗಂಟೆ ಮೀರಿತ್ತು. ಅಂದೇ ರಾತ್ರಿ ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟರಾಗಿದ್ದ ಜಿ.ಎಂ.ಮೇಕ್ರಿಯವರು ಮದ್ದೂರು ಸುತ್ತಮುತ್ತ ಎಂಟು ಕಿಲೋಮೀಟರ್‌ಗಳೊಳಗೆ ೧೧ನೇ ಏಪ್ರಿಲ್ ೧೯೩೮ ರಿಂದ ಒಂದು ತಿಂಗಳು ಕಾಲ ಮೆರವಣಿಗೆ ಮತ್ತು ಸಭೆಗಳನ್ನು ನಡೆಸಬಾರದೆಂದೂ ಹಾಗೂ ಧ್ವಜಾರೋಹಣ ಮಾಡಕೂಡದೆಂದು ನಿಷೇದಾಜ್ಞೆಯನ್ನು ಹೊರಡಿಸಿದರು. ಈ ಆಜ್ಞೆಯನ್ನು ಪ್ರಮುಖವಾಗಿ ಮುಂದೆ ಹೆಸರಿಸಿರುವ ೨೦ ಜನ ಮುಖಂಡರುಗಳಾದ ಎಚ್.ಸಿ.ದಾಸಪ್ಪ, ಕೆ.ಟಿ.ಭಾಷ್ಯಂ, ಎಂ.ಎನ್. ಜೋಯಿಸ್, ಟಿ.ಸಿದ್ಧಲಿಂಗಯ್ಯ ಎಚ್.ಕೆ.ವೀರಣ್ಣಗೌಡ, ಕೆ.ಎಂ.ಕೃಷ್ಣಗೌಡ, ಎ.ಜಿ.ಬಂಧೀಗೌಡ, ಎಸ್.ಚೆನ್ನಯ್ಯ, ಪಾಲಹಳ್ಳಿ ಸೀತಾರಾಮಯ್ಯ ಎಸ್.ರಂಗರಾಮಯ್ಯ, ಟಿ. ಮರಿಯಪ್ಪ, ಟಿ.ಎಸ್.ರಾಜಗೋಪಾಲ ಐಯ್ಯಂಗಾರ್, ಎನ್.ಸಿ.ತಿಮ್ಮಾರೆಡ್ಡಿ, ವೀರಕೆಸರಿ ಸೀತಾರಾಮಶಾಸ್ತ್ರಿ, ತಗಡೂರು ರಾಮಚಂದ್ರರಾವ್, ಎಂ.ಶಂಕರಯ್ಯ ಚಂಗಳರಾಯ ರೆಡ್ಡಿ, ವಿ.ವೆಂಕಟಪ್ಪ, ವೈ.ಪಾರ್ಥನಾರಾಯಣ ಪಂಡಿತ್ ಮತ್ತು ಪಿ. ತಿರುಮಲಶೆಟ್ಟಿ, ಇವರುಗಳ ಮೇಲೆ ವಿಶೇಷವಾಗಿ ಜಾರಿ ಗೊಳಿಸಲಾಗಿತ್ತು. ಮ್ಯಾಜಿಸ್ಟ್ರೇಟರ

ಆಜ್ಞೆಯನ್ನು ಶಿವಪುರದ ಮುಖ್ಯ ಬೀದಿಗಳಲ್ಲಿ ಹಾಗೂ ಜನಜಂಗುಳಿ ಇದ್ದ ಪ್ರದೇಶಗಳಲ್ಲಿ ಟಾಂಟಾಂ ಹೊಡಿಸಿ ಪ್ರಚಾರಪಡಿಸಲಾಯಿತು. ಹತ್ತನೇ ದಿನಾಂಕ ರಾತ್ರಿ ಭಯಭೀತರಾಗಿದ್ದ ಸ್ವಾತಂತ್ರ್ಯ ಹೋರಾಟಗಾರರು ನಿದ್ರಿಸಲು ಹವಣಿಸುತ್ತಿದ್ದಾಗ ಸುಮಾರು ೬೦೦ ಜನ ಮೀಸಲು ಪಡೆಯ ಪೊಲೀಸರು ಬಂದೂಕಗಳ ಸಹಿತ ಶಿವಪುರವನ್ನು ಪ್ರವೇಶಿಸಿ ಪಥಸಂಚಲನ ಕೈಗೊಂಡಾಗ, ಮತ್ತಷ್ಟು ಹೆದರಿದರು. ಮೇಲೆ ಹೇಳಿರುವ ಮುಖಂಡರ ಮೇಲೆ ಬಂಧನದ ಆಜ್ಞೆಯನ್ನು ಪೊಲೀಸರು ಜಾರಿಮಾಡಿದರು. ಇದಕ್ಕೆ ಪ್ರತಿಕ್ರಯಿಸಿದ ನಾಯಕರು 'ನಾವು ಸತ್ಯಾಗ್ರಹ ಮಾಡುತ್ತಿರುವುದು ಸರ್ಕಾರದ ಸ್ಥಳವಲ್ಲ ಖಾಸಗಿ ಜಮೀನು. ಧ್ವಜಾರೋಹಣ ಮಾಡುವುದು ನಮ್ಮ ಹಕ್ಕು. ನಮ್ಮ ಹಕ್ಕುಗಳನ್ನು ಮುರಿಯುವ ಸರ್ಕಾರದ ಆಜ್ಞೆಗೆ ನಮ್ಮ ಧಿಕ್ಕಾರ. ನಾವು ಸತ್ಯಾಗ್ರಹಗಳನ್ನು ಮುಂದುವರಿಸುತ್ತೇವೆ. ಧ್ವಜಾರೋಹಣ ಮಾಡುತ್ತೇವೆ. ಈಗಿರುವ ಕಾರ್ಯಕ್ರಮಗಳನ್ನು ನಿಲ್ಲಿಸುವುದಿಲ್ಲ. ನಮ್ಮ ಧರ್ಮವನ್ನು ನಾವು ಪಾಲಿಸುತ್ತೇವೆ. ನಿಮ್ಮ ಕರ್ತವ್ಯವನ್ನು ನೀವು ಮಾಡಿ' ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು. ಈ ಸುದ್ದಿ ಶೀಘ್ರವಾಗಿ ಮದ್ದೂರಿನಾದ್ಯಂತ ಹರಡಿ ಜನಗಳು ಗುಂಪು ಗುಂಪಾಗಿ ಸೇರಿ ಗುಸುಗುಸು ಚರ್ಚೆ ಆರಂಭಿಸಿದರು. ಮುಖಂಡರುಗಳಿಗೂ ಏನು ಮಾಡುವುದೆಂದು ತೋರದೆ ರಾತ್ರಿ ಒಂದು ಘಂಟೆಗೆ ಕಾರ್ಯಕಾರಿ ಸಮಿತಿಯ ಸಭೆಯನ್ನು ತುರ್ತಾಗಿ ಕರೆಯಲಾಯಿತು. ಪ್ರತಿಬಂಧಕಾಜ್ಞೆಯ ಶುಭಾಶುಭಗಳ ಬಗ್ಗೆ ಚರ್ಚಿಸಲಾಯಿತು. ಮಹಾರಾಜರ ನೇತೃತ್ವದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯೇ ಕಾಂಗ್ರೆಸ್‌ನ ಉದ್ದೇಶವಾಗಿದೆ. ಆದ್ದರಿಂದ ರಾಷ್ಟ್ರಧ್ವಜಾರೋಹಣದಿಂದ ಮಹಾರಾಜರ ಅಧಿಕೃತ ಧ್ವಜಕ್ಕೆ ಅಪಮಾನ ಮಾಡಿದಂತಾಗುವುದಿಲ್ಲ. ಹಾಗೂ ರಾಷ್ಟ್ರಧ್ವಜವು ಕಾಂಗ್ರೆಸ್ಸಿನ ಅವಿಭಾಜ್ಯ ಅಂಗ ಎಂದು ಸಭೆಯು ತೀರ್ಮಾನಿಸಿತು. ಆನಂತರ ಈ ಬಗ್ಗೆ ಒಂದು ಗೊತ್ತುವಳಿಯನ್ನೂ ಸಭೆ ಸಿದ್ಧಪಡಿಸಿತು. ರಾಷ್ಟ್ರಕೂಟದ ಬಗ್ಗೆ ಮೊದಲೇ ತೀರ್ಮಾನಿಸಿದ್ದ ಕಾರ್ಯಕ್ರಮವು ಏನೇ ಇದ್ದರೂ ರಾಷ್ಟ್ರಧ್ವಜಾರೋಹಣ ನಡೆಸುವ ಬದಲು ಕೇವಲ ಸಭೆಯನ್ನು ನಡೆಸುವುದು ಸೂಕ್ತವೆಂದು ಕೆಲವು ಸತ್ಯಾಗ್ರಹಿಗಳು ಸೂಚಿಸಿದರು. "ನಾವು ಸರ್ಕಾರ ಏನು ಆಜ್ಞೆ ಮಾಡುತ್ತದೋ ಅದನ್ನು ಮುರಿಯೋದಕ್ಕೇ ಇರುವ ಸತ್ಯಾಗ್ರಹಿಗಳು ಸರಕಾರಕ್ಕೆ ಹೆದರಿಕೊಂಡರೆ ನಾವು ಅಧಿವೇಶನ ಕರೆದು ಏನೂ ಪ್ರಯೋಜನವಿಲ್ಲ. ನಾವು ಸರಕಾರದ ಆಜ್ಞೆಯನ್ನು ಉಲ್ಲಂಘಿಸಲೇಬೇಕು, ಧ್ವಜಾರೋಹಣವನ್ನು ಮಾಡಲೇಬೇಕು" ಎಂದು ಸತ್ಯಾಗ್ರಹದ ಕಮಾಂಡೆಂಟ್ ಆಗಿದ್ದ ಎಂ.ಎನ್.ಜೋಯಿಸ್ ಅವರು ಗುಡುಗಿದರು. ಇದಕ್ಕೆ ಪೂರಕವಾಗಿ ಟಿ.ಸುನಂದಮ್ಮ, ಯಶೋಧರಮ್ಮ ದಾಸಪ್ಪ ಮೊದಲಾದ ಸ್ತ್ರೀ ಸತ್ಯಾಗ್ರಹಿಗಳೂ ಧ್ವನಿಗೂಡಿಸಿದರು. ಧ್ವಜಾರೋಹಣ ಮಾಡಬೇಕೆಂದಿರುವ ಸ್ಥಳವು ಸರಕಾರದ್ದಲ್ಲ. ಖಾಸಗಿ ಸ್ಥಳ. ಪ್ರತಿಬಂಧಕಾಜ್ಞೆ ಕರಾಳವಾದದು. ಅದು ಜನರ ಹಕ್ಕುಗಳನ್ನು ಹತ್ತಿಕ್ಕುತ್ತದೆ. ಆದುದರಿಂದ ಮೊದಲೇ ತೀರ್ಮಾನಿಸಿದಂತೆ ಧ್ವಜಾರೋಹಣ ಮಾಡುವುದೇ ಸರಿ ಎಂಬ ವಾದಕ್ಕೆ ಬಹುಮತ ಪ್ರಾಪ್ತವಾಯಿತು. ಈ ತೀರ್ಮಾನವನ್ನು ದಾವಣಗೆರೆಯ ಡಿ.ಎಚ್.ಚಂದ್ರಶೇಖರಯ್ಯ ಒಪ್ಪಲಿಲ್ಲ. ಆದರೂ ಸಮಿತಿಯವರು, ತಮ್ಮ ನಿರ್ಧಾರವನ್ನು ಬದಲಿಸಲಿಲ್ಲ. "ನಾನು ಧ್ವಜಾರೋಹಣ ಮಾಡುತ್ತೇನೆ ಮುಂದಿನ ಕಾರ್ಯಕ್ರಮವನ್ನು ನೀವು ನೋಡಿಕೊಳ್ಳಿ" ಎಂದು ಟಿ.ಸುನಂದಮ್ಮ ಅವರು ಅಧ್ಯಕ್ಷರಲ್ಲಿ ವಿನಂತಿಸಿಕೊಂಡರು. ಇವರ ದಿಟ್ಟ ನಿಲವು ಹಾಗೂ ದೇಶಾಭಿಮಾನ ಅಲ್ಲಿದ್ದ ಎಲ್ಲಾ ಸತ್ಯಾಗ್ರಹಿ ಸ್ತ್ರೀ–ಪುರುಷ ನಾಯಕರುಗಳಿಗೆ ಮೆಚ್ಚುಗೆಯಾಯಿತು. ಟಿ.ಸಿದ್ಧಲಿಂಗಯ್ಯನವರು ಮಾತನಾಡಿ ಹಿಂದೆ ಬೆಂಗಳೂರಿನ ಸುಭಾಷ್ ನಗರದ ಧರ್ಮಾಂಬುದಿ ಕೆರೆ ಅಂಗಳದಲ್ಲಿ (೧೯೩೧) ಜವಹರಲಾಲ್ ನೆಹರೂ ಅವರು ಧ್ವಜಾರೋಹಣ ಮಾಡಿ ಹೋದಮೇಲೆ ಅಂದೇ ರಾತ್ರಿ ಪೋಲಿಸರು ಧ್ವಜಸ್ತಂಭ ಉರುಳಿಸಿ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ್ದರು. ಹಾಗೇನಾದರೂ ಇಲ್ಲೂ ಆದರೆ, ರಾಜ್ಯಮಟ್ಟದಲ್ಲಿ ಸತ್ಯಾಗ್ರಹವನ್ನು ಸರಿಯಾಗಿ ಮಾಡಲಿಲ್ಲ ಹಾಗೂ ರಾಷ್ಟ್ರಧ್ವಜದ ಗೌರವವನ್ನು ಕಾಪಾಡಲಿಲ್ಲ ಎಂಬ ಕೆಟ್ಟ ಹೆಸರು ಬಂದು ಮುಖಂಡರು ತಲೆತಗ್ಗಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಸ್ತ್ರೀಯರನ್ನು ಮುಂದೆ ಬಿಟ್ಟು ಮುಖಂಡರು ಹಿಂದೆ ಉಳಿದರೆಂದು ಮಹಾತ್ಮ ಗಾಂಧೀಜಿಯವರು ತಪ್ಪು

ತಿಳಿಯಬಹುದು. ಆದುದರಿಂದ ನಾವುಗಳೇ ಮುಂದಾಳತ್ವವನ್ನು ವಹಿಸಿ ಧ್ವಜ ಸತ್ಯಾಗ್ರಹ ಯಶಸ್ವಿಯಾದರೆ ದೇಶೀಯ ಸಂಸ್ಥಾನದಲ್ಲಷ್ಟೇ ಅಲ್ಲ ಅಖಿಲ ಭಾರತ ಮಟ್ಟದಲ್ಲೂ ಹೆಮ್ಮೆಪಡುವ ವಿಷಯವಾಗುತ್ತದೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಸಿದ್ಧಲಿಂಗಯ್ಯ ಅವರೇ ಧ್ವಜಾರೋಹಣವನ್ನು ಮಾಡಬೇಕೆಂದು ತೀರ್ಮಾನವಾಯಿತು.

ಕರ್ನಾಟಕದ ಇತಿಹಾಸದಲ್ಲಿ, ಅದರಲ್ಲೂ ವಿಶೇಷವಾಗಿ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ೧೧ನೇ ಏಪ್ರಿಲ್ ೧೯೩೮ರ ಚಿರಸ್ಮರಣೀಯವಾದ ದಿನವಾಗಿದೆ. ಸತ್ಯಾಗ್ರಹಿಗಳು ಅಂದು ಬೆಳಗಾಗುವುದರೊಳಗೇ ಧ್ವಜಾರೋಹಣ ನಡೆಯಬೇಕಾದ ಸ್ಥಳದಲ್ಲಿ ಸಿದ್ಧಪಡಿಸಲಾಗಿದ್ದ ವೇದಿಕೆಯ ಬಳಿ ಜಮಾಯಿಸಿದ್ದರು. ಬೆಳಿಗ್ಗೆ ಸುಮಾರು ೮.೦೦ ಗಂಟೆಗೆ ಧ್ವಜಾರೋಹಣ ಮಾಡಲು ಮೊದಲೇ ನಿಶ್ಚಯಿಸಲಾಗಿತ್ತು. ಈ ಸಮಯಕ್ಕೆ ಮೊದಲೇ ವಿಷಯವನ್ನು ತಿಳಿದಿದ್ದ ಪೋಲೀಸರು ಫ್ರೆಂಚ್‌ರಾಕ್ಸ್‌ನ (ಪಾಂಡವಪುರ) ಪೋಲಿಸ್ ಸೂಪರಿಂಟೆಂಡೆಂಟ್ ಮತ್ತೋಜಿರಾವ್ ಸಿಂಧ್ಯ ಮೊದಲಾದ ಅಧಿಕಾರಿಗಳ ನೇತೃತ್ವದಲ್ಲಿ ಸಿದ್ಧರಾಗಿ ನಿಂತಿದ್ದರು. ಧ್ವಜಾರೋಹಣಕ್ಕಾಗಿ ಅಧ್ಯಕ್ಷ ಸಿದ್ಧಲಿಂಗಯ್ಯನವರನ್ನು ಸ್ವಯಂ ಸೇವಕರು ಹಾಗೂ ಮುಖಂಡರು ಧ್ವಜ ವೇದಿಕೆಗೆ ಕರೆತಂದರು. ಅನಂತರ ಎಂ.ಎನ್.ಜೋಯಿಸ್ ಅವರು ಧ್ವಜಾರೋಹಣ ಮಾಡಬೇಕೆಂದು ವಿಧ್ಯುಕ್ತವಾಗಿ ಕೇಳಿಕೊಂಡರು. ವೇದಿಕೆಯ ಬಳಿ ಸಾಹುಕಾರ್ ಚನ್ನಯ್ಯ, ಕೆ.ಟಿ.ಭಾಷ್ಯಂ, ಕೆ.ಸಿ.ರೆಡ್ಡಿ, ಹೆಚ್.ಕೆ.ವೀರಣ್ಣಗೌಡ, ಕೆಂಗಲ್ ಹನುಮಂತಯ್ಯ, ಮಳವಳ್ಳಿ ವೀರಪ್ಪ, ಹೆಚ್.ಸಿದ್ಧಯ್ಯ ಮೊದಲಾದ ಮುಖಂಡರುಗಳು ಹಾಗೂ ಯಶೋಧರಮ್ಮ ದಾಸಪ್ಪ, ಪಾರ್ವತಮ್ಮ ಸಿದ್ಧಲಿಂಗಯ್ಯ, ವೆಂಕಮ್ಮ ಸೀತಾರಾಮಯ್ಯ, ಸುಬ್ಬಮ್ಮ ಜೋಯಿಸ್, ಇಂದಿರಾ ಕೃಷ್ಣಮೂರ್ತಿ, ಟಿ.ಸುನಂದಮ್ಮ ಮೊದಲಾದ ಮಹಿಳಾ ಸತ್ಯಾಗ್ರಹಿಗಳೂ, ಸ್ವಯಂ ಸೇವಕರೂ ಸ್ವಯಂ ಸೇವಕಿಯರೂ ಶಿಸ್ತಿನಿಂದ ನಿಂತಿದ್ದರು. ವೇದಿಕೆಯ ಎದುರಿಗಿದ್ದ ಮಂಟಪದಲ್ಲಿ ಸುಮಾರು ೪೦,೦೦೦ಕ್ಕೂ ಮೀರಿದ ಜನಸ್ತೋಮ ಸೇರಿತ್ತು. ಟಿ.ಸಿದ್ಧಲಿಂಗಯ್ಯನವರು ಧ್ವಜಸ್ತಂಭದ ಬಳಿ ಬಂದಾಗ ಪೋಲೀಸ್ ಸೂಪರಿಂಟೆಂಡೆಂಟರು ಅವರ ಬಳಿ ಬಂದು ಪ್ರತಿಬಂಧಕಾಜ್ಞೆ ಜಾರಿಯಲ್ಲಿರುವುದನ್ನು ಜ್ಞಾಪಿಸಿ ಧ್ವಜಾರೋಹಣ ಮಾಡಕೂಡದೆಂದು ತಿಳಿಸಿದರು. ಆದರೆ, ಅಧ್ಯಕ್ಷರು ಧ್ವಜಾರೋಹಣ ಮಾಡುವ ತಮ್ಮ ನಿರ್ಧಾರವನ್ನು ಸ್ಪಷ್ಟಪಡಿಸಿದರು. ವೇದಿಕೆಯ ಮೇಲೆ ನೂಕು ನುಗ್ಗಲು ಆರಂಭವಾದಾಗ ಪೋಲೀಸರು ಧ್ವಜಾರೋಹಣಕ್ಕೆ ಅಡ್ಡಿಪಡಿಸಿದರೆ ಜನಸ್ತೋಮವು ಅಸಹನೆಯಿಂದ ವರ್ತಿಸಬಹುದೆಂದು ಸಿದ್ಧಲಿಂಗಯ್ಯನವರು ಅವರಲ್ಲಿ ವಿನಂತಿಸಿ, ಜನರನ್ನು ಶಾಂತಿಯಿಂದ ವರ್ತಿಸುವಂತೆ ಕೋರಿದರು. ಅವರ ವಿನಂತಿಯನ್ನು ಮನ್ನಿಸಿ ಸತ್ಯಾಗ್ರಹಿಗಳು ವೇದಿಕೆಯಿಂದ ದೂರಸರಿದರು. ಟಿ.ಸುನಂದಮ್ಮನವರು ವಂದೇಮಾತರಂ ರಾಷ್ಟ್ರಗೀತೆಯನ್ನು ಸುಶ್ರಾವ್ಯವಾಗಿ ಹಾಡಿದರು. ಆನಂತರ ಸಿದ್ಧಲಿಂಗಯ್ಯನವರು ಧ್ವಜಾರೋಹಣ ಮಾಡಲು ಯತ್ನಿಸಿದಾಗ, ಮತ್ತೆ ಪೋಲೀಸ್ ಅಧಿಕಾರಿಗಳು ಅಡ್ಡಿಪಡಿಸಿದರು. ಆಗ, ಅವರು "ನಾವು ಆಜ್ಞೆಯನ್ನು ಉಲ್ಲಂಘನೆ ಮಾಡುವುದು ಖಂಡಿತ ನೀವುಗಳು ಶಾಂತ ರೀತಿಯಿಂದ ನಿಮ್ಮ ಕರ್ತವ್ಯವನ್ನು ಮಾಡಿ". ಬಲಪ್ರದರ್ಶನಕ್ಕೆ ಅವಕಾಶ ಮಾಡಿಕೊಡಬಾರದೆಂದು ಪೋಲಿಸ್ ಅಧಿಕಾರಿಗಳಲ್ಲಿ ವಿನಂತಿಸಿದರು. ಇನ್ನೇನು ಧ್ವಜಾರೋಹಣ ಮಾಡಬೇಕೆಂದು ಪ್ರಯತ್ನಿಸಿದಾಗ ವೇದಿಕೆಯ ಸುತ್ತಲೂ ಪೋಲೀಸರು ಸುತ್ತುವರೆದು ಎಚ್ಚರವಹಿಸಿದರು. ಪರಿಸ್ಥಿತಿ ಅತ್ಯಂತ ಗಂಭೀರವಾಗಿದ್ದಾಗ ಸಿದ್ಧಲಿಂಗಯ್ಯನವರು ನಾನೇ ಧ್ವಜಾರೋಹಣ ಮಾಡುತ್ತೇನೆಂದು ಘೋಷಿಸಿ ಪವಿತ್ರಕಾರ್ಯವನ್ನು ನೆರವೇರಿಸಿದಾಗ ಪೊಲೀಸರು ಅವರನ್ನು ಬಂಧಿಸಿದರು. ಅವರು ಕಾರ್ಯವನ್ನು ಮಾಡಿದ ಆನಂದದಲ್ಲಿ ಸ್ವಸಂತೋಷದಿಂದ ಬಂಧನವನ್ನು ಒಪ್ಪಿಕೊಂಡರು. ಎಂ.ಎನ್.ಜೋಯಿಸ್ ಹಾಗೂ ಅವರ ಜೊತೆಗಿದ್ದ ಸತ್ಯಾಗ್ರಹಿಗಳ ಪಡೆಯು ಧ್ವಜವನ್ನು ಅನಾವರಣ ಮಾಡಿದಾಗ ಟಿ.ಸುನಂದಮ್ಮನವರು ಆವೇಶದಿಂದ ಧ್ವಜಗೀತೆಯನ್ನು ಹಾಡಿದಾಗ ಅಲ್ಲಿದ್ದ ದೇಶಾಭಿಮಾನದ ಪರಿಸರವು ವಿದ್ಯುತ್ ಸಂಚಾರದಂತೆ ಸತ್ಯಾಗ್ರಹಿಗಳನ್ನು ಉತ್ತೇಜಿಸಿತು. ಈ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಪ್ರಮುಖ ನಾಯಕರೆಲ್ಲರೂ ಬಂಧನಕ್ಕೊಳಗಾದರು. ಅಲ್ಲದೆ, ಪೊಲೀಸರು ಧ್ವಜ ವೇದಿಕೆಯನ್ನು ನಾಶ ಮಾಡದಂತೆ ಮೂರು ದಿನಗಳ ಕಾಲ

ಸತ್ಯಾಗ್ರಹಿಗಳು ಸರದಿಯ ಮೇಲೆ ಕಾದು ತಮ್ಮ ಉಜ್ವಲ ರಾಷ್ಟ್ರಾಭಿಮಾನವನ್ನು ಮೆರೆದರು. ಈ ಘಟನೆಯ ತರುವಾಯ ಮೈಸೂರು ಸಂಸ್ಥಾನದ ಪ್ರಾಂತ್ಯಗಳಾದ್ಯಂತ ಇಂತಹ ಸತ್ಯಾಗ್ರಹಗಳನ್ನು ಯೋಜಿಸಲಾಯಿತು. ಶಿವಪುರದಲ್ಲಿ ಒಟ್ಟು ಮೂರು ದಿನಗಳು ಅಧಿವೇಶನವು ನಡೆದು ಪ್ರತಿದಿನವೂ ನಾಯಕರುಗಳು ಸರದಿಯ ಮೇಲೆ ಬಂಧನಕ್ಕೊಳಗಾದ ಮೇಲೆ, ಜನಸ್ತೋಮವನ್ನು ಕುರಿತು ಮುಖಂಡರುಗಳು ಭಾಷಣಗಳನ್ನು ಮಾಡುತ್ತಿದ್ದರು. ಅಧಿವೇಶನದ ಸಲುವಾಗಿ ರಚನೆಗೊಂಡಿದ್ದ ವಿಶಾಲವಾದ ಚಪ್ಪರದಲ್ಲಿ ಮೈಸೂರು ಕಾಂಗ್ರೆಸ್ ಸಭೆಗಳು ಜರುಗುತ್ತಿದ್ದವು. ಅಧಿವೇಶನದಲ್ಲಿ ಈ ಸಂಸ್ಥೆಯ ಹೆಸರು ಮೈಸೂರು ಕಾಂಗ್ರೆಸ್ ಎಂದಿರಬೇಕೆಂದೂ ಹಾಗೂ ಮಹಾರಾಜರ ನೇತೃತ್ವದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಶಾಂತಿಯುತ ಹೋರಾಟ ನಡೆಸಬೇಕೆಂದೂ ತೀರ್ಮಾನಿಸಲಾಯಿತು. ೧೧ನೇ ಏಪ್ರಿಲ್ ೧೯೩೮ ರಂದು ಸಂಜೆ ಶಿವಪುರದ ರಾಷ್ಟ್ರಕೂಟವು ಸಮಾಪ್ತಿಗೊಂಡಿತು. ಮೈಸೂರಿನ ರಂಗಾಚಾರ್ಲು ಟೌನ್‌ಹಾಲ್‌ನ ಪರಿಸರದಲ್ಲಿ ಜನ ಸೇರುವುದಕ್ಕೆ ಪ್ರತಿಬಂಧಕಾಜ್ಞೆಯನ್ನು ವಿಧಿಸಲಾಗಿದ್ದರೂ ಸತ್ಯಾಗ್ರಹಿಗಳು ದಿನಾಂಕ ೨ನೇ ಡಿಸೆಂಬರ್ ೧೯೩೯ರಂದು ಕಾನೂನನ್ನು ಉಲ್ಲಂಘಿಸಿದಾಗ ಬಂಧನಕ್ಕೊಳಗಾದರು. ಶ್ರೀಯುತ ಎ.ರಾಮಣ್ಣ, ಎಂ. ಶಂಕರಯ್ಯ, ಚಾಮುಂಡಯ್ಯ, ವಿ.ಎನ್.ದಾಸಪ್ಪ ಮೊದಲಾದವರು ಬಂಧನಕ್ಕೊಳಗಾದ ಪ್ರಮುಖರು.

ಮದ್ದೂರು ಬಳಿಯ ಶಿವಪುರದ ರಾಷ್ಟ್ರಕೂಟ ಅಥವಾ ಧ್ವಜಸತ್ಯಾಗ್ರಹವು ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದಾದಂತೆ ಪ್ರಮುಖ ಸತ್ಯಾಗ್ರಹವಾಗಿತ್ತು. ಇಂಥಹ ಮಹತ್ವದ ಹೋರಾಟ ನಡೆದ ಸ್ಥಳದಲ್ಲಿ ಸ್ಮಾರಕ ಭವನ ನಿರ್ಮಿಸುವ ತೀರ್ಮಾನವನ್ನು ಕೆಂಗಲ್ ಹನುಮಂತಯ್ಯನವರ ನೇತೃತ್ವದಲ್ಲಿ ಕೈಗೊಳ್ಳಲಾಯಿತು. ಅವರ ನಾಯಕತ್ವದಲ್ಲಿ ಸ್ಮಾರಕ ಭವನದ ರೂಪ ರೇಷೆಯ ಕಲ್ಪನೆಯು ಪ್ರಥಮ ಬಾರಿಗೆ ಮೂಡಿತು. ಈ ಕಟ್ಟಡದ ನಕಾಶೆಯನ್ನು ಇಂಡೋ–ಸ್ವಿಸ್ ಕಾರ್ಪೋರೇಷನ್ ಸಂಸ್ಥೆಯ ಎಂಜಿನಿಯರುಗಳಾಗಿದ್ದ ಲಕ್ಷ್ಮಣ್ ಮತ್ತು ಪವಾರ್ ಅವರಿಗೆ ಕೆಂಗಲ್ ಹನುಮಂತಯ್ಯನವರು ವಹಿಸಿಕೊಟ್ಟಾಗ ಅವರುಗಳು ಅದನ್ನು ರೂಪಿಸುವ ಕಾರ್ಯದಲ್ಲಿ ಯಶಸ್ವಿಯಾದರು. ಈ ಕಟ್ಟಡ ನಿರ್ಮಾಣದ ಬಗ್ಗೆ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಿದಾಗ ಅಂದಿನ ಲೋಕೋಪಯೋಗಿ ಸಚಿವರಾಗಿದ್ದ ಎಚ್.ಎಮ್.ಚನ್ನಬಸಪ್ಪನವರು ಹೆಚ್ಚಿನ ಆಸ್ಥೆಯನ್ನು ವಹಿಸಿ ಸರ್ಕಾರದ ಲೋಕೋಪಯೋಗಿ ಇಲಾಖೆಯವರೇ ಈ ಕಟ್ಟಡವನ್ನು ನಿರ್ಮಿಸಬೇಕೆಂದು ಆಜ್ಞೆ ಹೊರಡಿಸಿದರು. ಕೆಂಗಲ್ ಹನುಮಂತಯ್ಯನವರು ಕಟ್ಟಡದ ನಿರ್ಮಾಣದ ಪ್ರತಿ ಹಂತದಲ್ಲೂ ಉಸ್ತುವಾರಿ ವಹಿಸಿ ಎಚ್ಚರವಹಿಸಿದರು. ಈ ಕಟ್ಟಡಕ್ಕೆ 'ಸತ್ಯಾಗ್ರಹ ಸೌಧ'ವೆಂದು ಕರೆದು ಈ ಕಲಾತ್ಮಕ ಸೌಧವನ್ನು ದಿನಾಂಕ ೨೬ನೇ ಅಕ್ಟೋಬರ್ ೧೯೭೯ ರಂದು ಕೆಂಗಲ್ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲಾಯಿತು. ಈ ಸ್ಮಾರಕ ಭವನ ಶಿವಪುರದ ಧ್ವಜಸತ್ಯಾಗ್ರಹದ ಜೀವಂತ ಸಾಕ್ಷಿಯಾಗಿ ಇಂದಿಗೂ ಈ ಸ್ಥಳದಲ್ಲಿ ನಿಂತಿದ್ದು, ಇಂದೂ ಧ್ವಜ ಸತ್ಯಾಗ್ರಹವನ್ನು ಚಿರಸ್ಮರಣೀಯಗೊಳಿಸುತ್ತಿದೆ.

**ಚಳವಳಿಗಳ ಸರಮಾಲೆ**

ಶಿವಪುರ ಧ್ವಜ ಸತ್ಯಾಗ್ರಹವು ಮೈಸೂರು ಪ್ರಾಂತದಲ್ಲಿ, (ಅದರಲ್ಲೂ ಮಂಡ್ಯ ಜಿಲ್ಲೆಯಲ್ಲಿ) ಹಿಂದೆಂದೂ ಸಾಧಿಸಲಾಗದ ಜನತೆಯ ಸಂಘಟನೆಯನ್ನು ಸಾಧಿಸಿದ್ದಲ್ಲದೇ, ಪ್ರಥಮ ಬಾರಿಗೆ ಬ್ರಿಟೀಷರ ವಿರುದ್ಧ ಜನಾಭಿಪ್ರಾಯವನ್ನು ಮೂಡಿಸುವಲ್ಲಿ ಸತ್ವಶೀಲವಾದ ಪ್ರಚೋದನೆಯನ್ನು ಒದಗಿಸಿತು. ಈ ಸತ್ಯಾಗ್ರಹವು ಮೈಸೂರು ಸಂಸ್ಥಾನದಲ್ಲಿ ಅಭೂತಪೂರ್ವ ರಾಜಕೀಯ ಸಂಘಟನೆಯಾಗಿತ್ತು. ಪ್ರಥಮ ಬಾರಿಗೆ ಅತ್ಯಂತ ವ್ಯಾಪಕವಾಗಿ ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯದ ಬೇಡಿಕೆಯನ್ನು ಶಿವಪುರದ ಸತ್ಯಾಗ್ರಹವು ಸರ್ಕಾರದ ಮುಂದಿಟ್ಟಿತು. ಶಿವಪುರದ ಧ್ವಜಸತ್ಯಾಗ್ರಹದ ನಂತರ ಫೆಬ್ರವರಿ ೧೯೩೯ರಲ್ಲಿ ಸಾರ್ವಜನಿಕ ಕಟ್ಟಡಗಳನ್ನು ಬ್ರಿಟಿಷ್ ಅಧಿಕಾರಿಗಳ ಹೆಸರುಗಳಿಂದ

ಕರೆಯುವುದನ್ನು ವಿರೋಧಿಸಲಾಯಿತು. ಮೈಸೂರಿನ ಇಂಥಹ ಒಂದು ಕಟ್ಟಡಕ್ಕೆ ಪೊಲೀಸ್ ಅಧಿಕಾರಿಯಾಗಿದ್ದ 'ಹ್ಯಾಮಿಲ್‌ಟನ್' ಹೆಸರು ಇಟ್ಟಾಗ ಸತ್ಯಾಗ್ರಹಿಗಳು ಈ ಕಟ್ಟಡದ ನಾಮಫಲಕವನ್ನು ನಾಶಪಡಿಸಲು ಪ್ರಯತ್ನಿಸಿದಾಗ ಆ ಸತ್ಯಾಗ್ರಹಿಗಳನ್ನು ಪೋಲಿಸರು ಬಂಧಿಸಿದರು. ಈ ಚಳವಳಿಯಲ್ಲಿ ತಗಡೂರು ರಾಮಚಂದ್ರರಾಯರು, ಜವರಪ್ಪಗೌಡ, ಸುಬ್ಬರಾವ್ ಉಪಾಧ್ಯ, ಎ.ಎನ್.ಸೂರ್ಯನಾರಾಯಣರಾವ್, ಎಂ.ಎನ್.ಜೋಯಿಸ್ ಮೊದಲಾದವರು ಭಾಗವಹಿಸಿದ್ದರು. ನಾಯಕರಾಗಿದ್ದ ಎಚ್.ಸಿ.ದಾಸಪ್ಪನವರ ಅಧ್ಯಕ್ಷತೆಯಲ್ಲಿ ಮೈಸೂರು ಕಾಂಗ್ರೆಸ್ಸಿನ ಎರಡನೇ ಅಧಿವೇಶನವು ೧೯೩೯ರಲ್ಲಿ ವಿದುರಾಶ್ವತ್ಥದಲ್ಲಿ ಸಮಾವೇಶಗೊಂಡಿತು. ಈ ಅಧಿವೇಶನವು ಪುನಃ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಮುಂದಿಟ್ಟಿತು. ಇದೇ ಬೇಡಿಕೆಗಾಗಿ ಒತ್ತಾಯ ತರಲು ೧೯೩೯ರಲ್ಲಿ ಅರಣ್ಯ ಸತ್ಯಾಗ್ರಹವನ್ನೂ ಹೂಡಲಾಯಿತು. ಈ ಚಳವಳಿಯಲ್ಲಿ ನೂರಾರು ಸತ್ಯಾಗ್ರಹಿಗಳು ಸ್ವಇಚ್ಛೆಯಿಂದ ಭಾಗವಹಿಸುತ್ತಾ ಬಂಧನಕ್ಕೊಳಗಾದರು. ಈ ಚಳವಳಿಯು ಚಿತ್ರದುರ್ಗ, ತುಮಕೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ತೀವ್ರತರವಾಗಿದ್ದಿತು. ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಬೇಡಿಕೆಗೆ ಒತ್ತಾಯಿಸಿ ಸತ್ಯಾಗ್ರಹವನ್ನು ೧೯೩೯ರಲ್ಲಿ ಹೂಡಲಾಯಿತು. ಇದೇ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ ತುರವನೂರಲ್ಲಿ (ಶಿವಮೊಗ್ಗ ಜಿಲ್ಲೆ) ಈಚಲು ಮರಗಳನ್ನು ಕಡಿದ ಅಪಾದನೆಗಾಗಿ ಸಿದ್ಧವನಹಳ್ಳಿ ನಿಜಲಿಂಗಪ್ಪ ಹಾಗೂ ಇನ್ನಿತರರನ್ನು ಬಂಧಿಸಲಾಯಿತು. ಮೈಸೂರು ಸಂಸ್ಥಾನದಲ್ಲಿ ಈ ಸತ್ಯಾಗ್ರಹವು ಪ್ರಬಲವಾಗಿ ನಡೆದು ೧೨೦೦ಕ್ಕೂ ಹೆಚ್ಚು ಸತ್ಯಾಗ್ರಹಿಗಳು ಬಂಧನಕ್ಕೊಳಗಾದರು. ಕೋಲಾರ ಗಣಿ ಕ್ಷೇತ್ರದಲ್ಲಿ ಸತ್ಯಾಗ್ರಹ ಹಮ್ಮಿಕೊಳ್ಳಲಾಯಿತು. ಇಲ್ಲಿ ಗಣಿಕ್ಷೇತ್ರದ ಪ್ರವೇಶಕ್ಕೆ ನಿರ್ಬಂಧವಿದ್ದ ಆಜ್ಞೆಯನ್ನು ಮುರಿದು ಸಹಸ್ರಾರು ಜನರು ಬಂಧಿತರಾದರು. ತೀವ್ರತರವಾದ ಈ ಚಳವಳಿಯು ೧೯೪೦ರ ಫೆಬ್ರವರಿಯಲ್ಲಿ ಮುಕ್ತಾಯಗೊಂಡಿತು. ಆನಂತರ ನಡೆದ ತಾಲೂಕು ಬೋರ್ಡ್ ಚುನಾವಣೆಗಳಲ್ಲಿ ಒಟ್ಟು ೧೩೩ ಸ್ಥಾನಗಳಲ್ಲಿ ಕಾಂಗ್ರೆಸ್ ಸ್ಪರ್ಧಿಸಿ ೧೧೯ ಸ್ಥಾನಗಳನ್ನು ತನ್ನದಾಗಿಸಿಕೊಂಡಿತು. ಬೆಂಗಳೂರು, ಭದ್ರಾವತಿ, ಕೋಲಾರ ಚಿನ್ನದ ಗಣಿ (ಕೆ.ಜಿ.ಎಫ್) ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಕಾರ್ಮಿಕರು ಕಾಂಗ್ರೆಸ್ ಧ್ವಜದಡಿಯಲ್ಲಿ ಸಂಘಟಿತರಾದುದು ಸಂಸ್ಥಾನದ ಸ್ವಾತಂತ್ರ್ಯ ಹೋರಾಟಕ್ಕೆ ಉತ್ತಮ ಉತ್ತೇಜನ ದೊರೆಯುವಂತಾಯಿತು. ನಂತರ ೧೯೪೧ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ ೧೫೨ ಸ್ಥಾನಗಳಿಗೆ ಸ್ಪರ್ಧಿಸಿ ಕಾಂಗ್ರೆಸ್ ೧೦೬ ಸ್ಥಾನಗಳಲ್ಲಿ ವಿಜಯ ಸಾಧಿಸಿತು.

## ಕ್ವಿಟ್ ಇಂಡಿಯಾ ಚಳವಳಿ

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ೧೯೪೨ರ ಕ್ವಿಟ್ ಇಂಡಿಯಾ ಅಥವಾ ಚಲೇಜಾವ್ ಚಳವಳಿಗೆ ಹಿಂದೆಂದೂ ಕಾಣಸಿಗದಷ್ಟು ಜನಜಾಗೃತಿಯು ಕರ್ನಾಟಕದಾದ್ಯಂತ ಕಂಡುಬಂದಿತು. ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ, ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಈ ಚಳವಳಿಯು ತೀವ್ರತರವಾದ ಸ್ವರೂಪವನ್ನು ವ್ಯಕ್ತಪಡಿಸಿತ್ತು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ೮ನೇ ಆಗಸ್ಟ್ ೧೯೪೨ರಂದು ಮುಂಬೈಯಲ್ಲಿ ಸಮಾವೇಶಗೊಂಡು ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಛಲೇಜಾವ್ ಚಳವಳಿಯ ಗೊತ್ತುವಳಿಯನ್ನು ಅಂಗೀಕರಿಸಿತು. ಈ ಪ್ರಕಟಣೆಯು ಬಿಡುಗಡೆಗೊಂಡ ತಕ್ಷಣ ಹೋರಾಟದ ಪೂರ್ವಭಾವಿಯಾಗಿ ರಾಷ್ಟ್ರದ ಪ್ರಮುಖ ನಾಯಕರುಗಳೆಲ್ಲರನ್ನೂ ಸರ್ಕಾರವು ಬಂಧಿಸಿತು. ಗಾಂಧೀಜಿಯವರು ತಮ್ಮ ಹರಿಜನ ಪತ್ರಿಕೆಯ ಮೂಲಕ ದೇಶದಾದ್ಯಂತ ಅತ್ಯಂತ ವ್ಯಾಪಕವಾಗಿ ಕ್ವಿಟ್ ಇಂಡಿಯಾ ಚಳವಳಿಯನ್ನು ತೀವ್ರಗೊಳಿಸುವಂತೆ ಕರೆ ನೀಡಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಈ ಚಳವಳಿಯನ್ನು ನಿರ್ವಹಿಸಲು ಸಿ.ಜೆ.ಅಂಬಲಿ (ಅಧ್ಯಕ್ಷರು) ಆರ್.ಆರ್.ದಿವಾಕರ್ (ಕಾರ್ಯದರ್ಶಿಗಳು), ಯು.ಶ್ರೀನಿವಾಸಮಲ್ಯ, ದ.ಪ.ಕರಮರ್‌ಕರ್ ಹಾಗೂ ಆರ್.ಎಸ್.ಹುಕ್ಕೇರಿಕರ್ ಇವರುಗಳನ್ನು ಸದಸ್ಯರನ್ನಾಗಿ ನೇಮಿಸಿ ಒಂದು ಕ್ರಿಯಾ ಸಮಿತಿಯನ್ನು ರಚಿಸಿತು. ಈ

ಸಮಿತಿಯ ಕೇಂದ್ರಸ್ಥಾನವು ಮುಂಬೈ ಆಗಿತ್ತು. ಹಳೆಯ ಮೈಸೂರು ಸಂಸ್ಥಾನದಲ್ಲಿ ಕ್ವಿಟ್‌ಇಂಡಿಯಾ ಚಳವಳಿಯು ವ್ಯಾಪಕವಾಗಿ ಆರಂಭವಾಯಿತು. ಮೈಸೂರು, ಬೆಂಗಳೂರು, ಭದ್ರಾವತಿ, ಕೋಲಾರ ಹಾಗೂ ಇನ್ನಿತರ ಸ್ಥಳಗಳಲ್ಲಿ ಗಾಂಧೀಜಿಯವರ ಬಂಧನವನ್ನು ಖಂಡಿಸಿ ಕಾರ್ಮಿಕರು ಹರತಾಳವನ್ನು ನಡೆಸಿದರು. ಶಾಲೆ ಕಾಲೇಜುಗಳನ್ನು ಬಹಿಷ್ಕರಿಸಿ ವಿದ್ಯಾರ್ಥಿಗಳು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ವಾರದ ಸಂತೆಗಳಲ್ಲಿ ಸುಂಕ ಕೊಡುವುದನ್ನು ವಿರೋಧಿಸಿ ಚಳವಳಿಯನ್ನು ಆರಂಭಿಸಲಾಯಿತು. ಫ್ರೆಂಚ್‌ರಾಕ್ಸ್ (ಪಾಂಡವಪುರ)ನ ಸಂತೆಯಲ್ಲಿ ಆಗಸ್ಟ್ ೮ ರಂದು ಪಿಕೆಟಿಂಗ್ ನಡೆದಾಗ ಕ್ಯಾತನಹಳ್ಳಿ, ಲಕ್ಷ್ಮೀಸಾಗರ ಮತ್ತು ಇನಾಂ ಹಿರೇಮರಳಿಯ ಜನರು ಇದರಲ್ಲಿ ಕ್ರಿಯಾಶೀಲರಾಗಿ ಪಾಲ್ಗೊಂಡಿದ್ದರು. ಹತ್ತು ಜನರು ಬಂಧನಕ್ಕೊಳಗಾದರು.

ಈ ಪಿಕೆಟಿಂಗ್‌ಗೆ ಜನರ ಅಪಾರ ಬೆಂಬಲವಿತ್ತು ಎಂಬ ಅಂಶವು ಪೋಲೀಸ್ ವರದಿಗಳಿಂದ ಖಾತ್ರಿಯಾಗುತ್ತದೆ. ಅಕ್ಟೋಬರ್ ೧೫ ರಂದು ಪಾಂಡವಪುರಕ್ಕೆ ತಂದ ಮದ್ಯವನ್ನು ಚೆಲ್ಲಿ ಅಲ್ಲಿಯ ಮದ್ಯದ ಅಂಗಡಿಯನ್ನು ಸುಟ್ಟು ಸಂತೆ ಸುಂಕ ನೀಡಬಾರದೆಂದು ಪ್ರಚಾರ ಮಾಡಿ, ವೈ.ಸಿ.ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಮುನಿಸಿಪಲ್ ಕಚೇರಿಯ ಎದುರು ಸಾರ್ವಜನಿಕ ಸಭೆಯನ್ನು ನಡೆಸಲಾಯಿತು ಎಂದು ಲಕ್ಷ್ಮೀಸಾಗರದ ಚೆಲುವೇಗೌಡರು ತಿಳಿಸಿರುವರು. ಪಾಂಡವಪುರದಲ್ಲಿ ಅಕ್ಟೋಬರ್ ೧೫ ರಂದು ೨೫ ಜನರನ್ನು ಮತ್ತು ಅಕ್ಟೋಬರ್ ೧೭ ರಂದು ತೆಂಡೆಕೆರೆಯಲ್ಲಿ ಏಳು ಜನರನ್ನು ಬಂಧಿಸುವ ಮೂಲಕ ಹೋರಾಟವನ್ನು ಹತ್ತಿಕ್ಕಲಾಯಿತು. ಹೋರಾಟದ ಪ್ರಾರಂಭದಲ್ಲಿಯೇ ಹಿರಿಯ ನಾಯಕರುಗಳು ಬಂಧನಕ್ಕೊಳಕ್ಕಾಗಿದ್ದ ಕಾರಣ, ಮೈಸೂರು ಸಂಸ್ಥಾನದಲ್ಲಿ ಭೂಗತ ಚಟುವಟಿಕೆಗಳನ್ನು ಸರದಾರ ಕೆ.ವೆಂಕಟರಾಮಯ್ಯ, ಎ.ಜಿ.ರಾಮಚಂದ್ರರಾವ್, ಎನ್.ಡಿ.ಶಂಕರ, ಎಮ್.ವಿ.ಕೃಷ್ಣಪ್ಪ, ಮಗನಲಾಲ್ ಶಹಾ, ಕಡಿದಾಳ ಮಂಜಪ್ಪ, ಎಚ್.ಎಸ್.ದೊರೆಸ್ವಾಮಿ ಹಾಗೂ ಇನ್ನಿತರರು ನಿರ್ದೇಶಿಸಿದರು. ಮೈಸೂರಿನಲ್ಲಿ ಆಗಸ್ಟ್ ೧೨ ರಂದು ಸುಬ್ಬರಾಯನ ಕೆರೆಯಲ್ಲಿ ನಡೆದ ವಿದ್ಯಾರ್ಥಿಗಳ ಸಭೆಯಲ್ಲಿ ೧೦,೦೦೦ ಜನ ಪಾಲ್ಗೊಂಡಿದ್ದುದು ವಿಶೇಷವಾಗಿತ್ತು. ಬೆಂಗಳೂರಿನ ಬಿನ್ನಿಮಿಲ್, ಸರ್ಕಾರಿ ಮುದ್ರಣಾಲಯ, ಸರ್ಕಾರಿ ಪಿಂಗಾಣಿ ಕಾರ್ಖಾನೆ, ಆರ್ಮ್ಕೋ ಬ್ಯಾಟರೀಸ್ ಹಾಗೂ ಮೈಸೂರು ಮಿಲ್ಸ್ (ಬೆಂಗಳೂರಿನಲ್ಲಿರುವ) ಮೊದಲಾದ ಕೈಗಾರಿಕಾ ಸಂಸ್ಥೆಗಳ ಕಾರ್ಮಿಕರು ಚಳವಳಿಯಲ್ಲಿ ಭಾಗವಹಿಸಿದ್ದ ಕಾರಣ ಹೋರಾಟವು ತೀವ್ರವಾಯಿತು. ಮೈಸೂರು ಸಂಸ್ಥಾನದ ನಾಯಕರಾಗಿದ್ದ ಕೆ.ಟಿ.ಭಾಷ್ಯಂ, ಎಸ್.ನಿಜಲಿಂಗಪ್ಪ, ಎನ್.ಸಿ.ತಿಮ್ಮಾರೆಡ್ಡಿ, ತಾಳಕೆರೆ ಸುಬ್ರಹ್ಮಣ್ಯ, ಮಳವಳ್ಳಿ ವೀರಪ್ಪ ಮೊದಲಾದವರು ಮುಂಬೈಯಿಂದ ಯಶವಂತಪುರ ರೈಲು ನಿಲ್ದಾಣಕ್ಕೆ ಬಂದಿಳಿದ ತಕ್ಷಣ ಬಂಧನಕ್ಕೊಳಗಾದರು. ಬೆಂಗಳೂರಿನಲ್ಲಿ ಹಾಗೂ ಇತರೆ ಕಡೆ ಹೋರಾಟವು ರೌದ್ರ ರೂಪವನ್ನು ತಾಳಿತು. ಎಲ್ಲಾ ಜಿಲ್ಲಾ ಕೇಂದ್ರಗಳಿಂದಲೂ ಭೂಗತ ಪತ್ರಗಳನ್ನು ಮುದ್ರಿಸಿ ಹಂಚಲಾಗುತ್ತಿತ್ತು. ಕರ್ನಾಟಕದಲ್ಲಿ ೧೯೪೨–೪೩ರಲ್ಲಿ ಕನಿಷ್ಠ ಏಳು ಸಾವಿರ ಜನರು ಸೆರೆಮನೆ ಕಂಡರು. ಸೆರೆಮನೆಗಳು ತುಂಬಿಹೋದ ಕಾರಣ ಅವರನ್ನು ಬಂಧಿಸಲು ಬ್ಯಾರಕ್‌ಗಳನ್ನು ನಿರ್ಮಿಸಬೇಕಾಯಿತು.

ಮಂಡ್ಯ ಜಿಲ್ಲೆಯಿಂದ ಈ ಚಳವಳಿಯಲ್ಲಿ ಪಾಲ್ಗೊಂಡಿದ್ದ ಪ್ರಮುಖರೆಂದರೆ; ಮಳವಳ್ಳಿಯ ಎಚ್.ಕೆ.ರಾಮಚಂದ್ರಯ್ಯ, ಪಾಲಗ್ರಹಾರದ ಪಿ.ಎನ್.ಜವರಪ್ಪಗೌಡ, ಪಿ.ಒ.ಓಬೇಗೊಡ, ಪಿ.ಟಿ.ಕೃಷ್ಣಪ್ಪ, ಅರಕೆರೆಯ ಎಂ.ಪುಟ್ಟೇಗೌಡ, ಎ.ಕೆಂಚಪ್ಪ, ಎ.ಜಿ.ಲಿಂಗಪ್ಪ, ಪಿ.ಚೆನ್ನಪ್ಪ, ಪಿ.ಕೃಷ್ಣಪ್ಪ ಮತ್ತು ಬಿ.ಕೆ.ಪುಟ್ಟೇಗೌಡ; ಮೇಲುಕೋಟೆಯ ಶ್ರೀನಿವಾಸ ಐಯ್ಯಂಗಾರ್, ಎಂ.ಎನ್.ಶಿವರಾಮು, ಕುಟ್ಟಿ, ಪು.ತಿ.ಕೃಷ್ಣಯ್ಯಂಗಾರ್, ಮಳವಳ್ಳಿಯ ಬಂಧಿಗೌಡ, ಸುಬ್ಬಯ್ಯ ಮುಂತಾದವರು. ಹಿರಿಯ ನಾಯಕರಾಗಿದ್ದ ಸಾಹುಕಾರ್ ಎಸ್.ಚನ್ನಯ್ಯ, ಎಚ್.ಸಿ.ದಾಸಪ್ಪ, ಪಾಲಹಳ್ಳಿ ಸೀತಾರಾಮಯ್ಯ, ರಂಗರಾಮಯ್ಯ, ಎಂ.ಎನ್.ಜೋಯಿಸ್, ಎಚ್.ಕೆ.ವೀರಣ್ಣಗೌಡ, ಎಚ್.ಸಿದ್ಧಯ್ಯ, ಕೆ.ಟಿ.ಭಾಷ್ಯಂ, ಟಿ.ಸುಬ್ರಹ್ಮಣ್ಯಂ, ಕೆಂಗಲ್ ಹನುಮಂತಯ್ಯ, ವಿ.ವೆಂಕಟಪ್ಪ ಮೊದಲಾದವರು ಮಂಡ್ಯ ಜಿಲ್ಲೆಯಾದ್ಯಂತ ಸಂಚರಿಸಿ

'ಛಲೇಜಾವ್' ಚಳವಳಿಯ ಸಂದರ್ಭದಲ್ಲಿ ಪ್ರಚಾರ ಭಾಷಣಗಳನ್ನು ಯಶಸ್ವಿಯಾಗಿ ನಡೆಸಿದರು. ಕರ್ನಾಟಕ ವಿವಿಧ ಭಾಗಗಳಲ್ಲಿ ವ್ಯಾಪಕವಾಗಿ ಸತ್ಯಾಗ್ರಹಿಗಳನ್ನು ಮತ್ತು ಡಾ.ರಂಗನಾಥ ದಿವಾಕರ್ ಹಾಗೂ ಇನ್ನುಳಿದ ಭೂಗತ ಕಾರ್ಯಕರ್ತರನ್ನು ೧೯೪೪ರಲ್ಲಿ ಬಂಧಿಸಿದ ಕಾರಣ ಈ ಚಳವಳಿಯು ಅಂತ್ಯಗೊಂಡಿತು.

## ಮೈಸೂರು ಚಲೋ ಚಳವಳಿ

ಭಾರತ ೧೫ನೇ ಆಗಸ್ಟ್ ೧೯೪೭ ರಲ್ಲಿ ಸ್ವತಂತ್ರಗೊಂಡ ನಂತರ ಮೈಸೂರು ಸಂಸ್ಥಾನವು ಭಾರತದ ಒಕ್ಕೂಟದಲ್ಲಿ ಸೇರುವಂತೆ ಮಹಾರಾಜರ ಮೇಲೆ ಒತ್ತಾಯ ತರುವ ಮಾರ್ಗವಾಗಿ ಮೈಸೂರು ಕಾಂಗ್ರೆಸ್ ಪಕ್ಷವು ಮೈಸೂರು ಚಲೋ ಆಂದೋಲನವನ್ನು ಹೂಡಬೇಕಾಯಿತು. ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ಸ್ವಯಂ ಸೇವಕರು ಮೈಸೂರಿಗೆ ಧಾವಿಸಿ ಬಂದು ಅರಮನೆಯ ಮುಂಭಾಗದಲ್ಲಿ ಸತ್ಯಾಗ್ರಹ ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತು. ಮೈಸೂರು ಸಂಸ್ಥಾನದ ಕಾಂಗ್ರೆಸ್ ಕೆ.ಸಿ.ರೆಡ್ಡಿ ಅವರನ್ನು ಈ ವಿಷಯದಲ್ಲಿ ಸರ್ವಾಧಿಕಾರಿಯನ್ನಾಗಿ ನೇಮಿಸಿತು. ೧೧ನೇ ಸೆಪ್ಟೆಂಬರ್ ೧೯೪೭ ರಂದು ಸ್ವಯಂ ಸೇವಕರು ಸತ್ಯಾಗ್ರಹವನ್ನು ಆರಂಭಿಸಬೇಕೆಂದು ಅವರು ಬಯಸಿದ್ದರು. ಸರ್ಕಾರವು ಪ್ರತಿಬಂಧಕಾಜ್ಞೆಯನ್ನು ಹೊರಡಿಸುವುದರ ಮೂಲಕ ಹಾಗೂ ವೃತ್ತ ಪತ್ರಿಕೆಗಳ ಪ್ರಕಟಣೆಯನ್ನು ನಿಷೇಧಿಸುವುದರ ಮೂಲಕ ದಬ್ಬಾಳಿಕೆಯ ಕ್ರಮಗಳನ್ನು ಕೈಗೊಂಡಿತು. ಹೋರಾಟದ ಪೂರ್ವಭಾವಿಯಾಗಿ ೪ನೇ ಸೆಪ್ಟೆಂಬರ್‌ರಂದು ಪ್ರಮುಖ ನಾಯಕರುಗಳನ್ನು ಬಂಧಿಸಲಾಯಿತು. ಅಂದೇ ರಾಜ್ಯದ ವಿವಿಧ ಭಾಗಗಳಿಂದ ಬಂದ ಸತ್ಯಾಗ್ರಹಿಗಳು ಮೈಸೂರು ತಲುಪಿದರು. ಬೆಂಗಳೂರಿನಿಂದಲೂ ಕೆ.ಸಿ.ರೆಡ್ಡಿ ಅವರ ನೇತೃತ್ವದಲ್ಲಿ ಸಹಸ್ರಾರು ಜನ ಸತ್ಯಾಗ್ರಹಿಗಳು ಪಾದಯಾತ್ರೆಯ ಮೂಲಕ ಮೈಸೂರು ತಲುಪಿದರು. ಮಂಡ್ಯ ಜಿಲ್ಲೆಯ ಮಾರ್ಗವಾಗಿ 'ಮೈಸೂರು ಚಲೋ' ಸತ್ಯಾಗ್ರಹಿಗಳು ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಿ ಹಾದು ಹೋದ ಕಾರಣ ಹಾಗೂ ಈ ವೇಳೇಗಾಗಲೇ ಜವಾಬ್ದಾರಿ ಸರ್ಕಾರದ ಅವಶ್ಯಕತೆಯ ಅರಿವು ಇದ್ದ ಕಾರಣ ಈ ಜಿಲ್ಲೆಯಿಂದಲೂ ಸಹಸ್ರಾರು ಜನ ಈ ಚಳವಳಿಯಲ್ಲಿ ಪಾಲ್ಗೊಂಡರು. ಮಂಡ್ಯ ಜಿಲ್ಲೆಯು ಸ್ವತಂತ್ರ್ಯ ಜಿಲ್ಲೆಯಾಗಿದ್ದ (೧೯೩೯) ಕಾರಣ ಸ್ವಾತಂತ್ರ್ಯ ಸಂಗ್ರಾಮದ ಜಾಗೃತಿಯು ಅಧಿಕವಾಗಿತ್ತು. ಸತ್ಯಾಗ್ರಹಿಗಳು 'ತಂಬುಚೆಟ್ಟಿ ಚಟ್ಟ ಕಟ್ಟಿ' ಹಾಗೂ 'ಆರ್ಕಾಟ್ ಬಾಯ್ಕಾಟ್', ಮೈಸೂರು ರಾಜ್ಯ ಜನತೆಗೆ ಸೇರಿದ್ದು, 'ಪ್ರಜಾಪ್ರತಿನಿಧಿಗಳ ಸರ್ಕಾರಕ್ಕೆ ಮಾನ್ಯತೆ ಕೊಡಿ' ಮುಂತಾದ ಘೋಷಣೆಗಳನ್ನು ಕೂಗುತ್ತಾ ಮಹಾರಾಜರ ಮನವೊಲಿಸಲು ಸಾಗುತ್ತಿದ್ದರು. ಜನಸಾಗರದ ಒತ್ತಾಯಕ್ಕೆ ಮಣಿದು, ಹೆಚ್ಚು ವಿರೋಧವನ್ನು ವ್ಯಕ್ತಪಡಿಸದೇ ಮೈಸೂರು ಮಹಾರಾಜರು ಭಾರತದ ಒಕ್ಕೂಟವನ್ನು ಸೇರಲು ೧೯೪೭ರ ೨೪ನೇ ಸೆಪ್ಟೆಂಬರ್ ರಂದು ಒಪ್ಪಿದರು. ದಿನಾಂಕ ೨೭ನೇ ಸೆಪ್ಟೆಂಬರ್ ೧೯೪೭ ರಂದು ಮೈಸೂರಿನಲ್ಲಿ ಕೆ.ಸಿ.ರೆಡ್ಡಿ ಅವರ ನೇತೃತ್ವದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲಾಯಿತು. ಅವರ ಮಂತ್ರಿಮಂಡಲದಲ್ಲಿ ಮೈಸೂರಿನಿಂದ ಎಚ್.ಸಿ. ದಾಸಪ್ಪನವರು ಹಾಗೂ ಮಂಡ್ಯದ ಎಚ್.ಕೆ.ವೀರಣ್ಣಗೌಡರೂ ಒಳಗೊಂಡಂತೆ ಸರ್ಕಾರವನ್ನು ರಚಿಸಲಾಯಿತು.

## ಏಕೀಕರಣ ಚಳವಳಿ

ಬ್ರಿಟಿಷ್ ಆಡಳಿತದಿಂದ ಸ್ವಾತಂತ್ರ್ಯಗೊಂಡ ಭಾರತದಲ್ಲಿ ಮೈಸೂರು ಸಂಸ್ಥಾನವು ವಿಲೀನಗೊಂಡರೂ ಕನ್ನಡಿಗರು ವಾಸಿಸುತ್ತಿದ್ದ ಪ್ರದೇಶಗಳನ್ನೊಳಗೊಂಡ ಉದ್ದೇಶಿತ ಏಕೀಕೃತ ಕರ್ನಾಟಕದ ಎಲ್ಲೆಗಳನ್ನು ಗುರುತಿಸುವ ಪ್ರಯತ್ನಗಳು ನಡೆಯದ ಕಾರಣ ಇದೊಂದು ಗಂಭೀರ ಸಮಸ್ಯೆಯಾಗಿಯೇ ಪರಿಣಮಿಸಿತು. ಅದಕ್ಕಾಗಿ ರಾಜ್ಯದ ನಾಯಕರು ಕನ್ನಡ ಭಾಗಗಳನ್ನು ಸಮಗ್ರವಾಗಿ ಒಟ್ಟುಗೂಡಿಸಲು ಏಕೀಕರಣ ಚಳವಳಿಯನ್ನು ಹೂಡಬೇಕಾಯಿತು. ಏಕೀಕರಣದ ಕಲ್ಪನೆಯು ಒಂದು ಆಂದೋಲನವಾಗಿ ರೂಪು ತಳೆದದ್ದು ಬುದ್ಧಿಜೀವಿಗಳಿಂದಾಗಿಯೇ. ಆಲೂರು ವೆಂಕಟರಾಯರು ತಮ್ಮ ಕರ್ನಾಟಕ ಗತವೈಭವ ಗ್ರಂಥದಲ್ಲಿ ಪ್ರಚುರಪಡಿಸಿದ ಭಾರತ ಅಂತರ್ಗತ ಕರ್ನಾಟಕ

ರಾಜ್ಯವು ಅಖಂಡ ಕನ್ನಡಿಗರ ಭವ್ಯ ಕನಸಾಗಿತ್ತು. ಕವಿಗಳು, ಪ್ರಭಾವಶಾಲಿ ಲೇಖಕರು, ಪತ್ರಿಕೋದ್ಯಮಿಗಳು ಏಕೀಕರಣದ ಕಲ್ಪನೆಯನ್ನು ಪೋಷಿಸಿ ಬೆಳೆಸಿದರು. ಕನ್ನಡ ಭಾಷಿಕ ಪ್ರದೇಶಗಳಲ್ಲಿ ಮೈಸೂರು ಪ್ರಮುಖವಾಗಿತ್ತು. ಆದರೆ, ಮಹಾರಾಜರ ಸಮೃದ್ಧ ಆಳ್ವಿಕೆಗೆ ಒಳಪಟ್ಟಿದ್ದ ಅನೇಕರಿಗೆ ಇತರ ಹಿಂದುಳಿದ ಪ್ರದೇಶಗಳೊಂದಿಗೆ ಕೂಡುವುದು ಇಷ್ಟವಿರಲಿಲ್ಲ. ಜಿಲ್ಲೆಯ ಹೆಚ್.ಕೆ. ವೀರಣ್ಣಗೌಡ, ಕೆ.ವಿ.ಶಂಕರೇಗೌಡ, ಕೆ.ಲಕ್ಕಪ್ಪ ಮುಂತಾದವರು ಏಕೀಕರಣ ವಿರೋಧಿ ಚಳವಳಿಯನ್ನು ನಡೆಸಿದರು. ಕೊಡಗಿನಲ್ಲೂ ಕೆಲವು ಗುಂಪುಗಳು ಏಕೀಕರಣವನ್ನು ವಿರೋಧಿಸುತ್ತಿದ್ದವು. ಆದರೆ ಗೊರೂರು ರಾಮಸ್ವಾಮಿ ಅಯ್ಯಂಗಾರರು ಏಕೀಕರಣದ ಪರವಾಗಿ ರಾಜ್ಯದಾದ್ಯಂತ ಯಾತ್ರೆ ಕೈಗೊಂಡು ಭಾಷಣ ಮಾಡಿದರು. ಕೆ.ವಿ.ಪುಟ್ಟಪ್ಪನವರು ಕನ್ನಡದ ಹಿರಿಮೆಯನ್ನು ಎತ್ತಿಹಿಡಿಯುವ ಜೊತೆಗೆ ಇಂದು ನಾಡಗೀತೆಯಾಗಿರುವ 'ಭಾರತ ಜನನಿಯ ತನುಜಾತೆ' ಕಲ್ಪನೆಯನ್ನು ತಮ್ಮ ಪ್ರಭಾವಶಾಲಿ ಕವನಗಳ ಮೂಲಕ ಮೂಡಿಸಿದರು. ಕೊಡಗು ರಾಜ್ಯದ ಮುಖ್ಯ ಮಂತ್ರಿಯಾಗಿದ್ದ ಸಿ.ಎಂ.ಪೂಣಚ್ಚ ಅವರೂ ಕೊಡಗನ್ನು ಕರ್ನಾಟಕದಲ್ಲಿ ವಿಲೀನಗೊಳಿಸಲು ಉತ್ಸುಕತೆಯಿಂದ ಕಾರ್ಯ ಮಾಡಿದರು. ಕೆಂಗಲ್ ಹನುಮಂತಯ್ಯ, ನಿಜಲಿಂಗಪ್ಪ, ಸಾಹುಕಾರ್ ಚನ್ನಯ್ಯ, ವಕೀಲ ಆರ್.ಅನಂತರಾಮು, ಮುಂತಾದವರು ಏಕೀಕರಣ ಚಳವಳಿಗೆ ಬೆಂಬಲಿಸಿದರು. ೧೯೫೩ರ ಜನವರಿಯಲ್ಲಿ ಆಂಧ್ರಪ್ರದೇಶದಲ್ಲಿ ಪೊಟ್ಟಿ ಶ್ರೀರಾಮುಲು ಅವರು ಅಮರಣಾಂತ ಉಪವಾಸವನ್ನು ಕೈಗೊಂಡು ಮಡಿದ ನಂತರ, ಭಾರತ ಸರ್ಕಾರವು ಆಂಧ್ರಪ್ರದೇಶವನ್ನು ಪ್ರತ್ಯೇಕ ರಾಜ್ಯವನ್ನಾಗಿ ಒಪ್ಪಿಕೊಂಡು ಆಜ್ಞೆ ಹೊರಡಿಸಿತು. ಇದರಿಂದ ಪ್ರಭಾವಿತರಾದ ಕನ್ನಡದ ಜನತೆಯೂ ಏಕೀಕೃತ ಕರ್ನಾಟಕಕ್ಕಾಗಿ ಹಂಬಲಿಸಿದರು. ಡಿಸೆಂಬರ್ ೧೯೫೩ರಲ್ಲಿ ಫಜಲ್ ಆಲಿಯವರ ನೇತೃತ್ವದಲ್ಲಿ ಕೇಂದ್ರ ಸರಕಾರವು ರಾಜ್ಯ ಪುನರ್ ರಚನಾ ಆಯೋಗವನ್ನು ನೇಮಿಸಿತು. ರಾಜ್ಯ ಪುನರ್ ರಚನಾ ಆಯೋಗವು ಭಾಷಾವಾರು ರಾಜ್ಯಗಳನ್ನು ರಚಿಸುವ ನಿಟ್ಟಿನಲ್ಲಿ ಅಭಿಪ್ರಾಯ ಸಂಗ್ರಹಣೆಯಲ್ಲಿ ತೊಡಗಿತು. ಕರ್ನಾಟಕದ ಏಕೀಕರಣವನ್ನು ಒಪ್ಪಿ ಈ ಆಯೋಗವು ತನ್ನ ಶಿಫಾರಸ್ಸನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಿತು. ಇದರಿಂದ ಕನ್ನಡಿಗರ ಬಹುದಿನಗಳ ಕನಸು ೧೯೫೬ರಲ್ಲಿ ನನಸಾಯಿತು. ಮೈಸೂರಿನ ಮಹಾರಾಜರನ್ನು ರಾಜಪ್ರಮುಖ (ರಾಜ್ಯಪಾಲ) ರೆಂದು ನೇಮಿಸಲಾಯಿತು. ಹೊಸ ಮೈಸೂರು ರಾಜ್ಯವನ್ನು ವಿಶಾಲ ಮೈಸೂರು ರಾಜ್ಯವೆಂದು ಕರೆಯಲಾಯಿತು. ಏಕೀಕೃತಗೊಂಡ ೧೭ ವರ್ಷಗಳ ನಂತರ ೧೯೭೩ರ ನವೆಂಬರ್ ಒಂದರಂದು ಅಂದಿನ ಮುಖ್ಯಮಂತ್ರಿಗಳಾಗಿದ್ದ ಡಿ.ದೇವರಾಜ ಅರಸು ಸರಕಾರವು ಮೈಸೂರು ರಾಜ್ಯಕ್ಕೆ **'ಕರ್ನಾಟಕ'** ಎಂದು ಪುನರ್ ನಾಮಕರಣ ಮಾಡಿ ಆಜ್ಞೆ ಹೊರಡಿಸಿತು.

## ಚುನಾವಣೆಗಳು

ಬ್ರಿಟಿಷ್ ಭಾರತದಲ್ಲಿ ಚುನಾವಣಾ ಪ್ರಕ್ರಿಯೆಗಳು (೧೯೨೦) ಆರಂಭಗೊಳ್ಳುವುದಕ್ಕೆ ಮೊದಲೇ ಅಂದಿನ ಮೈಸೂರು ಸಂಸ್ಥಾನದಲ್ಲಿ ೧೮೮೧ರಲ್ಲಿ ಆರಂಭಗೊಂಡ 'ಪ್ರಜಾಪ್ರತಿನಿಧಿ ಸಭೆಯು' ದೇಶದ ಚುನಾವಣಾ ಪದ್ಧತಿಯಲ್ಲೊಂದು ಮೈಲಿಗಲ್ಲಾಗಿದ್ದು, ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದತ್ತ ಇಟ್ಟ ಮೊದಲ ಹೆಜ್ಜೆಯಾಗಿತ್ತು. ದಿವಾನ್ ರಂಗಾಚಾರ್ಲು ಅವರ ಕಾಲಾವಧಿಯಲ್ಲಿ ಸ್ಥಾಪಿಸಲ್ಪಟ್ಟ ಪ್ರಜಾಪ್ರತಿನಿಧಿ ಸಭೆಗೆ ಆರಂಭದಲ್ಲಿ ಪ್ರಮುಖ ಭೂಮಾಲೀಕರು, ಕೃಷಿಕರು, ಶ್ರೀಮಂತ ವರ್ತಕರು ಹಾಗೂ ಸ್ಥಳೀಯನಿಧಿ ಬೋರ್ಡುಗಳಿಂದ ಆಯ್ದ ಸದಸ್ಯರನ್ನು ಒಂದು ವರ್ಷದ ಅವಧಿಗೆ ನಾಮಕರಣ ಮಾಡಲಾಗುತ್ತಿತ್ತು. ಆದರೆ ಈ ಸಭೆಗೆ ಯಾವುದೇ ಶಾಸನಬದ್ಧ ಅಧಿಕಾರವಿರದೆ ವರುಷದಲ್ಲೊಮ್ಮೆ ಡಿಸೆಂಬರ್ ತಿಂಗಳಲ್ಲಿ ಸಮಾವೇಶಗೊಳ್ಳುತ್ತಿತ್ತು. ಮೈಸೂರಿನಲ್ಲಿ ೧೮೮೧ರ ಅಕ್ಟೋಬರ್ ಏಳರಂದು ಜರುಗಿದ ಪ್ರಜಾಪ್ರತಿನಿಧಿ ಸಭೆಯ ಮೊದಲ ಅಧಿವೇಶನದಲ್ಲಿ ೧೪೪ ಜನ ಭಾಗವಹಿಸಿದ್ದರೆಂದು ತಿಳಿದುಬರುತ್ತದೆ.

ತದನಂತರ ೧೮೯೧ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರನ್ನು ನಿಗಧಿತ ಭೂಕಂದಾಯ ಹಾಗೂ ಮನೆ/ಅಂಗಡಿ ಕಂದಾಯ ಪಾವತಿ ಮೊತ್ತವನ್ನು ಆಧರಿಸಿ ಚುನಾವಣೆ ಮೂಲಕ ಆಯ್ಕೆ ಮಾಡುವ ಪ್ರಕ್ರಿಯೆ ಆರಂಭಗೊಂಡಿತು. ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಗೊಳ್ಳಲು ನಿಗದಿತ ಭೂಕಂದಾಯ ಹಾಗೂ ಮನೆಗಂದಾಯ (ಮೊಹತರ್ಫ) ಪಾವತಿಸಿದವರಿಗೆ ಮಾತ್ರ ಅನುಮತಿ ನೀಡಲಾಗುತ್ತಿತ್ತು. ಅದರಂತೆ ಶ್ರೀರಂಗಪಟ್ಟಣ ಹಾಗೂ ಕೃಷ್ಣರಾಜಪೇಟೆ ತಾಲೂಕುಗಳಲ್ಲಿ ರೂ.೨೦೦/– ನಾಗಮಂಗಲ ತಾಲೂಕಿನಲ್ಲಿ ರೂ.೧೫೦/–, ಮಂಡ್ಯ ಹಾಗೂ ಮಳವಳ್ಳಿ ತಾಲೂಕುಗಳಲ್ಲಿ ನೂರು ರೂಪಾಯಿಗಳ ಕನಿಷ್ಠ ಭೂಕಂದಾಯ ಮಿತಿಯನ್ನೂ, ಕೃಷ್ಣರಾಜಪೇಟೆ ತಾಲೂಕಿನಲ್ಲಿ ರೂ.೧೭/– ಹಾಗೂ ಇತರ ತಾಲೂಕುಗಳಲ್ಲಿ ರೂ.೧೩ ಅನ್ನು ಕನಿಷ್ಠ ಮನೆಗಂದಾಯ ಮಿತಿ ಎಂದೂ ನಿಗದಿಪಡಿಸಿ ಕನಿಷ್ಠ ೧೮ ವರ್ಷ ವಯೋಮಾನದ ಗ್ರಾಮೀಣ ಹಾಗೂ ನಗರಪ್ರದೇಶದ ನಿವಾಸಿಗಳಿಗೆ ಸೀಮಿತ ಮತದಾನದ ಹಕ್ಕನ್ನು ನೀಡಲಾಯಿತು. ಅಲ್ಲದೆ ಪದವೀಧರರಿಗೂ ಮತದಾನದ ಹಕ್ಕು ಲಭಿಸಿತು. ಅದರಂತೆ ಇಂದಿನ ಮಂಡ್ಯ ಜಿಲ್ಲಾ ಪ್ರದೇಶದ ಶ್ರೀರಂಗಪಟ್ಟಣ (೪), ಅತ್ತಿಕುಪ್ಪೆ (ಕೃಷ್ಣರಾಜಪೇಟೆ) (೩), ನಾಗಮಂಗಲ (೩), ಮಂಡ್ಯ (೩) ಹಾಗೂ ಮಳವಳ್ಳಿ (೨) ತಾಲೂಕುಗಳಿಂದ ಒಟ್ಟು ೧೫ ಸದಸ್ಯರನ್ನು ಆಯ್ಕೆ ಮಾಡಲು ಅವಕಾಶವಿತ್ತು. ಮೇಲುಕೋಟೆಯ 'ಶ್ರೀ ಯದುಗಿರಿ ಸದಾಮೋದಿವರ್ಧಿನಿ ಸಭಾ'ದ ನಾಮಕರಣ ಸದಸ್ಯರು ೧೮೯೨ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರಾಗಿದ್ದರೆಂದು ತಿಳಿದುಬರುತ್ತದೆ. ಮತ ಚಲಾಯಿಸುವ ಹಕ್ಕನ್ನು ಶ್ರೀರಂಗಪಟ್ಟಣ ಹಾಗೂ ಕೃಷ್ಣರಾಜಪೇಟೆ ತಾಲೂಕುಗಳಲ್ಲಿ ರೂ.೧೦೦/–, ನಾಗಮಂಗಲ ತಾಲೂಕಿನಲ್ಲಿ ರೂ.೮೫/–, ಮಂಡ್ಯ ಹಾಗೂ ಮಳವಳ್ಳಿ ತಾಲೂಕುಗಳಲ್ಲಿ ರೂ.೫೦/– ಕನಿಷ್ಠ ಭೂಕಂದಾಯ ಇಲ್ಲವೇ ೧೩/–ರೂ.ಗಳ ಕನಿಷ್ಠ ಮನೆಗಂದಾಯವನ್ನು ಪಾವತಿಸುವವರಿಗೆ ಮಾತ್ರ ನೀಡಬೇಕೆಂಬ ತಿದ್ದುಪಡಿಯೊಂದಿಗೆ ೧೮೯೪ರಲ್ಲಿ ಜಾರಿಗೆ ತರಲಾಯಿತು. ಅಲ್ಲದೆ ಶ್ರೀರಂಗಪಟ್ಟಣ ಹಾಗೂ ಮಳವಳ್ಳಿ ಪುರಸಭಾ ಬೋರ್ಡುಗಳಿಗೆ ಒಬ್ಬೊಬ್ಬ ಸದಸ್ಯರನ್ನು ಪ್ರಜಾಪ್ರತಿನಿಧಿ ಸಭೆಗೆ ಕಳುಹಿಸಲು ಅವಕಾಶ ನೀಡಲಾಯಿತು. ಜೊತೆಗೆ ಸದಸ್ಯರ ಸದಸ್ಯತ್ವದ ಕಾಲಾವಧಿಯ ಮಿತಿಯನ್ನು ಮೂರು ವರ್ಷಗಳಿಗೆ ನಿಗದಿಪಡಿಸಲಾಯಿತು. ಸದಸ್ಯರ ಸಂಖ್ಯೆಯನ್ನು ೧೮೯೭ರಲ್ಲಿ ೨೭೬ಕ್ಕೆ ನಿಗದಿಪಡಿಸಲಾಯಿತು. ಚುನಾವಣೆಗೆ ಸ್ಪರ್ಧಿಸುವ ಅರ್ಹತೆ ಹೊಂದಿರುವವರ ಹಾಗೂ ಮತದಾರರ ಪಟ್ಟಿಯನ್ನು ರಾಜ್ಯಪತ್ರ (ಗೆಜೆಟ್) ದಲ್ಲಿ ಪೂರ್ವಭಾವಿಯಾಗಿ ಪ್ರಕಟಿಸುವ ಪದ್ಧತಿಯನ್ನು ೧೯೦೭ರಲ್ಲಿ ಜಾರಿಗೆ ತರಲಾಯಿತು.

ಹಿಂದೆ ೧೮೮೧ರಲ್ಲಿ ರೂಪಿಸಲ್ಪಟ್ಟ ಮೂವರು ಕೌನ್ಸಿಲರುಗಳು ಹಾಗೂ ಪದನಿಮಿತ್ತ ಅಧ್ಯಕ್ಷರಾದ ದಿವಾನರನ್ನೊಳಗೊಂಡ ಎಕ್ಸಿಕ್ಯೂಟಿವ್ ಕೌನ್ಸಿಲನ್ನೇ ೧೯೦೭ರಲ್ಲಿ ೧೮ ಸದಸ್ಯರ ಲೆಜಿಸ್ಲೇಟಿವ್ ಕೌನ್ಸಿಲ್ (ವಿಧಾನ ಪರಿಷತ್ ಮಾದರಿಯಲ್ಲಿ) ಎಂಬ ಇನ್ನೊಂದು ಸದನವನ್ನು ಆರಂಭಿಸುವ ಮೂಲಕ ದಿವಾನ್ ವಿ.ಪಿ.ಮಾಧವರಾಯರು ದ್ವಿಸದನ (ಬೈಕ್ಯಾಮೆರಲ್) ಶಾಸಕಾಂಗ ಪದ್ಧತಿಗೆ ಚಾಲನೆ ನೀಡಿದರು. ಇದರ ಸದಸ್ಯರ ಸಂಖ್ಯೆಯನ್ನು ೧೯೧೩ರಲ್ಲಿ ೨೪ಕ್ಕೆ ಏರಿಸಿದ ದಿವಾನ್ ಸರ್.ಎಂ.ವಿಶ್ವೇಶ್ವರಯ್ಯನವರು, ಸಂಸ್ಥಾನದ ಆಯವ್ಯಯ ಪಟ್ಟಿಯ ಚರ್ಚೆಯಲ್ಲಿ ಪಾಲ್ಗೊಳ್ಳುವ ಅಧಿಕಾರವನ್ನೂ ಅದಕ್ಕೆ ನೀಡಿದರು. ಇದೇ ಪರಿಸ್ಥಿತಿ ೧೯೧೫ ರವರೆವಿಗೂ ಮುಂದುವರಿಯಿತು. ಆ ವರ್ಷ ಶ್ರೀರಂಗಪಟ್ಟಣ ತಾಲೂಕು ಹಾಗೂ ಫ್ರೆಂಚ್ ರಾಕ್ಸ್ (ಉಪತಾಲೂಕು)ಗಳಲ್ಲಿ ರೂ.೨೦೦/– ಹಾಗೂ ರೂ.೧೭/–; ಕೃಷ್ಣರಾಜಪೇಟೆ ತಾಲೂಕಿನಲ್ಲಿ ರೂ.೨೦೦/– ಹಾಗೂ ರೂ.೧೩/– ; ನಾಗಮಂಗಲ ತಾಲೂಕಿನಲ್ಲಿ ರೂ.೧೫೦/– ಹಾಗೂ ರೂ.೧೩/–; ಮಂಡ್ಯ ಹಾಗೂ ಮಳವಳ್ಳಿ ತಾಲೂಕುಗಳಲ್ಲಿ ರೂ.೧೦೦/– ಹಾಗೂ ರೂ.೧೩/–ಅನ್ನು ಕ್ರಮವಾಗಿ ಪ್ರಜಾಪ್ರತಿನಿಧಿ ಸಭೆಯ ಚುನಾವಣೆಗೆ ಸ್ಪರ್ಧಿಸುವ ಸ್ಪರ್ಧಾಳುಗಳಿಗೆ ಕನಿಷ್ಠ ಭೂಕಂದಾಯ ಹಾಗೂ ಮನೆಗಂದಾಯಗಳ ಅರ್ಹತಾ ಮೊತ್ತವೆಂದು ನಿಗದಿಪಡಿಸಲಾಯಿತು. ಆದರೆ ಮತದಾರರಿಗೆ ಸಂಬಂಧಿಸಿದಂತೆ ಇದ್ದ ಕನಿಷ್ಠ ಭೂಕಂದಾಯ, ಮನೆಗಂದಾಯಗಳ ಅರ್ಹತಾ ಮಿತಿಯನ್ನು ಯಥಾರೀತಿ

ಉಳಿಸಿಕೊಳ್ಳಲಾಯಿತು. ಪ್ರಜಾಪ್ರತಿನಿಧಿ ಸಭೆಯು ವರುಷದಲ್ಲಿ ಎರಡು ಬಾರಿ (ಜೂನ್ ಹಾಗೂ ಡಿಸೆಂಬರ್) ಸಮಾವೇಶಗೊಳ್ಳುವ ವ್ಯವಸ್ಥೆ ೧೯೧೭ರಿಂದ ಆರಂಭವಾಯಿತು. ಆ ವೇಳೆಗೆ ಸ್ಥಾಪಿಸಲ್ಪಟ್ಟ 'ಪ್ರಜಾಮಿತ್ರಮಂಡಳಿ' (೧೯೧೭) ಪಕ್ಷವು ಕಾಂಗ್ರೆಸ್ ಪಕ್ಷವನ್ನು ಬ್ರಾಹ್ಮಣಶಾಹಿ ಪಕ್ಷವೆಂದು ಪರಿಗಣಿಸುವುದರೊಂದಿಗೆ ಕಾಂಗ್ರೆಸ್ ವಿರೋಧಿಯಾಗಿದ್ದು, ಕಾಂಗ್ರೆಸ್ಸಿನ 'ಜವಾಬ್ದಾರಿ ಸರ್ಕಾರ ರಚನೆ' ಹೋರಾಟಕ್ಕೆ ವಿರೋಧ ವ್ಯಕ್ತಪಡಿಸಿತು.

ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿ ಹಾಗೂ ಮತದಾರರಿಗೆ ೫೦ ರೂ.ಗಳ ಭೂಕಂದಾಯ ಇಲ್ಲವೇ ೧೦ ರೂ.ಗಳ ಮನೆಗಂದಾಯವನ್ನು ಅರ್ಹತಾ ಮೊತ್ತವೆಂದು ೧೯೧೮ರಲ್ಲಿ ನಿಗದಿಪಡಿಸಲಾಯಿತು. ಅಲ್ಲದೆ ತಾಲೂಕುಗಳ ನಡುವೆ ಇದ್ದ ತಾರತಮ್ಯತೆಯನ್ನು ತೊಡೆದು ಹಾಕಲಾಯಿತು. ಲೆಜಿಸ್ಲೇಟಿವ್ ಕೌನ್ಸಿಲ್ ನ ಸದಸ್ಯರ ಸಂಖ್ಯೆಯನ್ನು ೧೯೧೯ರಲ್ಲಿ ೩೦ಕ್ಕೆ ಹೆಚ್ಚಿಸಲಾಯಿತು. ನಾಗಪುರ ಅಧಿವೇಶನದ ನಿರ್ಧಾರದಂತೆ ೧೯೨೧ರಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಬ್ರಿಟೀಷ್ ಕರ್ನಾಟಕದಲ್ಲಿ ಆರಂಭಗೊಂಡಾಗ ಸಂಸ್ಥಾನದಲ್ಲಿ ಮೈಸೂರು ರಾಜ್ಯ ಕಾಂಗ್ರೆಸ್ ಕಮಿಟಿಯು ಉದಯವಾದರೂ ೧೯೨೮ರವರೆಗೆ ನಿಷ್ಕ್ರಿಯವಾಗಿತ್ತು. ಈ ನಡುವೆ ಮಹಿಳೆಯರಿಗೆ ಮತ ಚಲಾಯಿಸುವ ಹಕ್ಕನ್ನು ೧೯೨೨ರಲ್ಲಿ ನೀಡಲಾಯಿತು. ೧೯೨೩ರ ಮಸೂದೆಯ ಮೂಲಕ ಶಾಸನಸ್ಥ ಸ್ಥಾನಮಾನಗಳನ್ನು ಪಡೆದ ಪ್ರಜಾಪ್ರತಿನಿಧಿ ಸಭೆಯ ಗಾತ್ರ ಹಾಗೂ ಸದಸ್ಯರ ಆಯ್ಕೆಗೆ ಸಂಬಂಧಿಸಿದಂತೆ ಆದ ಮಾರ್ಪಾಡುಗಳಿಂದಾಗಿ ಶ್ರೀರಂಗಪಟ್ಟಣ (೩), ಮಂಡ್ಯ (೩), ಮಳವಳ್ಳಿ (೨), ನಾಗಮಂಗಲ (೨) ಹಾಗೂ ಕೃಷ್ಣರಾಜಪೇಟೆ (೨) ತಾಲೂಕುಗಳಿಂದ ಒಟ್ಟು ೧೨ ಸದಸ್ಯರನ್ನು ಚುನಾವಣೆ ಮೂಲಕ ಹಾಗೂ ಶ್ರೀರಂಗಪಟ್ಟಣ ಹಾಗೂ ಮಳವಳ್ಳಿ ಪುರಸಭಾ ಬೋರ್ಡುಗಳಿಂದ ಒಬ್ಬೊಬ್ಬ ನಾಮಕರಣ ಸದಸ್ಯರನ್ನು ಪ್ರಜಾಪ್ರತಿನಿಧಿ ಸಭೆಗೆ ಕಳುಹಿಸುವಂತಾಯಿತು. ಚುನಾವಣೆಗೆ ಸ್ಪರ್ಧಿಸುವವರಿಗೆ ಹಾಗೂ ಮತದಾರರಿಗೆ ಇದ್ದ ಅರ್ಹತಾ ತೆರಿಗೆ ಪಾವತಿ ಮಿತಿಯನ್ನು ರೂ.೨೫ ಭೂಕಂದಾಯ ಇಲ್ಲವೇ ರೂ.೫/- ಮನೆಗಂದಾಯವೆಂದು ಪುನರ್ ಪರಿಷ್ಕರಿಸುವ ಮೂಲಕ ಚುನಾವಣೆ ಪ್ರಕ್ರಿಯೆಯಲ್ಲಿ ಹೆಚ್ಚು ಜನ ಭಾಗವಹಿಸುವಂತೆ ಮಾಡಲಾಯಿತು. ಅಲ್ಲದೆ ಮತದಾರರ ವಯಸ್ಸನ್ನು ೧೮ ರಿಂದ ೨೧ಕ್ಕೆ ಏರಿಸಲಾಯಿತು. ಮಿಗಿಲಾಗಿ ಮುಸ್ಲಿಮರಿಗೆ ಮೀಸಲು ಸ್ಥಾನ ನೀಡುವ ವ್ಯವಸ್ಥೆಯು ೧೯೨೩ರಲ್ಲೇ ಜಾರಿಗೆ ಬಂತು. ಮಹಿಳೆಯರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕನ್ನು ೧೯೨೭ರಲ್ಲಿ ನೀಡಲಾಯಿತು.

ಸಂಸ್ಥಾನದಲ್ಲಿ ಕೃಷಿಕರ ಅಭ್ಯುದಯಕ್ಕೆಂದೇ ೧೯೨೭ರಲ್ಲಿ 'ರೈತಸಂಘ' ಸ್ಥಾಪಿಸಲ್ಪಟ್ಟಿತು. ಕ್ರಮೇಣ ಕೆ.ಸಿ.ರೆಡ್ಡಿ, ವಿ.ವೆಂಕಟಪ್ಪ, ಮುಂತಾದ ಧುರೀಣರು 'ಪ್ರಜಾಪಕ್ಷ' ವನ್ನು ೧೯೩೦ರಲ್ಲಿ ನೂತನವಾಗಿ ಆರಂಭಿಸಿ, ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯಿಸಲಾರಂಭಿಸಿದರು. ಅದೇ ವರ್ಷ ಮದ್ದೂರು ಪ್ರತ್ಯೇಕ ತಾಲೂಕಾದಾಗ ಅದಕ್ಕೂ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರತ್ಯೇಕ ಸ್ಥಾನ ನೀಡಲಾಯಿತು. ಚುನಾವಣೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಮಾಣ ವಚನ ಸ್ವೀಕರಿಸುವ ಪದ್ಧತಿ ೧೯೩೦ರ ನಂತರ ಜಾರಿಗೆ ಬಂತು. ಮುಂದೆ 'ಪ್ರಜಾಮಿತ್ರ ಮಂಡಳಿ' ಹಾಗೂ 'ಪ್ರಜಾಪಕ್ಷಗಳು' ತಮ್ಮ ನಡುವಣ ಭಿನ್ನಾಭಿಪ್ರಾಯವನ್ನು ಬಗೆಹರಿಸಿಕೊಂಡು ೧೯೩೪ರಲ್ಲಿ ವಿಲೀನಗೊಂಡಾಗ ಜನ್ಮ ತಾಳಿದ 'ಪ್ರಜಾಸಂಯುಕ್ತ ಪಕ್ಷ'ವು ಸ್ಥಳೀಯ ಕಾಂಗ್ರೆಸ್ ಪಕ್ಷದೊಡನೆ ೧೯೩೭ರಲ್ಲಿ ವಿಲೀನಗೊಳ್ಳುವುದರೊಂದಿಗೆ 'ಮೈಸೂರು ಕಾಂಗ್ರೆಸ್' ಪಕ್ಷದ ಉದಯಕ್ಕೆ ನಾಂದಿಯಾಯಿತು. ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕೆ ಒತ್ತಾಯಿಸಿದ ರಾಜಕೀಯ ಪಕ್ಷಗಳ ಒತ್ತಡಕ್ಕೆ ಮಣಿದು, ಸಂಸ್ಥಾನದ ಸರ್ಕಾರ, 'ಕೆ.ಆರ್.ಶ್ರೀನಿವಾಸ್ ಅಯ್ಯಂಗಾರ್ ಸಮಿತಿ'ಯನ್ನು ಮಾರ್ಚ್ ೧೯೩೮ರಲ್ಲಿ ರೂಪಿಸಿ ಜವಾಬ್ದಾರಿ ಸರ್ಕಾರ ರಚನೆ ಬಗ್ಗೆ ಪರಿಶೀಲಿಸುವಂತೆ ಕೋರಿತು. ಆ ಸಮಿತಿಯ ಇಪ್ಪತ್ತು ಸದಸ್ಯರಲ್ಲಿ ಮದ್ದೂರಿನ ಎಸ್.ಸಿ.ಮಲ್ಲಯ್ಯ ಅವರೂ ಒಬ್ಬರಾಗಿದ್ದರು. ಅದೇ ವರ್ಷ (೧೯೩೮) ಏಪ್ರಿಲ್ ತಿಂಗಳಲ್ಲಿ ಶಿವಪುರದಲ್ಲಿ ಜರುಗಿದ ಮೈಸೂರು ಕಾಂಗ್ರೆಸ್ಸಿನ ಮೊದಲ ಸಮಾವೇಶ ದೇಶದ ಇತಿಹಾಸದಲ್ಲಿ

'ಧ್ವಜಸತ್ಯಾಗ್ರಹ' ಎಂದೇ ಪ್ರಸಿದ್ಧವಾಯಿತು. ಅಯ್ಯಂಗಾರ್ ಸಮಿತಿಯು ಸಲ್ಲಿಸಿದ ವರದಿಯನ್ನು ಭಾಗಶಃ ಒಪ್ಪಿದ ಸಂಸ್ಥಾನದ ಸರ್ಕಾರವು ೧೯೪೦ರಲ್ಲಿ ಕೌನ್ಸಿಲ್‌ನ ಸದಸ್ಯತ್ವವನ್ನು ೫೦ ರಿಂದ ೯೮ಕ್ಕೂ ಹಾಗೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯರ ಸಂಖ್ಯೆಯನ್ನು ೩೨೫ಕ್ಕೂ ಹೆಚ್ಚಿಸುವುದರ ಜೊತೆಗೆ ಸದಸ್ಯರ ಕಾಲಾವಧಿಯನ್ನು ಮೂರರಿಂದ ನಾಲ್ಕು ವರುಷಗಳಿಗೆ ಹೆಚ್ಚಿಸಿತು. ಅಲ್ಲದೆ ಮಹಿಳೆಯರು ಹಾಗೂ ಕ್ರಿಶ್ಚಿಯನ್ನರಿಗಾಗಿ ಪ್ರತ್ಯೇಕ ಮೀಸಲು ಸ್ಥಾನ ನೀಡುವ ಪದ್ಧತಿಯನ್ನೂ ಜಾರಿಗೆ ತಂದಿತು. ಪದನಿಮಿತ್ತ ದಿವಾನರೇ ಅಧ್ಯಕ್ಷರಾಗಿರುವ ಎಕ್ಸಿಕ್ಯೂಟಿವ್ ಕೌನ್ಸಿಲ್ ಸರ್ಕಾರದ ಕಾರ್ಯಾಂಗವಾಯಿತು. ಮುಂದೆ ೧೯೪೧ರಲ್ಲಿ ಜರುಗಿದ ಚುನಾವಣೆಯಲ್ಲಿ 'ಮೈಸೂರು ಕಾಂಗ್ರೆಸು' ತಾನು ಸ್ಪರ್ಧಿಸಿದ್ದ ೧೫೨ ಸ್ಥಾನಗಳಲ್ಲಿ ೧೦೬ರಲ್ಲಿ ಗೆಲುವು ಪಡೆದು, ಜವಾಬ್ದಾರಿ ಸರ್ಕಾರ ಸ್ಥಾಪನೆಗೊಂಡಿತು. ಆದರೆ ದೇಶಾದಾದ್ಯಂತ ಬ್ರಿಟಿಷರ ವಿರುದ್ಧ ನಡೆದ 'ಭಾರತ ಬಿಟ್ಟು ತೊಲಗಿ' ಬ್ರಿಟಿಷ್ ಚಳವಳಿಯಿಂದಾಗಿ ಸಂಸ್ಥಾನದಲ್ಲೂ ನಾಯಕರು ಬಂಧಿಸಲ್ಪಟ್ಟರು.

ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರವೂ ಸಂಸ್ಥಾನದ ರಾಜಪ್ರಭುತ್ವವು ರಾಜಕೀಯ ಪಕ್ಷಗಳ ಜವಾಬ್ದಾರಿ ಸರ್ಕಾರ ರಚನೆಯ ಬೇಡಿಕೆಯನ್ನು ಕಡೆಗಣಿಸಿದಾಗ, ಅದಕ್ಕಾಗಿ ಒತ್ತಾಯಿಸಿ, ೧೯೪೭ರ ಅಕ್ಟೋಬರ ೧೧ ರಂದು 'ಮೈಸೂರು ಚಲೋ' ಚಳವಳಿಯನ್ನು ಮೈಸೂರು ಕಾಂಗ್ರೆಸ್ ಹಮ್ಮಿಕೊಂಡಿತು. ಈ ಚಳವಳಿಗೆ ತಲೆಬಾಗಿದ ಸಂಸ್ಥಾನದ ಸರ್ಕಾರ, ಕಾಂಗ್ರೆಸ್ಸಿಗೆ ಜವಾಬ್ದಾರಿ ಸರ್ಕಾರ ರಚಿಸಲು ಒಪ್ಪಿಗೆ ನೀಡಿತು. ಅದರಂತೆ ಅಕ್ಟೋಬರ್ ೨೪ ರಂದು ಕೆ.ಸಿ.ರೆಡ್ಡಿ ಅವರ ಮುಂದಾಳತ್ವದಲ್ಲಿ ತಾತ್ಕಾಲಿಕ ಜವಾಬ್ದಾರಿ ಸರ್ಕಾರ ರಚಿಸಲ್ಪಟ್ಟಿತು. ಮುಂದೆ ಮೈಸೂರು ಸಂವಿಧಾನ ಸಭೆಗೆ ಮಾರ್ಚ್ ೧೯೪೮ರಲ್ಲಿ ಚುನಾವಣೆಗಳು ನಡೆದು ಏಪ್ರಿಲ್‌ನಲ್ಲಿ ಅದು ಸಮಾವೇಶಗೊಂಡಾಗ ಕೆ.ಸಿ.ರೆಡ್ಡಿ ಅದರ ಅಧ್ಯಕ್ಷರಾಗಿದ್ದರಾದರೂ ಮುಂದೆ ಟಿ. ಸುಬ್ರಮಣ್ಯ ಹಾಗೂ ಗಂಜೀವೀರಪ್ಪ ಕ್ರಮವಾಗಿ ಅದರ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾದರು. ಸಂಸ್ಥಾನದ ಅರಸರು ಭಾರತೀಯ ಸಂವಿಧಾನವನ್ನು ಒಪ್ಪಿಕೊಳ್ಳುವುದರೊಂದಿಗೆ ೧೫-೧೨-೧೯೪೯ರಂದು ಪ್ರಜಾಪ್ರತಿನಿಧಿ ಸಭೆ ಹಾಗೂ ಲೆಜಿಸ್ಲೇಟಿವ್ ಕೌನ್ಸಿಲ್‌ಗಳು ರದ್ದಾಗಿ ಮೈಸೂರು ಕಾನ್‌ಸ್ಟಿಟ್ಯುಯಂಟ್ ಸಭೆಯೇ ತಾತ್ಕಾಲಿಕ ಶಾಸಕಾಂಗವಾಗಿ ಮಾರ್ಪಟ್ಟು, ಕೆ.ಸಿ.ರೆಡ್ಡಿ ಮೊದಲ ಮುಖ್ಯಮಂತ್ರಿಯಾದರು. ಮುಂದೆ ೧೯೫೦ರಲ್ಲಿ ಭಾರತೀಯ ಸಂವಿಧಾನ ರಚಿಸಲ್ಪಟ್ಟು ೧೯೫೨ರಲ್ಲಿ ದೇಶದಲ್ಲಿ ಮೊದಲ ಸಾರ್ವತ್ರಿಕ ಚುನಾವಣೆ ನಡೆದಾಗ ಮಂಡ್ಯ ಜಿಲ್ಲೆಯಲ್ಲಿ ಒಂದು ಲೋಕಸಭಾ ಸ್ಥಾನ ಹಾಗೂ ಎಂಟು ವಿಧಾನಸಭಾ ಸ್ಥಾನಗಳಿದ್ದವು.

ಅಲ್ಲಿಂದೀಚೆಗೆ ಜಿಲ್ಲೆಯಲ್ಲಿ ಜರುಗಿರುವ ಲೋಕಸಭಾ, ವಿಧಾನಸಭಾ ಚುನಾವಣೆ ಹಾಗೂ ಉಪಚುನಾವಣೆಗಳ ಫಲಿತಾಂಶವನ್ನು ನೀಡುವಲ್ಲಿ ಆಯಾ ಕ್ಷೇತ್ರದಿಂದ ಆಯ್ಕೆಯಾದ ಅಭ್ಯರ್ಥಿಯ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಅದರ ಶೇಕಡಾವಾರು ಪ್ರಮಾಣವನ್ನು ಒದಗಿಸಲಾಗಿದ್ದು, ಜೊತೆಗೆ ಎರಡು ಹಾಗೂ ಮೂರನೆಯ ಸ್ಥಾನ ಪಡೆದ ಪಕ್ಷ, ಗಳಿಸಿದ ಮತ ಹಾಗೂ ಅದರ ಶೇಕಡಾವಾರು ಪ್ರಮಾಣಗಳನ್ನಷ್ಟೇ ನೀಡಲಾಗಿದೆ. ಇನ್ನೂ ಹೆಚ್ಚಿನ ವಿವರ ಬೆಂಗಳೂರಿನಲ್ಲಿರುವ ಚುನಾವಣಾ ಆಯೋಗದ ಕಚೇರಿಯಲ್ಲಿ ಲಭಿಸುತ್ತದೆ.

**ಸಾರ್ವತ್ರಿಕ ಚುನಾವಣೆ ೧೯೫೨** ; ದೇಶದಾದ್ಯಂತ ೧೯೫೨ರ ಜನವರಿಯಲ್ಲಿ ಜರುಗಿದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯ ಸ್ಥಾನಗಳಿಗಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಭಾ.ರಾ.ಕಾಂ.) ಕಿಸಾನ್ ಮಜದೂರ್ ಪ್ರಜಾ ಪಕ್ಷ (ಕಿ.ಮ.ಪ್ರ.ಪ.) ಷಡ್ಯೂಲ್ ಕ್ಯಾಸ್ಟ್ ಫೆಡರೇಷನ್ (ಎಸ್.ಸಿ.ಎಫ್) ಹಾಗೂ ಸೋಷಿಯಾಲಿಸ್ಟ್ ಪಕ್ಷಗಳೊಂದಿಗೆ ಪಕ್ಷೇತರರೂ ಸ್ಪರ್ಧಿಸಿದ್ದು, ಚುನಾವಣಾ ಫಲಿತಾಂಶದ ವಿವರ ಕೆಳಕಂಡಂತಿದೆ.

**ಲೋಕಸಭೆ** : ಎಂ.ಕೆ.ಶಿವನಂಜಪ್ಪ (ಭಾ.ರಾ.ಕಾಂ.) ೧,೨೫,೫೬೬ (೫೯.೨೩%) ಆಯ್ಕೆ ;ಕಿ.ಮ.ಪ್ರ.ಪ. ೮೬,೪೯೯ (೪೦.೭೭%).

**ವಿಧಾನಸಭೆ : ೧. ಕೃಷ್ಣರಾಜಪೇಟೆ:** ಎಸ್.ಎಂ.ಲಿಂಗಪ್ಪ (ಭಾ.ರಾ.ಕಾಂ.) ೧೧,೨೫೮ (೪೩.೧೭%) ಆಯ್ಕೆ; ಪಕ್ಷೇತರ ೭,೫೫೨ (೨೮.೯೬%); ಕಿ.ಮ.ಪ್ರ.ಪ. ೫,೪೩೩ (೨೦.೮೪%), ೨. **ಪಾಂಡವಪುರ:** ಬಿ.ವೈ.ನೀಲೆಗೌಡ (ಭಾ.ರಾ.ಕಾಂ.) ೭,೧೧೬ (೩೪.೮೭%) ಆಯ್ಕೆ ; ಕಿ.ಮ.ಪ್ರ.ಪ. ೫,೪೦೭, (೨೬.೪೯%); ಪಕ್ಷೇತರ ೪,೨೬೪, (೨೦.೮೯%), ೩. **ಶ್ರೀರಂಗಪಟ್ಟಣ :** ಕೆ.ಪುಟ್ಟಸ್ವಾಮಿ (ಭಾ.ರಾ.ಕಾಂ.) ೧೨,೫೮೧ (೬೧.೪೭%) ಆಯ್ಕೆ ; ಪಕ್ಷೇತರ ೭,೮೮೬ (೩೮.೫೩%) ೪. **ಮಂಡ್ಯ:** ಕೆ.ವಿ. ಶಂಕರೇಗೌಡ (ಭಾ.ರಾ.ಕಾಂ.) ೧೨,೯೮೦ (೫೦.೬೮%) ಆಯ್ಕೆ ; ಕಿ.ಮ.ಪ್ರ.ಪ ೬,೭೨೭ (೨೬.೨೭%), ಪಕ್ಷೇತರ ೫,೯೦೩ (೨೩.೦೫%), ೫. **ಮಳವಳ್ಳಿ (ಸಾಮಾನ್ಯ)** ಬಿ.ಪಿ.ನಾಗರಾಜಮೂರ್ತಿ (ಕಿ.ಮ.ಪ್ರ.ಪ) ೧೮.೩೧೪ (೨೫.೦೪%), ಆಯ್ಕೆ ; ಭಾ.ರಾ.ಕಾಂ. ೧೮,೧೪೪ (೨೮.೮೧%) ೬. **ಮಳವಳ್ಳಿ (ಮೀಸಲು)** ಎನ್.ಚಿಕ್ಕಲಿಂಗಯ್ಯ (ಎಸ್.ಸಿ.ಎಫ್)೧೩,೩೩೯ (೧೮.೨೪%) ಆಯ್ಕೆ; ಪಕ್ಷೇತರ, ೧೧,೨೫೨ (೧೫.೩೯%), ಭಾ.ರಾ.ಕಾಂ. ೭,೭೮೭ (೧೦.೬೫%) ೭. **ಮದ್ದೂರು :** ಹೆಚ್.ಕೆ.ವೀರಣ್ಣಗೌಡ (ಭಾ.ರಾ.ಕಾಂ.) ೧೬,೭೨೪ (೬೬.೬೧%) ಆಯ್ಕೆ; ಕಿ.ಮ.ಪ್ರ.ಪ ೮,೩೮೯ (೩೩.೩೯%) ೮. **ನಾಗಮಂಗಲ:** ಎಂ.ಶಂಕರಲಿಂಗೇಗೌಡ (ಪಕ್ಷೇತರ), ೧೪,೯೦೮ (೬೩.೦೪%) ಆಯ್ಕೆ; ಭಾ.ರಾ.ಕಾಂ. ೧೧,೯೧೪ (೩೬.೯೬%).

**ವಿಧಾನಸಭಾ ಉಪಚುನಾವಣೆ ; ನಾಗಮಂಗಲ:** ಶಾಸಕ ಎಂ.ಶಂಕರಲಿಂಗೇಗೌಡರ ನಿಧನದಿಂದಾಗಿ ತೆರವಾದ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಕೆ.ಸಿಂಗರಿಗೌಡರು ೧೪,೪೫೮ (೫೯.೪೩%) ಮತಗಳಿಸಿ ಆಯ್ಕೆಯಾದರೆ, ಪಕ್ಷೇತರ ಅಭ್ಯರ್ಥಿಗೆ ೯,೯೮೩ (೪೦.೫೭%) ಮತ ಲಭಿಸಿತು. **ಮಂಡ್ಯ :** ಈ ವಿಧಾನಸಭಾ ಕ್ಷೇತ್ರಕ್ಕೆ ೧೯೫೪ರಲ್ಲಿ ಜರುಗಿದ ಉಪಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಜಿ.ಎಸ್.ಬೊಮ್ಮೇಗೌಡ ಆಯ್ಕೆಯಾದರು.

**ಸಾರ್ವತ್ರಿಕ ಚುನಾವಣೆ ೧೯೫೭ :** ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಭಾ.ರಾ.ಕಾಂ.), ಪ್ರಜಾ ಸಮಾಜವಾದಿ ಪಕ್ಷ (ಪ್ರ.ಸ.ಪ) ಹಾಗೂ ಪರಿಶಿಷ್ಟ ಜಾತಿಗಳ ಸಂಘಟನೆಗಳೇ (ಎಸ್.ಸಿ.ಎಫ್.) ಚುನಾವಣಾ ಕಣದಲ್ಲಿದ್ದ ಮೂರು ಪ್ರಧಾನ ರಾಜಕೀಯ ಪಕ್ಷಗಳಾಗಿದ್ದು, ಜಿಲ್ಲೆಯ ಎಲ್ಲಾ ವಿಧಾನಸಭಾ ಸ್ಥಾನ (ಎಂಟು)ಗಳಿಗೆ ಸ್ಪರ್ಧಿಸಿದ್ದ ಕಾಂಗ್ರೆಸ್, ಐದು ಸ್ಥಾನ (ಮಳವಳ್ಳಿ ದ್ವಿಸದಸ್ಯತ್ವ ಕ್ಷೇತ್ರವೂ ಸೇರಿದಂತೆ)ಗಳಲ್ಲಿ ಜಯಗಳಿಸುವುದರ ಜೊತೆಗೆ ಲೋಕಸಭಾ ಸ್ಥಾನವನ್ನೂ ತನ್ನದಾಗಿಸಿಕೊಂಡಿತು. ಪ್ರಜಾ ಸಮಾಜವಾದಿ ಪಕ್ಷವು ತಾನು ಸ್ಪರ್ಧಿಸಿದ್ದ ಐದು ಸ್ಥಾನಗಳಲ್ಲಿ ಪಾಂಡವಪುರ ಕ್ಷೇತ್ರದಲ್ಲಿ ಮಾತ್ರ ಗೆಲವು ಸಾಧಿಸಿತು. ಪರಿಶಿಷ್ಟ ಜಾತಿಗಳ ಸಂಘಟನೆಯು ಮಳವಳ್ಳಿ ಮೀಸಲು ಕ್ಷೇತ್ರಕ್ಕೆ ಸ್ಪರ್ಧಿಸಿತ್ತಾದರೂ ಯಶ ದೊರಕಲಿಲ್ಲ. ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಆರು ಪಕ್ಷೇತರರಲ್ಲಿ ಇಬ್ಬರು ಮಾತ್ರ ಶ್ರೀರಂಗಪಟ್ಟಣ ಹಾಗೂ ಮಂಡ್ಯ ಕ್ಷೇತ್ರಗಳಿಂದ ಆಯ್ಕೆಯಾಗುವಲ್ಲಿ ಯಶಸ್ವಿಯಾಗಿದ್ದು, ಫಲಿತಾಂಶದ ವಿವರವನ್ನಿಲ್ಲಿ ನೀಡಲಾಗಿದೆ.

**ಲೋಕಸಭೆ :** ಎಂ.ಕೆ.ಶಿವನಂಜಪ್ಪ (ಭಾ.ರಾ.ಕಾಂ.) ೧,೪೨,೦೬೬ (೬೧.೩೬%) ಆಯ್ಕೆ ; ಪ್ರ.ಸ.ಪ. ೮೯,೩೬೫ (೩೮.೬೪%).

**ವಿಧಾನಸಭೆ : ೧. ಕೃಷ್ಣರಾಜಪೇಟೆ:** ಎಂ.ಕೆ. ಬೊಮ್ಮೇಗೌಡ (ಭಾ.ರಾ.ಕಾಂ.) ೧೭,೪೧೯ (೫೯.೫೭%) ಆಯ್ಕೆ; ಪಕ್ಷೇತರ ೭,೩೩೩ (೨೫.೦೫%); ಪ್ರ.ಸ.ಪ. ೪,೪೯೭ (೧೫.೩೮%), ೨. **ಪಾಂಡವಪುರ:** ಬಿ.ಚನ್ನಯ್ಯ (ಪ್ರ.ಸ.ಪ) ೧೨,೬೭೭ (೪೩.೯೨%) ಆಯ್ಕೆ ; ಭಾ.ರಾ.ಕಾಂ. ೮,೮೩೭ (೩೦.೬೫%); ಪಕ್ಷೇತರ ೭,೩೩೯, (೨೫.೪೩%), ೩. **ಶ್ರೀರಂಗಪಟ್ಟಣ :** ಎಂ.ಜಿ.ಚುಂಚೇಗೌಡ (ಪಕ್ಷೇತರ) ೧೮,೨೮೦ (೬೧.೮೧%) ಆಯ್ಕೆ ; ಭಾ.ರಾ.ಕಾಂ. ೧೧,೨೯೦ (೩೮.೧೯%) ೪. **ಮಂಡ್ಯ:** ಜಿ.ಎಸ್. ಬೊಮ್ಮೇಗೌಡ (ಪಕ್ಷೇತರ) ೧೭,೯೧೦ (೪೬.೮೧%)

ಆಯ್ಕೆ ; ಭಾ.ರಾ.ಕಾಂ. ೧೬,೦೩೫ (೪೧.೯೦%), ಪಕ್ಷೇತರ ೪,೩೦೯ (೧೧.೨೯%), ೫. **ಮಳವಳ್ಳಿ (ಸಾಮಾನ್ಯ)** ಹೆಚ್.ವಿ.ವೀರೇಗೌಡ (ಭಾ.ರಾ.ಕಾಂ.) ೨೮,೪೫೪ (೩೪.೩೯%), ಆಯ್ಕೆ ; ಪ್ರ.ಸ.ಪ. ೧೨,೪೪೯ (೧೫.೦೪%) ೬. **ಮಳವಳ್ಳಿ (ಮೀಸಲು)** ಎಂ. ಮಲ್ಲಿಕಾರ್ಜುನಸ್ವಾಮಿ (ಭಾ.ರಾ.ಕಾಂ.) ೨೭,೧೦೨ (೩೨.೭೬%) ಆಯ್ಕೆ; ಎಸ್.ಸಿ.ಎಫ್. ೯,೭೨೩ (೧೧.೭೫%), ೭. **ಮದ್ದೂರು** : ಹೆಚ್.ಕೆ.ವೀರಣ್ಣಗೌಡ (ಭಾ.ರಾ.ಕಾಂ.) ೧೯,೧೮೭ (೫೯.೮೦%) ಆಯ್ಕೆ; ಪ್ರ.ಸ.ಪ ೧೨,೯೦೦ (೪೦.೨೦%) ೮. **ನಾಗಮಂಗಲ:** ಟಿ. ಮರಿಯಪ್ಪ (ಭಾ.ರಾ.ಕಾಂ.) ೧೫,೯೮೫ (೫೨.೨೫%) ಆಯ್ಕೆ; ಪ್ರ.ಸ.ಪ. ೧೪,೬೦೭ (೪೭.೭೫%).

**ಸಾರ್ವತ್ರಿಕ ಚುನಾವಣೆ ೧೯೬೨** : ೧೯೬೧ರ ಚುನಾವಣೆ ಕಾಯ್ದೆಯ ಸೆಕ್ಷನ್ ಮೂರು ಹಾಗೂ ಸೆಕ್ಷನ್ ಏಳರ ಪ್ರಕಾರ, **ದ್ವಿಸದಸ್ಯ ಕ್ಷೇತ್ರವಾಗಿದ್ದ ಮಳವಳ್ಳಿ ಕ್ಷೇತ್ರವನ್ನು, ಮಳವಳ್ಳಿ ಹಾಗೂ ಕಿರುಗಾವಲು ಕ್ಷೇತ್ರಗಳೆಂದು ವಿಭಜಿಸಿ, ಕಿರುಗಾವಲನ್ನು ಮೀಸಲು ಕ್ಷೇತ್ರವೆಂದು ಘೋಷಿಸಲಾಯಿತು.** ಜಿಲ್ಲೆಯ ಎಲ್ಲಾ ಎಂಟು ವಿಧಾನಸಭಾ ಕ್ಷೇತ್ರಗಳನ್ನೂ ಮಂಡ್ಯ ಲೋಕಸಭಾ ಕ್ಷೇತ್ರವು ಒಳಗೊಂಡಿತ್ತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಪ್ರಜಾ ಸಮಾಜವಾದಿ ಪಕ್ಷ ಹಾಗೂ ಸೋಷಿಯಲಿಸ್ಟ್ ಪಕ್ಷಗಳು ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಪ್ರಮುಖ ರಾಜಕೀಯ ಪಕ್ಷಗಳಾಗಿದ್ದವು. ಜಿಲ್ಲೆಯ ಏಕೈಕ ಲೋಕಸಭಾ ಹಾಗೂ ನಾಲ್ಕು ವಿಧಾನಸಭಾ ಕ್ಷೇತ್ರಗಳು ಕಾಂಗ್ರೆಸ್‌ಗೆ ಒಲಿದರೆ ಉಳಿದ ನಾಲ್ಕು ಪಕ್ಷೇತರರ ಪಾಲಾಗಿ ಇತರ ಪಕ್ಷಗಳು ಪರಾಭವಗೊಂಡವು. ಫಲಿತಾಂಶದ ವಿವರ ಕೆಳಕಂಡಂತಿದೆ.

**ಲೋಕಸಭೆ** : ಎಂ.ಕೆ.ಶಿವನಂಜಪ್ಪ (ಭಾ.ರಾ.ಕಾಂ) ೧,೪೮,೫೨೩ (೫೧%) ಆಯ್ಕೆ; ಪಕ್ಷೇತರ ೭೪,೨೦೦ (೨೫,೫೨%), ಪಕ್ಷೇತರ ೩೩,೬೭೪ (೧೧.೫೮%).

**ವಿಧಾನಸಭೆ** : ೧. **ಕೃಷ್ಣರಾಜಪೇಟೆ:** ಎಸ್. ನಂಜೇಗೌಡ (ಪಕ್ಷೇತರ) ೧೮,೨೩೬ (೫೩.೨೦%) ಆಯ್ಕೆ; ಭಾ.ರಾ.ಕಾಂ. ೧೬,೦೪೦ (೪೬.೮೦%) ೨. **ಪಾಂಡವಪುರ:** ಬಿ.ವೈ.ನೀಲೆಗೌಡ (ಭಾ.ರಾ.ಕಾಂ.) ೧೪,೦೮೯ (೪೫.೩೨%) ಆಯ್ಕೆ ; ಪಕ್ಷೇತರ ೧೧,೦೮೪ (೩೫.೬೫%) ಪ್ರ.ಸ,ಪ. ೫,೯೧೪ (೧೯.೦೩%); ೩. **ಶ್ರೀರಂಗಪಟ್ಟಣ :** ಎ.ಜಿ.ಬಂಡಿಗೌಡ (ಭಾ.ರಾ.ಕಾಂ) ೨೩,೮೦೯ (೭೦.೮೧%) ಆಯ್ಕೆ; ಪಕ್ಷೇತರ ೯,೩೮೯ (೨೭.೯೨%) ೪. **ಮಂಡ್ಯ:** ಜೆ.ದೇವಯ್ಯ (ಪಕ್ಷೇತರ) ೨೩,೨೯೯ (೪೭.೩೨%) ಆಯ್ಕೆ ; ಭಾ.ರಾ.ಕಾಂ. ೨೩,೬೩೯ (೪೫.೯೭%) ಪಕ್ಷೇತರ ೩,೩೦೪ (೬.೭೧%), ೫. **ಮಳವಳ್ಳಿ** : ಜಿ.ಮಾದೇಗೌಡ (ಭಾ.ರಾ.ಕಾಂ) ೨೧,೧೬೯ (೬೪.೧೦%) ಆಯ್ಕೆ ; ಪ್ರ.ಸ.ಪ. ೧೧,೧೪೯ (೩೩.೭೬%) ೬. **ಕಿರುಗಾವಲು (ಮೀಸಲು) :** ಎಂ. ಮಲ್ಲಿಕಾರ್ಜುನಸ್ವಾಮಿ (ಭಾ.ರಾ.ಕಾಂ.) ೧೫,೦೩೯ (೬೦.೩೦%) ಆಯ್ಕೆ; ಪ್ರ.ಸ.ಪ. ೯,೯೦೧ (೩೯.೭೦%) ೭. **ಮದ್ದೂರು** : ಎಸ್.ಎಂ. ಕೃಷ್ಣ (ಪಕ್ಷೇತರ) ೨೪,೨೬೯ (೫೦.೦೭%) ಆಯ್ಕೆ; ಹೆಚ್.ಕೆ.ವೀರಣ್ಣಗೌಡ (ಭಾ.ರಾ.ಕಾಂ.) ೨೨,೩೧೩ (೪೬.೦೪%) ಸೋಷಿಯಲಿಸ್ಟ್ ಪಾರ್ಟಿ ೧,೮೮೪ (೩.೮೯%) ೮. **ನಾಗಮಂಗಲ:** ಟಿ.ಎನ್.ಮಾದಪ್ಪಗೌಡ (ಪಕ್ಷೇತರ) ೧೯,೨೭೫ (೫೯.೧೫%) ಆಯ್ಕೆ ಕೆ.ಸಿಂಗರೆಗೌಡ (ಭಾ.ರಾ.ಕಾಂ.) ೧೫,೦೫೦ (೪೩.೮೫%).

**ಸಾರ್ವತ್ರಿಕ ಚುನಾವಣೆ ೧೯೬೭** : ೧೯೬೫ರ ಚುನಾವಣಾ ತಿದ್ದುಪಡಿ ಕಾಯ್ದೆಯನ್ವಯ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಅಲ್ಪಸ್ವಲ್ಪ ಆಂತರಿಕ ಬದಲಾವಣೆಗಳಾದವು. **ಕಿರುಗಾವಲಿಗೆ ಬದಲು ಮಳವಳ್ಳಿಯನ್ನು ಮೀಸಲು ಕ್ಷೇತ್ರವೆಂದು ಘೋಷಿಸಲಾಯಿತು.** ಈ ಚುನಾವಣೆಯಲ್ಲಿ ಕಾಂಗ್ರೆಸ್, ಪ್ರಜಾ ಸೋಷಿಯಲಿಸ್ಟ್ ಪಕ್ಷ ಹಾಗೂ ರಿಪಬ್ಲಿಕನ್ ಪಕ್ಷ (ಆರ್.ಪಿ.ಐ.)ಗಳು ಸ್ಪರ್ಧಿಸಿದ್ದು, ಕಾಂಗ್ರೆಸ್ಸಿಗೆ ಲೋಕಸಭಾ ಹಾಗೂ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಗೆಲವು ಲಭಿಸಿದರೆ, ಉಳಿದ ಮೂರು, ಪಕ್ಷೇತರರ ಪಾಲಾಗಿದ್ದು ಫಲಿತಾಂಶದ ವಿವರ ಕೆಳಕಂಡಂತಿದೆ.

**ಲೋಕಸಭೆ :** ಎಂ.ಕೆ.ಶಿವನಂಜಪ್ಪ (ಭಾ.ರಾ.ಕಾಂ) ೧,೯೨,೭೦೬ (೫೬.೮೦%) ಆಯ್ಕೆ; ಪಕ್ಷೇತರ ೧,೪೬,೨೨೨ (೪೩.೧೪%).

**ವಿಧಾನಸಭೆ :** ೧. **ಕೃಷ್ಣರಾಜಪೇಟೆ:** ಎಂ.ಕೆ.ಬೊಮ್ಮೇಗೌಡ (ಪಕ್ಷೇತರ) ೨೮,೫೧೨ (೭೦.೬೯%) ಆಯ್ಕೆ; ಭಾ.ರಾ.ಕಾಂ. ೧೧,೦೪೮ (೨೭.೩೯%) ೨. **ಪಾಂಡವಪುರ:** ಎನ್.ಎ.ಚನ್ನೇಗೌಡ (ಪಕ್ಷೇತರ) ೧೯,೪೬೦ (೫೨.೧೮%) ಆಯ್ಕೆ ; ಭಾ.ರಾ.ಕಾಂ. ೧೫,೫೯೯ (೪೧.೮೩%), ಪಕ್ಷೇತರ ೨,೨೩೪ (೫.೯೯%) ೩. **ಶ್ರೀರಂಗಪಟ್ಟಣ :** ಬಿ.ದೊಡ್ಡಬೋರೇಗೌಡ (ಪಕ್ಷೇತರ) ೧೩,೮೮೩ (೩೩.೯೨%) ಆಯ್ಕೆ; ಭಾ.ರಾ.ಕಾಂ. ೧೩,೭೯೪ (೩೩.೧೧%) ಪಕ್ಷೇತರ ೯,೬೫೧ (೨೩.೧೭%) ೪. **ಮಂಡ್ಯ:** ನಾಗಪ್ಪ (ಭಾ.ರಾ.ಕಾಂ.) ೨೫,೪೬೨ (೫೩.೫೪%) ಆಯ್ಕೆ; ಪಕ್ಷೇತರ ೨೨,೦೯೯ (೪೬.೪೬%) ೫. **ಮಳವಳ್ಳಿ (ಮೀಸಲು)** ಎಂ.ಮಲ್ಲಿಕಾರ್ಜುನ ಸ್ವಾಮಿ (ಭಾ.ರಾ.ಕಾಂ) ೨೧,೦೭೭ (೬೫.೩೨%) ಪ್ರ.ಸ.ಪ. ೭,೩೧೬ (೨೨.೭೮%) ಆರ್.ಪಿ.ಐ. ೧,೨೩೭ (೩.೯೬%) ೬. **ಕಿರುಗಾವಲು:** ಜಿ.ಮಾದೇಗೌಡ (ಭಾ.ರಾ.ಕಾಂ.) ೨೭,೩೭೭ (೬೯.೪೬%) ಆಯ್ಕೆ; ಪಕ್ಷೇತರ ೧೨,೦೩೯ (೩೦.೫೪%) ೭. **ಮದ್ದೂರು** :ಎಂ. ಮಂಚೇಗೌಡ (ಭಾ.ರಾ.ಕಾಂ.) ೨೭,೧೪೮ (೫೨.೧೬%) ಆಯ್ಕೆ; ಪ್ರ.ಸ.ಪ. ೨೨,೭೧೪ (೪೩.೬೪%) ಪಕ್ಷೇತರ ೧,೭೭೧ (೪.೧೭%) ೮. **ನಾಗಮಂಗಲ:** ಕೆ.ಸಿಂಗರಿಗೌಡ (ಭಾ.ರಾ.ಕಾಂ.) ೨೪,೪೨೮ (೫೭.೫೯%) ಆಯ್ಕೆ; (ಪಕ್ಷೇತರ), ೧೬,೨೧೯ (೩೮.೨೪%).

**ಲೋಕಸಭಾ ಉಪ ಚುನಾವಣೆ ೧೯೬೮ :** ಲೋಕಸಭಾ ಸದಸ್ಯರಾಗಿದ್ದ ಎಂ.ಕೆ.ಶಿವನಂಜಪ್ಪ ಅವರ ನಿಧನದಿಂದಾಗಿ ತೆರವಾದ ಸ್ಥಾನಕ್ಕೆ ೧೯೬೮ರ ಜನವರಿ ೨೪ ರಂದು ಉಪಚುನಾವಣೆ ನಡೆದು ಪ್ರಜಾ ಸಮಾಜವಾದಿ ಪಕ್ಷದ ಎಸ್.ಎಂ.ಕೃಷ್ಣ ಅಯ್ಕೆಯಾಗಿದ್ದು, ಫಲಿತಾಂಶ ಕೆಳಕಂಡಂತಿದೆ. ಎಸ್.ಎಂ.ಕೃಷ್ಣ (ಪ್ರ.ಸ.ಪ) ೧,೮೪,೦೫೪ (೫೯.೮೫%) ಆಯ್ಕೆ ; ಭಾ.ರಾ.ಕಾಂ. ೧,೨೦,೧೧೧ (೩೯.೦೫%) ಪಕ್ಷೇತರ, ೩,೩೯೪ (೧.೧೦%)

**ಮಧ್ಯಂತರ ಲೋಕಸಭಾ ಚುನಾವಣೆ ೧೯೭೧ :** ಅವಧಿ ಪೂರ್ಣಗೊಳ್ಳುವ ಮೊದಲೇ ನಾಲ್ಕನೆಯ ಲೋಕಸಭೆಯು ವಿಸರ್ಜಿಸಲ್ಪಟ್ಟಿತ್ತು. ಈ ನಡುವೆ ಆಡಳಿತಾರೂಢ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಲ್ಲಿ ೧೯೬೯ರಲ್ಲಿ ಒಡಕುಂಟಾಗಿ ಜಗಜೀವನರಾಮ್ ನಾಯಕತ್ವದ ರಾಷ್ಟ್ರೀಯ ಕಾಂಗ್ರೆಸ್ (ಆರ್) ಹಾಗೂ ನಿಜಲಿಂಗಪ್ಪ ನಾಯಕತ್ವದ ರಾಷ್ಟ್ರೀಯ ಕಾಂಗ್ರೆಸ್ (ಒ) (ಸಂಸ್ಥಾ ಕಾಂಗ್ರೆಸ್) (ಎನ್.ಸಿ.ಒ) ಎಂದು ವಿಭಜಿಸಲ್ಪಟ್ಟು ೧೯೭೧ರ ಮಾರ್ಚ್‌ನಲ್ಲಿ ಲೋಕಸಭಾ ಚುನಾವಣೆಯಲ್ಲಿ ಅವು ಸ್ಪರ್ಧಿಸಿದವು. ಅಲ್ಲದೆ ಭಾರತೀಯ ಜನಸಂಘ (ಬಿ.ಜೆ.ಎಸ್)ವೂ ಸ್ಪರ್ಧಿಸಿದ್ದು, ಫಲಿತಾಂಶ ಕೆಳಕಂಡಂತಿದೆ. ಎಸ್.ಎಂ.ಕೃಷ್ಣ (ಕಾಂಗ್ರೆಸ್ (ಆರ್)) ೨,೭೨,೧೭೪ (೭೧.೨೧%) ಆಯ್ಕೆ; ಎನ್.ಸಿ.ಒ. ೧,೧೦,೦೧೨ (೨೮.೭೯%).

**ಮಂಡ್ಯ ಲೋಕಸಭಾ ಉಪಚುನಾವಣೆ ೧೯೭೨:** ಎಸ್.ಎಂ.ಕೃಷ್ಣ ಅವರ ರಾಜಿನಾಮೆಯಿಂದಾಗಿ ತೆರವಾದ ಮಂಡ್ಯ ಲೋಕಸಭಾ ಸ್ಥಾನಕ್ಕೆ ೧೯೭೨ರ ಅಕ್ಟೋಬರ್ ೨೨ ರಂದು ಉಪಚುನಾವಣೆ ನಡೆದು ಅದರ ಫಲಿತಾಂಶ ಕೆಳಕಂಡಂತಿದೆ. ಕೆ.ಚಿಕ್ಕಲಿಂಗಯ್ಯ ಕಾಂಗ್ರೆಸ್ (ಆರ್.) ೧,೨೩,೪೦೫ (೪೯.೯೦%) ಆಯ್ಕೆ ; ಎನ್.ಸಿ.ಒ. ೧,೦೩,೨೯೩, (೪೧.೭೩%) ಪಕ್ಷೇತರ ೧೪,೮೩೨ (೫.೯೯%).

**ವಿಧಾನಸಭಾ ಚುನಾವಣೆ ೧೯೭೨ :** ೧. **ಕೃಷ್ಣರಾಜಪೇಟೆ:** ಎಸ್.ಎಂ ಲಿಂಗಪ್ಪ (ಕಾಂಗ್ರೆಸ್ (ಆರ್)) ೨೯,೪೨೪, (೬೫.೬೩%) ಆಯ್ಕೆ; ಪಕ್ಷೇತರ ೧೫,೪೧೦ (೩೪.೩೭%) ೨. **ಪಾಂಡವಪುರ:** ಡಿ.ಹಲಗೇಗೌಡ (ಕಾಂಗ್ರೆಸ್ (ಅರ್)) ೩೬,೯೦೦ (೭೦.೮೯%) ಆಯ್ಕೆ ; ಎನ್.ಸಿ.ಒ. ೧೫,೧೫೬ (೨೯.೧೧%) ೩. **ಶ್ರೀರಂಗಪಟ್ಟಣ :** ಶ್ರೀಮತಿ. ದಮಯಂತಿ ಬೋರೇಗೌಡ (ಕಾಂಗ್ರೆಸ್ (ಆರ್)) ೨೫,೯೬೫ (೪೬.೭೧%) ಆಯ್ಕೆ; ಎನ್.ಸಿ.ಒ.

೧೮,೮೨೬ (೩೩.೮೬%) ಪಕ್ಷೇತರ ೧೦,೮೦೧ (೧೯.೪೩%) ೪. **ಮಂಡ್ಯ:** ಎಂ.ಎಚ್.ಬೋರಯ್ಯ (ಕಾಂಗ್ರೆಸ್ (ಆರ್)) ೨೮,೫೫೨ (೪೯.೩೦%) ಎನ್.ಸಿ.ಒ. ೨೮,೪೦೫ (೪೯.೦೫%) ಬಿ.ಜೆ.ಎಸ್. ೯೫೩ (೧.೬೫%) ೫. **ಮಳವಳ್ಳಿ (ಮೀಸಲು)** ಎಂ.ಮಲ್ಲಿಕಾರ್ಜುನ ಸ್ವಾಮಿ (ಕಾಂಗ್ರೆಸ್ (ಅರ್)) ೨೬,೨೩೧ (೬೪.೦೬%) ಆಯ್ಕೆ; ಎನ್.ಸಿ.ಒ. ೧೪,೭೧೭ (೩೫.೯೪%) ೬. **ಕಿರುಗಾವಲು** : ಜಿ.ಮಾದೇಗೌಡ (ಎನ್.ಸಿ.ಒ.) ೨೫,೮೨೯ (೫೧.೦೬%) ಆಯ್ಕೆ; (ಕಾಂಗ್ರೆಸ್ (ಆರ್)) ೨೩,೮೧೯ (೪೭.೦೮%), ಪಕ್ಷೇತರ ೪೯೩ (೦.೯೭%) ೭. **ಮದ್ದೂರು** : ಎ.ಡಿ.ಬಿಳಿಗೌಡ (ಕಾಂಗ್ರೆಸ್ (ಆರ್)) ೨೭,೫೫೦ (೪೮.೫೪%) ಆಯ್ಕೆ; ಪಕ್ಷೇತರ ೨೩,೪೫೮ (೪೧.೩೩%) ಎನ್.ಸಿ.ಒ. ೪,೯೪೦ (೮.೭೦%) ೮. **ನಾಗಮಂಗಲ:** ಟಿ.ಎನ್.ಮಾದಪ್ಪಗೌಡ (ಕಾಂಗ್ರೆಸ್ (ಆರ್)) ೨೪,೭೨೯ ಎನ್.ಸಿ.ಒ. ೧೫,೩೬೫ (೩೫.೮೮%) ಪಕ್ಷೇತರ ೨,೭೩೩ (೬.೩೮%).

**ವಿಧಾನಸಭಾ ಉಪಚುನಾವಣೆ ೧೯೭೨ : ನಾಗಮಂಗಲ** ಕ್ಷೇತ್ರದ ಶಾಸಕ್ಕೆ ಟಿ.ಎನ್.ಮಾದಪ್ಪಗೌಡರ ಅಕಾಲ ಮರಣದಿಂದ ತೆರವಾದ ಸ್ಥಾನಕ್ಕೆ ೧೯೭೨ರ ಅಕ್ಟೋಬರ್‌ನಲ್ಲಿ ಉಪಚುನಾವಣೆ ನಡೆದು ಫಲಿತಾಂಶ ಕೆಳಕಂಡಂತಿದೆ. ಹೆಚ್.ಟಿ.ಕೃಷ್ಣ (ಎನ್.ಸಿ.ಒ.) ೨೮,೪೯೬ (೫೬.೩೮%) ಅಯ್ಕೆ; (ಕಾಂಗ್ರೆಸ್ (ಆರ್)) ೨೨,೩೮೪ (೪೩.೬೨%).

**ಲೋಕಸಭಾ ಚುನಾವಣೆ ೧೯೭೭** : ಐದನೆಯ ಲೋಕಸಭೆಯ ಅವಧಿಯು ೧೯೭೬ರಲ್ಲಿ ಪೂರ್ಣಗೊಂಡಿತು. ಆದರೆ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಘೋಷಿಸುವ ಮೂಲಕ ಲೋಕಸಭೆಯ ಕಾರ್ಯಾವಧಿಯನ್ನು ೧೯೭೭ರವರೆಗೆ ವಿಸ್ತರಿಸಿದ್ದು, ೧೯೭೭ರಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಕಾಂಗ್ರೆಸ್ (ಒ) ಭಾರತೀಯ ಜನ ಸಂಘ (ಬಿ.ಜೆ.ಎಸ್.) ಸೋಷಿಯಲಿಸ್ಟ್ ಪಕ್ಷ, ಸ್ವತಂತ್ರ ಪಕ್ಷ ಮುಂತಾದ ರಾಜಕೀಯ ಪಕ್ಷಗಳು ಒಗ್ಗೂಡಿ ರೂಪುಗೊಂಡ ಭಾರತೀಯ ಲೋಕದಳ ಅಥವಾ ಜನತಾ ಪಕ್ಷ ಹಾಗೂ ಇಂದಿರಾಗಾಂಧಿ ನೇತೃತ್ವದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಐ) (ಕಾಂಗೈ) ೧೯೭೭ರ ಚುನಾವಣೆಯಲ್ಲಿ ಸ್ಪರ್ಧಿಸಿದವು. ೧೯೭೭ರ ಚುನಾವಣೆಯೊಂದಿಗೆ **ಮಳವಳ್ಳಿ ಮೀಸಲು ವಿಧಾನಸಭಾ ಕ್ಷೇತ್ರವು ಕನಕಪುರ ಲೋಕಸಭಾ ಕ್ಷೇತ್ರದ** ವ್ಯಾಪ್ತಿಗೊಳಪಟ್ಟಿತ್ತು. ಚುನಾವಣಾ ಫಲಿತಾಂಶದ ವಿವರ : ಕೆ.ಚಿಕ್ಕಲಿಂಗಯ್ಯ (ಕಾಂಗೈ) ೨,೦೦,೩೬೦ (೪೮.೩೯%) ಆಯ್ಕೆ; ಜನತಾ ೧,೯೫,೦೭೯ (೪೭.೧೧%) ಪಕ್ಷೇತರ ೧೬,೦೯ (೩.೮೬%).

**ವಿಧಾನಸಭಾ ಚುನಾವಣೆ ೧೯೭೮** : ೧೯೬೭ರ ಡಿಲಿಮಿಟೇಷನ್ ಕಾಯ್ದೆಯನ್ವಯ **ಕೆರಗೋಡು,** ಜಿಲ್ಲೆಯ **ಒಂಬತ್ತನೆಯ ವಿಧಾನಸಭಾ ಕ್ಷೇತ್ರ**ವಾಗಿ ಅಸ್ತಿತ್ವಕ್ಕೆ ಬಂತು. ಐದನೆಯ ವಿಧಾನಸಭೆಯ ಕಾಲಾವಧಿಯು ೧೯೭೭ರಲ್ಲಿ ಪೂರ್ಣಗೊಂಡಿತು. ೧೯೭೮ರ ಫೆಬ್ರವರಿಯಲ್ಲಿ ಆರನೆಯ ವಿಧಾನಸಭೆಗಾಗಿ ಚುನಾವಣೆಗಳು ನಡೆದವು. ಆದರೆ ಈ ನಡುವೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪುನಃ ಒಡೆದಾಗ ಒಂದು ಬಣದ ನಾಯಕತ್ವವನ್ನು ಬ್ರಹ್ಮಾನಂದ ರೆಡ್ಡಿ ವಹಿಸಿದರೆ, ಇನ್ನೊಂದು ಬಣ (ಕಾಂಗೈ)ದ ನಾಯಕಿ ಇಂದಿರಾಗಾಂಧಿ ಆದರು. ಅವರ ನೇತೃತ್ವದಲ್ಲಿ ಕಾಂಗೈ, ಜನತಾಪಕ್ಷದ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಿತು. ಅದರಂತೆ ಜಿಲ್ಲೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಕ್ಷೇತ್ರವಾರು ವಿವರನ್ನಿಲ್ಲಿ ನೀಡಲಾಗಿದೆ. ೧. **ಕೃಷ್ಣರಾಜಪೇಟೆ:** ಎಸ್. ಎಂ.ಲಿಂಗಪ್ಪ (ಜನತಾ) ೨೬,೩೫೨ (೪೩.೩೬%) ಆಯ್ಕೆ; ಕಾಂಗೈ ೨೦,೦೪೦ (೩೨.೯೭%); ಕಾಂ(ಒ) ೧೨,೩೭೩ (೨೦.೩೬%); ಪಕ್ಷೇತರ ೨,೦೧೬ (೩.೩೧%) ೨. **ಪಾಂಡವಪುರ:** ಕೆ.ಆರ್.ರಾಜಗೋಪಾಲ (ಜನತಾ) ೨೭,೩೪೧ (೪೫.೧೬%) ಆಯ್ಕೆ; ಕಾಂಗೈ ೧೭,೮೮೫ (೨೬.೫೪%) ; ಕಾಂ (ಒ) ೧೧,೩೨೩ (೧೮.೭೦%) ; ಪಕ್ಷೇತರ ೨,೬೪೭ (೪.೩೭%); ೩. **ಶ್ರೀರಂಗಪಟ್ಟಣ** : ಎಮ್. ಶ್ರೀನಿವಾಸ (ಜನತಾ) ೨೦,೧೨೭ (೩೩.೬೭%) ಆಯ್ಕೆ; ಕಾಂಗೈ ೧೮,೬೪೭ (೩೧.೧೯%), ಕಾಂ (ಒ) ೧೭,೫೭೬ (೨೯.೪೦%). ೪. **ಮಂಡ್ಯ:** ಎಂ.ಎಸ್.ಆತ್ಮಾನಂದ (ಜನತಾ) ೩೧.೦೪೧

(೪೮.೬೯%), ಆಯ್ಕೆ; ಕಾಂಗ್ರೆ ೨೮,೨೯೪ (೪೪.೩೮%); ಕಾಂ(ಒ) ೨,೮೦೮ (೪.೪೦%) ೫. **ಮಳವಳ್ಳಿ (ಮೀಸಲು)** : ಕೆ.ಎಲ್. ಮರೀಸ್ವಾಮಿ (ಜನತಾ) ೨೭,೭೭೪ (೪೫.೯೨%) ಆಯ್ಕೆ; ಕಾಂಗ್ರೆ ೨೭,೭೧೨ (೪೫.೮೨%); ಕಾಂ(ಒ) ೪,೯೮೮ (೮.೨೬%) ೬. **ಕಿರುಗಾವಲು:** ಜಿ.ಮಾದೇಗೌಡ (ಜನತಾ) ೪೦,೭೧೧ (೬೪ %) ಆಯ್ಕೆ; ಕಾಂಗ್ರೆ ೧೯,೪೭೦ (೩೦.೬೨%) ; ಕಾಂ (ಒ) ೩,೪೨೦ (೫.೩೮%); ೭. **ಮದ್ದೂರು:** ಎಂ. ಮಂಚೇಗೌಡ (ಜನತಾ) ೩೭,೨೬೧ (೫೭.೧೬%) ಆಯ್ಕೆ; ಕಾಂಗ್ರೆ ೧೪,೭೦೦ (೨೨.೫೫%), (ಕಾಂಗ್ರೆಸ್ (ಆರ್)), ೧೧,೭೬೫ (೧೮.೦೫%) ೮. **ನಾಗಮಂಗಲ:** ಹೆಚ್.ಟಿ. ಕೃಷ್ಣಪ್ಪ (ಪಕ್ಷೇತರ) ೨೩,೭೨೧ (೩೯.೭೩%) ಆಯ್ಕೆ; ಜನತಾ ೧೮,೪೬೯ (೩೦.೯೩%); ಕಾಂಗ್ರೆ ೧೪,೫೮೬ (೨೪.೪೨%) **೯. ಕೆರಗೋಡು** : ಎಚ್.ಡಿ.ಚೌಡಯ್ಯ (ಜನತಾ) ೩೪,೫೧೫ (೬೧.೬೨%) ಆಯ್ಕೆ; ಕಾಂಗ್ರೆ ೧೪,೫೫೬ (೨೫.೯೯%); ಕಾಂ (ಒ) ೬,೨೬೬ (೧೧,೧೯%).

**ಮಧ್ಯಂತರ ಲೋಕಸಭಾ ಚುನಾವಣೆ ೧೯೮೦ :** ಆರನೆಯ ಲೋಕಸಭೆಗೆ ಇನ್ನೂ ಎರಡು ವರ್ಷ ಇರುವಾಗಲೇ ಆಡಳಿತಾರೂಢ ಜನತಾ ಪಕ್ಷದ ಒಡಕಿನಿಂದಾಗಿ ಲೋಕಸಭೆಯು ವಿಸರ್ಜಿಸಲ್ಪಟ್ಟಿತು. ಈ ಚುನಾವಣೆ ವೇಳೆಗೆ ರಾಜ್ಯ ಮಟ್ಟದಲ್ಲಿ ಕಾಂಗ್ರೆ ಪಕ್ಷವು ಇಬ್ಭಾಗವಾಗಿ ಬ್ರಹ್ಮಾನಂದ ರೆಡ್ಡಿ ನಾಯಕತ್ವದ ಕಾಂಗ್ರೆಸ್ ಬಣ ಸೇರಿದ ಡಿ.ದೇವರಾಜ ಅರಸು ಮುಂದೆ ಆ ಬಣದ ಅಧ್ಯಕ್ಷರೂ ಆದ (ಕಾಂಗ್ರೆ) ಅವರ ನಾಯಕತ್ವದಲ್ಲಿ ಅರಸು ಕಾಂಗ್ರೆಸ್; ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಐ) (ಕಾಂಗ್ರೆ) ಹಾಗೂ ಜನತಾ ಪಕ್ಷಗಳು ಸ್ಪರ್ಧಿಸಿದ್ದವು. ಫಲಿತಾಂಸ ಕೆಳಕಂಡಂತಿದೆ. ಎಸ್.ಎಂ.ಕೃಷ್ಣ (ಕಾಂಗ್ರೆ) ೨,೨೩,೬೭೫ (೫೨.೦೨%) ಆಯ್ಕೆ; ಜನತಾಪಕ್ಷ ೧,೦೮,೩೩೩ (೨೫.೨೦%); ಕಾಂಗ್ರೆಸ್ (ಅರಸು) ೮೬,೨೪೫ (೨೦.೦೬%).

**ವಿಧಾನಸಭಾ ಚುನಾವಣೆ ೧೯೮೩ :** ಆರನೆಯ ವಿಧಾನಸಭೆಯು ಪೂರ್ಣಾವಧಿ ಪೂರೈಸಿದ ಮೇಲೆ ಏಳನೆಯ ವಿಧಾನಸಭೆಗೆ ೧೯೮೩ರ ಜನರಿಯಲ್ಲಿ ಚುನಾವಣೆಗಳು ನಡೆದವು. ಆ ವೇಳೆಗೆ ಜನತಾ ಪಕ್ಷವು ಒಡೆದು ಭಾರತೀಯ ಜನತಾ ಪಕ್ಷ ಹಾಗೂ ಚರಣ್ ಸಿಂಗ್ ನೇತೃತ್ವದ ಲೋಕದಳಗಳು ತಲೆಎತ್ತಿದವು. ಈ ಚುನಾವಣೆಯ ಕ್ಷೇತ್ರವಾರು ಫಲಿತಾಂಶವನ್ನಿಲ್ಲಿ ನೀಡಲಾಗಿದೆ. ೧. **ಕೃಷ್ಣರಾಜಪೇಟೆ :** ಎಂ.ಪುಟ್ಟಸ್ವಾಮಿಗೌಡ (ಕಾಂಗ್ರೆ) ೩೧,೪೯೯ (೫೧.೮೧%) ಆಯ್ಕೆ; ಜನತಾ ೨೫,೭೬೬ (೪೨.೩೮%); ಎಲ್.ಕೆ.ಡಿ. ೨,೨೦೦ )೩.೬೨%) **೨. ಪಾಂಡವಪುರ :** ಕೆ.ಕೆಂಪೇಗೌಡ (ಜನತಾ) ೨೯,೦೩೦ (೪೫.೫೫%) ಆಯ್ಕೆ; ಕಾಂಗ್ರೆ ೨೨,೩೭೧ (೩೫.೧೦%) **೩. ಶ್ರೀರಂಗಪಟ್ಟಣ :** ಎ.ಎಸ್.ಬಂಡಿಸಿದ್ದೇಗೌಡ (ಜನತಾ) ೩೬,೬೩೪ (೫೭.೭೮%) ಆಯ್ಕೆ; ಕಾಂಗ್ರೆ ೨೫,೮೪೩ (೪೦.೭೬%) **೪. ಮಂಡ್ಯ :** ಬಿ.ದೊಡ್ಡಬೋರೇಗೌಡ (ಜನತಾ) ೩೭,೮೯೮೪ (೫೭.೬೬%) ಆಯ್ಕೆ; ಕಾಂಗ್ರೆ ೨೬,೩೩೫ (೩೯.೯೭%) **೫. ಮಳವಳ್ಳಿ (ಮೀಸಲು):** ಸೋಮಶೇಖರ್ (ಜನತಾ) ೩೧,೯೬೬ (೫೧.೫೧%) ಆಯ್ಕೆ; ಕಾಂಗ್ರೆ೨೫,೩೪೫ (೪೦.೮೪%); ಪಕ್ಷೇತರ ೧,೧೬೭ (೧.೮೮%) **೬. ಕಿರುಗಾವಲು :** ಜಿ.ಮಾದೇಗೌಡ (ಕಾಂಗ್ರೆ) ೩೬,೩೧೦ (೫೫.೯೨%) ಆಯ್ಕೆ; ಜನತಾ ೨೫,೪೫೪ (೩೯.೨೦%); ಪಕ್ಷೇತರ ೧,೦೬೨ (೧.೬೪%) **೭. ಮದ್ದೂರು :** ಎಂ.ಮಂಚೇಗೌಡ (ಕಾಂಗ್ರೆ) ೩೩,೬೦೦ (೫೦.೯೯%) ಆಯ್ಕೆ; ಪಕ್ಷೇತರ ೧೯,೭೫೮ (೨೯.೯೮%) ಜನತಾ ೧೦,೩೭೧ (೧೫.೭೩%) **೮. ನಾಗಮಂಗಲ :** ಚಿಗರಿಗೌಡ (ಪಕ್ಷೇತರ) ೩೬,೯೬೬ (೫೯.೦೪%) ಆಯ್ಕೆ; ಕಾಂಗ್ರೆ ೧೫,೩೩೨ (೨೪.೪೮%); ಜನತಾ ೧೦,೦೩೩ (೧೬.೦೨%) **೯. ಕೆರಗೋಡು :** ಎಚ್.ಡಿ.ಚೌಡಯ್ಯ (ಕಾಂಗ್ರೆ) ೩೨,೪೮೩ (೫೪.೬೪%) ಆಯ್ಕೆ; ಜನತಾ ೨೯,೯೬೬ (೪೫.೩೬%).

**ಮಧ್ಯಂತರ ಲೋಕಸಭಾ ಚುನಾವಣೆ ೧೯೮೪ :** ಏಳನೆಯ ಲೋಕಸಭೆಯು ಪೂರ್ಣಾವಧಿ ಪೂರೈಸುವ ಮೊದಲೇ ೧೯೮೪ರಲ್ಲಿ ವಿಸರ್ಜಿಸಲ್ಪಟ್ಟು ೧೯೮೪ರ ಡಿಸೆಂಬರ್‌ನಲ್ಲಿ ಮಧ್ಯಂತರ ಚುನಾವಣೆಗಳು ನಡೆದವು. ಕಾಂಗ್ರೆ ಮತ್ತು ಜನತಾ ಪಕ್ಷಗಳೊಂದಿಗೆ ಎಂಟು ಮಂದಿ ಪಕ್ಷೇತರರೂ ಚುನಾವಣಾ ಕಣದಲ್ಲಿದ್ದು, ಫಲಿತಾಂಶ

ಕೆಳಕಂಡಂತಿದೆ. ಕೆ.ವಿ.ಶಂಕರೇಗೌಡ (ಜನತಾಪಕ್ಷ) ೩,೧೯,೧೭೬ (೫೮.೫೫%) ಆಯ್ಕೆ; ಕಾಂಗ್ರೆ ೧,೯೮,೭೩೦ (೩೬.೪೬%).

**ಮಧ್ಯಂತರ ವಿಧಾನಸಭಾ ಚುನಾವಣೆ ೧೯೮೫ :** ಏಳನೆಯ ವಿಧಾನಸಭೆಯ ಅವಧಿಯು ಇನ್ನೂ ಮೂರು ವರ್ಷಗಳಿರುವಾಗಲೇ ರಾಜ್ಯದ ರಾಜಕೀಯದಲ್ಲುಂಟಾದ ಅನಿರೀಕ್ಷಿತ ಬೆಳವಣಿಗೆಗಳಿಂದಾಗಿ ಅದು ವಿಸರ್ಜಿಸಲ್ಪಟ್ಟು ೧೯೮೫ರ ಮಾರ್ಚ್‌ನಲ್ಲಿ ನಡೆದ ಮಧ್ಯಂತರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆ, ಜನತಾ, ಬಿ.ಜೆ.ಪಿ., ಜನತಾದಳ ಹಾಗೂ ಲೋಕದಳ (ಎಲ್.ಕೆ.ಡಿ.) ಪಕ್ಷಗಳೊಂದಿಗೆ ಪಕ್ಷೇತರರೂ ಸ್ಪರ್ಧಿಸಿದ್ದು, ಫಲಿತಾಂಶ ಕೆಳಕಂಡಂತಿದೆ.; **೧.ಕೃಷ್ಣರಾಜಪೇಟೆ :** ಕೃಷ್ಣ (ಜನತಾ)೪೩,೮೧೭ (೬೧.೪೫%) ಆಯ್ಕೆ; ಕಾಂಗ್ರೆ ೨೭,೪೮೨ (೩೮.೫೪%) **೨. ಪಾಂಡವಪುರ :** ಕೆ.ಕೆಂಪೇಗೌಡ (ಪಕ್ಷೇತರ) ೨೭,೭೮೦ (೩೬.೭೫%) ಆಯ್ಕೆ; ಕಾಂಗ್ರೆ ೨೭,೩೦೦ (೩೬.೧೧%); ಜನತಾ ೧೯,೩೪೯ (೨೫.೫೮%) **೩. ಶ್ರೀರಂಗಪಟ್ಟಣ :** ಎ.,ಎಸ್.ಬಂಡಿಸಿದ್ದೇಗೌಡ (ಜನತಾ) ೩೯,೧೬೩ (೫೨%) ಆಯ್ಕೆ; ಕಾಂಗ್ರೆ ೩೩,೪೧೬ (೪೪.೩೭%); ಎಲ್.ಕೆ.ಡಿ. ೧,೮೦೭ (೨.೩೯%) **೪. ಮಂಡ್ಯ :** ಎಸ್.ಡಿ.ಜಯರಾಮ್ (ಜನತಾ) ೩೭,೬೭೨ (೫೧.೮೯%) ಆಯ್ಕೆ; ಕಾಂಗ್ರೆ ೩೩,೬೬೮ (೪೬.೩೮%) **೫. ಮಳವಳ್ಳಿ (ಮೀಸಲು) :** ಬಿ.ಸೋಮಶೇಖರ್ (ಜನತಾ) ೪೩,೮೯೭ (೫೮.೨೭%) ಆಯ್ಕೆ; ಕಾಂಗ್ರೆ ೨೮,೯೫೧ (೩೮.೭೯%) **೬. ಕಿರುಗಾವಲು :** ಜಿ.ಮಾದೇಗೌಡ (ಕಾಂಗ್ರೆ) ೩೬,೫೧೯ (೪೯.೧೭%) ಆಯ್ಕೆ; ಜನತಾ ೩೫,೭೪೭ (೪೮.೧೩%) ಪಕ್ಷೇತರ ೧,೨೪೨ (೧.೬೭%) **೭. ಮದ್ದೂರು :** ಬಿ.ಅಪ್ಪಾಜಿಗೌಡ ೩೭,೩೮೧ (೫೦.೯೩%) ಆಯ್ಕೆ; ಕಾಂಗ್ರೆ ೩೪,೦೪೭ (೪೬.೩೯%) **೮. ನಾಗಮಂಗಲ :** ಎಚ್.ಟಿ.ಕೃಷ್ಣಪ್ಪ (ಜನತಾ) ೩೬,೮೫೬ (೫೭.೮೮%) ಆಯ್ಕೆ; ಕಾಂಗ್ರೆ ೧೪,೬೪೫ (೨೩%) ಪಕ್ಷೇತರ ೫,೧೬೦ (೮.೧೫%) ಬಿ.ಜೆ.ಪಿ. ೩,೬೬೩ (೫.೭೫%) **೯. ಕೆರಗೋಡು :** ಎಚ್.ಡಿ.ಚೌಡಯ್ಯ (ಕಾಂಗ್ರೆ) ೩೫,೮೩೭ (೫೨.೦೮%) ಆಯ್ಕೆ; ಜನತಾ ೩೨,೧೧೧ (೪೬.೬೫%); ಪಕ್ಷೇತರ ೮೬೪ (೧.೨೩%).

**ಲೋಕಸಭಾ ಚುನಾವಣೆ ೧೯೮೯ :** ಒಂಬತ್ತನೆಯ ಲೋಕಸಭಾ ಚುನಾವಣೆಯು ೧೯೮೯ರ ನವೆಂಬರ್‌ನಲ್ಲಿ ಜರುಗಿತು. ಅದರಲ್ಲಿ ಕಾಂಗ್ರೆ, ಜನತಾ, ಜನತಾದಳ ಹಾಗೂ ಪಕ್ಷೇತರರು ಸ್ಪರ್ಧಿಸಿದ್ದು, ಫಲಿತಾಂಶವು ಕೆಳಕಂಡಂತಿದೆ. ಜಿ.ಮಾದೇಗೌಡ (ಕಾಂಗ್ರೆ), ೩,೩೭,೦೨೪ (೪೭.೭%), ಆಯ್ಕೆ; ಜನತಾ ೨,೬೨,೧೩೫ (೩೭.೧%); ಜನತಾದಳ ೭೪,೫೪೮ (೧೦.೬%).

**ಮಧ್ಯಂತರ ವಿಧಾನಸಭಾ ಚುನಾವಣೆ ೧೯೮೯ :** ಎಂಟನೆಯ ವಿಧಾನಸಭೆಯು ಪೂರ್ಣಾವಧಿ ಪೂರೈಸುವುದಕ್ಕೆ ಒಂದು ವರ್ಷ ಮೊದಲೇ ವಿಸರ್ಜಿಸಲ್ಪಟ್ಟಿತು. ಆ ವೇಳೆಗೆ ರಾಷ್ಟ್ರೀಯ ಮಟ್ಟದಲ್ಲಿ ರಾಜಕೀಯವಾಗಿ ಅನೇಕ ಬದಲಾವಣೆಗಳಾದವು. ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದ ಜನತಾದಳ ಎರಡು ಹೋಳಾಯಿತು. ಒಂದು ಬಣ ರಾಷ್ಟ್ರೀಯ ಮಟ್ಟದಲ್ಲಿ ಜನತಾದಳ ಸೇರಿದರೆ ಇನ್ನೊಂದು ಬಣ ಮೂಲ ಜನತಾಪಕ್ಷವಾಗಿಯೇ ಮುಂದುವರಿಯಲು ನಿಶ್ಚಯಿಸಿತು. ರಾಷ್ಟ್ರೀಯ ಮಟ್ಟದಲ್ಲಿ ವಿ.ಪಿ.ಸಿಂಗ್ ಹಾಗೂ ಚಂದ್ರಶೇಖರ್ ಕ್ರಮವಾಗಿ ಆಯಾ ಪಕ್ಷಗಳ ನಾಯಕರಾದರು. ಒಂಬತ್ತನೆಯ ವಿಧಾನಸಭೆಗೆಂದು ೧೯೮೯ರ ನವೆಂಬರ್ ತಿಂಗಳಲ್ಲಿ ನಡೆದ ಮಧ್ಯಂತರ ಚುನಾವಣೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಜನತಾ (ಜೆ.ಪಿ.), ಜನತಾದಳ, ಭಾರತೀಯ ಜನತಾ ಪಕ್ಷ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಲೋಕದಳ (ಬಿ)ಪಕ್ಷಗಳೊಂದಿಗೆ ಪಕ್ಷೇತರರೂ ಸಾಕಷ್ಟು ಸಂಖ್ಯೆಯಲ್ಲಿ ಸ್ಪರ್ಧಿಸಿದ್ದು, ಫಲಿತಾಂಶವನ್ನು ಇಲ್ಲಿ ನೀಡಲಾಗಿದೆ : ೧. **ಕೃಷ್ಣರಾಜಪೇಟೆ :** ಎಂ.ಪುಟ್ಟಸ್ವಾಮಿಗೌಡ (ಭಾ.ರಾ.ಕಾಂ.), ೩೫,೯೬೩ (೪೦.೫೧%) ಆಯ್ಕೆ; ಜನತಾ (ಜೆ.ಪಿ) ೩೦,೩೯೧ (೩೪.೬೯%); ಜನತಾದಳ ೨೨,೦೧೫ (೨೪.೮೦%) ೨. **ಪಾಂಡವಪುರ :** ಡಿ.ಹಲಗೇಗೌಡ (ಭಾ.ರಾ.ಕಾಂ.) ೩೦,೫೨೦

(೩೨.೯೨%) ಆಯ್ಕೆ; ಕ.ರಾ.ರೈ.ಸಂ. ೨೭,೧೨೧ (೨೯.೨೬%); ಜನತಾ (ಜೆ.ಪಿ.) ೧೮,೧೭೬ (೧೯.೬೧%); ಜನತಾದಳ ೧೬,೧೬೪ (೧೭.೪೪%) ೩. **ಶ್ರೀರಂಗಪಟ್ಟಣ** : ಶ್ರೀಮತಿ ದಮಯಂತಿ ಬೋರೇಗೌಡ (ಭಾ.ರಾ.ಕಾಂ.) ೨೯,೧೫೯ (೩೪%) ಆಯ್ಕೆ; ಜನತಾ (ಜೆ.ಪಿ.) ೨೫,೮೭೬ (೩೦.೧೭%) ಕ.ರಾ.ರೈ.ಸಂ. ೧೮,೮೫೧ (೨೧.೯೬%); ಜನತಾದಳ ೭,೪೫೭ (೮.೬೯%) ೪. **ಮಂಡ್ಯ** : ಎಂ.ಎಸ್. ಆತ್ಮಾನಂದ (ಭಾ.ರಾ.ಕಾಂ.) ೫೦,೩೩೨ (೫೫.೮೧%) ಆಯ್ಕೆ; ಜನತಾ (ಜೆ.ಪಿ.) ೨೨,೫೦೩ (೨೪.೯೫%); ಜನತಾದಳ ೯,೯೪೫ (೧೧.೦೩%); ಕ.ರಾ.ರೈ.ಸಂ.೬,೧೭೩ (೬.೮೬%); ೫. **ಮಳವಳ್ಳಿ (ಮೀಸಲು):** ಶ್ರೀಮತಿ ಮಲ್ಲಾಜಮ್ಮ (ಭಾ.ರಾ.ಕಾಂ.) ೩೫,೭೨೩ (೪೧.೨೪%) ಆಯ್ಕೆ; ಜನತಾ (ಜೆ.ಪಿ.) ೧೭,೯೩೬ (೨೦.೭೦%); ಜನತಾದಳ ೧೭,೭೬೮ (೨೦.೫೧%); ಪಕ್ಷೇತರ ೭,೧೫೩ (೮.೨೬%) ಕ.ರಾ.ರೈ.ಸಂ. ೪,೭೯೨ (೫.೫೪%) ೬. **ಕಿರುಗಾವಲು** : ಕೆ.ಎಂ.ಪುಟ್ಟು (ಭಾ.ರಾ.ಕಾಂ.) ೪೨,೩೯೧ (೪೮.೩೬%) ಆಯ್ಕೆ ; ಜನತಾ (ಜೆ.ಪಿ.) ೩೫,೧೦೨ (೪೦.೦೪) ಕ.ರಾ.ರೈ.ಸಂ. ೭,೧೦೩ (೮.೧೦%); ೭.**ಮದ್ದೂರು** : ಎಸ್.ಎಂ.ಕೃಷ್ಣ (ಭಾ.ರಾ.ಕಾಂ.) ೩೭,೯೩೫ (೪೨.೬೮%) ಆಯ್ಕೆ; ಕ.ರಾ.ರೈಸಂ. ೨೭,೪೭೪ (೨೭.೮೯) ; ಜನತಾ (ಜೆ.ಪಿ.) ೧೭,೫೨೦ (೧೯.೭೧%) ಪಕ್ಷೇತರ ೫,೬೦೭ (೬.೩೧%), ೮.**ನಾಗಮಂಗಲ** : ಎಲ್.ಆರ್.ಶಿವರಾಮೇಗೌಡ (ಪಕ್ಷೇತರ), ೪೮.೬೫೪ (೫೬.೮೦%) ಆಯ್ಕೆ; ಭಾ.ರಾ.ಕಾಂ. ೧೭,೧೮೫ (೨೦.೦೭%), ಜನತಾದಳ ೧೩,೫೭೬ (೧೫.೮೫%) ಜನತಾ (ಜೆ.ಪಿ.)೪,೨೧೪ (೪.೯೨%) ೯. **ಕೆರಗೋಡು** : ಎನ್.ತಮ್ಮಣ್ಣ (ಭಾ.ರಾ.ಕಾಂ.)೩೦,೫೭೫ (೪೦.೩೧%) ಆಯ್ಕೆ; ಜನತಾ (ಜೆ.ಪಿ.) ೨೨,೬೩೪ (೨೯.೮೪%) ಕ.ರಾ.ರೈ.ಸಂ. ೧೫,೫೯೩ (೨೦.೬೩%) ಜನತಾದಳ ೬,೩೯೨ (೮.೪೩%).

**ಮಧ್ಯಂತರ ಲೋಕಸಭಾ ಚುನಾವಣೆ ೧೯೯೧** : ಅನಿರೀಕ್ಷಿತ ರಾಜಕೀಯ ವಿದ್ಯಮಾನಗಳಿಂದಾಗಿ ರಚನೆಗೊಂಡ ಅಲ್ಪಾವಧಿಯಲ್ಲೇ ಒಂಬತ್ತನೆಯ ಲೋಕಸಭೆಯು ವಿಸರ್ಜಿಸಲ್ಪಟ್ಟಿತು. ೧೯೯೧ರ ಜೂನ್ ತಿಂಗಳಲ್ಲಿ ಹತ್ತನೆಯ ಲೋಕಸಭೆಗೆಂದು ನಡೆದ ಮಧ್ಯಂತರ ಚುನಾವಣೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಜನತಾದಳ, ಭಾರತೀಯ ಜನತಾ ಪಕ್ಷ, ಭಾರತೀಯ ಕೃಷಿ ಉದ್ಯೋಗ ಸಂಘ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಪಕ್ಷೇತರರು ಸ್ಪರ್ಧಿಸಿದ್ದು, ಫಲಿತಾಂಶ ಕೆಳಕಂಡಂತಿದೆ. ಜಿ.ಮಾದೇಗೌಡ (ಭಾ.ರಾ.ಕಾಂ.) ೨,೫೯,೫೦೦ (೪೨.೪೮%) ಆಯ್ಕೆ; ಬಿ.ಜೆ.ಪಿ. ೧,೬೪,೧೫೩ (೨೬.೮೭%), ರೈತಸಂಘ ೧,೧೭,೧೩೬ (೧೯.೧೭%).

**ವಿಧಾನಸಭಾ ಚುನಾವಣೆ ೧೯೯೪** : ಹತ್ತನೆಯ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಗಳು ಡಿಸೆಂಬರ್ ೧೯೯೪ರಲ್ಲಿ ಜರುಗಿದಾಗ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಜನತಾದಳ, ಭಾರತೀಯ ಜನತಾಪಕ್ಷ, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಕಾಂಗ್ರೆಸ್, ಕನ್ನಡ ಚಳವಳಿ (ವಾಟಾಳ್) ಪಕ್ಷ, ಬಹುಜನ್ ಸಮಾಜ ಪಕ್ಷ ಹಾಗೂ ಸಮಾಜವಾದಿ ಪಕ್ಷಗಳೊಂದಿಗೆ ಪಕ್ಷೇತರರೂ ಸಾಕಷ್ಟು ಸಂಖ್ಯೆಯಲ್ಲಿ ಸ್ಪರ್ಧಿಸಿದ್ದು ಜನತಾದಳ ಏಳು ಸ್ಥಾನಗಳಿಸಿದರೆ ಉಳಿದೆರಡರಲ್ಲಿ ಒಂದು ರೈತ ಸಂಘಕ್ಕೂ ಇನ್ನೊಂದು ಪಕ್ಷೇತರರಿಗೂ ಲಭಿಸಿದ್ದು ಫಲಿತಾಂಶ ಕೆಳಕಂಡಂತಿದೆ.

೧.**ಕೃಷ್ಣರಾಜಪೇಟೆ** : ಕೃಷ್ಣ (ಜನತಾದಳ)೫೯,೮೪೧ (೫೫.೦೬%) ಆಯ್ಕೆ; ಬಿ.ಜೆ.ಪಿ. ೨೨,೭೭೯ (೨೦.೯೭%) ಭಾ.ರಾ.ಕಾಂ. ೧೯,೭೭೩ (೧೮.೧೯%); ಬಹುಜನ್ ೩,೭೯೮ (೩.೫೯%); ಕರ್ನಾಟಕ ಕಾಂಗ್ರೆಸ್ ೧,೬೨೫ (೧.೫೦%) ೨. **ಪಾಂಡವಪುರ** : ಕೆ.ಎಸ್.ಪುಟ್ಟಣ್ಣಯ್ಯ (ಕ.ರಾ.ರೈ.ಸಂ) ೪೩,೩೨೩ (೪೦.೭೧%) ಆಯ್ಕೆ; ಪಕ್ಷೇತರ ೩೦,೭೫೯ (೨೮.೮೮%) ಭಾ.ರಾ.ಕಾಂ. ೧೯,೭೨೦ (೧೮.೫೩%) ; ಕರ್ನಾಟಕ ಕಾಂಗ್ರೆಸ್ ೪,೫೬೭ (೪.೨೯%) ೩. **ಶ್ರೀರಂಗಪಟ್ಟಣ:** ಶ್ರೀಮತಿ. ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ (ಜನತಾದಳ) ೪೩,೦೬೨ (೪೧.೮೮%) ಆಯ್ಕೆ; ಕ,ರಾ.ರೈ.ಸಂ ೧೯,೬೩೫ (೧೯.೧೦%); ಪಕ್ಷೇತರ ೧೬,೧೯೩ (೧೫.೭೫%) ; ಭಾ.ರಾ.ಕಾಂ.

೧೧,೭೨೮ (೧೧.೪೨%) ೪. **ಮಂಡ್ಯ** : ಎಸ್.ಡಿ. ಜಯರಾಮ್ (ಜನತಾದಳ) ೫೭,೨೧೬ (೫೭.೯೫%) ಆಯ್ಕೆ; ಭಾ.ರಾ.ಕಾಂ. ೨೭,೧೮೩ (೨೭.೫೩%) ಬಿ.ಜೆ.ಪಿ. ೪,೭೨೭ (೪.೭೯%); ಬಹುಜನ್ ೩,೫೮೯ (೩.೬೩%) ೫. **ಮಳವಳ್ಳಿ (ಮೀಸಲು)** : ಬಿ.ಸೋಮಶೇಖರ್ (ಜನತಾದಳ) ೬೩.೮೦೮ (೬೪.೦೯%) ಆಯ್ಕೆ; ಭಾ.ರಾ.ಕಾಂ. ೨೭,೪೩೫ (೨೭.೬೪%) ಕರ್ನಾಟಕ ಕಾಂಗ್ರೆಸ್ ೨,೯೦೯ (೨.೯೩%) ಬಿ.ಜೆ.ಪಿ. ೨,೩೯೬ (೨.೨ %) ೬. **ಕಿರುಗಾವಲು** : ಕೆ.ಎನ್.ನಾಗೇಗೌಡ (ಜನತಾದಳ) ೩೬,೩೪೮ (೩೭.೧೯%) ಆಯ್ಕೆ; ಭಾ.ರಾ.ಕಾಂ. ೨೮,೮೬೬ (೨೯.೫೩%); ಪಕ್ಷೇತರ ೨೧,೪೫೩ (೨೧.೯೫%) ಕ.ರಾ.ರೈಸಂ. ೪,೦೩೫ (೪.೧೩%); ೭. **ಮದ್ದೂರು** : ಡಾ. ಎಂ.ಮಹೇಶ್‌ಚಂದ್ (ಜನತಾದಳ) ೪೦,೯೯೫ (೪೦.೮೦%) ಆಯ್ಕೆ; ಭಾ.ರಾ.ಕಾಂ. ೩೭,೨೩೧ (೩೭.೩೩%) ; ಕ.ರಾ.ರೈ.ಸಂ. ೧೯,೦೧೬ (೧೯.೦೭%); ೮. **ನಾಗಮಂಗಲ** : ಎಲ್.ಆರ್.ಶಿವರಾಮೇಗೌಡ (ಪಕ್ಷೇತರ) ೪೪,೭೧೯ (೪೫.೪೧%) ಆಯ್ಕೆ : ಬಿ.ಜೆ.ಪಿ. ೨೭,೭೬೮ (೨೮.೨೧%) ಜನತಾದಳ ೧೭,೧೫೭ (೧೭.೩೭%); ಬಹುಜನ್ ೪,೦೦೬ (೪.೦೭%); ೯. **ಕೆರಗೋಡು** : ಜಿ.ಪಿ.ಶಿವಕುಮಾರ್ (ಜನತಾದಳ) ೪೮,೧೨೪ (೫೬.೯೮%) ಆಯ್ಕೆ; ಭಾ.ರಾ.ಕಾಂ. ೧೪,೮೩೮ (೧೭.೫೭%) ಕ.ರಾ.ರೈಸಂ. ೧೦,೧೦೬ (೧೧.೯೭%) ಬಹುಜನ್ ೪,೬೦೨ (೫.೪೫%) ಕರ್ನಾಟಕ ಕಾಂಗ್ರೆಸ್ ೨,೪೫೬ (೨.೯೨%).

**ಲೋಕಸಭಾ ಚುನಾವಣೆ ೧೯೯೬** : ಹತ್ತನೆಯ ಲೋಕಸಭೆಯು ಪೂರ್ಣಾವಧಿ ಮುಗಿಸಿದ ನಂತರ, ೧೯೯೬ರ ಏಪ್ರಿಲ್ ತಿಂಗಳಲ್ಲಿ ಹನ್ನೊಂದನೆಯ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಕಾಂಗ್ರೆ, ಜನತಾದಳ, ಜನತಾಪಕ್ಷ, ಭಾರತೀಯ ಜನತಾ ಪಕ್ಷ ಹಾಗೂ ಪಕ್ಷೇತರರಲ್ಲಿ ಜನತಾದಳಕ್ಕೆ ಯಶ ಲಭಿಸಿದ್ದು, ಫಲಿತಾಂಶ ಕೆಳಕಂಡಂತಿದೆ. ಕೃಷ್ಣ (ಜನತಾದಳ) ೩,೩೫,೮೫೨ (೪೫.೯೭%) ಆಯ್ಕೆ; ಭಾ.ರಾ.ಕಾಂ ೩,೦೨,೪೬೬ (೪೧.೪೦%); ಬಿ.ಜೆ.ಪಿ. ೭೦,೮೨೯ (೯.೭೯%).

**ಕೃಷ್ಣರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಉಪಚುನಾವಣೆ ೧೯೯೬** : ಈ ಕ್ಷೇತ್ರದ ಶಾಸಕ ಕೃಷ್ಣ ಅವರ ರಾಜಿನಾಮೆಯಿಂದಾಗಿ ತೆರವಾದ ಸ್ಥಾನಕ್ಕೆ ೧೯೯೬ರ ಅಕ್ಟೋಬರ್ ನಲ್ಲಿ ನಡೆದ ಉಪಚುನಾವಣೆಯ ಫಲಿತಾಂಸ ಇಲ್ಲಿದೆ. ಬಿ.ಪ್ರಕಾಶ (ಪಕ್ಷೇತರ) ೨೯,೫೨೪ ಆಯ್ಕೆ; ಜನತಾದಳ ೨೬,೯೭೯; ಭಾ.ರಾ.ಕಾಂ. ೧೮,೮೬೮ ; ಬಿ.ಜೆ.ಪಿ. ೧೧,೬೮೪; ರೈತಸಂಘ ೬,೫೫೧ ಹಾಗೂ ಇಬ್ಬರೂ ಪಕ್ಷೇತರರು ೬,೬೦೧.

**ಮಧ್ಯಂತರ ಲೋಕಸಭಾ ಚುನಾವಣೆ ೧೯೯೮** : ರಾಷ್ಟ್ರಮಟ್ಟದಲ್ಲಿ ರಾಜಕೀಯ ವಿದ್ಯಮಾನದ ಬದಲಾವಣೆಗಳಿಂದಾಗಿ ಹನ್ನೊಂದನೆಯ ಲೋಕಸಭೆಯು ಅಲ್ಪಾವಧಿಯಲ್ಲೇ ವಿಸರ್ಜಿಸಲ್ಪಟ್ಟು, ೧೯೯೮ರ ಫೆಬ್ರವರಿ ತಿಂಗಳಲ್ಲಿ ಹನ್ನೆರಡನೆಯ ಲೋಕಸಭೆಗೆ ನಡೆದ ಮಧ್ಯಂತರ ಚುನಾವಣೆಯಲ್ಲಿ ಏರ್ಪಟ್ಟ ತ್ರಿಕೋನಾ ಸ್ಪರ್ಧೆಯ ಫಲಿತಾಂಶ ಕೆಳಕಂಡಂತಿದೆ. ಅಂಬರೀಷ್ (ಜನತಾದಳ) ೪,೩೧,೪೩೯ (೫೪.೯೭%) ಆಯ್ಕೆ; ಕಾಂಗ್ರೆ ೨,೫೦,೯೧೬ (೩೧.೯೫%), ಬಿ.ಜೆ.ಪಿ. ೧,೦೨,೪೫೬ (೧೩.೦೬%).

**ಮಂಡ್ಯ ವಿಧಾನಸಭಾ ಕ್ಷೇತ್ರಕ್ಕೆ ಉಪಚುನಾವಣೆ ೧೯೯೮** : ಶಾಸಕ ಎಸ್.ಡಿ.ಜಯರಾಮ್ ಅವರ ಅಕಾಲಿಕ ಮರಣದಿಂದಾಗಿ ತೆರವಾದ ಸ್ಥಾನಕ್ಕೆ ೧೯೯೮ರ ಆಗಸ್ಟ್ ತಿಂಗಳಲ್ಲಿ ನಡೆದ ಉಪಚುನಾವಣೆಯ ಫಲಿತಾಂಶ ಶ್ರೀಮತಿ.ಕೆ.ಆರ್.ಪ್ರಭಾವತಿ (ಜನತಾದಳ) ೩೫,೬೫೪, ಆಯ್ಕೆ; ಭಾ.ರಾ.ಕಾಂ. ೨೬,೮೮೦, ಲೋಕಶಕ್ತಿ ೧೯,೫೮೬; ಪಕ್ಷೇತರ ೨೨೩.

**ವಿಧಾನಸಭಾ ಚುನಾವಣೆ ೧೯೯೯** : ಹನ್ನೊಂದನೆಯ ವಿಧಾನಸಭೆಗೆ ೧೯೯೯ರ ಸೆಪ್ಟೆಂಬರ್ ತಿಂಗಳಲ್ಲಿ ಜರುಗಿದ ಚುನಾವಣೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಜನತಾದಳ (ಜಾತ್ಯಾತೀತ), ಜನತಾದಳ (ಸಂಯುಕ್ತ), ಬಿ.ಜೆ.ಪಿ., ಬಹುಜನ ಸಮಾಜ ಪಕ್ಷ ಹಾಗೂ ಕರ್ನಾಟಕ ರಾಜ್ಯ ರೈತ ಸಂಘಗಳೊಂದಿಗೆ ಪಕ್ಷೇತರರೂ ಸ್ಪರ್ಧಿಸಿದ್ದು, ಫಲಿತಾಂಶ ಕೆಳಕಂಡಂತಿದೆ. **೧. ಕೃಷ್ಣರಾಜಪೇಟೆ** : ಕೆ.ಬಿ.ಚಂದ್ರಶೇಖರ್ (ಭಾ.ರಾ.ಕಾಂ.) ೪೫,೬೮೩ (೪೩%) ಆಯ್ಕೆ; ಜನತಾದಳ (ಜಾ) ೨೮,೮೦೨ (೨೭%); ಪಕ್ಷೇತರ ೧೮,೫೦೨ (೧೭%); **೨. ಪಾಂಡವಪುರ** : ಕೆ.ಕೆಂಪೇಗೌಡ (ಭಾ.ರಾ.ಕಾಂ) ೪೧,೬೬೧ (೩೮%) ಆಯ್ಕೆ; ಕ.ರಾ.ರೈ.ಸಂ. ೩೩,೮೦೩ (೩೧%), ಜನತಾದಳ (ಜಾ) ೨೬,೯೭೨ (೨೪%) ೩. **ಶ್ರೀರಂಗಪಟ್ಟಣ:** ಶ್ರೀಮತಿ. ಪಾರ್ವತಮ್ಮ ಶ್ರೀಕಂಠಯ್ಯ (ಭಾ.ರಾ.ಕಾಂ) ೪೭,೮೬೬ (೪೭%) ಆಯ್ಕೆ; ಕ.ರಾ.ರೈ.ಸಂ. ೨೫,೨೭೩ (೨೫%) ಜನತಾದಳ (ಜಾ) ೧೪,೪೨೮ ೪. **ಮಂಡ್ಯ** : ಎಂ.ಎಸ್.ಅತ್ಮಾನಂದ (ಭಾ.ರಾ.ಕಾಂ.) ೫೨,೭೦೩ (೫೫%) ಆಯ್ಕೆ; ಜನತಾದಳ (ಸಂ) ೩೪,೬೪೭ (೩೬%) ಬಹುಜನ್ ೨,೭೨೧ ೫. **ಮಳವಳ್ಳಿ (ಮೀಸಲು):** ಬಿ. ಸೋಮಶೇಖರ್ ಜನತಾದಳ (ಸಂ) ೨೭,೩೩೫ (೨೯%) ಆಯ್ಕೆ; ಭಾ.ರಾ.ಕಾಂ. ೨೨,೦೫೪ (೨೩%) ಜನತಾದಳ (ಜಾ) ೨೦,೮೨೬ (೨೨%) ಪಕ್ಷೇತರ ೧೬,೮೦೪ (೧೮%) **೬.ಕಿರುಗಾವಲು** : ಡಿ.ಸಿ.ತಮ್ಮಣ್ಣ (ಭಾ.ರಾ.ಕಾಂ.) ೪೪,೫೨೩ (೪೪%) ಆಯ್ಕೆ; ಜನತಾದಳ (ಸಂ) ೪೩,೭೯೯ (೪೩%); ಜನತಾದಳ (ಜಾ) ೫,೮೦೧; **೭.ಮದ್ದೂರು** : ಎಸ್.ಎಂ.ಕೃಷ್ಣ (ಭಾ.ರಾ.ಕಾಂ.) ೫೬,೯೦೭ (೫೯%) ಆಯ್ಕೆ; ಜನತಾದಳ (ಸಂ) ೨೭,೪೪೮ (೨೮%); ಕ.ರಾ.ರೈ.ಸಂ.೧೧,೭೭೫ ೮. **ನಾಗಮಂಗಲ** : ಎನ್.ಚಲುವರಾಯಸ್ವಾಮಿ ಉರುಫ್ ಸ್ವಾಮಿಗೌಡ (ಜನತಾದಳ (ಸಂ) ೫೫,೬೪೩ (೫೪%), ಆಯ್ಕೆ; ಭಾ.ರಾ.ಕಾಂ. ೪೦,೪೮೪ (೩೯%), ಪಕ್ಷೇತರ ೨,೧೯೯; **೯. ಕೆರಗೋಡು** : ಎಚ್.ಡಿ. ಚೌಡಯ್ಯ (ಪಕ್ಷೇತರ) ೩೫,೫೭೯ (೪೨%) ಆಯ್ಕೆ; ಭಾ.ರಾ.ಕಾಂ. ೩೪,೫೪೩ (೪೧%); ಬಿ.ಜೆ.ಪಿ. ೧೨,೭೮೦. ಈ ಚುನಾವಣೆಯಲ್ಲಿ ಗೆಲವು ಸಾಧಿಸಿದ ಕಾಂಗ್ರೆಸ್ ಪಕ್ಷವು ಸರ್ಕಾರ ರಚಿಸುವುದರೊಂದಿಗೆ ಜಿಲ್ಲೆಯ ಮದ್ದೂರು ಕ್ಷೇತ್ರದಿಂದ ಆಯ್ಕೆಯಾಗಿದ್ದ ಎಸ್.ಎಂ.ಕೃಷ್ಣ ರಾಜ್ಯದ ಮುಖ್ಯಮಂತ್ರಿಯಾಗಿ ೧೧.೧೦.೯೯ ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಮಧ್ಯಂತರ ಲೋಕಸಭಾ ಚುನಾವಣೆ ೧೯೯೯** : ರಾಷ್ಟ್ರಮಟ್ಟದ ರಾಜಕೀಯ ವಿದ್ಯಮಾನದಲ್ಲುಂಟಾದ ಬದಲಾವಣೆಗಳಿಂದಾಗಿ ಹನ್ನೆರಡನೆಯ ಲೋಕಸಭೆಯು ರಚನೆಗೊಂಡ ಅಲ್ಪಾವಧಿಯಲ್ಲೇ ವಿಸರ್ಜಿಸಲ್ಪಟ್ಟು ೧೯೯೯ರ ಸೆಪ್ಟೆಂಬರ್ ತಿಂಗಳಲ್ಲಿ ಹದಿಮೂರನೆಯ ಲೋಕಸಭೆಗೆ ನಡೆದ ಮಧ್ಯಂತರ ಚುನಾವಣೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಜನತಾದಳ (ಜಾತ್ಯಾತೀತ), ಭಾರತೀಯ ಜನತಾ ಪಾರ್ಟಿ, ಬಹುಜನ್ ಸಮಾಜ ಪಕ್ಷ ಹಾಗೂ ಪಕ್ಷೇತರರೂ ಸ್ಪರ್ಧಿಸಿದ್ದು, ಫಲಿತಾಂಶ ಕೆಳಕಂಡಂತಿದೆ ; ಅಂಬರೀಷ್ (ಭಾ.ರಾ.ಕಾಂ.) ೪,೧೮,೧೧೦ (೫೨%) ಆಯ್ಕೆ; ಜನತಾದಳ (ಜಾ) ೨,೬೫,೯೩೦ (೩೩%); ಬಿ.ಜೆ.ಪಿ. ೮೨,೫೨೨ (೧೦%).